UNIVERSAL LIBRARY
OU_200273
UNIVERSAL LIBRARY

OSMANIA UNIVERSITY LIBRARY

K83
S53P

Accession No K5824

# ಪ್ರಕೃತಿ

ಮೂಲಪ್ರಕೃತಿ ರವಿಕೃತಿಃ, ಮಹದಾದ್ಯಾಃ ಪ್ರಕೃತಿ-ವಿಕೃತಯಃ ಸಪ್ತ।
ಷೋಡಶಕಸ್ತು ವಿಕಾರೋ, ನ ಪ್ರಕೃತಿರ್ನ ವಿಕೃತಿಃ ಪುರುಷಃ ॥

—ಸಾಂಖ್ಯಕಾರಿಕಾ

ಶ್ರೀರಂಗ

ವಾಹಿನಿ ಪ್ರಕಾಶನ
ಜಯಚಾಮರಾಜ ರಸ್ತೆ, ಬೆಂಗಳೂರು-೨

ಮೊದಲನೆಯ ಮುದ್ರಣ : ೧೯೫೪

ಈ ಕಾದಂಬರಿಯ ಎಲ್ಲ ಹಕ್ಕುಗಳು ಶ್ರೀಮತಿ ಶಾರದಾದೇವಿ ಆದ್ಯ ಬಿ ಎ.,
ಸಪ್ತಾಪುರ, ಧಾರವಾಡ ಇವರಿಗೆ ಸೇರಿವೆ.

ಮುಖಚಿತ್ರ :
**ಎಸ್. ಎಸ್. ಕುಕ್ಕೆ**

ಮುದ್ರಕರು :
**ಎಂ. ಎಸ್. ಚಿಂತಾಮಣಿ, ಬಿ. ಎಸ್ಸಿ.,**
**"ಈಸ್ಟರ್ನ್ ಪ್ರೆಸ್", ಜಯಚಾಮರಾಜ ರಸ್ತೆ,**
**ಬೆಂಗಳೂರು–೨.**

# ಕಿವಿಮಾತು

ನಿಜವಾಗಿಯೂ ಇಲ್ಲಿ ನಾನು ಬರೆಯುವುದು ಓದುಗರಲ್ಲಿ ಕಿವಿಮಾತು. ನನ್ನ ಒಂದು ರಹಸ್ಯವನ್ನ ವಾಚಕರ ಮುಂದಿಡುತ್ತಿರುವೆ. ಅವರಾದರೂ ತಮ್ಮಷ್ಟಕ್ಕೆಯೆ ಅದನ್ನಿಟ್ಟುಕೊಳ್ಳುವರೆಂದು ನಂಬಿದ್ದೇನೆ.

ಈಗ ನಾನು ಅನೇಕ ತರದ ಪುಸ್ತಕಗಳನ್ನು ಬರೆದಿದ್ದೇನೆ— ನಾಟಕ, ಹರಟೆ, ಗೀತಾಗಾಂಭೀರ್ಯ, ಕಾದಂಬರಿ ಮುಂತಾಗಿ. ಆದರೂ ನನಗೆ ಸಮಾಧಾನವಿಲ್ಲ. ಯಾವುದೋ ಒಂದು ವಿಷಯವು ನನ್ನನ್ನು ಕಾಡುತ್ತಿದೆ, ಆ ಬಗ್ಗೆ ಯಾವಾಗಲೂ ವಿಚಾರದಲ್ಲಿ ತೊಡಗಿರುವೆ, ಅದನ್ನೇ ಬಹಿರಂಗವಾಗಿ ಪುಸ್ತಕ ರೂಪದಲ್ಲಿ ಹೊರಗೆ ಇಡುತ್ತಿರುವೆ. ಆದರೂ ನನಗೆ ಇನ್ನೂ ಸಮಾಧಾನವಾಗಿಲ್ಲ, ಆ ವಿಚಾರ ಸ್ಫುಟವಾಗಿ ಹೊರಬಿದ್ದಿದೆ ಎಂದೆನ್ನಿಸಿಲ್ಲ.

ಯಾವುದು ಆ ವಿಚಾರ? ಮನುಷ್ಯ ಮತ್ತು ಅವನು ಕಟ್ಟುತ್ತಿರುವ ಸಮಾಜ ಈ ಬಗ್ಗೆ 'ಮಾನವನ ಮಹಾಭಾರತ' ಎಂಬ ಹೆಸರಿನಿಂದ ಆಗಾಗ ಕೆಲ ಪುಟಗಳನ್ನು ಬರೆದಿಡುತ್ತಿದ್ದೇನೆ. ಆದರೇನು? ಸಂಜಯನ ದಿವ್ಯದೃಷ್ಟಿ ಇನ್ನೂ ನನಗೆ ದೊರೆತಿಲ್ಲ.

ಇಂದು ನಾವು ಅನೇಕ ದೃಷ್ಟಿಗಳಿಂದ ಪ್ರಗತಿಯನ್ನು ಹೊಂದಿದ್ದೇವೆ. ಜೀವನ ಹೆಚ್ಚು ಸುಖಮಯವಾಗಿದೆ, ಆರೋಗ್ಯ ಹೆಚ್ಚು ಸದೃಢವಾಗಿದೆ, ವಿಜ್ಞಾನವು ಅನೇಕ ಸೌಕರ್ಯಗಳನ್ನು ಒದಗಿಸಿಕೊಟ್ಟಿದೆ, ಸಮಾಜದಲ್ಲಿ ಭದ್ರತೆ ಬೆಳೆಯುತ್ತಿದೆ, ಸಾಮಾನ್ಯ ಮನುಷ್ಯನಿಗೂ ಜ್ಞಾನ ಸಾಧನಗಳು ದಿನೇ ದಿನೇ ಲಭ್ಯವಾಗುತ್ತಿವೆ.

ಆದರೆ? ಆದರೆ— ? ಎಂದೇ ಕೇಳಬೇಕಾಗಿದೆ. ಹೊರ ಜಗತ್ತಿನೊಡನೆ ನಮ್ಮ ಸಂಪರ್ಕ, ಪರಿಸ್ಥಿತಿಯಲ್ಲಿ ನಮ್ಮ ಬೆರಕೆ ನಮ್ಮನ್ನು ಹೆಚ್ಚು ಶಕ್ತಿವಂತರನ್ನಾಗಿ ಮಾಡಿದೆಯಾದರೂ ಮಾನವನ ಒಳಗಿನ ಜಗತ್ತು ಹಾಗೇ ಉಳಿದಿದೆ. ಹಸಿವು, ನೀರಡಿಕೆ, ಕಾಮ ಮುಂತಾದ ಪ್ರವೃತ್ತಿಗಳು ನಮ್ಮನ್ನು ಎಂದಿನಂತೆ ಇಂದಿಗೂ ಸ್ವಾರ್ಥಿಗಳನ್ನಾಗಿಯೆ ಮಾಡಿರುತ್ತವೆ. ರಶಿಯನ್ ಕಾದಂಬರಿಕಾರರಾದ

ಡೊಸ್ಟೊವ್‌ಸ್ಕಿಯವರು ಹೇಳುವಂತೆ 'A tiger is cruel but not so artistically cruel as Man' ಎಂದು ವಿಷಾದದಿಂದ ಒಪ್ಪಬೇಕಾಗುತ್ತದೆ.

ಯಾಕೆ? ಅಂತರಂಗದ ಸೃಷ್ಟಿಯಲ್ಲಿ ಬದಲಾವಣೆಯನ್ನುಂಟು ಮಾಡಲು ಕಾಲಕಾಲಕ್ಕೆ ಯುಗಪುರುಷರು ಜನಿಸಿದರೂ ನಮ್ಮ ಆಂತರಿಕ ಪ್ರವೃತ್ತಿಗಳು ಹಾಗೇ ಉಳಿದಿವೆ. ಇದನ್ನು ಬದಲಾಯಿಸಲಾರೆವೆ ನಾವು! 'ಯದಹಂಕಾರಮಾಶ್ರಿತ್ಯ ನ ಯೋತ್ಸ್ಯ ಇತಿ ಮನ್ಯಸೇ। ಮಿಥ್ಯೈಷ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ' ಎಂಬ ಗೀತಾ ವಾಕ್ಯವು ನಾವು ಎಂದಿಗೂ ಹೀಗೆಯೆ ಉಳಿಯುವೆವು ಎಂದು ಹೇಳುತ್ತಿದೆಯೆ?

ಒಂದು ಮಾತನ್ನು ಹೇಳಬಹುದು. ಮಾನವನು ಪರಿಸ್ಥಿತಿಯ ಕೂಸಾಗಿದ್ದಾನೆ. ಪರಿಸ್ಥಿತಿ ಬದಲಾಯಿಸಿದಂತೆ ಅವನ ಸ್ವಭಾವ, ಸಮಾಜ ಎರಡೂ ಬದಲಾಯಿಸುವುವು – ಅಹುದೆ? ಈ ಮಾತು ಸಿದ್ಧಾಂತವೆ? ಇದನ್ನು ತಿಳಿದುಕೊಳ್ಳುವ ಯತ್ನದ ಇತ್ತೀಚಿನ ಫಲ ನನ್ನ ಈ ಕಾದಂಬರಿ. ಈ ಮಾತು ಸಿದ್ಧಾಂತವಾಗಿದ್ದರೆ ಸಂತೋಷ. ಇಂದಿಲ್ಲ ನಾಳೆ ನಾವು ಪರಿಸ್ಥಿತಿಯನ್ನು ಕ್ಷೇಮದ ದೃಷ್ಟಿಯಿಂದ ಬದಲಾಯಿಸಿಕೊಳ್ಳಬಹುದು.

ಯತ್ನವೇನೋ ಇಲ್ಲಿದೆ. ಆದರ ಸಫಲ ವಿಫಲತೆಯನ್ನು ಓದುಗರೆ ನಿರ್ಣಯಿಸಬಲ್ಲರು.

ಕೇವಲ ನಿರುದ್ದೇಶದಿಂದ ಇಲ್ಲವೆ ರಂಜನೆಗಾಗಿ ನಾನು ಬರೆಯುವುದಿಲ್ಲ ಎಂದು ಎಚ್ಚರಿಸಿದಾಗೂ ವಾಹಿನಿ ಪ್ರಕಾಶನದವರು ನನ್ನ ಕಾದಂಬರಿಯನ್ನು ಪ್ರಕಟಿಸಿದ್ದಾರೆ. ಅದಕ್ಕಾಗಿ ಅವರಿಗೆ ಕೃತಜ್ಞ.

ಸೃಷ್ಟಿಗೆ ಪ್ರಕೃತಿ, ಪುರುಷ ಇವೆರಡೂ ಮೂಲ ಎಂದು ಸಾಂಖ್ಯರು ಹೇಳಿದ್ದಾರೆ. 'ಪುರುಷ' ತತ್ತ್ವದ ವಿಚಾರವನ್ನು ಮಾಡುವವನಿದ್ದೇನೆ.

ಹೊಸ ದಿಲ್ಲಿ
೧೦-೬-೧೯೫೪

ಶ್ರೀರಂಗ

# ೧

ರಾಗಣ್ಣ ಮತ್ತೆ ಗಡಿಯಾರವನ್ನು ನೋಡಿಕೊಂಡ. ಮಧ್ಯಾಹ್ನದ ೧೨॥ ಗಂಟೆಯಾಗಿದೆ. ತಾನು ಇಲ್ಲಿ ಬಂದು ಕುಳಿತು ಒಂದುವರೆ ಗಂಟೆಯಾಯಿತೆ? ಸಂಶಯದಿಂದ ಗಡಿಯಾರವನ್ನು ಕಿವಿಗೆ ಹಚ್ಚಿಕೊಂಡ. ನಡೆದಿದೆ, ಹನ್ನೆರಡುವರೆ ಗಂಟೆಯಾದದ್ದೇ ನಿಜ ತಾನು "ಸಾಹೇಬರ" ಕೋಣೆಯ ಹೊರಗೆ ಅವರಿಂದ ಕರೆಯನ್ನು ನಿರೀಕ್ಷಿಸುತ್ತ ಕುಳಿತು ಒಂದುವರೆ ಗಂಟೆಯಾಗಿದೆ. ರಾಗಣ್ಣನಿಗೆ ಒಳಗಿಂದೊಳಗೆಯೆ ನಗೆ ಬಂದಿತು. ಇದಿನ್ನೂ ತಾನು ಕೆಲಸಕ್ಕೆ ಹಾಜರಾದ ಮೊದಲ ದಿನ. ದಿನಾಲು ಸಾಹೇಬರ ಕೋಣೆಯ ಹೊರಗೆ ಗಂಟೆಗಟ್ಟಲೆ ಕಾಯುವುದಿದ್ದರೆ ತನ್ನ ಕೆಲಸದ ಗತಿ ?....ಅತ್ತಿತ್ತ ಸುಳಿದಾಡುವವರನ್ನು ನೋಡುತ್ತ ಕೆಲ ನಿಮಿಷಗಳನ್ನು ಕಳೆದ. ಮತ್ತೆ ವಿಚಾರಕ್ಕೆ ತೊಡಗಿದ. ಹಾಜರಾದ ಕೂಡಲೇ ತನ್ನನ್ನು ಕರೆಯಿಸಿದ ಈ ಸಾಹೇಬ ಯಾರು? ಹೆಸರೇನೊ ಬಿ. ರಾಮು ಎಂದಿದೆ. ಈ ಶಾಖೆಯ ಮೇಲಧಿಕಾರಿ. ಆದರೇನು? 'ಬಿ. ರಾಮು' ಎಂಬುದರಿಂದ ಯಾವ ತರದ ಚಿತ್ರವೂ ರಾಗಣ್ಣನ ಕಣ್ಣು ಮುಂದೆ ನಿಲ್ಲಲೊಲ್ಲದು. ಇದಲ್ಲದೆ 'ಹಾಜರಾದ ಕೂಡಲೆ ನನ್ನ ಕಡೆ ಕಳುಹಿಸಿಕೊಡಿರಿ' ಎಂದು ಹೇಳಿದನಂತೆ! ತನ್ನ ಪರಿಚಯವಿಲ್ಲ, ತನ್ನ ಹುದ್ದೆಯೂ ದೊಡ್ಡದಲ್ಲ,

ಆದರೂ ತನ್ನಲ್ಲಿ ಆಸಕ್ತಿ ! "ಮಿಸ್ಟರ್ ಆರ್. ಜಿ. ಬಿಟ್ಟೂರ, ನೀವು ಮೊದಲು ಸಾಹೇಬರಿಗೆ ಭೆಟ್ಟಿಯಾಗಬೇಕಂತೆ" ಎಂದು ಸಂದೇಶ ಬಂದಾಗ ಒಂದು ನಿಮಿಷ ಅವಾಕ್ಕಾಗಿ ನಿಂತಿದ್ದ. ಇದುವರೆಗೆ 'ರಾಗಣ್ಣ, ರಾಗಣ್ಣ' ಎಂದು ವ್ಯಕ್ತಿತ್ವವನ್ನು ಇಟ್ಟುಕೊಂಡವನಿಗೆ "ಆರ್ ಜಿ. ಬಿಟ್ಟೂರ' ಎಂದರೆ ತಾನೇ ಎಂಬುದು ತಟ್ಟನೆ ಹೊಳೆದಿರಲಿಲ್ಲ. ಜೊತೆಗೆ ದೊಡ್ಡ ಸಾಹೇಬರ ಭೆಟ್ಟಿ. ಸಾಹೇಬರಾದರೂ ಎಷ್ಟು ದೊಡ್ಡವರಾಗಿದ್ದಾರೊ ?

"ಆರ್. ಜಿ. ಬಿಟ್ಟೂರ ? ನಿಮ್ಮನ್ನು ಒಳಗೆ ಕರೀತಾರ."

ಲಗಬಗೆಯಿಂದ ವಿಚಾರಗಳನ್ನು ಹಿಂದೊತ್ತಿ ಎದ್ದ. ಅಧೈರ್ಯ. ಊಟದ ಹೊತ್ತಿಗೆ ನೀರು ಕುಡಿದಿರಲಿಲ್ಲ ಎಂಬುದು ಸ್ಮರಣೆಗೆ ಬಂದಿತು. ಸಾಹೇಬರ ಮುಂದೆ ಬಾಯಿ ತೆರೆದಾಕ್ಷಣ ಬಿಕ್ಕು ಬಂದರೆ ಹೇಗೆ–ಎಂದು ಹೆದರಿಕೆಯಾಯಿತು. ಇಷ್ಟರಲ್ಲಿ ಕೋಣೆಯೊಳಕ್ಕೆ ಬಂದಿದ್ದ, ಬಾಯಿಯನ್ನೂ ತೆರೆದಿದ್ದ, ಬಿಕ್ಕು ಮಾತ್ರ ಬಂದಿರಲಿಲ್ಲ.

ಎದುರು ಹಾಯಾಗಿ ಕುಳಿತ 'ದೊಡ್ಡ ಸಾಹೇಬ'ರನ್ನು ನೋಡಿ ರಾಗಣ್ಣನ ಬಾಯಿ ತಂತಾನೇ ತೆರೆದಿತ್ತು. ಇವರು ದೊಡ್ಡ ಸಾಹೇಬರೆ ? ಹೆಚ್ಚೆಂದರೆ ತನಗಿಂತ ನಾಲ್ಕಾರು ವರ್ಷ ಹಿರಿಯನಾಗಿರಬಹುದಾದ ತರುಣ 'ದೊಡ್ಡ ಸಾಹೇಬ'. ಈ ಆಶ್ಚರ್ಯಕ್ಕಾಗಿ ತೆರೆದ ಬಾಯಿಯನ್ನು ಮುಚ್ಚುವ ಮುಂಚಿತ ಇನ್ನೊಂದು ಆಶ್ಚರ್ಯವು ಅವನನ್ನು ನಿಂತಲ್ಲಿಯೆ ಕಂಬದಂತೆ ಹಿಡಿದು ನಿಲ್ಲಿಸಿತು.

"ಕೂತುಕೊಳ್ಳಿರಿ."

ಸಾಹೇಬರ ದನಿ, ಕನ್ನಡದ ಶಬ್ದಗಳು ! ರಾಗಣ್ಣ ಚಕಿತನಾದ. ಹೆಸರಿನಿಂದ ನೋಡಿದರೆ ತನ್ನ ಸಾಹೇಬನು ಕನ್ನಡಿಗನೆಂಬ ಸಂಶಯು ಎಂದಿಗೂ ಬಾರದು. ಆದರೂ ಕನ್ನಡಿಗ.

"ಬಿಟ್ಟೂರಿನಿಂದೇ ಬಂದಿರೇನು ?"

ರಾಗಣ್ಣ ಬಾಯಿ ತೆರೆದ. ತನ್ನ ಬಾಯಿಯಿಂದ ಶಬ್ದಗಳೇ

ಹೊರಟಿಲ್ಲ ಎಂಬುದರ ಅರಿವೂ ಇದ್ದಿರಲಿಲ್ಲ ಅವನಿಗೆ. ಆದರೂ ತುಟಿಗಳನ್ನು ಒಡೆದ.

"ನೀವು ಯಾರ ಪೈಕಿ ?"

"ಬೆ-ಬೆ-ಅಲ್ಲ-ದೇ-ದೇಶಪಾಂಡೆ—"

"ರಘುನಾಥರಾಯರಿಗೇನಾಗಬೇಕು ?"

ರಾಗಣ್ಣ ಉಗುಳ್ನುಂಗಿ "ಅವರ ಮೊಮ್ಮಗ ನಾ" ಎಂದು ಕೈಯಲ್ಲಿ ಕರವಸ್ತ್ರವಿಲ್ಲದ್ದನ್ನು ಮರೆತು ಮುಖದ ಬೆವರನ್ನೊರೆಸಿಕೊಳ್ಳಲು ಕೈ ಎತ್ತಿದ.

ಸಾಹೇಬರು ಹಿರಿತನದ ನಗೆಯನ್ನು ನಕ್ಕರು. ಅದೆಂತಹ ನಗೆಯೊ ! ರಾಗಣ್ಣನಿಗೆ ಚೂರಿಯಿಂದ ಇರಿದಂತಾಯಿತು. ತನ್ನ ಪೆಚ್ಚುತನಕ್ಕಾಗಿ ನಕ್ಕಿರಬಹುದೆ ? ತಾನೂ ಎಂತಹ ಪೆಚ್ಚ ! ಎಲ್ಲ ಸಡಗರದಿಂದ ಬಂದರೂ ಕರವಸ್ತ್ರವನ್ನೆ ಬಿಟ್ಟು ಬರಬೇಕೆ ? ಇಲ್ಲವೆ ದಾರಿಯಲ್ಲಿ ಬಿದ್ದಿರಬಹುದೆ ? ಕಚೇರಿಗೆ ಬರುವಾಗ ಕಿಸೆಗೊಂದು ಕರವಸ್ತ್ರವನ್ನಿಡಲು ಮರೆಯಬಾರದೆಂದು ನಿಶ್ಚಯಿಸಿದ.

"ರಘುನಾಥರಾಯರನ್ನ ಬಲ್ಲೆ ನಾನು. ಅಂದರೆ ಗುಂಡೇರಾಯರ ಮಕ್ಕಳೇನು ನೀವು ?"

"ಹ್-ಹೌದು." ನುಂಗಲು ಉಗುಳು ಸಾಲದ್ದಕ್ಕೆ ಉಸಿರು ಸಿಕ್ಕಂತಾಯಿತು ರಾಗಣ್ಣನಿಗೆ.

"ಬಿಟ್ಟೊರನ್ನು ಚನ್ನಾಗಿ ಬಲ್ಲೆ ನಾನು" ಎನ್ನುತ್ತ ಸಾಹೇಬರು ಮುಂದಿದ್ದ ಕಾಗದಗಳನ್ನು ಎತ್ತಿಕೊಂಡರು.

ಕೆಲಹೊತ್ತು ಇಬ್ಬರೂ ಮಾತನಾಡಲಿಲ್ಲ. ತಾನು ಉತ್ತರ ಕೊಡಬೇಕಾಗಿದ್ದಿತೇನೊ ಎಂದು ರಾಗಣ್ಣನಿಗೆ ಸಂಶಯ ಬಂದಿತು. ಆದರೆ ನಿಶ್ಶಬ್ದತೆಯ ಅವಧಿ ಹೆಚ್ಚಿದಂತೆ ಇನ್ನು ಉತ್ತರ ಕೊಡುವುದು ಸರಿಯಾಗಲಿಕ್ಕಿಲ್ಲ ಎಂದು ಹೆದರಿಕೆಯೂ ಆಯಿತು.

ಸಾಹೇಬರು ಕಾಗದಗಳನ್ನು ನೋಡುತ್ತ 'ಬಿಟ್ಟೊರನ್ನು ನಾನು

ಚನ್ನಾಗಿ ಬಲ್ಲೆ" ಎಂದರು. ಈಗಲಾದರೂ ಉತ್ತರವನ್ನು ಕೊಡ ಬಹುದಲ್ಲ ಎಂದು ರಾಗಣ್ಣನು ಎಣಿಕೆ ಹಾಕುತ್ತಿರುವಾಗಲೆ "ಆಗಲಿ, ಮತ್ತೆ ಭೆಟ್ಟಿಯಾಗೋಣ" ಎಂದರು ಸಾಹೇಬರು.

ಸಾವಿರಾರು ಪ್ರೇಕ್ಷಕರ ಎದುರು ನಡೆದ ಕುಸ್ತಿಯಲ್ಲಿ ಬಿದ್ದವ ನಂತಾಯಿತು ರಾಗಣ್ಣನ ಸ್ಥಿತಿ. ಎದ್ದು ಧೂಳು ಜಾಡಿಸುವಾಗ ಒಬ್ಬನು ಕೂಡ ತನ್ನನ್ನು ನೋಡುತ್ತಿಲ್ಲವಲ್ಲ ಎನ್ನುವ ಅಪಮಾನದಿಂದ ನಿರ್ವಿಣ್ಣನಾದವನಂತೆ ರಾಗಣ್ಣ ಹೆಜ್ಜೆಗಳನ್ನಿಡುತ್ತ ಕೋಣೆಯಿಂದ ಹೊರಬಿದ್ದ.

* * *

ರಾಗಣ್ಣ ಹೊರಬಿದ್ದೊಡನೆ ಸಾಹೇಬರ "ಸಾಹೇಬತನ" ಇಳಿ ಯಿತು. ಬಿ. ರಾಮನು ತನ್ನಷ್ಟಕ್ಕೆ ನಕ್ಕನು. ಪಾಪ! ಹುಡುಗ ಎಷ್ಟು ಪೆಚ್ಚುಬಿದ್ದ! ಬಿಟ್ಟೂರನ್ನು ತಾನು ಚೆನ್ನಾಗಿ ಬಲ್ಲೆ ಎಂದಾಗ ಬೆವರಿಳಿಯಿತಲ್ಲ ಅವನ ಮುಖದ ಮೇಲೆ? ತಾನು ಯಾರು ಎಂಬುದರ ಸುಳಿವೆ ರಾಗಣ್ಣನಿಗೆ ಹತ್ತಲಿಲ್ಲವಲ್ಲ! 'ಬಿಟ್ಟೂರ' ಎಂಬ ಶಬ್ದದಿಂದ ತನಗೆ ಕುತೂಹಲ ಉಂಟಾಗಿತ್ತು, 'ದೇಶಪಾಂಡೆ ರಘುನಾಥರಾಯ' ಎಂದಾಗ ತಟ್ಟನೆ ಹೊಳೆದೇಬಿಟ್ಟಿತು 'ಈತ ರಾಗಣ್ಣ' ಎಂದು. ಆದರೆ ರಾಗಣ್ಣನಿಗೆ ತನ್ನ ಬಗ್ಗೆ ಸಂಶಯವೆ ಬರಲಿಲ್ಲವಲ್ಲ! ಹದಿನಾಲ್ಕು ವರ್ಷಗಳಲ್ಲಿ ತಾನು ಇಷ್ಟು ಬದಲಾಯಿಸಿರುವೆನೆ ಎಂದು ಬಿ. ರಾಮ ನಿಗೆ ಆಶ್ಚರ್ಯವಾಯಿತು. 'ಬಿಟ್ಟೂರ' ಎಂದಿದ್ದಿಲ್ಲವೆಂದರೆ ತನ ಗಾದರೂ ರಾಗಣ್ಣನ ಪರಿಚಯ ಹತ್ತಬಹುದಾಗಿತ್ತೆ? ತನ್ನ ಪರಿಚಯ ಇನ್ನೊಬ್ಬನಿಗಿಲ್ಲದೆ ಇನ್ನೊಬ್ಬನ ಪರಿಚಯ ತನಗಿದ್ದಾಗ ಎಂತಹ ಮೋಜು ಎಂದುಕೊಂಡ. ಪಾಪ! ರಾಗಣ್ಣನ ಹೆಸರಿನಲ್ಲಿ 'ಬಿಟ್ಟೂರ' ಎಂಬ ಶಬ್ದ ತನಗೆ ಅನುಕೂಲವಾದಂತೆ ತನ್ನ ಹೆಸರಿನಲ್ಲಿ ಯಾವ ಪದವೂ ರಾಗಣ್ಣನಿಗೆ ಅನುಕೂಲವಿದ್ದಿರಲಿಲ್ಲ. 'ಬಿ. ರಾಮ' ಎಂತಹ ಹೆಸರು! ಇದುವರೆಗೆ ಹೆಸರು ಮಾಟಾಗಿದೆ ಎಂದಿಷ್ಟೆ ಅಭಿಮಾನ

ವಿದ್ದರೆ ಈಗ ಹೆಸರು ಮಾಟಗಾರಿಕೆಯದೂ ಆಗಿದೆ ಎಂದೆನ್ನಿಸಿತು:

'ಬಿ. ರಾಮು' ಎಂಬ ಹೆಸರಿನಲ್ಲಿ ನಿಜವಾಗಿಯು ಮಾಟಗಾರಿಕೆ ಇದ್ದಿತೆನ್ನಬಹುದು. ಅನೇಕ ರೂಪಾರೂಪಾಂತರಗಳ ಕೊನೆಯ ಫಲ 'ಬಿ. ರಾಮು' ಎಂದಿತ್ತು. ಅದಕ್ಕೂ ಮುಂಚೆ ಅದು 'ಎಚ್ ಕೆ. ಬಿ. ರಾಮು' ಎಂದಿತ್ತು, ಅದು ಕೂಡ 'ಎಚ್ ಕೆ ಭರಮು (H. K Bharam)' ಎಂಬುದರ ರೂಪಾಂತರವಾಗಿತ್ತು, ಇದರ ಮೂಲ 'ಭರಮು ಕೆ. ಹೊಲೆಯರ' ಎಂದಿತ್ತು, ತೀರ ಮೊದಲಿನ ಹೆಸರು — ಎಂದೊ ಏನೊ ಎನ್ನಿಸುವಷ್ಟು ಮೊದಲಿನ ಹೆಸರು 'ಭರಮಪ್ಪ ಕಾಳಪ್ಪ ಹೊಲೆಯರ' ಎಂದಿತ್ತು. ಭರಮಪ್ಪ ಕಾಳಪ್ಪ ಹೊಲೆಯರ ಎಂಬುದು ಬಿ. ರಾಮು ಆದುದು ಮಾಟಗಾರಿಕೆಯೆ ಅಲ್ಲವೆ? ರಾಗಣ್ಣನಿಗೆ ಗೊತ್ತಿರಬಹುದಾದ ವ್ಯಕ್ತಿ ಹದಿನಾಲ್ಕು ವರ್ಷಗಳ ಮುಂಚಿನ ಭರಮಪ್ಪ. ಪಾಪ! ಈಗಿನ ಬಿ ರಾಮುನ ಪರಿಚಯ ಅವನಿಗೆ ತಿಳಿಯುವುದು ಹೇಗೆ?

* * *

ಇತ್ತ ಸಾಹೇಬರ ಕೋಣೆಯಿಂದ ಹೊರಬಿದ್ದ ರಾಗಣ್ಣನಿಗೂ ದಿಗಿಲು. 'ಬಿ. ರಾಮು', ಯಾರಿರಬಹುದು? ಕನ್ನಡ ಮಾತನಾಡುವ ಬಿ. ರಾಮು! ಎಲ್ಲಿಯವನಾಗಿರಬಹುದು? ರಘುನಾಥರಾಯರ ಗುರುತಿದೆ, ತನ್ನ ಅಜ್ಜನ ಗುರುತಿದೆ; ಆದರೆ ವಯಸ್ಸಿನಿಂದ ಚಿಕ್ಕವ. ಇದು ಹೇಗೆ? ಬಿಟ್ಟೂರನ್ನು ಚೆನ್ನಾಗಿ ಬಲ್ಲೆ — ಎನ್ನುತ್ತಾನೆ! ಆಶ್ಚರ್ಯ. ಬಿಟ್ಟೂರನ್ನು ಬಲ್ಲವನಾಗಿದ್ದರೆ 'ಬಿ. ರಾಮು' ಎಂಬ ಹೆಸರೇಕೆ? ಹೆಸರಿನ ರೀತಿಯು ಬಿಟ್ಟೂರಿನ ಸುತ್ತಲು ನೂರು ಮೈಲಿಗಳ ವರೆಗೂ ಕಂಡುಬರುವುದಿಲ್ಲ. ಆದರೂ ತೀರ ಪರಿಚಿತನಾಗಿರುವಂತೆ ಕಾಣುವುದು. ಯಾರಿರಬಹುದು? ರಾಗಣ್ಣನಿಗೆ ದಿಗಿಲು. ಸಂಜೆಗೆ ತನ್ನ ಕೋಣೆಗೆ ಬಂದಾಗಲೂ ಈ ತೊಡಕು ಅವನ ತಲೆಯನ್ನು ತಿನ್ನುತ್ತಿತ್ತು. 'ಬಿ. ರಾಮು, ಬಿ. ರಾಮು' — ಯಾರು?

ಎಲ್ಲಿ ನೋಡಿರಬಹುದಾಗಿದೆ? ಎಷ್ಟು ವರ್ಷಗಳ ಮುಂಚಿನ ಕತೆಯಾಗಿರಬಹುದು? 'ಬಿಟ್ಬೊರನ್ನು ನಾನು ಚನ್ನಾಗಿ ಬಲ್ಲೆ' ಎಂದನಲ್ಲ ಸಾಹೇಬ! ಇದು ಹೇಗೆ?

* * *

ಬಿಟ್ಬೊರನ್ನು ತಾನು ಚನ್ನಾಗಿ ಬಲ್ಲೆನೆಂದು ಬಿ. ರಾಮನು ಹೇಳಿದಾಗ ಅದು ಹದಿನಾಲ್ಕು ವರ್ಷಗಳ ಮುಂಚಿನ ಬಿಟ್ಬೊರು ಎಂಬುದು ಅವನ ಲಕ್ಷ್ಯಕ್ಕೆ ಬಂದಿರಲಿಲ್ಲ.

ಹದಿನಾಲ್ಕು ವರ್ಷಗಳ ಹಿಂದಿನ ಮಾತು.

ಆಗ ತನಗೆ ಹನ್ನೆರಡು ವರ್ಷ.

ರಾಗಣ್ಣನಿಗೆ ಎಂಟು ವರ್ಷ.

ಹದಿನಾಲ್ಕು ವರ್ಷಗಳ ಹಿಂದೆ! ೧೯೩೦ರ ಕೊನೆ ಇಲ್ಲವೆ ೧೯೩೧ರ ಪ್ರಾರಂಭದ ಸಮಯವಾಗಿರಬಹುದು.

ಅಂದಿನ ಮಾತು. ಅದನ್ನು ತಾನು ಎಂದಿಗೂ ಮರೆಯುವಂತೆ ಇರಲಿಲ್ಲ. ಅದೊಂದನ್ನೆ ನೆನಪಿನಲ್ಲಿಟ್ಟು ತಾನು ಎಲ್ಲವನ್ನೂ ಬಲ್ಲೆ ಎಂಬ ಅಭಿಪ್ರಾಯವಾಗಿತ್ತು ಬಿ. ರಾಮನಿಗೆ.

ಅಷ್ಟು ಮಹತ್ವದ ಘಟನೆ.

ತನ್ನ ಅಜ್ಜನಾದ ಪರಶುರಾಮನನ್ನು ನೆಲದಮೇಲೆ ಉರುಳಾಡುವಂತೆ ಹೊಡೆದರಲ್ಲವೆ ಅಂದು? ತನ್ನ ತಂದೆಯಾದ ಕಾಳಪ್ಪನನ್ನು ಮುವ್ವತ್ತು ವರ್ಷದ ಗಂಡಸನನ್ನು, ಹಿಂದೆ ಕೈಕಟ್ಟಿ, ಉಟ್ಟ ದೋತರವನ್ನೆಳೆದು ಅವಮಾನಗೊಳಿಸಿ ಜಾಡಿಸಿದ ದಿನವದು. ಗುಂಡೇರಾಯನ– ಇದೇ ರಾಗಣ್ಣನ ತಂದೆಯಾದ ಗುಂಡೇರಾಯನ ದುಷ್ಟತನವದು. ಅದನ್ನು ತಾನೆಂದಿಗೂ ಮರೆಯುವಂತಿಲ್ಲ.

ಸಾವ್ಕಾರ ರಘುನಾಥರಾಯ, ಅವನ ಮಗ 'ಗವರ್ನರ' ಗುಂಡೇರಾಯ!

ಆದರೆ ತನ್ನ ಅಜ್ಜ 'ಪರಸ್ಯಾ', ತನ್ನ ತಂದೆ 'ಕಾಳ್ಯಾ'!

ಮರೆಯುವಂತಹ ಕತೆಯು ಅಲ್ಲ. ಎಲ್ಲವೂ ನೆನಪಿನಲ್ಲಿದೆ, ಚನ್ನಾಗಿ ನೆನಪಿನಲ್ಲಿದೆ.

ಅದಕಾಗಿಯೆ 'ಬಿಟ್ಟೋರನ್ನು ಚನ್ನಾಗಿ ಬಲ್ಲೆ' ಎಂದು ಹಲ್ಲು ತಿಕ್ಕುತ್ತ ಒಳಗಿಂದೊಳಗೆಯೆ ಮತ್ತೊಮ್ಮೆ ನುಡಿದಿದ್ದ ಬಿ. ರಾಮು ಆ ಗೊಣಗಿನಲ್ಲಿ ತುಂಬಿದ ದ್ವೇಷದ ದನಿ ರಾಗಣ್ಣನಿಗೆ ಕೇಳಿಸದಿರಲಿಲ್ಲ.

"ಬಿಟ್ಟೋರನ್ನು ನಾನು ಚನ್ನಾಗಿ ಬಲ್ಲೆ ಎಂದು ಅಷ್ಟೊಂದು ತ್ವೇಷದಿಂದ ನುಡಿದನಲ್ಲ ?" ಎಂದು ರಾಗಣ್ಣನೂ ತಲೆ ಕೆಡಿಸಿ ಕೊಂಡಿದ್ದನು. ತನಗಿಂತ ೩–೪ ವರ್ಷಗಳ ಮಾತ್ರ ಹಿರಿಯ ಆವನಿಗಾಗಿದ್ದ ಅನುಭವ ತನ್ನ ನೆನಪಿನಲ್ಲಿರಬಾರದೆ ? ಬಿ ರಾಮುನಲ್ಲಿ ತ್ವೇಷವನ್ನು ಹುಟ್ಟಿಸುವಂತಹ ಯಾವ ಸಂಗತಿ—? ಯಾವ—? ಘಟನೆ—?

ತನಗೂ ನೆನಪಿರಬಹುದಲ್ಲ ?

ಹಾಗೆ ಕೇಳಿದರೆ ಅಂತಹ ಯಾವ ಅನುಭವ— ನೆನಪಿಗೆ ಬಾರದು. ಮುಖ್ಯ, ಬಿ. ರಾಮು ಎಂಬ ವ್ಯಕ್ತಿಗೂ ತನ್ನ ಇದುವರೆಗಿನ ಜೀವನಕ್ಕೂ ಎಲ್ಲಿಯ ಸಂಬಂಧ ಬಂದಿದೆ ?—ಎಂಬುದು ರಾಗಣ್ಣನಿಗೆ ಹೊಳೆಯದಾಯಿತು. ತನಗೆ ನೆನಪಿದ್ದ ಮಟ್ಟಿಗೆ ಪರಿಸ್ಥಿತಿಯೆ ಹಾಗಿದ್ದಿತು. ಮೊದಲು ಅಜ್ಜನ ಆಳಿಗಾಲ, ಆಮೇಲ ಗುಂಡೇರಾಯನ 'ಗವರ್ನರಿಕೆ'—ಇವುಗಳಿಗಾಗಿ ಕ್ರಮೇಣ ನಾವಕಾರಿಕೆ ಹೋಗಿ ಈತನಗೆ—ರಾಗಣ್ಣನಿಗೆ—ಹೊಟ್ಟೆ ತುಂಬಿಕೊಳ್ಳಲು ನೋಕರಿಯನ್ನು ಹುಡುಕಬೇಕಾಯಿತು, ಎಲ್ಲ ಪರೀಕ್ಷೆಗಳಲ್ಲಿ ಒಂದನೇ ವರ್ಗದಲ್ಲಿ ತೇರ್ಗಡೆ ಹೊಂದಿದರೂ ನೋಕರಿ ಇಲ್ಲದೆ ಅಲೆದಾಡಬೇಕಾಯಿತು, ಭಾಷಾವಿಷಯದಲ್ಲಿ M.A. ಪರೀಕ್ಷೆಗಾಗಿ ಒಂದೇ ವರ್ಗದ ಸ್ಥಾನವನ್ನು ಪಡೆದು ಕೊನೆಗೆ ಹೇಗೊ ಏನೊ—ಪೂರ್ವಕ ಖಾತೆಯಲ್ಲಿ ಕಾರಕೂನಿಕೆ ದೊರೆತಿತ್ತು. ಪುಕ್ಕಟೆಯಾಗಿ ಸಾಹಿತ್ಯ ಸೇವೆ ಮಾಡುವುದಕ್ಕಿಂತ ಒಳ್ಳೆಯದೆಂದು ತಿಳಿದಿದ್ದ.

ಹದಿನಾಲ್ಕು ವರ್ಷಗಳಲ್ಲಿ ನಾವಕಾರಿಕೆಯ ವೈಭವ ಕಳಚಿ ನೋಕರಿಯ ನಿರಭಿಮಾನದ ಜೀವನಕ್ಕೆ ಇಳಿದಿತ್ತು ತನ್ನ ಪರಿಸ್ಥಿತಿ.

ಹೀಗಿರುವಾಗ ತನಗಾಗಿ ಶ್ವೇಷ ಯಾರದ್ದಿರಬಹುದು ಬಿ. ರಾಮುನಲ್ಲಿ ?

* * *

ಬಿ. ರಾಮುನಲ್ಲಿ ಶ್ವೇಷವಿದ್ದಿತು, ನಾಕಷ್ಟಾಗಿ ಇದ್ದಿತು. 'ಬಿಟ್ಟೂರನ್ನು ಚನ್ನಾಗಿ ಬಲ್ಲೆ' ಎನ್ನುವಾಗ 'ಚನ್ನಾಗಿ' ಎಂಬ ಪದವನ್ನೇ ಚೂರುಚೂರಾಗಿಸುವಂತೆ ಹಲ್ಲು ಕಟಕರಿಸಿತ್ತು. ಆದರೆ ರಾಗಣ್ಣನಿಗೆ ಇದಾವುದರ ಸುಳಿವೂ ಹತ್ತುವ ಹಾಗಿರಲಿಲ್ಲ. ಬಿ. ರಾಮುನ ಶ್ವೇಷದ ದವಡೆಯಲ್ಲಿ ನುಚ್ಚುನುಗ್ಗಾಗುತ್ತಿದ್ದ ಬಿಟ್ಟೂರು ಬೇರೆ, ರಾಗಣ್ಣನಿಗೆ ಗೊತ್ತಿದ್ದ ಬಿಟ್ಟೂರು ಬೇರೆ.

ಹದಿನಾಲ್ಕು ವರ್ಷಗಳ ಮುಂಚೆ, ಅದೊಂದು ದಿನ, ಅದೊಂದು ಘಟನೆ ನಡೆದ ತರುವಾಯ ಚಿತ್ರದಂತೆ ಅಂದಿನಿಂದಲೂ ಮನಸ್ಸಿನಲ್ಲಿ ತಟಸ್ಥವಾಗಿ ಮೂಡಿ ನಿಂತ ಬಿಟ್ಟೂರು ಬಿ. ರಾಮುನದು

ಆದರೆ ಅದೊಂದರ ಸುಳಿವಿಲ್ಲದೆ ಆ ಹದಿನಾಲ್ಕು ವರ್ಷಗಳಲ್ಲಿ ತನ್ನೊಡನೆ, ತನ್ನ ಸುಖದುಃಖಗಳೊಡನೆ ಬೆಳೆದ ಬಿಟ್ಟೂರು ರಾಗಣ್ಣನದು.

'ನಾನು ಚನ್ನಾಗಿ ಬಲ್ಲೆ' ಎಂದಾಗ ಬಿ. ರಾಮುನು ಒಂದೇ, ಒಂದೇ ಚಿತ್ರವನ್ನು ನೆನೆಯುತ್ತಿದ್ದನು. ಇಂದಿಗೂ ಬಿಟ್ಟೂರು ಅವನ ಪಾಲಿಗೆ ಆ ಚಿತ್ರದ ಬಿಟ್ಟೂರೇ ಆಗಿತ್ತು.

ಅದೆಂತಹ ಚಿತ್ರ ! ಹನ್ನೆರಡು ವರ್ಷ ವಯಸ್ಸಿನ ಭರಮುನಿಗೆ (ಆಗ ತಾನು 'ಬಿ. ರಾಮು'ನಾಗಿರಲಿಲ್ಲ) ಎಂದಿಗೂ ಮರೆಯದಂತಹ ಚಿತ್ರ ! ಅದೇನೊ ಗಾಂಧಿ ಅನ್ನುವವರೊಬ್ಬರು ಹೊಲೆಯ ಮೊದಲಾದ ಅಸ್ಪೃಶ್ಯರ ಉದ್ಧಾರಕ್ಕೆ ಟೊಂಕ ಕಟ್ಟಿದ್ದರಂತೆ. ಭರಮುನಿಗೆ ಹಾಗೆಂದರೇನು ಎಂಬುದರ ಕಲ್ಪನೆ ಕೂಡ ಇದ್ದಿರಲಿಲ್ಲ. ಆದರೆ

ತನ್ನ ಅಜ್ಜನು ಮಾತ್ರ ಆಗಾಗ ವಿಷಾದದಿಂದ ತಲೆ ಅಲ್ಲಾಡಿಸುತ್ತಿದ್ದುದು ಆ ಮಾತಿಗಾಗಿ ಎಂಬುದು ಭರಮನಿಗೆ ಗೊತ್ತಿತ್ತು. ಹೀಗೆ ಒಮ್ಮೆ ಅಕಸ್ಮಾತ್ತಾಗಿ ಅಜ್ಜ ಹಟದಿಂದ ಎನ್ನುವಂತೆ ತಲೆಯನ್ನಲ್ಲಾಡಿಸಿದ್ದ.

"ಏನಾತಜ್ಜ ?" ಎಂದ ಭರಮ.

"ಕಾಲ ತಿರಮಾಮುರಮಾ ಆಗೇತೊ, ಮಗನೆ" ಎಂದ ಅಜ್ಜ. ಭರಮನಿಗೆ ಏನೂ ತಿಳಿದಿರಲಿಲ್ಲ ಅಜ್ಜ ಪರಶುರಾಮ ತನ್ನಷ್ಟಕ್ಕೆ ವಟಗುಟ್ಟುತ್ತಿದ್ದ. 'ಜಾತೀ ಜನರ ಜೋಡಿ ನಡೆಯೋದು ಕುಲಧರ್ಮ ಅಲ್ಲ ನಮ್ದು' ಎಂದೇ ಪರಶುರಾಮನ ಭಾವನೆ. 'ಆ ಜನರ ಗುಡೀವಳಗ ಕಾಲಿಟ್ಟರ ಕಾಲು ಕಡಿದು ಬೀಳಾಕಿಲ್ಲ?' ಎಂದು ಹೆದರುತ್ತಿದ್ದ. ಆದರೆ ಜನ ಏನೇನೊ ಹೇಳುತ್ತಿದೆ!

ಜನ ಯಾಕೆ? ತನ್ನ ಮಗ ಕಾಳಪ್ಪನೆ ಹೇಳುತ್ತಿದ್ದಾನೆ, 'ನಾವೂ ಜಾತೀ ಜನರ್ಹಾಂಗೇ' ಅಂತ!

"ಕಾಲ ತಿರಮಾಮುರಮಾ ಆಗೇತೋ, ಮಗನೆ" ಎಂದ ಅಜ್ಜ. ಭರಮನಿಗೆ ಆಗ ಅರ್ಥವಾಗಿರಲಿಲ್ಲ. ಆದರೆ ತನ್ನ ತಂದೆ ಕಾಳಪ್ಪ ಮಾತ್ರ ಯಾವುದೋ ಗಡಬಿಡಿಯಲ್ಲಿರುತ್ತಿದ್ದ ಎಂಬುದು ಲಕ್ಷ್ಯಕ್ಕೆ ಬಂದಿತ್ತು. ಕಾಳಪ್ಪ ಯಾರಾರನ್ನೊ ಸಾಯಂಕಾಲ ಕೂಡಿಸುತ್ತಿದ್ದ; ಎಂದಿನಿಂದಲೂ ಸಂಜೆಗೆ ಗುಂಪುಗೂಡಿ ಸೆರೆ ಕುಡಿಯುತ್ತಿದ್ದ ಗುಂಪು ಈಗ ಸೆರೆ ಕುಡಿಯುತ್ತಿರಲಿಲ್ಲ; ಕಾಳಪ್ಪನಿಗೆ ಏನೊ ಒಂದು ಮಾನ ವಿದ್ದಂತಿತ್ತು, ಅದನ್ನು ಕಂಡು—ಭರಮ ತಾನು ಕೂಡ ತಂದೆಗೆ ಹೆಚ್ಚಾಗಿ ಹೆದರುತ್ತಿದ್ದ. ಹೀಗಿರುವಾಗ ಒಂದು ರಾತ್ರಿ ಅಕಸ್ಮಾತ್ತಾಗಿ ತನ್ನ ತಂದೆಗೆ ಕೈಕಟ್ಟಿ ಹಾಗೆ ಅವಮಾನ ಮಾಡಿದ್ದರು. ತಾನು ನೋಡಿರಲಿಲ್ಲ, ಆದರೂ ಗೊತ್ತಿತ್ತು. ಮತ್ತೊಂದು ರಾತ್ರಿ ಯಾರೋ ತನ್ನ ತಂದೆಯನ್ನು ಹೆಣ ಬೀಳುವಂತೆ ಹೊಡೆದಿದ್ದರು.

ಯಾಕೆ?

ಏನು ನಡೆದಿದೆ ?

ತನ್ನ ತಂದೆಗೆ ಈ ಅವಸ್ಥೆ ಯಾಕೆ ಎಂಬುದರ ಕಲ್ಪನೆ ಭರಮುನಿಗೆ ಬಂದಿರಲಿಲ್ಲ. ಒಂದಾನೊಂದು ದಿನ, ರಾತ್ರಿಯ ಸಮಯದಲ್ಲಿ ತನ್ನನ್ನು ಫಕ್ಕನೆ ಎಚ್ಚರಗೊಳಿಸಿ ತನ್ನೊಡನೆ ಕಾಳಪ್ಪ ಬಿಟ್ರೋರನ್ನು ಬಿಟ್ಟುದು ಮಾತ್ರ ಗೊತ್ತು. ಇದೆಲ್ಲ ತನ್ನ ಕಣ್ಣ ಮುಂದೆ ನಡೆದ ಘಟನೆ. ಹನ್ನೆರಡು ವಯಸ್ಸಿನ ಚಿಕ್ಕ ಮನಸ್ಸಿನ ಮೇಲೆ, ಬಲವಾಗಿ ಮೂಡಿದ ಘಟನೆ. ಆ ಮನಸ್ಸು ಅದನ್ನು ಎಂದಿಗೂ ಮರೆಯುವುದು ಶಕ್ಯವಿದ್ದಿರಲಿಲ್ಲ.

'ಬಿಟ್ರೋರನ್ನು ಚನ್ನಾಗಿ ಬಲ್ಲೆ' ಎಂದು ಆ ಮನಸ್ಸಿನಿಂದಲೇ ನುಡಿದಿದ್ದ ಬಿ. ರಾಮು. ತನ್ನ ತಂದೆಯನ್ನು ನಿರ್ಗತಿಕನನ್ನಾಗಿ ಮಾಡಿ ಓಡಿಸಿದ ಬಿಟ್ರೋರು! 'ಬಲ್ಲೆ ಅದರ ರಹಸ್ಯ' ಎಂದು ಕೊಂಡಿತು ಬಿ. ರಾಮುನ ಮನಸ್ಸು.

* * *

ಆದರೆ 'ಅದರ ರಹಸ್ಯ' ಎಂಬುದು ಭರಮುನಿಗೆ ಗೊತ್ತಿರಲಿಲ್ಲ. ಕಣ್ಣಾರೆ ಕಂಡುದೆ ನಿಜ, ಅದೇ ಅದರ ರಹಸ್ಯ ಎಂದು ಹನ್ನೆರಡು ವಯಸ್ಸಿನ ಭರಮುನಿಗೆ ಎನ್ನಿಸಿದರೆ ಆಶ್ಚರ್ಯವೇನು ? ವಯಸ್ಸು ಆ ರಹಸ್ಯವನ್ನು ಭರಮುನಿಂದ ಬಚ್ಚಿಟ್ಟಿತು , ಜೊತೆಗೆ ಭರಮುನ ತಂದೆಯೂ ಆ ರಹಸ್ಯವನ್ನು ಮಗನಿಂದ ಮುಚ್ಚಿಡಲು ಸಹಾಯಕ ನಾಗಿದ್ದ. ಕಾಳಪ್ಪ ಒಂದು ದೃಷ್ಟಿಯಿಂದ ಸುಧಾರಿತನೆನ್ನಿಸಿಕೊಂಡಿದ್ದ; ಮಹಾತ್ಮಾ ಗಾಂಧಿಯವರಲ್ಲಿ ವಿಶ್ವಾಸವನ್ನಿಟ್ಟು ಆತ್ಮೋದ್ಧಾರಕ್ಕಾಗಿ ಸಂಘಟನೆಯನ್ನು ಮಾಡಬೇಕೆಂದಿದ್ದ, ಇದೆಲ್ಲ ಕಾಳಪ್ಪನಿಗೆ ಸರಿಯಾಗಿ ತಿಳಿದಿರಲಿಲ್ಲವಾದ್ದರಿಂದ ಭರಮುನಿಗೆ ತಿಳಿಯುವುದು ಶಕ್ಯವಿದ್ದಿರಲಿಲ್ಲ. ಕಾಳಪ್ಪನು ಇಷ್ಟೊಂದು ತರ್ಕಬದ್ಧವಾಗಿ ಸಂಘಟನೆಯಲ್ಲಿ ತೊಡಗಿದ್ದಿಲ್ಲ. ತನ್ನವರೊಳಗೆ ತನಗೆ ಗೌರವವನ್ನು ಹೇಗಾದರೂ ಮಾಡಿ ದೊರಕಿಸಿ ಕೊಳ್ಳುವುದು ಕಾಳಪ್ಪನಿಗೆ ಅಗತ್ಯದ ಮಾತಾಗಿತ್ತು. ದಿನದಿನಕ್ಕೆ

ತನ್ನ ಗೌರವ ಕಳೆದು ತನ್ನವರೇ ತನ್ನನ್ನು ಕಂಡು ನಗುವಂತಾಗಿತ್ತು ಅವನ ಸ್ಥಿತಿ. ಅದನ್ನು ಅವನು ಬಲ್ಲ, ಅದರ ಕಾರಣವನ್ನೂ ಬಲ್ಲ; ಆದರೇನು ? ಆ ಕಾರಣವು ಕಾಳಪ್ಪನ ಕೈಮೀರಿತ್ತು. ಎಂದಿನಿಂದಲೂ ತನಗೆ ಗೊತ್ತಿದ್ದುದು ಇಂದಿಗೂ ಮಿಕ್ಕವರಿಗೂ ಗೊತ್ತಾಗಿತ್ತು. ಗಂಗಿಯ ಸ್ವಭಾವವೇ ಅದು. ತನ್ನ ಹೊಲತಿಯಾದ ಗಂಗಿ ಈ ರೀತಿ ಬೆಳೆಯುವಳೆಂದು ಕನಸು ಮನಸುಗಳಲ್ಲಿ ಕಾಳಪ್ಪ ಕಂಡಿರಲಿಲ್ಲ. ಹಾಗೆ ಕೇಳಿದರೆ ಈಗ ಕಾಳಪ್ಪನಿಗೂ ಆ ಬಗ್ಗೆ ಕಾಳಜಿ ಇದ್ದಿರಲಿಲ್ಲ. ಹನ್ನೆರಡು ವಯಸ್ಸಿನ ಮಗನಿದ್ದಾನೆ. ಗಂಗಿ ಚಿಕ್ಕಧಣಿಯರಾದ ಗುಂಡೇರಾಯರ ಸೂಳೆಯಾಗುವುದಕ್ಕಿಂತ ಮುಂಚಿತ ಹುಟ್ಟಿದ ಮಗ, ತನ್ನ ಮಗ, ತನ್ನ ಕುಲದ ಬೆಳಕು–ಎಂದು ಭರಮುನಿಗಾಗಿ ಕಾಳಪ್ಪನಿಗೆ ಅಭಿಮಾನ ವಿದ್ದಿತು. ಆದರೂ ಇತ್ತಿತ್ತಲಾಗಿ ಗಂಗಿ ಬಹಿರಂಗವಾಗಿಯೇ ತನ್ನ ವ್ಯಭಿಚಾರವನ್ನು ಮೆರೆಯಿಸಿಕೊಳ್ಳುತ್ತಿದ್ದು ಕಾಳಪ್ಪನಿಗೆ ತನ್ನವರ ಇದಿರಿನಲ್ಲಿಯೇ ಮುಖವನ್ನೆತ್ತದಂತಾಗಿತ್ತು.

ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಕಾಳಪ್ಪ ತನ್ನವರ ಸುಧಾರಕನಾದ. ಆದರೂ ಮನೆಯೊಳಗೆ ಹೆಂಡತಿ - ಇನ್ನೊಬ್ಬರ ಸೂಳೆ ಎಂದು ಜಗತ್ತಿಗೆ ಗೊತ್ತಿದ್ದಾಗ ಅದೇ ಜಗತ್ತನ್ನು ಸುಧಾರಿಸಲು ಮುಂದಾಗುವುದು ಕೆಸರಿನಲ್ಲಿ ಕಾಲಿಟ್ಟಂತೆ. ಅದಕಾಗಿ, ತನ್ನ ಗೌರವ ಹೆಚ್ಚಿದಂತೆ ಕಾಳಪ್ಪ ಗಂಗಿಯನ್ನು ಹೆದರಿಸತೊಡಗಿದ. ಆದರೆ ಗಂಗಿಗೆ 'ಗವರ್ನರ' ಗುಂಡೇರಾಯರ ಬಲದ ಆಶ್ರಯವಿದ್ದಿತಲ್ಲ ? ಆ ಬಲದ ಪ್ರಯೋಗ ಕಾಳಪ್ಪನ ಮೇಲಾಗತೊಡಗಿತು. ಹೀಗೆ ನಡೆದರೆ, ಇಂದಿಲ್ಲ ನಾಳೆ ತನ್ನ ಹೇಡಿತನ ಮತ್ತು ಗಂಗಿಯ ಸೂಳೆಗಾರಿಕೆ ಎರಡೂ ಭರಮುನಿಗೆ ಗೊತ್ತಾಗಬಹುದು ಎಂಬ ಹೆದರಿಕೆಯಿಂದ ಕೊನೆಗೊಂದು ರಾತ್ರಿ ಕಾಳಪ್ಪ ಮಗನೊಂದಿಗೆ ಬಿಟ್ಟೂರಿನಿಂದ ಪಲಾಯನವನ್ನು ಹೇಳಿದ್ದ. ತಾನು ಬಿಟ್ಟೂರಿನಿಂದ ಕಾಲ್ದೆಗೆದುದರ ರಹಸ್ಯ ತನ್ನ ಮಗ ಭರಮುನಿಗೆ ಕೊನೆಯವರೆಗೂ ತಿಳಿಯಲಿಲ್ಲವಲ್ಲ

ಎಂದು ಕಾಳಪ್ಪ ನಿಶ್ಚಿಂತೆಯಿಂದ ಆಗಾಗ ಉಸುರ್ಗರೆಯುತ್ತಿದ್ದ. 'ಹುಡುಗರಿಗೆ ಇಂಥಾದ್ದು ಗೊತ್ತಾಗಬಾರದು' ಎಂದು ಕಾಳಪ್ಪನ ದೃಢವಾದ ಅಭಿಪ್ರಾಯವಾಗಿತ್ತು.

* * *

ಆದರೂ ಹುಡುಗನಾದ ರಾಗಣ್ಣನಿಗೆ ಏನೇನೋ ಗೊತ್ತಾಗಿತ್ತು. ಹದಿನಾಲ್ಕು ವರ್ಷಗಳ ಮುಂಚಿನ ಕತೆ. ಇಂದು ಅದರ ನೆನಪಾಗಲಿ ಬಿ. ರಾಮನು ಭರಮನೆಂದಾಗಲಿ ರಾಗಣ್ಣನಿಗೆ ಹೊಳೆದಿರಲಿಲ್ಲ. ಎಲ್ಲವೂ ಗೊತ್ತಿದೆ ಎಂದನಲ್ಲ ಆ ಸಾಹೇಬ — ಎಂಬ ವಿಚಾರವೆ ರಾಗಣ್ಣನ ತಲೆ ತಿನ್ನುತ್ತಿತ್ತು. ಯಾಕೆಂದರೆ 'ಎಲ್ಲ ಗೊತ್ತಿದೆ' 'ನನಗೆಲ್ಲಾ ಗೊತ್ತಿದೆ' ಎಂಬ ಪದಗಳನ್ನು ತಾನೂ ಎಷ್ಟೋ ಸಲ ಉಪಯೋಗಿಸಿದ್ದ. ಹಾಗೆ ಹೇಳುವುದು ಇನ್ನೊಬ್ಬರನ್ನು ಹೆದರಿಸಲು. 'ನನಗೆಲ್ಲಾ ಗೊತ್ತಿದೆ' ಎಂದರೆ 'ನನ್ಮುಂದೆ ಎಚ್ಚರ' ಎಂದರ್ಥ. ವಿಶೇಷವಾಗಿ ಚಿಕ್ಕವನಿದ್ದಾಗ ರಾಗಣ್ಣನು ಹಾಗೆ ನಡೆದುಕೊಳ್ಳುತ್ತಿದ್ದ. ಈಗ ಈ ಬಿ. ರಾಮನೂ ಅದೇ ಪದಗಳನ್ನು ಹೆಚ್ಚು ಕಡಮೆ ಅದೇ ರೀತಿ ಬಳಸಿದ್ದರಿಂದ, ಅನೇಕ ವರ್ಷಗಳ ರೂಢಿಬಲದಿಂದ ರಾಗಣ್ಣನಿಗೆ ಹೆದರಿಕೆಯಾಗಿತ್ತು. ಇಷ್ಟೇಕೆ? ತಾನೇ ಒಮ್ಮೆ ಚಿಕ್ಕಂದಿನಲ್ಲಿ 'ನನಗೆಲ್ಲಾ ಗೊತ್ತು' ಎಂದಾಗ ಅದೆಂತಹ ಕೋಲಾಹಲವೆದ್ದಿತ್ತು. ಯಾವುದೋ ಕಾರಣಕ್ಕಾಗಿ ತಾಯಿಯೊಡನೆ ಮಾತಾಡುವಾಗ 'ಹುಡುಗರಿಗೆ ಇಂಥಾದ್ದು ಗೊತ್ತಿರಬಾರದು' ಎಂದಿದ್ದಳು ತನ್ನ ತಾಯಿ. ಆಗ 'ನನಗೆಲ್ಲಾ ಗೊತ್ತು' ಎಂದಿದ್ದ ತಾನು.

"ಏನು ಎಲ್ಲಾ ಅಂದ್ರೆ?" ತಾಯಿಯ ಪ್ರಶ್ನೆ.

"ಅಪ್ಪನ ಮಾತು ಅಹುದಲ್ಲೋ?" ಎಂದು ತನ್ನ ಮರುಸವಾಲು.

"ಹುಚ್ಚ! ಅವರ್ದೇನು ಮಾತು?"

"ನನಗೆಲ್ಲಾ ಗೊತ್ತು! ಅವನ್ದೂ ಗಂಗೀದೂ—"

ತನ್ನ ಮಾತು ಅಷ್ಟಕ್ಕೆ ನಿಂತಿತ್ತು. ತನ್ನ ತಾಯಿ, ಎಂದೂ

ಇಲ್ಲದ ಅಂದು, ಅಷ್ಟು ಅನಿರೀಕ್ಷಿತವಾಗಿ ಕೆನ್ನೆಗೆ ಬಲವಾಗಿ ಹೊಡೆದಿದ್ದಳು.

ಅಂದು ರಾಗಣ್ಣನಿಗೆ ಆಶ್ಚರ್ಯವಾಗಿತ್ತು. ಇದ್ದುದನ್ನು ಇದ್ದಂತೆ ಹೇಳಿದರೆ ದೊಡ್ಡವರಿಗೆ ತಡೆಯುವುದಿಲ್ಲವಲ್ಲ !

ಆದರೆ ತಾನು ಹೇಳಿದ್ದು—ಅಥವಾ ಹೇಳಬೇಕೆಂದದ್ದು—ಅಷ್ಟೊಂದು ಕೆಟ್ಟ ಮಾತು ಯಾಕೆ ಮತ್ತು ಹೇಗೆ ಎಂಬುದು ರಾಗಣ್ಣನಿಗೆ ತಿಳಿದಿರಲಿಲ್ಲ. ಹಾಗೆ ಕೇಳಿದರೆ ಅಂದು ಆ ಮಾತಿನ ಅರ್ಥವೆ ಆಗಿರಲಿಲ್ಲ ತನಗೆ. ಅದೇನೋ ಅಸ್ಪೃಶ್ಯರನ್ನು ಮುಟ್ಟುವುದು ಒಳ್ಳೆಯ ಕೆಲಸ, ತನ್ನ ತಂದೆ ಗುಂಡೇರಾಯ ಮನೆತನದ ಹೊಲೆಯಾಳಾದ ಕಾಳ್ಯಾನ ಹೆಂಡತಿಯನ್ನು-ಗಂಗಿಯನ್ನು-ಮುಟ್ಟಿ ಉದ್ಧಾರ ಮಾಡಿದ್ದ - ಎಂದು ಏನೇನೋ ಜನರು ಮಾತನಾಡುತ್ತಿದ್ದರು ಆದರೂ ತನ್ನ ಅಜ್ಜನಿಗೂ ತಂದೆಗೂ ಜಗಳವಾಗಿ ವಿರಸವಾಗಿತ್ತು, ರಾತ್ರಿಯಲ್ಲಿ ಕಾಳ್ಯಾನು ಊರನ್ನೆ ಬಿಟ್ಟು ಓಡಿಹೋಗಿದ್ದ, ಮುಂದೆ ಏನೇನೋ ಗದ್ದಲವೆದ್ದಿತು. ಸರಿ - ಇದೆಲ್ಲಾ ಈಗ ನೆನಪಿಗೆ ಬರಲು ಕಾರಣವೇನು ? ಹಂ. 'ನನಗೆಲ್ಲಾ ಗೊತ್ತು' ಎಂದನಲ್ಲವೆ ಬಿ. ರಾಮು ? ಅವನಿಗೂ ಅಂತಹದೆ ಹೆದರಿಕೆಯನ್ನು ತರುವ ಸಂಗತಿ ಗೊತ್ತಿರಬಹುದೆ ? ಛೆ !-ಬಿಟ್ಟೊರಿಗೂ ಬಿ. ರಾಮುನಿಗೂ ಕನಸು-ಮನಸುಗಳಲ್ಲೂ ಸಂಬಂಧ ಶಕ್ಯವಿರಲಿಕ್ಕಿಲ್ಲ.

ಆದರೂ 'ರಘುನಾಥರಾಯರನ್ನು ಬಲ್ಲೆ ನಾನು' ಎಂದನಲ್ಲ ?

'ಗುಂಡೇರಾಯರ ಮಕ್ಕಳೇನು ನೀವು ?' ಎಂದು ನಾವಿಬ್ಬರು ತಂದೆಮಕ್ಕಳ ಗುರುತನ್ನೆ ಹಿಡಿದನಲ್ಲ ?

'ಬಿಟ್ಟೊರನ್ನು ಚನ್ನಾಗಿ ಬಲ್ಲೆ ನಾನು' — ಎಂದಿದ್ದಾನೆ ಬಿ. ರಾಮುಸಾಹೇಬ.

ರಾಗಣ್ಣನಿಗೆ ದಿಗಿಲು.

ಸಂಜೆಗೆ ತನ್ನ ಕೋಣೆಗೆ ಬಂದಾಗಲೂ ಈ ತೊಡಕು ಅವನ

ತಲೆಯನ್ನು ತಿನ್ನುತ್ತಿತ್ತು.

* * *

ಇಬ್ಬರೂ ಯುವಕರಿಗೆ ತಿಳಿಯದ ಇನ್ನೊಂದು ವಿಷಯವಿದ್ದಿತು. 'ಬಿಟ್ಟೂರನ್ನು ಚನ್ನಾಗಿ ಬಲ್ಲೆ ನಾನು' ಎಂದನಲ್ಲ ಬಿ. ರಾಮು?—ಅದರಲ್ಲಿ ಅವನೊಬ್ಬನದೆ ಅಲ್ಲ, ಇಡಿಯ ಮನುಷ್ಯಪ್ರಾಣಿಯ ಕತೆ ಅಡಕವಾಗಿತ್ತು ಎಂಬುದನ್ನು ಅವನೂ ಅರಿತಿರಲಿಲ್ಲ, ರಾಗಣ್ಣನೂ ಅರಿತಿರಲಿಲ್ಲ.

'ನನಗೆ ಎಲ್ಲಾ ಗೊತ್ತು' ಎಂಬುದಕ್ಕೆ ಇನ್ನೊಬ್ಬರು ಹೆದರುವರು ಎಂದು ರಾಗಣ್ಣನು ತಿಳಿದಿದ್ದನಲ್ಲ?—ಅದು ಇಡಿಯ ಮಾನವ ಪ್ರಾಣಿಯ ಪ್ರಕೃತಿಮೂಲ ಎಂಬುದೂ ರಾಗಣ್ಣನಿಗೆ ಗೊತ್ತಿರಲಿಲ್ಲ.

ಯಾರು ಯಾವುದನ್ನು ಬಲ್ಲರು?

ಮೇಲಿನ ನಾಲ್ಕಾರಡಿ ಎತ್ತರ ತೆರೆಯನ್ನು ನೋಡಿ ಲೋಕಾಂತರ ಆಳವಾದ ಸಮುದ್ರವನ್ನು ಬಲ್ಲೆ ಎಂಬುವನಿಗೆ ಯಾರು ಹೆದರುತ್ತಾರೆ?

ಬಿಟ್ಟೂರನ್ನು ಬಲ್ಲೆ ಎಂಬ ಬಿ. ರಾಮುನಿಗೆ ಬಿಟ್ಟೂರು ಎಂದರೆ ಯಾವುದು ಎಂಬುದೆ ನಿಜವಾಗಿ ಗೊತ್ತಿರಲಿಲ್ಲ.

ತನ್ನ ಮುಂಚೆ ಬಿಟ್ಟೂರಿದ್ದಿತು,
ತಾನಿದ್ದಾಗ ಬಿಟ್ಟೂರಿದ್ದಿತು,
ತಾನಲ್ಲಿ ಇಲ್ಲದಾಗೂ ಬಿಟ್ಟೂರಿದೆ,
ತಾನು ಇಲ್ಲವೇ ಇಲ್ಲದಾಗೂ ಬಿಟ್ಟೂರು ಇದ್ದೇ ಇರುವುದು.

ಹೀಗಿರುವಾಗ ಬಿ. ರಾಮುನಾಗಲಿ, 'ಭರಮಾವಸ್ಥೆ'ಯಲ್ಲಾಗಲಿ ಬಿಟ್ಟೂರನ್ನು ಏನು ಬಲ್ಲನು? ಒಂದು ಕ್ಷಣ ಬದುಕಿ, ಇನ್ನೊಂದು ಕ್ಷಣದಲ್ಲಿ ಬಾಡಿಹೋಗುವ ಪ್ರಾಣಿ ಸಂತತವಾಗಿದ್ದ ಸೃಷ್ಟಿಯನ್ನು ಅರಿಯುವುದೆಂತು?

ಬಿಟ್ಟೂರು ಸಂತತವಾಗಿದೆ, ಬಿಟ್ಟೂರು ಪ್ರವಾಹವಾಗಿದೆ.

ಬಿ. ರಾಮುನಿಗೆ ಗೊತ್ತಿದ್ದುದು ಹದಿನಾಲ್ಕು ವರ್ಷ ಮುಂಚಿತ ಆ ಪ್ರವಾಹದಲ್ಲಿ ಅವನ ಕಣ್ಣಿಗೆ ಕಂಡ, ಕೈಬೆರಳುಗಳೊಳಗಿಂದ ಇಳಿದ ಹನಿ ಮಾತ್ರ.

ಅಂತಹ ಎಷ್ಟೊ ಹನಿಗಳು ಹೆಳ್ಳಗೂಡಿ ಹೋದುದನ್ನು ನೋಡಿದ್ದನೆಂದೇ ರಾಗಣ್ಣನಿಗೆ ಬಿ. ರಾಮುನ 'ಅಂತ' ಹತ್ತಲೊಲ್ಲದು.

'ರಘುನಾಥರಾಯರನ್ನು ಬಲ್ಲೆ ನಾನು' ಎಂದಿದ್ದ.

ಇರಬಹುದು.

'ಗುಂಡೇರಾಯರ ಮಕ್ಕಳೇನು ನೀವು ?' ಎಂದಿದ್ದ.

ಅಹುದು.

'ಬಿಟ್ಟೂರನ್ನು ಚನ್ನಾಗಿ ಬಲ್ಲೆ ನಾನು' ಎಂದ !

ಎಂತಹ ಹುಚ್ಚು ! ಬಿಟ್ಟೂರೆಂದರೆ ರಘುನಾಥರಾಯರಲ್ಲ, ಗುಂಡೇರಾಯರಲ್ಲ. ಇಷ್ಟೇಕೆ ? ಆ ರಾಯರುಗಳು ಕೂಡ ಪ್ರವಾಹದ ಹನಿಗಳು. ಬಿಟ್ಟೂರೆಂದರೆ ರಘುನಾಥರಾಯರ ಊರು ಎಂದು ೧೪ ವರ್ಷದ ಮುಂಚೆ, ೧೨ ವಯಸ್ಸಿನ ಭರಮು ತಿಳಿದಿದ್ದ. ಆದರೆ ವಸ್ತುಸ್ಥಿತಿ ಹಾಗಿರಲಿಲ್ಲ. ಬಿಟ್ಟೂರಿಗೆ ರಘುನಾಥರಾಯರು ರೂಪು ಗೊಟ್ಟಿರಲಿಲ್ಲ ; ತೀರ, ತೀರ ವಿರುದ್ಧವಾಗಿದೆ ವಸ್ತುಸ್ಥಿತಿ.

೨

ಯಥಾ ಕಾಷ್ಠಂ ಚ ಕಾಷ್ಠಂ ಎಂದು ಹೇಳುವುದು ರಘುನಾಥ ರಾಯರ ರೂಢಿಯಾಗಿತ್ತು. ಮಡದಿ-ಮಕ್ಕಳೇ ಆಗಲಿ, ಹೊರಗಿನವರೇ ಆಗಲಿ–ಯಾರಾರು ಸಂಬಂಧಿಕರಾಗುವರೊ ಅವರೆಲ್ಲ 'ಕಾಷ್ಠ'ದ ನದರಿ ನಲ್ಲಿಯೆ ಬರುತ್ತಿದ್ದರು–ರಘುನಾಥರಾಯರ ದೃಷ್ಟಿಯಲ್ಲಿ. 'ಹುಚ್ಚನೊ ನೀನು! ಎರಡು ಕಟ್ಟಿಗೆ ತುಂಡು. ತೇಲತಾ ಕೂಡಿ ಬರ್ತಾವ, ತೇಲತಾ ಒಂದರಿಂದೊಂದು ಸಿಡಿದು ಹೋಗ್ತಾವ' ಎಂದು ತನ್ನ ಉಪಕಾರವನ್ನು ಸ್ಮರಿಸಲು ಬಂದವರಿಗೆಲ್ಲ ರಘುನಾಥರಾಯರು ಹಿರಿತನದಿಂದ ಹೇಳುತ್ತಿದ್ದರು.

ಆದರೆ ರಘುನಾಥರಾಯರಿಗೆ — ತಮ್ಮಷ್ಟಕ್ಕೇ ವಿಚಾರ ಮಾಡಿ ದಾಗ ಒಂದು ವಿಷಯದ ಸಮಾಧಾನ ಮಾತ್ರ ಆಗಿರಲಿಲ್ಲ. ಎರಡು ಕಟ್ಟಿಗೆ ತುಂಡುಗಳು ತೇಲತಾಬಂದು ಕೂಡಬಹುದೇನೊ ನಿಜ, ಆದರೆ ಇಂತಹವೆ ಎರಡು ತುಂಡುಗಳು ಕೂಡಿ ಬರಬೇಕು ಎಂಬ ಪೂರ್ವಸಂಕೇತ ಏನಾದರೂ ಇರಬಹುದೆ? ರಘುನಾಥರಾಯರಿಗೆ ಈ ಪ್ರಶ್ನೆಕ್ಕೆ ಒಂದು ಸ್ಪಷ್ಟವಾದ ಉತ್ತರ ದೊರೆತಿರಲಿಲ್ಲ. ಪೂರ್ವ ಸಂಕೇತ ಇರಬಹುದು ಎನ್ನಿಸುವುದು ಒಮ್ಮೊಮ್ಮೆ. ಇಂತಹನು ಇಂತಹರ ಮಗನಾಗಿ ಹುಟ್ಟಬೇಕು, ಇಂಥಾಕೆ ಇಂಥವನ ಹೆಂಡತಿ

ಆಗಬೇಕು—ಈ ಸಂಗತಿಗಳು ಸಹ ಪೂರ್ವಸಂಕೇತದಿಂದಲೆ ನಡೆಯಿರಬಾರದೇಕೆ? ದೇವನ ಸೃಷ್ಟಿಯಲ್ಲಿ ಏನಾದರೂ ನಿಯಮವಿದ್ದಿರಬೇಕಲ್ಲ? ಇಲ್ಲದಿದ್ದರೆ ತಮ್ಮ ಮನೆಯಲ್ಲಿ ಪ್ರತಿಯೊಂದು ತಲೆಮಾರಿನಲ್ಲಿ ಎಲ್ಲ ಹುಡುಗರೂ ತೀರಿ, ಕೊನೆಗೆ ಒಂದು ಗಂಡು, ಒಂದು ಹೆಣ್ಣು—ಹೀಗೆ ಎರಡು ಮಕ್ಕಳು ಉಳಿಯುವುದೇಕೆ? ತನ್ನ ತಂದೆ, ತನ್ನ ಸೋದರತ್ತೆ, ತನ್ನ ಅಜ್ಜ, ಅವರ ತಂಗಿ, ಈಗ ತಾನು, ತನ್ನ ತಂಗಿ ಸರಸ್ವತಿ, ಕೊನೆಗೆ ತನ್ನ ಮಗ ಗುಂಡೇರಾಯ, ಮಗಳು ಸುಬ್ಬಕ್ಕ ಸಾಲು ಸಾಲಾಗಿ ಹಿಸ್ಸಿನಿಂದ ನಡೆದಿದೆ ಕುಟುಂಬದ ವೈಲಕ್ಷಣ್ಯ. ಆದರೆ ಒಮ್ಮೊಮ್ಮೆ ಎನ್ನಿಸುವುದು, ಇಷ್ಟೊಂದು ಪೂರ್ವಸಂಕೇತ ಇರಬಾರದು—ಎಂದು ಯಾಕೆಂದರೆ, ಹಾಗೆ ಪೂರ್ವಸಂಕೇತ ಇರುವುದಾದರೆ ಸೃಷ್ಟಿಯ ಕ್ರಮ ನಿರರ್ಥಕವಾಗಿ ಕ್ರೂರವಾಗಿದೆ ಎನ್ನಬೇಕು ಅಲ್ಲದೆ ಮತ್ತೇನು? ಮನೆತನದ ಸಾಂಪ್ರದಾಯಿಕ ವೈಭವವೆಲ್ಲ ಕಳೆದು, ಹೊಮ್ಮಗ ರಾಗಣ್ಣ ಬ್ರಾಹ್ಮಣ್ಯದ ಗೌರವಕ್ಕೆ ಧಕ್ಕೆ ತರುವಂತಹ ನೋಕರಿಗಾಗಿ ಅನಿವಾರ್ಯವಾಗಿ ಅಲೆದಾಡುವುದು ಪೂರ್ವಸಂಕೇತವಾಗಿದ್ದರೆ — ಈ ಸಂಕೇತದ ಕರ್ತೃವು ಅತ್ಯಂತ ಕಠೋರ ಹೃದಯನಾಗಿರಬೇಕಾಗುವುದು. ಒಮ್ಮೊಮ್ಮೆ ರಘುನಾಥರಾಯರು ವಿಚಾರ ಮಾಡುವರು: ತತ್ಕಾಲಿಕ ಭಾವನೆಯನ್ನು ಮರೆತರೆ ಈ ಪ್ರಪಂಚದಲ್ಲಿ ನಡೆಯುವುದೆಲ್ಲವೂ ಒಳಿತಿಗಾಗಿ ಎನ್ನಬಹುದಲ್ಲ? ಯಾಕಿರಬಾರದು? ರಾಗಣ್ಣ ಮನೆಬಿಟ್ಟು ಹೋದುದಕ್ಕೆ ಈಗ ವ್ಯಥೆಯಾಗಿದೆ, ಆದರೆ ದೂರದ ಪರಿಣಾಮ ಒಳ್ಳೆಯದೆ ಆಗಬಹುದಲ್ಲ?

ರಘುನಾಥರಾಯರಿಗೆ ತನ್ನಷ್ಟಕ್ಕೆ ವಿಚಾರ ಮಾಡುವುದು ಅನಿವಾರ್ಯವಾಗಿದ್ದಿತು. ವಯಸ್ಸಿನ ೧೮ನೆಯ ವರ್ಷಕ್ಕೆ ತಂದೆಯನ್ನೇ ಕಳೆದುಕೊಂಡು ಅವರು ಮನೆಗೂ ಊರಿಗೂ ಹಿರಿಯರಾಗಿದ್ದರು. ಅಂದಿನಿಂದ ಅವರ ಸರಿ ಜೋಡಿ ಮಾತಾಡುವವರು

ಯಾರು? ಕ್ರಮೇಣ ರಘುನಾಥರಾಯರು ತಮ್ಮೊಡನೆಯೆ ಸಂಪರ್ಕ ಸಹವಾಸವನ್ನು ಬೆಳೆಯಿಸಿಕೊಂಡರು, ವಯಸ್ಸಾದಂತೆ ಸ್ವಂತದೊಡನೆ ಸಂಭಾಷಣೆಯನ್ನೂ ನಡೆಯಿಸುವ ಚಟ ಬದ್ದಿತು ಅವರಿಗೆ. ಎಷ್ಟೊ ಸಲ ಪ್ರಶ್ನವನ್ನು ಗಟ್ಟಿಯಾಗಿ ಕೇಳಿಕೊಳ್ಳುತ್ತಿದ್ದರು, ಆಗ ಯಾರಾದರೂ ಪ್ರಶ್ನೆ ತಮಗೆಂದು ತಿಳಿದು ಉತ್ತ ಬಂದರೆ ರಾಯರು ದುರುದುರು ನೋಡಿ ತುಟಿಯನ್ನು ಬಿಚ್ಚದೆ ಹಾಗೇ ಸಾಗುತ್ತಿದ್ದರು. ಜನರಿಗೆ ರಾಯರ ಸ್ವಭಾವದ ಪರಿಚಯವಿದ್ದಿತು; ಆದರೆ ತಮ್ಮ ಪರಿಚಯ ತಮಗೇ ಇಲ್ಲದಂತೆ ಅನೇಕ ಸಲ ರಾಯರು ನಡೆದು ಕೊಳ್ಳುತ್ತಿದ್ದರು.

ನಾನು ಯಾರು—ಎಂದು ಕೇಳಿಕೊಳ್ಳುತ್ತಿದ್ದರು.

ಇದೆಲ್ಲ ಸಂಬಂಧ ಹೀಗೆ ನಡೆಯಲೇಬೇಕೆಂದು ಪೂರ್ವಸಂಕೇತ ವಿರಬಹುದೆ—ಎಂದು ಅನುಮಾನಿಸುತ್ತಿದ್ದರು.

ಮನುಷ್ಯನೆಂದರೆ ಸಂಸಾರ ಸರಪಣಿಯ ಒಂದು ತುಂಡು—ಎಂದು ಆಗಾಗ ಬೆರಗಾಗುತ್ತಿದ್ದರು.

ಒಮ್ಮೊಮ್ಮೆ ಎಲ್ಲವನ್ನೂ ನೆನೆದು ನಿಟ್ಟುಸಿರನ್ನು ಬಿಡುತ್ತಿದ್ದರು ಮಾತ್ರ.

* * *

ಯಥಾ ಕಾಷ್ಠಂ ಚ ಕಾಷ್ಠಂ ಚ ಎಂದು ಯಾವಾಗ ಹೇಳಿದರೂ ರಘುನಾಥರಾಯರು ತಮ್ಮನ್ನು ಒಂದು ತುಂಡನ್ನಾಗಿಯೆ ಇಟ್ಟು ಕೊಳ್ಳುತ್ತಿದ್ದರು. ಸಂದರ್ಭಾನುಸಾರವಾಗಿ ಎರಡನೆಯ ತುಂಡು ಬದಲಾಗುತ್ತಿತ್ತು. ಎಷ್ಟೆಷ್ಟು ಜನರು ತಮ್ಮೊಡನೆ ಕ್ಷಣಿಕ ಸಂಯೋಗ ವನ್ನು ಹೊಂದಬೇಕಾಗಿದೆಯೊ? ಒಮ್ಮೊಮ್ಮೆ ರಾಯರಿಗೆ ಅಂತಹ ಜನರ ನೆನಪೂ ಉಳಿಯುತ್ತಿರಲಿಲ್ಲ. ಆದರೆ ಕೆಲವು ಜನರ ಸಂಯೋಗ ಮಾತ್ರ ಪೂರ್ವಸಂಕೇತವೆ ಆಗಿರಬೇಕು ಎಂದು ರಾಯರ ಬಲವಾದ ನಂಬುಗೆ. ಅಂತಹರಲ್ಲಿ ಒಬ್ಬನಾದ 'ಪರಸ್ಯಾ' ಇತ್ತಿತ್ತಲಾಗಿ ದಿನಕ್ಕೆ

ಎಷ್ಟೋ ಸಲ 'ಇನ್ನೊಂದು ತುಂಡಾಗಿ' ರಾಯರ ಮುಂದೆ ನಿಲ್ಲುತ್ತಿದ್ದ. ನೋಕರಿ ಸಿಕ್ಕಿತೆಂದು ರಾಗಣ್ಣ ಹೋದನಲ್ಲ? ಅದಕ್ಕಾಗಿ ರಘುನಾಥ ರಾಯರಿಗೆ ತುಸು ಹುರುಹುರು ಎನ್ನಿಸಿತ್ತು. ಆದರೆ—ಯಾಕೊ ಏನೊ?—ಪರಸ್ಯಾನನ್ನು ನೋಡಿದ ಕೂಡಲೆ ಅವರ ಮನಸ್ಸು ಸ್ಥಿಮಿತ ಬಂದಿತು. ಅವರಿಗೇ ಆಶ್ಚರ್ಯ. ಈ ಪರಸ್ಯಾನಿಂದ ತಮಗೆ ಸಮಾಧಾನವೆ? ಅವನು ಯಾರು? ತಾವು ಯಾರು? ಅವನಿಗೂ ತಮಗೂ ಸಂಬಂಧವೇ—

ಛಿ! ಸಂಬಂಧವೇನು ಸುಟ್ಟಿತು!

ಪರಸ್ಯಾಜಾತಿ ಹೊಲೆಯ, ಅವನಕೂಡ ಸಂಬಂಧವೆಲ್ಲಿಂದಬಂತು?

ಆದರೂ ಏನನ್ನೊ ಕಳೆದುಕೊಂಡಂತಾದ ಮನಸ್ಸು ಅವನನ್ನು ನೋಡಿ ಸಂತೈಸುವುದಲ್ಲ?

ಯಥಾ ಕಾಷ್ಠಂ ಚ ಕಾಷ್ಠಂ ಚ! ಆದರೆ, ಇಷ್ಟೊಂದು ವಿಸಂಗತವಾದ ತುಂಡುಗಳು ಕೂಡಬಹುದೆ?

ಕೂಡುವುದು ಯಾಕೆ?

ಯಾವುದೋ ಒಂದು ಕ್ಷಣವಲ್ಲಿ ತಂದೆತಾಯಿಗಳು ಇಟ್ಟ 'ಪರಶುರಾಮ' ಎಂಬ ಹೆಸರು, ಎಲ್ಲಿವೂ ಕ್ಷಣಿಕ ಎಂಬ ನ್ಯಾಯವನ್ನೇ ಸಿದ್ಧ ಮಾಡುವಂತೆ, ತತ್‌ಕ್ಷಣ ಇಲ್ಲದಾಗಿತ್ತು. ಈ ಒಂದು ಕ್ಷಣದ ಪರಶುರಾಮನು ಇಡಿಯ ಜೀವನವನ್ನೆಲ್ಲ 'ಪರಸ್ಯಾ' ಎಂಬ ಸಂಕೇತ ವನ್ನು ಧರಿಸಿಕೊಂಡೇ ಕಳೆಯಬೇಕಾಗಿತ್ತು. ಪರಶುರಾಮ ಹೊಲೆಯ, ರಘುನಾಥರಾಯರ ಮನೆತನದ ಹೊಲೆಯ; ಕೇವಲ ರಾಯರ ಮನೆಯ ಎಂಜಲೆಲೆಗಳಿಂದಲೆ ಬೆಳೆದನು. ರಾಯರಿಗೆ ಚಿಕ್ಕಂದಿನಿಂದಲೂ 'ಪರಸ್ಯಾ' ಎಂಬ ಹೆಸರಿನಿಂದಲೆ ಅವನ ಗುರುತು.

ಗುರುತು ಮಾತ್ರ ಯಾಕೆ? ಚಿಕ್ಕಂದಿನಲ್ಲಿ ಪರಸ್ಯಾ ಎಂಬ ಹುಡುಗ ತಮ್ಮೊಡನೆ ಆಡುತ್ತಿರಲಿಲ್ಲವೆ?

* * *

ರಘುನಾಥರಾಯರಿಗೆ ಅದೊಂದು ಆಶ್ಚರ್ಯದ ಮಾತಾಗಿತ್ತು ; ಒಮ್ಮೊಮ್ಮೆ ಅದು ಪೂರ್ವಸಂಕೇತದ ಒಂದು ದೃಷ್ಟಾಂತವೆಂದೆನ್ನಿಸುತ್ತಿತ್ತು. ಪರಸ್ಯಾ ರಾಯರಿಗಿಂತ ನಾಲ್ಕು ವರ್ಷಗಳಿಂದ ಹಿರಿಯ ಎಂದು ರಾಯರು ಚಿಕ್ಕಂದಿನಲ್ಲಿಯೆ ಕೇಳಿದ್ದರು. ಆಗ ರಾಯರಿಗೆ ೬ ವರ್ಷ, ಪರಸ್ಯಾನಿಗೆ ೧೦ ವರ್ಷ. ಬಾಲಕ ರಘುನಾಥನಿಗೆ ಪರಸ್ಯಾ ಎಂದರೆ ಇನ್ನೊಬ್ಬ ಬಾಲಕ, ದಿನಾಲು ತನ್ನ ಮನೆಗೆ ಬಂದು ಹೋಗುವ ಬಾಲಕ, ಇದ್ದಾಗಲೂ ತನಗಿಂತ ದೊಡ್ಡವ; ಕಂಡರೂ ಯಾವಾಗಲೂ ದೂರದಲ್ಲಿದ್ದು ತಾನು ಹೇಳಿದಂತೆ ಕೇಳುವ ಬಾಲಕ ಎಂದಿಷ್ಟೆ ಗೊತ್ತಿತ್ತು. ಕೂಸಿಯ ಮಾತಿಗಾಗಿ ರಘುನಾಥನು ಪರಸ್ಯಾನೊಡನೆ ಹೆಚ್ಚಾಗಿ ಆಡುತ್ತಿದ್ದನು. ಆಡುತ್ತಾ ಕತ್ತಾ ಒಂದು ದಿನ ಇಬ್ಬರೂ ಊರ ಹತ್ತಿರದ ಹೊಂಡದಲ್ಲಿ ಮೀನು ಹಿಡಿಯಲೆತ್ನಿಸುತ್ತಿದ್ದರು. ಆಗ ಎಲ್ಲಿಂದಲೋ ಬಂದ ರಘುನಾಥನ ತಂದೆಯನ್ನು ಹೇಗೋ ಪರಸ್ಯಾ ನೋಡಿ ಓಡಿಹೋಗಿದ್ದ. ತಂದೆ ರಘುನಾಥನನ್ನು ಹೆದರಿಸಿದರು, ಪರಸ್ಯಾನ ಕೂಡ ಆಡಬಾರದು ಎಂದು ಅಪ್ಪಣೆ ವಿಧಿಸಿದರು. ಆದರೆ ಅಷ್ಟಕ್ಕೆ ಮುಗಿಯಲಿಲ್ಲ ಹಿರಿಯರ ಹಿರಿತನ. ಮಧ್ಯಾಹ್ನದಲ್ಲಿ ಪರಸ್ಯಾನನ್ನು ಹಿಡಿದು ತರಿಸಿದರು. ಆ ಹುಡುಗ ಗಾಬರಿಯಾಗಿ ಎಲ್ಲಿ ಓಡಿಹೋಗಿದ್ದನೊ ! ಊಟವನ್ನೆ ಮಾಡಿರಲಿಲ್ಲ, ಮುಖ ಬಾಡಿತ್ತು, ಕಣ್ಣೊಳಗಿಂದ ನೀರು ಸುರಿಯುತ್ತಿತ್ತು ; ಚಿಕ್ಕ ರಘುವಿಗೆ ಅನಿಸಿತ್ತು, ಈ ಹುಚ್ಚ ಪರಸ್ಯಾ ಇಷ್ಟೇಕೆ ಹೆದರಿರುವ ಎಂದು. ತನಗೆ ಬೈದರಲ್ಲವೆ ? ಈ ಹುಚ್ಚ ಓಡಿಹೋದ, ಈಗ ಹಿಡಿದು ತಂದಿದ್ದಾರೆ, ಈಗ ಬೈಯುತ್ತಾರೆ. ಹೀಗಿರಲು—

ರಘುವಿನ ವಿಚಾರವನ್ನು ಎರಡು ತುಂಡಾಗಿ ಕತ್ತರಿಸುವ ಖಡ್ಗದಂತೆ ಪರಸ್ಯಾನ ಚೀತ್ಕಾರ ಕೇಳಿಸಿತು. ರಘು ಬೆಪ್ಪಾಗಿ ನೋಡುತ್ತಾನೆ. ಮನೆಯ ಆಳಾದ ಮುದ್ದಪ್ಪ ಪರಸ್ಯಾನನ್ನು ಚನ್ನಾಗಿ ಥಳಿಸುತ್ತಿದ್ದಾನೆ ! ಏನಿದು ? ಯಾಕೆ ? ಮುದ್ದಪ್ಪನು

ಹೊಡೆಯುವುದು ಯಾಕೆ ? ರಘುವಿಗೆ ಒಂದೂ ತಿಳಿಯದೆ ಬೆಪ್ಪಾಗಿ ನಿಂತಿದ್ದಾನೆ. ಮೈ ನಡುಗುತ್ತಿದೆ, ಬೆವರು ಸುರಿಯುತ್ತಲಿದೆ, ಕಣ್ಣಿಗೆ ಕತ್ತಲೆ ಕಟ್ಟುತ್ತಿದೆ, ಏನು ಮಾಡುವೆನೆಂಬುದು ತಿಳಿಯದೆ ರಘುವು ಪರಸ್ಯಾನತ್ತ ಧಾವಿಸಬೇಕೆಂದಾಗ, "ಹಾಂ ! ಮುಟ್ಟಬ್ಯಾಡ ಅವನ್ನ" ಎಂದು ತಂದೆಯವರು ಹಿಡಿದೆಳೆದು "ಇವನ್ನ ಒಳಗೆ ಒಯ್ಯಿರೊ" ಎಂದಿದ್ದರು ! ಪರಸ್ಯಾನ ಚೀತ್ಕಾರ ಬೆನ್ನಟ್ಟಿದಂತಾಗಿತ್ತು. ಅದನ್ನು ತಪ್ಪಿಸದೆ ಗತ್ಯಂತರವಿಲ್ಲ ಎಂದು ಇನ್ನೊಬ್ಬರು ಎಳೆಯುವ ಮುಂಚೆ ತಾನೇ ಒಳಗೆ ಓಡಿದ್ದ. ಪರಸ್ಯಾನ ದನಿ ಶಾಂತವಾಗಿತ್ತು. ಯಾಕೆ ಎಂಬುದು ಮರುದಿನ ತಿಳಿಯಿತು. ಪರಸ್ಯಾನ ಮುಂಗೈಗೆ ಬಲವಾದ ಏಟು ಬಿದ್ದು ಆ ಹುಡುಗ ಮೂರ್ಛೆ ಹೋಗಿದ್ದ. ಅಂದು ಮುರಿದ ಕೈ ಎಲುಬು ಇಂದಿಗೂ ಹಾಗೇ ಇದೆ ಆದರೆ ಇಂದಿಗೂ ಪರಸ್ಯಾ ಮುರಿದ ಕೈಯನ್ನು ಮುಂದೆ ಮಾಡಿ ನಮಸ್ಕರಿಸುವಾಗ ಅವನ ಮುಖದಲ್ಲಿ ಭಕ್ತಿಯ ಹೊರತು ಇನ್ನೊಂದು ಕಳೆ ಇರುವುದಿಲ್ಲ. ತನಗಾಗಿ ಆ ಹುಡುಗನ ಕೈ ಮುರಿಯಿತಲ್ಲ ಎಂದು ಬಾಲಕನಾದ ರಘುನಾಥನ ಮನಸ್ಸಿನ ಮೇಲೆ ಆದ ಆಘಾತ ಇಂದಿಗೂ ಮಾಯವಾಗಿರಲಿಲ್ಲ. ದುಡಿಯುವ ಕೈಯನ್ನು ಗಾಯಗೊಳಿಸಿದ್ದಕ್ಕಾಗಿ ಅವನ ಪೋಷಣೆಯ ಭಾರ ತನ್ನದು ಎಂದು ಯಜಮಾನಿಕೆ ಬರುವ ಮುಂಚೆನಿಂದಲೆ ರಘುನಾಥ ಒಪ್ಪಿಕೊಂಡಿದ್ದ. ತಿನ್ನಲು ಕೊಟ್ಟುದನ್ನು ಹೊರಗೆ ಒಯ್ದು ಪರಸ್ಯಾನಿಗಾಗಿ ಕಾದಿಡುತ್ತಿದ್ದ. ಇಂದಿಗೂ ಆ ಪರಸ್ಯಾನ ಯೋಗಕ್ಷೇಮವನ್ನು ತಾನು ವಹಿಸುತ್ತಿರುವನಲ್ಲ ?

ತನ್ನ ಮತ್ತು ಪರಸ್ಯಾನ ಜೀವಿತಗಳು ಕೂಟದ ದಾರಿಗಳಂತೆ ಒಂದನ್ನೊಂದು ಕತ್ತರಿಸಿ ಹೋಗಿದ್ದುವು.

ಮುಂದೆ ಒಂದಿಲ್ಲೊಂದು ರೀತಿಯಿಂದ ತನ್ನ ಮಗ ಗುಂಡೇರಾಯನ ಮತ್ತು ಪರಸ್ಯಾನ ಮಗ ಕಾಳ್ಯಾನ ಜೀವಿತಗಳೂ ಒಂದನ್ನೊಂದು ಕತ್ತರಿಸಿದುವಲ್ಲ ?

ಯಾರಿಗೆ ಗೊತ್ತು ?

ಕಾಳ್ಯಾನ ಮಗ, ಪರಸ್ಯಾನ ಮೊಮ್ಮಗ ಎಲ್ಲಿಯಾದರೂ ಜೀವದಿಂದಿದ್ದರೆ ಅವನ ಮತ್ತು ತನ್ನ ಮೊಮ್ಮಗನಾದ ರಾಗಣ್ಣನ ಜೀವಿತಗಳೂ ಒಂದನ್ನೊಂದು ಕತ್ತರಿಸಬಹುದಲ್ಲ ?

ಇದೆಂತಹ ಪೂರ್ವಸಂಕೇತವಾಗಿರಬಹುದು ?

* * *

ಸ್ವಂತದ ಸಹವಾಸದಲ್ಲಿಯೆ ಹೆಚ್ಚು ಸಮಯವನ್ನು ಕಳೆಯುತ್ತಿದ್ದ ರಘುನಾಥರಾಯರಿಗೆ ೪೦–೫೦ ವರ್ಷಗಳ ಮುಂಚಿನ ಅನುಭವಗಳೂ ಆಗಾಗ ನೆನಪಿಗೆ ಬರುತ್ತಿದ್ದುವು. ಅಂದು ಕೈಮುರಿವಂತೆ ಪರಸ್ಯಾನನ್ನು ಹೊಡೆಸಿದ್ದಕ್ಕೆ ರಘುನಾಥರಾಯರ ಮನಸ್ಸಿನಲ್ಲಿ ತಂದೆಯ ಬಗ್ಗೆ ಯಾವುದೊ ಒಂದು ತರದ ಅನಾದರ ಮತ್ತು ಜಿಗುಪ್ಸೆ ಮೂಡಿಕೊಂಡಿದ್ದುವು. ಪರಸ್ಯಾ ಹೊಲೆಯ, ಪರಸ್ಯಾ ಅಸ್ಪೃಶ್ಯ, ಅದಕ್ಕಾಗಿಯೆ ತನ್ನ ತಂದೆ ಇನ್ನೊಬ್ಬನಿಂದ ಅವನನ್ನು ಹೊಡೆಯಿಸಿದ್ದರಂತೆ; ಇದೆಲ್ಲ ಮುಂದೆ ಕೆಲವು ದಿನಗಳ ಮೇಲೆ ರಘುನಾಥರಾಯರಿಗೆ ತಿಳಿದಿತ್ತು. ಆದರೆ ಅಂದಿನ ಘಟನೆ, ತನಗಾಗಿ ಪರಸ್ಯಾನ ಕೈ ಮುರಿದದ್ದು — ಇದಕ್ಕಾಗಿ ಪರಸ್ಯಾ ಅಸ್ಪೃಶ್ಯ ಎಂಬ ವಿಚಾರವೆ ರಘುನಾಥರಾಯರಿಗೆ ಬಂದಿರಲಿಲ್ಲ. ಆದರೂ ವಯಸ್ಸಾದಂತೆ, ತಂದೆಯ ತರುವಾಯ ಹಿರೀತನ ಕೈಸೇರಿದಂತೆ ರಘುನಾಥರಾಯರಿಗೆ ರೂಢಿ-ಸಂಪ್ರದಾಯಗಳನ್ನು ಅನುಸರಿಸಲೇ ಬೇಕಾಯ್ತು. ಪರಸ್ಯಾನ ಬಗ್ಗೆ ಎಷ್ಟೊಂದು ಆತ್ಮೀಯತಾಭಾವ ಎನ್ನಿಸಿದರೂ ವ್ಯವಹಾರಕ್ಕಾಗಿ ಅವನು ದೂರದಲ್ಲಿಯೆ ಇರಬೇಕಾಯ್ತು ; ರಘುನಾಥರಾಯರು ಸ್ನಾನ ಮಾಡಿದ ಮೇಲೆ ಯಾವ ಕಾರಣಕ್ಕಾಗಿ ಪರಸ್ಯಾನ ದನಿ ಕೂಡ ಕೇಳಿಸಕೂಡದು. ಈ ವ್ಯವಹಾರವನ್ನು ತಾವು ಅನಿವಾರ್ಯವಾಗಿ ಒಪ್ಪುವರೆಂಬಂತೆ ಮಧ್ಯಾಹ್ನ ಊಟದ ತರುವಾಯ ನಿದ್ದೆಯಿಂದ ಎದ್ದಾಕ್ಷಣ ಹೊರಗೆ ಕಟ್ಟೆಗೆ ಕುಳಿತು ಪರಸ್ಯಾನೊಡನೆ ಆಪ್ತ

ಲೋಚನೆಯನ್ನು ನಡೆಯಿಸುತ್ತಿದ್ದರು ಸಂಪ್ರದಾಯಕ್ಕಾಗಿಯೂ ಅವನನ್ನು ದೂರದಲ್ಲಿಡುವುದು ತಪ್ಪು, ಆ ತಪ್ಪಿಗಾಗಿ ಪ್ರಾಯಶ್ಚಿತ್ತ ವೇನೊ ಎಂಬಂತೆ ಅನೇಕ ಸಲ ಮನೆತನದ ಮಾತುಗಳನ್ನು ಕೂಡ ಅವನೊಡನೆ ಚರ್ಚಿಸುತ್ತಿದ್ದರು. ಎಷ್ಟೋ ಸಲ ತಮ್ಮ ಕಣ್ಣೆದುರಿನಲ್ಲಿಯೆ ಪರಸ್ಯಾನ ಮಗನೊಡನೆ ಆಡುತ್ತಿರುವ ತಮ್ಮ ಮಗನನ್ನು ನೋಡಿ, ಏನೊ ನೆನಪಿಗೆ ಬಂದಂತಾಗಿ ರಾಯರು ಉಸುರ್ಗರೆಯುತ್ತಿದ್ದರು, ಪರಸ್ಯಾನೊಡನೆ ತಮ್ಮ ಹೃದಯವನ್ನು ಬಿಚ್ಚಿ ಮಾತನಾಡುತ್ತಿದ್ದರು.

"ನೆನಪು ಐದೆ ಏನು ನಿನಗ, ಪರಸ್ಯಾ ?"

ಯಾವುದರ ಸಂದರ್ಭವೂ ಇಲ್ಲದೆ ರಾಯರು ಪ್ರಶ್ನವನ್ನು ಕೇಳುವರು. ಸಂದರ್ಭವನ್ನು ಪೂರ್ತಿಯಾಗಿ ಅರಿತವನಂತೆಯೆ ಪರಸ್ಯಾ ಉತ್ತರ ಕೊಡುವನು.

"ಐತಿರಿ, ಸಾವ್ಕಾರ್ರ"

ಆ ಮಾತನ್ನು ಹೇಳುವಾಗ ಪರಸ್ಯಾನ ಮುಖದಲ್ಲಿ ನಗೆಯ ಕಳೆ ಮೂಡಿರುವುದು. ರಾಯರಿಗೆ ಆಶ್ಚರ್ಯ. ಆ ಬಗ್ಗೆ ಖೇದ, ಕ್ಷೋಭ ಏನೂ ಇಲ್ಲವೆ ಈ ಪ್ರಾಣಿಗೆ? ಇಲ್ಲವೆ ಅಷ್ಟೊಂದು ಸಹನ ಶೀಲತೆ ಇರಬಹುದೆ ?

"ಈಗ ನಗ್ತಾನೆ ಮಗ ! ಆ ದಿನ ಎಲ್ಲಿ ಹೋಗಿತ್ತೋ ಈ ಮಗನ ನಗೆ !" ಎಂದು ರಾಯರು ಮೂದಲಿಸುವ ದನಿಯಲ್ಲಿ ನುಡಿಯುವರು.

"ಆಗ ಒಂದೀಟ ಬುದ್ದಿ ಕಡಿಮೆ ಇತ್ತು ಅಂತ ಅತ್ತಿನಿರಿ."

"ಭಪ್ಪರೆ ಮಗನೆ ! ಈಗ ಬುದ್ಧಿ ಬಂದಿದೆ ಅಂತ, ಆ ಹೊತ್ತಿನ್ಹಾಂಗೇ ಬಾರಕೋಲಿನಿಂದ ಬಿಗಿದರೆ ನಗ್ತೀ ಏನು ?"

"ನನಗೇನು ಬಂದೀತರಿ ಬುದ್ದಿ ? ಆದ್ರ, ಈಗಿನ ಸಾವ್ಕಾರ್ರು ಅಂಥಾದ್ದನ್ನ ಮಾಡೋದಿಲ್ಲ ಅಂತ—"

"ಸುಳ್ಳಲ್ಲ, ನೋಡು, ಪರಸ್ಯಾ. ನೀಯೇನು ಅಷ್ಟಿಷ್ಟು ಧಡ್ಡ

ಇಲ್ಲ. ಒಮ್ಮೊಮ್ಮೆ ಅಂತೂ ನಿನ್ನ ಧಡ್ಡತನಕ ನಿನ್ನ ಮೈ ತೊಗಲು ಸುಲಿಯೋ ಹಾಂಗ ಹೊಡೀಬೇಕು ಅಂತ ಸಿಟ್ಟು ಬರ್ತದ."

"ಸಿಟ್ಟು ಅನ್ನಬೇಕು ದೊಡ್ಡ ಸಾವ್ಕಾರ್ರರದೆ" ಎಂದು ಪರಸ್ಯಾ ಮಾತನ್ನೆ ಹಾರಿಸಿ ಬಿಡುವ

"ಅಲ್ಲಿ ನೋಡಿದಾ! ಆ ನಮ್ಮ ಗುಂಡ್ಯಾನ ನೋಡು" ಎಂದು ರಾಯರು ಬೇರೊಂದು ಸಂದರ್ಭವನ್ನೆತ್ತುವರು.

"ಎಲ! ಏ — ಕಾಳ್ಯಾ? ಥೂ ನಿನ ಮೂಳಾ!" ಎಂದು ಪರಸ್ಯಾ ಒಮ್ಮೆಲೆ ಏಳತೊಡಗುವನು.

"ಏ! ಇರಲಿ ಬಿಡೊ, ಧಡ್ಡ ರಂಡೇಗಂಡಾ! ಹುಡುಗ್ರು — ಹುಡುಗ್ರು ಆಡೋವಾಗ ನಿನ್ನ ಶಾಣೇತನ ತೋರಿಸಬ್ಯಾಡ" ಎಂದು ರಾಯರು ಅವನನ್ನು ತಡೆಯುವರು.

"ಆಡಿದರ ಆಡಲಿ. ಆದ್ರ, ಈ ಕಾಳ್ಯಾ ಬೇಕಂತೇ ಮುಟ್ಯಾಕ ಹೋಗ್ತಾನೇನೊ ಅಂತ—"

"ಬರಿಮೈಲೆ ಆಡೋ ಹುಡುಗರಿಗೆ ಮೈಲಿಗೆ ಇಲ್ಲೊ, ಪರಸ್ಯಾ."

"ಅದೆಲ್ಲಾ ಬರಾಬರಿರಿ. ಆದ್ರ ನಂ ಜಾಗಾ ನಮಗ ಗೊತ್ತಿರಬೇಕೊ ಬ್ಯಾಡ್ರಿ, ಸಾವ್ಕಾರ್ರ?"

"ಇಲ್ಲಿದ್ದರೆ ನಿಂ ಕಾಳ್ಯಂಗೂ ನಿನ್ನ ಹಾಂಗೇ ಪೂಜಾ ಸಿಕ್ಕೀತಂತೀ ಏನು? ಆಂ?" ಎನ್ನುತ್ತ ರಾಯರು ಪರಸ್ಯಾನನ್ನು ಪೆಚ್ಚು ಮಾಡುತ್ತ ನಗುವರು.

"ಆದ್ರೂ, ಪರಸ್ಯಾ, ದಿವಸ ಬದಲಾಗ್ತಾ ನಡೆದವ. ಹೌದಂತೀಯೋ ಇಲ್ಲೋ?"

"ಇಲ್ಲ ಅನ್ನಾಕ ಹ್ಯಾಂಗ ಬಂದೀತರಿ? ಕಡೆತನಕ ನಮ್ದೇ ದಿನ ಉಳಿ ಅಂದ್ರ ಹ್ಯಾಂಗ ಉಳಿದೀತರಿ, ಸಾವ್ಕಾರ್ರ?"

"ಎಲಾ, ಕಳ್ಳಸೂಳೀಮಗನ! ನಾ ಒಂದು ಅಂದ್ರ ನೀ ಒಂದು ಅಂತೀಯಲ್ಲೋ? ಅದಿರಲಿ ಬಿಡು. ಆಗೇನೊ ಕಟ್ಟಿಗೆ ಒಡಯೋದದ

ಅಂತಿದ್ರು ನೋಡು ಮನೀವಳಗ. ನನಗೂ ಗುಡಿಗೆ ಹೋಗಿ ಬರೋ ಹೊತ್ತಾಯ್ತು" ಎಂದು ಮಾತನ್ನು ಮುಗಿಸುವರು.

* * *

'ದಿವಸ ಬದಲಾಗ್ತಾ ನಡೆದಾವ' ಅನ್ನೋ ಅನುಭವ ಕ್ರಮೇಣ ಸರಸ್ವತಿಗೆ ಹೆಚ್ಚಾಗಿ ಬಂದಿತು. ಸರಸ್ವತಿಯು ರಘುನಾಥ ರಾಯರ ತಂಗಿ, ಅವರಿಗೆ ವಯಸ್ಸಿನಲ್ಲಿ ನಾಲ್ಕು ವರ್ಷ ಚಿಕ್ಕವಳು. ಹದಿಮೂರನೆಯ ವಯಸ್ಸಿಗೆ ಮದುವೆಯಾಗಿತ್ತು. ಮದುವೆಯಾದ ಮರುವರುಷ ಸರಸ್ವತಿಯ ತಂದೆ ತೀರಿಕೊಂಡಿದ್ದರು, ಅದೇ ವರುಷ ಅಣ್ಣನಿಗೆ ಗಂಡು ಮಗು ಹುಟ್ಟಿತ್ತು (ಮನೆತನದಲ್ಲಿ ಮಕ್ಕಳ ಬಾಳು ಯಾವಾಗಲೂ ಅಲ್ಪಾಯುಷಿ ಆಗುವ ಸಂಪ್ರದಾಯವಿದ್ದುದರಿಂದ ಈ ಮಗುವಿಗೆ ಗುಂಡ ಎಂದು ಹೆಸರಿಟ್ಟಿದ್ದರು), ಮದುವೆಯಾದ ಮೂರನೆಯ ವರ್ಷಕ್ಕೆ ಸರಸ್ವತಿಗೆ ಹೆಣ್ಣು ಮಗು ಹುಟ್ಟಿತು. ಚೊಚ್ಚಿಲ ಬಾಣಂತಿತನಕ್ಕೆಂದು ಅಣ್ಣನ ಕಡೆ ಬಂದಾಗ ಸರಸ್ವತಿಯ ಗಂಡ ಅಕಸ್ಮಾತ್ತಾಗಿ ತೀರಿಕೊಂಡ ಸುದ್ದಿ ಬಂದಿತು. ಅಂದಿನಿಂದ ವಿಧವೆ ಸರಸ್ವತಿ, ಆಕೆಯ ಮಗಳು ಸುಬ್ಬಕ್ಕ ರಘುನಾಥ ರಾಯರ ಮನೆಯಲ್ಲಿಯೆ ಉಳಿದುಬಿಟ್ಟಿದ್ದರು. ಆ ಮಾತಿಗೆ ಹದಿನೈದು ವರ್ಷಗಳಾಗಿದ್ದುವು. ಗುಂಡನಿಗೆ ೧೮, ಸುಬ್ಬಿಗೆ ೧೫ ವಯಸ್ಸು. ಅದಕ್ಕಾಗಿಯೆ ಸರಸ್ವತಿ ದಿವಸ ಬದಲಾಗ್ತಾ ನಡೆದಾವ ಎಂದು ಗೋಳಾಡುತ್ತಿದ್ದಳು. ಗುಂಡನಿಗೆ ೧೮ ವಯಸ್ಸು, ಆ ವಯಸ್ಸಿಗೆ ತನ್ನ ಅಣ್ಣನ ಮದುವೆಯಾಗಿತ್ತಲ್ಲದೆ ಇದೇ 'ಗುಂಡಗಲ್ಲೇ' ಹುಟ್ಟಿತ್ತು. ತನ್ನ ಮಗಳು ಸುಬ್ಬಿಗೆ ೧೫. ಆ ವಯಸ್ಸಿನಲ್ಲಿ ತನ್ನ ಮದುವೆಯಾಗಿ ಎರಡು ವರ್ಷಗಳಾಗಿದ್ದುವು. ಸುಬ್ಬಿಗೆ ವರನನ್ನು ನೋಡಲು ಗತಿ ಇಲ್ಲ! ಇಷ್ಟು ಬೆಳೆದ ಹುಡುಗಿ, ಹಡೆದವರೇ ಗತಿ ಇಲ್ಲದಂತಾದ ಮೇಲೆ ಕೇಳುವವರು ಯಾರು ಎಂದು ಸರಸ್ವತಿ ಕಣ್ಣೀರು ಸುರಿಸಿದಾಗೊಮ್ಮೆ ರಘುನಾಥರಾಯರ ಎದೆಯಲ್ಲಿ ಮುಳ್ಳು

ಕುಟುಕಿದಂತಾಗುತ್ತಿತ್ತು. ಸುಬ್ಬಿಗೆ ವರವನ್ನು ನೋಡಬಾರದೆಂಬ ಅನಾಸ್ಥೆ ಅಲ್ಲ ಅವರಿಗೆ. ತಮಗೂ ಒಬ್ಬನೇ ಮಗ, ತಂಗಿಗೂ ಮಗಳ ಹೊರತು ಇನ್ನಾರ ಗತಿ ಇಲ್ಲ, ಆದ್ದರಿಂದ ಸುಬ್ಬಿಯನ್ನೆ ಸೊಸೆಯನ್ನಾಗಿ ಮಾಡಿಕೊಂಡರಾಯಿತು ಎಂದು ರಘುನಾಥರಾಯರ ವಿಚಾರ. ಆದರೆ ಮಗನ ಅಂತ ಹೆತ್ತಲೊಲ್ಲದೆ ಅವರು ಆ ನಿರ್ಣಯ ವನ್ನು ಮುಂದೂಡುತ್ತಲಿದ್ದಾರೆ. ಹಾಗೆ ಕೇಳಿದರೆ ಚಿಕ್ಕಂದಿನಿಂದಲೂ ಕೂಡಿ ಆಡಿದ್ದಕ್ಕೆ ಗುಂಡನಿಗೂ ಸುಬ್ಬಿಗೂ ಪರಸ್ಪರ ಒಲವೂ ಇದೆ ಎನ್ನಬಹುದು, ಆದರೆ ರಾಯರಿಗೆ ಅದೇನು ಮಹತ್ವದ ಪ್ರಶ್ನೆ ವಾಗಿದ್ದಿಲ್ಲ. ಮುಂಚೆ ಇಬ್ಬರದೂ ಹೀಗೆ ಆಕಸ್ಮಿಕವಾಗಿ ಪರಿಚಯ ಸಹವಾಸವಿರದಿದ್ದಲ್ಲಿ ಮದುವೆಯಾದ ನಂತರ ಅವು ದೊರೆಯುವುವು. ಆಗ ಒಲವು ಕೂಡುವುದು—ಎಂದು ರಾಯರು ವಾದಿಸುತ್ತಿದ್ದರು. ಆದರೆ ಒಟ್ಟಾರೆ ನುಗನ ಮುಂದೆ ಮಾತನ್ನೆತ್ತಲು ಮನಸ್ಸು ಹಿಂಜರಿ ಯುತ್ತಿತ್ತು. ಎಂತಹ ವಿಚಿತ್ರ ಅನುಭವ! ತಾವು ಚಿಕ್ಕವರಿದ್ದಾಗ ತಮ್ಮ ತಂದೆ ಬೇಕಾದ ಮಾತನ್ನು ಅಧಿಕಾರದಿಂದ ಹೇಳುತ್ತಿದ್ದರು. ಆದರೆ ಈಗ ತಮಗೆ—? 'ಅಂತೂ ದಿವಸ ಬದಲಾಗ್ತಾ ನಡೆದಾವ' ಎಂದು ಸಮಾಧಾನ ಹಚ್ಚಿಕೊಂಡು ಸುಮ್ಮನಾಗುತ್ತಿದ್ದರು.

* * *

ದಿವಸ ಬದಲಾಗತಾ ನಡೆದದ್ದು ರಾಯರಿಗಾಗಲಿ ಸರಸ್ವತಿ ಗಾಗಲಿ ಮಾತ್ರ ಅಲ್ಲ. ಗುಂಡಣ್ಣನೂ ಅದೇ ಮಾತನ್ನು ಹೇಳು ತ್ತಿದ್ದನು. ಆದರೆ ಗುಂಡಣ್ಣನಿಗೆ ದಿವಸಗಳೊಡನೆ ತಾನೂ ಬದಲಾಯಿಸಿರುವ ಎಂದು ತೋರಿಸುವ ಉಬ್ಬು. ಚಿಕ್ಕಂದಿನ ಗುಂಡ್ಯಾ ಗುಂಡಣ್ಣನಾದ, ಹದಿನೆಂಟು ವಯಸ್ಸಿಗೆ ಬರುವಷ್ಟರಲ್ಲಿ ಗುಂಡಣ್ಣ ಗುಂಡೇರಾಯನಾದ: ಅವನ ಜೊತೆಯ ಮಿತ್ರರು ಅವನಿಗೆ 'ಗವರ್ನರ' ಹುದ್ದೆಯನ್ನೂ ಕೊಟ್ಟರು. ರಾಯರ ಒಬ್ಬನೇ ಒಬ್ಬ ಮಗನಾದ ಗವರ್ನರ ಗುಂಡೇರಾಯನಿಗೆ ದಿವಸ ಬದಲಾಗಿದ್ದು

ದೇನೋ ನಿಜ, ಆದರೆ ಬದಲಾಗಿ ತನ್ನ ವಿರುದ್ಧ ಹೊಂಚು ಹಾಕಿದೆ ಕಾಲ ಎಂದು ಅವನ ಅಭಿಪ್ರಾಯ. ಗುಂಡೇರಾಯನ ಹದಿನೆಂಟನೆಯ ವಯಸ್ಸು ನಡೆದಾಗ ಜಗತ್ತಿನ ಮೊದಲ ಮಹಾಯುದ್ಧ ನಾಲ್ಕನೆಯ ವರ್ಷಕ್ಕೆ ಮುಟ್ಟಿತ್ತು. ಎಂತೆಂತಹ ತರುಣರಿಗೆ ಏನೇನೊ ಅವಕಾಶ ದೊರೆಯಿತು. ಆದರೆ ಗುಂಡೇರಾಯನಿಗೆ ಒಣ 'ಗವರ್ನರ' ಪದವಿಯ ಹೊರತು ಬೇರೆ ಏನೂ ದೊರೆತಿರಲಿಲ್ಲ. ಅದಕಾಗಿ ಅವನು ತಂದೆಯ ಮೇಲೆ ಸಿಟ್ಟಾಗಿದ್ದನು. ಈ ಸಿಟ್ಟಿಗಾಗಿ ಅವನು ಮನ ಬಂದಂತೆ ನಡೆಯತೊಡಗಿದನೆಂದೇ ಅವನಿಗೆ 'ಗವರ್ನರ' ಎಂಬ ಬಿರುದು ದೊರೆತುದು. ಆದರೇನು ? ಮೊದಲಿನಿಂದಲೂ ತಂದೆ ತಮ್ಮ ಹಟವನ್ನೆ ಸಾಗಿಸಿದ್ದರು. ಚಿಕ್ಕಂದಿನಲ್ಲಿ ಬಿಟ್ಟೂರಿನಲ್ಲಿ ಶಾಲೆ ಇದ್ದಿರಲಿಲ್ಲ ; ಆದರೂ ರಘುನಾಥರಾಯರು ಮಗನಿಗೆ ವ್ಯವಹಾರದ ಮಟ್ಟಿಗೆ ಓದು-ಬರೆ-ಲೆಕ್ಕ-ಬರಲಿ ಎಂದು ಒಬ್ಬ ಬಡ ಬ್ರಾಹ್ಮಣನನ್ನು ತಂದಿಟ್ಟಿದ್ದರು. ಕ್ರಮೇಣ ಆ ಬ್ರಾಹ್ಮಣನ ಶಿಷ್ಯರ ಸಂಖ್ಯೆ ಬೆಳೆಯಿತು, ಅದೊಂದು ಶಾಲೆಯ ಸ್ವರೂಪವೆ ತಳೆದು ನಿಂತಿತು, ಇಷ್ಟರಲ್ಲಿ ಗುಂಡಣ್ಣ 'ವಯಸ್ಸಿ'ಗೆ ಬಂದ, ಶಾಲೆಯನ್ನು ಬಿಟ್ಟುಕೊಟ್ಟ. ಹೀಗೆ ಅವನಿಗೆ ಮೊದಲು ಲೀವ್ವಿಂಗ್ ಸರ್ಟಿಫಿಕೇಟನ್ನು ಕೊಟ್ಟವರು ಅವನ ಸೋದರತ್ತೆ ಸರಸ್ವತಿ ಆಕೆ ಒಂದು ದಿನ ಹೊಂಪದಿಂದ ತಿರುಗಿ ಬರುವಾಗ ದನದ ಕೊಟ್ಟಿಗೆಯ ಒಂದು ಮೂಲೆಯಲ್ಲಿ ಗುಂಡಣ್ಣ ಏನೊ 'ಹುಚ್ಚುಚ್ಚಾರ' ನಡೆಸಿದ್ದನ್ನು ನೋಡಿದ್ದಳಂತೆ ಆಕೆ ನೋಡಿದ್ದು ಎಂತಹ ಪಾಪ ಎಂಬುದು ಕೊನೆಯವರೆಗೂ ಸ್ಪಷ್ಟವಾಗಿರಲಿಲ್ಲ. ಆ 'ಹುಚ್ಚುಚ್ಚಾರ'ದಲ್ಲಿ ಗುಂಡಣ್ಣನೊಬ್ಬನೆ ತೊಡಗಿದ್ದನೆ--ಎಂಬುದು ಸ್ಪಷ್ಟವಿದ್ದಿರಲಿಲ್ಲ. "ಇನ್ನು ಒಬ್ಬಾಕೇನೆ ಗುಂಡ್ಯಾನ ಜೋಡಿ ಇರಬ್ಯಾಡ" ಎಂದು ಸುಬ್ಬಕ್ಕನಿಗೆ ಹೇಳಿದ್ದರಿಂದ ಇನ್ನೊಂದು ಸಂಶಯವೂ ಬರುವಂತಿತ್ತು. ಒತ್ತಾಯಪಡಿಸಿ ಕೇಳಿದರೆ "ಗಂಡು ಹುಡುಗರು ; ವಯಸ್ಸಿಗೆ ಪ್ರಬುದ್ಧ ಆಗೋವೆ" ಎಂದು ಕೇಳಿದವರ

ದಡ್ಡತನಕ್ಕೆ ಬೇಸತ್ತವರಂತೆ ಸರಸ್ವತಿ ಹೇಳುವಳು. ಇದೆಲ್ಲದರ ಪರಿಣಾಮ, ಗುಂಡಣ್ಣ ಶಾಲೆಗೆ ಸೋಡಚೀಟಿ ಕೊಡಬೇಕಾಗಿ ಬಂದುದು.

ಈಗ ಗುಂಡಣ್ಣನ ಅಸಮಾಧಾನ ಇನ್ನಿಷ್ಟು ಹೆಚ್ಚಿತು. ಮನೆಯಲ್ಲಿ ಒಟ್ಟಾರೆ ತನ್ನಂತೆ ನಡೆಯುವುದಿಲ್ಲ ಎಂದು ಕಂಡು ಆವನು ಒಂದು ಹಂಚಿಕೆಯನ್ನು ಹಾಕಿದನು.

"ನನಗ ಇಂಗ್ಲಿಶ ಕಲೀಬೇಕಾಗೇದ" ಎಂದ ಒಂದು ದಿನ ತಂದೆಗೆ.

ರಘುನಾಥರಾಯರಿಗೆ ಎಲ್ಲಿಂದಲೊ ಸಿಡಿಲು ಬಡೆದಂತಾಯಿತು; ಚಳಿಗಾಲದಲ್ಲಿ ಸಿಡಿಲು ಅಬ್ಬರಿಸಿದರೆ ಆಗದಷ್ಟು ಆಶ್ಚರ್ಯ ರಾಯರಿಗಾಯಿತು. ಮುಖವೆತ್ತಿ ನೋಡಿದರು. ಒಂದೆಡೆ ತಂಗಿ ಕಾಯಿಪಲ್ಲೆ ಆರಿಸುತ್ತ ಕೂತಿದ್ದಾಳೆ, ಇನ್ನೊಂದೆಡೆ ಮಗ ಗುಂಡಣ್ಣ ಉಟ್ಟ ದೋತರದ ತುದಿಯನ್ನು ತಿನ್ನುತ್ತ ನಿಂತಿದ್ದಾನೆ.

ಸರಸ್ವತಿಯೂ ಗುಂಡಣ್ಣನನ್ನು ನೋಡಿದಳು. ಉಸುರ್ಗರೆದಳು.

"ಈಗ ಇಷ್ಟು ಕೆಟ್ಟದ್ದಾಯ್ತು, ಇನ್ನು ಇಂಗ್ರೇಜಿ ಕಲಿತು—"

"ನೀನು ಎಲ್ಲಾದಕೂ ನಡುವೇ ಬರತೀ!" ಎಂದು ಸಿಡುಕಿನ ದನಿಯಲ್ಲಿಯೆ ಗುಂಡಣ್ಣ ನುಡಿದ. ದನದ ಕೊಟ್ಟಿಗೆಯ ಸಂದರ್ಭವನ್ನೆತ್ತಿದ್ದರಿಂದ ಅವನಿಗೆ ಇನ್ನಿಷ್ಟು ಸಿಟ್ಟು ಬಂದಿತ್ತು.

"ಬಿಡಪ! ದೊಡ್ಡ ಹುಡುಗ, ಮದುವೆ ಆಗಿ ಮನೀ ನೋಡಿಕೋಬೇಕು ಅಂತ ನಾ ಮಾತಾಡ್ತೀನಿ" ತುಸು ಕಂಠ ಬಿಗಿದಂತಾಗಿ ಸರಸ್ವತಿ ಹಾಗೇ ಮುಂದೆ ಸಾಗಿಸಿದಳು ಮಾತನ್ನು: "ನಾನೇ ನಾಚಿಕೆಗೇಡಿ! ಏನೊ-ತಾಯಿ ಇಲ್ಲದ ಹುಡುಗ ಅಂತ ಕರುಳ ಕಸವಿಸಿಗೊಳ್ಳತದ, ಹೇಳ್ತೀನಿ....ನನ್ನ ಮಾತು ಯಾರಿಗೂ ಬ್ಯಾಡ ಈ ಮನ್ಯಾಗ ಅಂತ—"

"ಹೋಗಲಿ ಬಿಡು, ಅದನ್ನೆ ಎಷ್ಟು ಸಲ ಹೇಳತೀ!" ಎಂದು

ರಘುನಾಥರಾಯರು ತಂಗಿಯ ವಾಕ್‌ಪ್ರವಾಹವನ್ನು ತಡೆದರು. ಅನೇಕ ವರ್ಷಗಳ ರೂಢಿಯಿಂದ ಅವರಿಗೆ ತಂಗಿಯ ಪ್ರಲಾಪ ಸಂಧ್ಯಾನಂದನೆಯಂತೆ ಪಾಠವಾಗಿಬಿಟ್ಟಿತ್ತು. ಇನ್ನು ಮುಂದೆ 'ಈ ಮನೆ ನನ್ನದಲ್ಲ, ನನ್ನನ್ನ ಯಾಕ ಹೀಂಗ ಬಿಟ್ಟುಹೋದರೊ—' ಮುಂತಾಗಿ ಬರುವುದೆಂದು ಚನ್ನಾಗಿ ಅರಿತ ರಾಯರು ಸರಸ್ವತಿಯ ಮಾತಿಗೆ ತಡೆಯನ್ನು ಹಾಕಿದರು. "ಮನೇವಳಗ ಹಿರಿಮನುಷ್ಯಳಾಗಿ ಹುಡುಗರ ಮಾತು ಹಚ್ಚಿಗೋತಿ !" ಎಂದು ರಾಯರು ಸಮಾಧಾನದ ದನಿಯಲ್ಲಿ ಹೇಳಿದರು.

ಗುಂಡನಿಗೆ ಚಡಪಡಿಕೆ. ತಂಗಿಯ ನಡತೆಗಾಗಿ ರಾಯರಿಗೆ ತುಸು ಸಿಟ್ಟು ಬಂದಿದೆ, ಅದನ್ನು ಅವರು ಯತ್ನದಿಂದ ತಡೆದುಕೊಂಡಿದ್ದಾರೆ ಎಂಬುದನ್ನು ತಿಳಿಯಲು ಅವನಿಗೆ ತಡವಾಗಲಿಲ್ಲ ಇಂತಹ ಸಂದರ್ಭಗಳ ಅನುಭವ ಅವನಿಗಿತ್ತು. ಕೊನೆಗೆ ತಡೆದ ಸಿಟ್ಟು ತನ್ನ ಮೇಲೆ ಅಪ್ಪಳಿಸುವುದೆಂಬುದೂ ಗೊತ್ತು ಆದಕಾಗಿ ಅವನ ಚಡಪಡಿಕೆ.

"ಬರೇ ವಯಸ್ಸಾಗತಾ ಅದ, ಆದರೆ ಅವನ ಬುದ್ಧಿ ಮಾತ್ರ ಇನ್ನೂ ಹುಡುಗನದೆ !" ಎಂದು ತಿರಸ್ಕಾರದಿಂದ ನುಡಿದರು

ಮಗನು ಇನ್ನೂ ತುಟಿ ಬಿಚ್ಚಲೊಲ್ಲದ್ದಕ್ಕೆ ಸಿಟ್ಟು ಹೊರ ನುಗ್ಗಿತು.

" ಏನ್ಮಾಡಬೇಕಂದೀ ?"

ಗುಂಡಣ್ಣ ಮಾತನಾಡದೆ ನಿಂತಿದ್ದಾನೆ.

" ಹುಂ ! ಅವಿವೇಕಿ ! ಇಂಗ್ಲಿಶ ಕಲಿತಾನಂತ !" ಅತ್ಯಂತ ತಿರಸ್ಕಾರದಿಂದ ನುಡಿದರು.

ಗುಂಡ ಇನ್ನೂ ಮುಗ್ಧ ಗುಂಡಗಲ್ಲೇನೊ ಎಂಬಂತೆ ನಿಂತಿದ್ದಾನೆ.

" ಶುದ್ಧ ಅವಿವೇಕಿ ! ಇಂಗ್ಲಿಶ ಕಲಿತು ಇನ್ನು ನೋಕರಿ ಮಾಡುವವನ ?"

“ಅಯ್ಯ! ಅವನಿಗ್ಯಾಕ ನೋಕರಿ? ಏನ ಕಡಿಮೆ ಅದ ಮನೀವಳಗ?”

“ಸುಮ್ಮ ಕೂಡೆ ನೀನು! ತಿಳಿಯದಲ್ಲಿ ಮಾತಾಡಬ್ಯಾಡ! ನೋಕರಿ ಬೇಕಾಗಿದಿಲ್ಲ ಅಂದ್ರ ಇಂಗ್ಲಿಶ ಯಾಕ ಕಲೀತಾನ?”

ಗುಂಡಣ್ಣ ಇನ್ನೂ ವ್ರತಸ್ಥನಂತೆ ಮೌನ.

“ಏನೋ?” ರಾಯರ ಸಿಟ್ಟು ಕಟ್ಟೆ ಒಡೆದು ಹೊರನುಗ್ಗ ತೊಡಗಿತು. “ಬೊಗಳಲ್ಲ? ಇಂಗ್ಲಿಶ ಕಲಿತು, ನೋಕರಿ ಹಿಡಿದು, ಮನೆತನದ ಮರ್ಯಾದೆ ಇಷ್ಟು ಕಳೆದು ಬಿಡಬೇಕಂತೀ ಏನು? ಹೋಗತಿದ್ದರ ಹೋಗು ಹಾಳಾಗಿ, ಆ ಕಾಳ್ಯಾ ಹೋಧಾಂಗ!”

“ಅಯ್ಯ! ಸಾಕು—ಸುಮ್ಮ ಸುಮ್ಮನೆ ಕೆಟ್ಟ ಮಾತಾಡಬ್ಯಾಡ ಹುಡುಗಗ” ಎಂದು ಸರಸ್ವತಿ ನಿಜವಾದ ಕಳಕಳಿಯಿಂದ ನುಡಿದಳು. ಆ ಕಳಕಳಿಗೆ ಕಾರಣವಿಲ್ಲದಿರಲಿಲ್ಲ. ಪರಸ್ಯಾನ ಮಗನಾದ ಕಾಳ್ಯಾ ಒಂದು ರಾತ್ರಿ ಯಾರಿಗೂ ಹೇಳದೆ ಕೇಳದೆ ಹೋಗಿ ಬಿಟ್ಟದ್ದ—ಸೈನ್ಯದಲ್ಲಿ ಭರತಿಯಾಗಲು. ಯುದ್ಧದಲ್ಲಿ ಅವನು ಸಾಯಬಹುದಲ್ಲ ಎಂಬ ವಿಚಾರಕ್ಕಿಂತ ತಮ್ಮನ್ನು ಕೇಳದೆ ಹೋದ ಕಾಳ್ಯಾ ಎಂದು ರಾಯರು ತಕರಾರನ್ನು ಹೂಡಿದ್ದರು! ಅದಕಾಗಿ ಕಾಳ್ಯಾನೊಡನೆ ಹೋಲಿಕೆ ಎಂದರೆ ಕೆಟ್ಟ ಮಾತು ಎಂದು ಸರಸ್ವತಿಯ ಅಭಿಪ್ರಾಯ.

ಇದುವರೆಗೆ ಮುಗ್ಧನಂತೆ ನಿಂತ ಗುಂಡಣ್ಣನಿಗೆ ಈಗ ತಡೆಯದಂತಾಯ್ತು. ಕಾಳ್ಯಾನ ಸಂದರ್ಭದಿಂದ ಅವಮಾನವಾದಂತಾಯಿತು. ತನ್ನ ಮಾತನ್ನು ಇವರು ಯಾರೂ ಒಪ್ಪುವುದಿಲ್ಲ ಎಂದು ಅಸಮಾಧಾನವೂ ಇದ್ದಿತು. ಇನ್ನು ಏನಾದರೂ ಪ್ರತ್ಯುತ್ತರ ಕೊಡದ್ದೆ ಗತಿ ಇಲ್ಲ ಎಂಬ ವಿಚಾರ ಬಂದಿತು.

“ಹುಟ್ಟದ್ದಿಡಿದು ಕಾಳ್ಯಾನ ಜೋಡಿ ಆಡಿ ಅದರ ಗುಣಾನೇ ಬಂದಾವೇನೋಂತ ತಿಳಿದಿದ್ದೆ” ಎಂದು ರಾಯರು ಹಂಗಿಸುವ ದನಿಯಲ್ಲಿ ನುಡಿಯುತ್ತ ಹೊರಬಿದ್ದರು.

ಥೂ! ಮತ್ತೆ ಅದೇ ಅನುಭವ!

ಕಂಬ ಸೀಳಿ ಹೊರಬಿದ್ದಾಗ ಕಣ್ಣು ಮುಂದೆಯೆ ಹಿರಣ್ಯಕಶ್ಯಪನು ಓಡಿ ಹೋದರೆ ನರಸಿಂಹನ ಅವಸ್ಥೆ ಏನಾಗುವುದೊ ಅದಾಯಿತು ಗುಂಡಣ್ಣನ ಅವಸ್ಥೆ.

ಧಟ್ಟನೆ ಉತ್ತರ ಕೊಡಬೇಕೆಂದು ನಿರ್ಧರಿಸಿದೊಡನೆ ಹೋಗುವರಲ್ಲ ತಂದೆ—ಎಂದು ಚಡಪಡಿಸಿದ. ಇದೇ ಮೊದಲ ಸಲವಾಗಿರಲಿಲ್ಲ. ಇನ್ನು ಮಾತ್ರ ಹೀಗಾಗದಂತೆ ನೋಡಬೇಕು ಎಂದುಕೊಂಡ. 'ಇನ್ನು ಇವರ ಹೆದರಿಕೆಯೆ ಬೇಡ, ಇವರ ಮುಖದ ಮೇಲೆ ಹೇಳಿಯೆ ಇಲ್ಲಿಂದ ಹೋಗುವೆ. ಕಾಳ್ಯಾನ ಗುಣಗಳಂತೆ! ಹಹ!'

ತಟ್ಟನೆ ಗುಂಡಣ್ಣನಿಗೆ ನಗೆ ತಡೆಯದಾಯಿತು. ಗಾಬರಿಯಿಂದ ಅತ್ತಿತ್ತ ನೋಡಿದ. ಇಲ್ಲ! ಸುದ್ದೈವ! ಸೋದರತ್ತೆ ಎದ್ದು ಹೋಗಿದ್ದಾಳೆ, ಸುದ್ದೈವ ಎನ್ನಬೇಕು—ಎಂದು ಲೆಕ್ಕ ಹಾಕಿ ಒಮ್ಮೆಲೆ ನಗತೊಡಗಿದ. 'ಕಾಳ್ಯಾನ ಗುಣಗಳಂತೆ!'

೩

ಬೆಳೆಯುವ ವಯಸ್ಸಿನ ಗುಂಡಣ್ಣನಿಗೆ ಸುತ್ತಲಿನಿಂದಲೂ ಬಿಗಿದು ಕಟ್ಟಿ ಹಿಡಿದಂತಾಗಿತ್ತು. ಇತ್ತ ಮನೆಯಲ್ಲಿ ಮಾತುಮಾತಿಗೆ ಸೋದರತ್ತೆಯ ಕೊಂಕು ಮಾತು, ಒಮ್ಮೆ ಏನೊ ನೋಡಿದ್ದನ್ನೆ ನೆನೆದು ನೆನೆದು ಚುಚ್ಚುವುದು; ಇತ್ತ ಮನೆ ಬಿಟ್ಟು ಹೋಗುವುದೆಂದರೆ ತಂದೆಯ ಅಧಿಕಾರದಿಂದ ನಿರ್ಬಂಧ! ನಿಜವಾಗಿ ಚಿಕ್ಕಂದಿನಿಂದ ಕಾಳ್ಯಾನ ಸಹವಾಸ ಹೆಚ್ಚಾಗಿತ್ತೇನೊ ನಿಜ; ಅವನು ಒಮ್ಮೆಲೆ ಹೊರಟು ಹೋದ ತರುವಾಯ ಗುಂಡಣ್ಣನಿಗೆ ಏನೊ ಕಳೆದು ಕೊಂಡಂತಾಗಿತ್ತು. ಅವನು ದಿನಾಲು ಅತ್ತ ಸುಳಿದಾಡಿ ಬರುತ್ತಿದ್ದನು. ಯಾರಿಗೆ ಗೊತ್ತು? ಕಾಳ್ಯಾ ಕೂಡ ಒಮ್ಮೆಲೆ ಹೋದ ಹಾಗೆ ಒಮ್ಮೆಲೆ ತಿರುಗಿ ಬಂದು ಬಿಟ್ಟದ್ದರೆ? ಆದರೆ ಕಾಳ್ಯಾ ಬಂದಿರಲಿಲ್ಲ. ಆದರೂ ಗುಂಡಣ್ಣ ದಿನಾಲು ಅತ್ತ ಹೋಗುತ್ತಿದ್ದ. ಅವನು ಹಾಗೆ ಬರುವುದನ್ನು ನೋಡಿ ಗಂಗಿಗೆ ಏನು ಅನ್ನಿಸಿತ್ತೊ ಏನೊ? ಒಂದೆರಡು ದಿನಗಳಾದ ಮೇಲೆ ದೂರದಿಂದಲೆ ಆತನನ್ನು ನೋಡಿದೊಡನೆ ಗಂಗಿಯ ಮುಖದಲ್ಲಿ ಮುಗುಳ್ನಗೆ ಮೂಡುತ್ತಿತ್ತು. ತನ್ನ ಗಂಡ ಮತ್ತು ಈ ಚಿಕ್ಕ ಧನಿ ಇಷ್ಟು ಕಳಕಳಿಯ ಸಂಗಡಿಗರಾಗಿದ್ದಾರೆಂಬುದು ಆಕೆಗೆ ಬೆರಗುಗೊಳಿಸಿದ ಮಾತಾಗಿತ್ತು. ಗಂಗಿ ಮೊದಲ ಸಲ ಬಂದಾಗ

ಗುಂಡಣ್ಣನಿಗೆ ತೀರ ಆಶ್ಚರ್ಯವಾಗಿತ್ತು. ಚಿಕ್ಕಂದಿನಲ್ಲಿಯೇ ಕಾಳ್ಯಾನ ಮದುವೆ ಜರುಗಿತ್ತೆಂಬುದು ಅವನಿಗೆ ಗೊತ್ತಿರಲಿಲ್ಲ ಗಂಗಿ ದೊಡ್ಡವಳಾದಂತೆ ಮನೆಗೆಲಸಕ್ಕೆ ತಕ್ಕವಳಾದಳೆಂದು ಆಕೆಯನ್ನು ಕರೆದುಕೊಂಡು ಬರಲಾಗಿತ್ತು ಯಾಕೋ–ಏನೋ–ಕಾಳ್ಯಾನು ವಿಚಿತ್ರ ರೀತಿಯಿಂದ ವರ್ತಿಸಿದ್ದ. ಗುಂಡಣ್ಣನಿಗೆ ಇದರ ರಹಸ್ಯವೆ ತಿಳಿದಿರಲಿಲ್ಲ; ಕೇಳುವ ಮನಸ್ಸಿಲ್ಲ. ಅಷ್ಟರಲ್ಲಿ ಕಾಳ್ಯಾ ಯುದ್ಧ ಸೇರುವುದೆಂದು ಓಡಿಯೆ ಬಿಟ್ಟಿದ್ದ.

ಅಂತೂ ತಂದೆಯಿಂದ ಅಸಮಾಧಾನವನ್ನೂ ಪಡೆದು ಗುಂಡಣ್ಣನಕ್ಕು ಹೊರಬಿದ್ದವನೆ ಊರ ಹೊರಬದಿಗೆ ಹೊರಟ ಎಲ್ಲಿ ಹೋಗುವೆನೆಂಬ ಅರಿವು ಇಲ್ಲ, ಇಂಥಲ್ಲಿ ಹೋಗಬೇಕೆಂಬ ವಿಚಾರವಿಲ್ಲ. ಹಾಗೇ ನಡೆದ. ಗುಡಿಯ ಭಾವಿಯ ದಂಡೆಯ ಮೇಲೆ ಕೆಲ ಹೊತ್ತು ಕುಳಿತು ಬಂದರಾಯಿತು ಎಂಬ ವಿಚಾರ ಆಮೇಲೆ ಬಂದಿತೇನೊ? ಗುಡಿ ಕಂಡೊಡನೆ ಆ ಕಡೆ ನಡೆದ. ಊರನ್ನು ಬಿಟ್ಟು ತುಸು ದೂರದಲ್ಲಿ ಗುಡಿ ಇದ್ದುದರಿಂದ ಏಕಾಂತಕ್ಕೆಂದು ಅಲ್ಲಿಗೆ ಜನ ಬರುವ ರೂಢಿ ಇದ್ದಿತು. ಬೆಳಗಿನ ಸಮಯದಲ್ಲಿ ಗುಂಡಣ್ಣ ಮತ್ತು ಅವನ ಗೆಳೆಯರು ಈಜಲು ಬರುತ್ತಿದ್ದರು. ಅನೇಕ ಸಲ ಬಿಸಿಲು ಕಾಸಬೇಕೆಂದು, ಇಳಿವಯಸ್ಸಿನ ಹಿರಿಯರು ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು ಭಾವಿಯ ದಡದಲ್ಲಿ ಎಷ್ಟೋ ಹೊತ್ತು ಕೂಡುತ್ತಿದ್ದರು. ಒಂದು ದೃಷ್ಟಿಯಿಂದ ಊರ ಜನಗಣತಿಯಲ್ಲಿ ಭಾವಿಯನ್ನೂ ತೋರಿಸಬಹುದಾಗಿತ್ತು. ಅದಕ್ಕೆ ಹಾಗೆ ವ್ಯಕ್ತಿತ್ವವೆ ಬಂದಿತ್ತು. ಈಗಲಾದರೂ ಗುಂಡಣ್ಣ ಭಾವಿಯ ಹತ್ತಿರ ಬಂದೊಡನೆ ಆಪ್ತ ಗೆಳೆಯನನ್ನು ಕೂಡಲು ಧಾವಿಸುವವನಂತೆ ದೊಡ್ಡ ಹೆಜ್ಜೆಗಳನ್ನಿಟ್ಟು ನಡೆದ. ನಿಜ, ಭಾವಿ—ನಮ್ಮೆಲ್ಲರ ಗೆಳೆಯ—ಎಂದುಕೊಂಡು. ಭಾವಿಯನ್ನು ನೋಡಿದಾಕ್ಷಣ ಮನಸಿನೊಳಗಿನ ಕಸಕಸಿ ಎಲ್ಲ ಹಾರಿ ಹೋಗಲಿಲ್ಲವೆ? ಗೆಳೆಯನನ್ನು ಅಪ್ಪಿಕೊಳ್ಳುವಂತೆ ಕೈನೀಡಿ ಉಸಿರನ್ನೆಳೆದುಕೊಂಡ.

ಅತ್ತಿತ್ತ ನೋಡಿ ಕುಳಿತುಕೊಳ್ಳಬೇಕೆನ್ನುವಾಗ —ಇದೇನು ?— ಕಟ್ಟೆಸಯ ಹೊರೆ? ಹಾಗಾದರೆ ತಾನೊಬ್ಬನೆ ಇಲ್ಲ? ಮತ್ತೆ ಯಾರೊ ಇದ್ದಾರೆ! ಭಾವಿಯೊಡನೆ ನಡೆಸಿದ ಏಕಾಂತ ಬಯಲಿಗೆ ಬಿದ್ದಿತೆ? ಯಾರಿರಬಹುದು—? ಸುತ್ತಲೂ ನೋಡಿದ. ಯಾರೂ ಕಾಣಲಿಲ್ಲ. ಯಾರಾದರೂ ಭಾವಿಯೊಳಗೆ ಇಳಿದಿರಬಹುದು ಎಂದು ಎಣಿಸಿ ಪಾವಟಿಗೆಗಳ ಕಡೆ ನಡೆದ. ಹೌದು – ಯಾರೊ ಇದ್ದಾರೆ!– ಒಂದು ನಿಮಿಷ – ಎಲ!– ಆದರೆ ಇದೇನು ?

ಅಂದಿನ ಅನುಭವವನ್ನು ಗುಂಡಣ್ಣ ಎಂದಿಗೂ ಮರೆಯಲಾರದಾದ. ಒಂದೇ ಒಂದು ನಿಮಿಷದ—ಅಥವಾ ನಿಮಿಷದ ಒಂದು ಸಹಸ್ರಾಂಶದ್ದೊ ?— ಅನುಭವ. ಆದರೂ ಹತ್ತು ಇಂದ್ರಿಯಗಳನ್ನೂ ಮನಸ್ಸನ್ನೂ ತನ್ಮಯಗೊಳಿಸಿದ, ಮುಗ್ಧಗೊಳಿಸಿದ ಅನುಭವವದು. ಒಂದು ಕ್ಷಣ ಕಣ್ಣಿಗೆ ಕತ್ತಲೆ ಬಂದು ತಾನು ಬೀಳಬಹುದೇನೊ ಎಂಬ ಹೆದರಿಕೆ ಸುಳಿದು ಹೋಗಿತ್ತು , ಇನ್ನೊಂದು ಕ್ಷಣ ಮೈ ನಡುಗಿದಂತಾಗಿ ಜ್ವರ ಬಂದಿತೇನೋ ಎಂದು ಹೆದರಿಕೆಯಾಯಿತು ; ಮತ್ತೊಂದು ಕ್ಷಣ — ಛೆ — ಅಲ್ಲ. ಅವು ಬೇರೆ ಬೇರೆ ಕ್ಷಣಗಳಲ್ಲ. ಎಲ್ಲ ನಡೆದದ್ದು ಒಂದೇ ಕ್ಷಣದಲ್ಲಿ, ಅದೇ ಕ್ಷಣದಲ್ಲಿ, ಅದೆಲ್ಲದರ ಪರಿಣಾಮವಾಗಿ, ಅದೆಲ್ಲ ಮುಗಿದಂತಾಗಿ ಮೈ ಜುಮ್ಮೆಂದು, ಕಸುವು ಬಂದಂತಾಗಿ ಕಣ್ಣು ಅರಳಿದಂತಾಗಿ, ರಟ್ಟೆ ಉಬ್ಬಿದಂತಾಗಿ, ತೊಡೆ ಬಿಗಿದಂತಾಗಿ — ಇನ್ನೂ ಏನೇನೋ ಆಗಿಯೂ ತಾನು ನವಚೈತನ್ಯವನ್ನು ಪಡೆದದ್ದೂ ಅದೇ ಕ್ಷಣದಲ್ಲಿ! ಏನಾಯಿತು ? ಏನಾಗಿರಬಹುದು?

ಅದದ್ದು ವಿಶೇಷವೇನೂ ಇದ್ದಿರಲಿಲ್ಲ. ಗುಂಡಣ್ಣ ಪಾವಟಿಗೆಗಳ ಹತ್ತಿರ ಬಂದಾಗ, ಬಂದು ತುದಿ ಪಾವಟಿಗೆಯಿಂದ ಕೆಳಗೆ ನೋಡಿದಾಗ ಗಂಗಿ ಮುಖ ತೊಳೆದುಕೊಂಡು ಮೇಲೆ ಹತ್ತಿ ಬರುವುದರಲ್ಲಿದ್ದಳು. ಗಂಗಿಯನ್ನು ತಾನು ಎಷ್ಟು ಸಲ ನೋಡಿರಲಿಲ್ಲ ? ಆದರೂ ಇಂದು ಒಮ್ಮೆಲೆ ಎಲ್ಲವೂ ಹೊಸತಾಗಿ ಕಂಡಂತಾಯಿತು. ಯಾವಾ

ಗಲೂ ತನ್ನೆದುರು ಒಂದು ತರದ ವಿನಯದಿಂದ ದೂರದಲ್ಲಿಯೆ ಮಗುಚಿಕೊಂಡಿರುತ್ತಿದ್ದ ಗಂಗಿ ಈ ಕ್ಷಣದಲ್ಲಿ ಇನ್ನಾರೂ ಇಲ್ಲ ಎಂಬುದಕ್ಕಾಗಿ ಸಡಿಲುಬಿಟ್ಟ ರಬ್ಬರಿನಂತೆ ಪೂರ್ತಿಯಾಗಿ ತುಂಬಿ ಕೊಂಡು ನಿಂತಿದ್ದಳು. ಅದಕಾಗಿಯೆ ಗುಂಡಣ್ಣನಿಗೆ ಆಕೆಯ ಮೈ ಅಷ್ಟೊಂದು ತುಂಬಿಕೊಂಡಂತೆ, ರಟ್ಟೆ ದುಂಡುದುಂಡಾದಂತೆ, ಮೂಗು ಯೌವನದ ಬಿಂಕದ ಧ್ವಜದಂತೆ ಕಂಡಿರಬಹುದೇನೊ ? ಕೆಳಗಿನಿಂದ ಹತ್ತಿ ಬರುವಾಗ ಮುಖವನ್ನೊರೆಸಿಕೊಂಡು ಸೆರಗನ್ನು ಬಿಟ್ಟು ಕೊಟ್ಟಳಲ್ಲ ? ಆಗ ? ಗುಂಡಣ್ಣ ಕಣ್ಣಿಗೆ ಕತ್ತಲೆ ಬಂದಂತಾಗಿ ತಲೆ ಜಾಡಿಸಿದ್ದು ಆಗಲೆ. ಹರೆಯದ ಅಂಗಾಂಗಳನ್ನು ಗುರುತಿಸುವ ಹರೆತನ ಗುಂಡಣ್ಣನಲ್ಲೂ ಮೊದಲ ನಲ ಜಾಗ್ರತವಾಯಿತು. ಮೈ ಮರೆತವ ನಂತೆ, ದಂಗುವಡೆದಂತೆ, ಕಲ್ಲುಬೊಂಬೆಯಂತೆ ನಿಂತುಬಿಟ್ಟದ್ದನು.

ಪಾಪ ! ಗಂಗಿಗೆ ಮಾತ್ರ ನರಕ ನಾಲ್ಕೇ ಬೆರಳಿನ ಅಂತರದಲ್ಲಿ ಉಳಿದಂತಾಗಿತ್ತು. ಭಾವಿಯ ಸುತ್ತಲೂ ಒಣಕಟ್ಟೆಗೆಯನ್ನು ಬೇಕಾದಷ್ಟು ಆರಿಸಿಕೊಳ್ಳಲು ಅನುಕೂಲವಿದ್ದರೂ ಭಾವಿಯಲ್ಲಿ ಇಳಿಯುವುದಕ್ಕೆ ತನ್ನನ್ನೇ ಬಿಡುತ್ತಿರಲಿಲ್ಲ ಎಂಬುದು ಗಂಗಿಗೆ ಗೊತ್ತಿತ್ತು. ಗಂಡ, ಮಾವ ಯಾರೂ ಆ ನೀರನ್ನು ಮುಟ್ಟುತ್ತಿರಲಿಲ್ಲ ಎಂಬುದನ್ನರಿತೂ ಈ 'ಹೊಲರಂಡೆ' (ಗಂಗಿಗೆ ಗೊತ್ತು ಆ ಬಿರುದು ತನಗೆ ದೊರೆಯುವುದೆಂದು) ನೀರಿನಲ್ಲಿ ಮುಖವನ್ನು ತೊಳೆದು ಕೊಂಡಳಲ್ಲ ! ಗಂಗಿಯ ಮುಖದ ಪೆ[illegible]ಚ್ಚು ಕಳೆ ಮೂಡಿತು ; ದಣಿದು, ಬೆವತು ಆಮೇಲೆ ಹಸನಾಗಿ ತೊ[illegible]ದುಕೊಂಡ ಆ ಹರೆಯದ ಮುಖದಲ್ಲಿ ಮೂಡಿದ ಪೆಚ್ಚು ಕಳೆ ಗುಂಡಣ್ಣನ ಕಾಲ್ಗಳನ್ನು ನಡುಗಿಸು ವಂತಾಗಿತ್ತು. ಸಾವಿರಾರು ವರ್ಷಗಳ ಸಂಪ್ರದಾಯದ ಸಹನ ಶಕ್ತಿಯ ಮೂರ್ತಿಯಂತೆ ಗಂಗಿ ನಿಂತುಬಿಟ್ಟಳು—ಬಂದ ಶಿಕ್ಷೆ ಬರಲಿ, ಎಂದು.

ವಂಶಪರಂಪರೆಯಾಗಿ ಮೈಗೂಡಿಸಿಕೊಂಡ ಉಚ್ಚವರ್ಣದ

ದರ್ಪದಿಂದ ಬೆಳೆದ ಹುಡುಗ ಒಂದೆಡೆ; ಅವನಿದಿರಿನಲ್ಲಿ ಹೆಣ್ಣುತನದ ಹೊಲೆತನ ಎರಡಕ್ಕಾಗಿಯೂ ಮೂರ್ತಿಮತ್ತಾದ ಯಾತನೆಯಂತೆ ನಿಂತ ಹುಡುಗಿ. ನಿಸರ್ಗದೇವತೆ ಒಮ್ಮೆಲೆ ಇವರಿಬ್ಬರ ಹುಚ್ಚುತನಕ್ಕೆ ನಕ್ಕಂತೆ ಹೊ ಬಿಸಿಲು ಕಂಗೊಳಿಸಿತು; ಉಚ್ಚ – ನೀಚ, ಚೇತನ-ಅಚೇತನ ಎಲ್ಲ ತರದ ಭೇದಗಳ ತಳದಲ್ಲಿ ಜಗತ್ತು ಬಂಗಾರದಂತಿದೆ ಎಂಬುದನ್ನು ಆ ಹರೆಯದ ಕಣ್ಣುಗಳು ಆ ಹೊಂಬಿಸಿಲಿನಲ್ಲಿ ಕಂಡವು. ಸೃಷ್ಟಿಯಾರಭ್ಯ ಲೀಲೆಯಾಡುತ್ತಿರುವ ಕಾಮದ ಕಣ್ಣುಮುಚ್ಚಾಲೆ ಯಾಟದಲ್ಲಿ ಇವೆರಡು ಚಿಕ್ಕಮುಗುಗಳಂತೆ ತಲ್ಲೀನವಾದುವು, ತನ್ಮಯ ವಾದುವು. ತನ್ನತನವನ್ನು ಮರೆತು ಒಂದಾದುವು.

* * *

ಕಳ್ಳತನದಿಂದ ಹಣಿಕಿಕ್ಕಿ ನೋಡ ಬಯಸಿದವನಂತೆ ಕತ್ತಲೆ ಮೆಲ್ಲಗೆ ಮೆಲ್ಲಗೆ ಮುಂದಡಿಯಿಡುತ್ತ ಸಾಗಿತ್ತು. ಗುಂಡಣ್ಣನಿಗೆ ಆಗ ಎಚ್ಚರ — ಎದುರು ಗಂಗಿಯಿಲ್ಲ, ಕಟ್ಟೆಗೆಯ ಹೊರೆಯೂ ಇಲ್ಲ ಮುಂದೆ ಗತಿ ? ತಾನು ಮಾಡಿದ್ದೇನು ? ತಂದೆ — ಸೋದರತ್ತೆಯರ ಮೇಲೆ ಸಿಟ್ಟಾಗಿ ಸೇಡನ್ನು ಹೀಗೆ ತೀರಿಸಿಕೊಳ್ಳುವುದೆ ತಾನು ? ನಿಜ. ತಾನು ದೊಡ್ಡವನಾಗಿರುವ ಎಂದು ಹೆಜ್ಜೆ – ಹೆಜ್ಜೆಗೆ ಸೋದರತ್ತೆ ಹೇಳುತ್ತಿದ್ದ ಮಾತು ನಿಜ. ಏನು — ಆಕೆ ಹಾಗೆ ಹೇಳುವುದನ್ನು ಒಂದೇ ಸವನೆ ಕೇಳಿ ತನ್ನ ತಲೆ ಕೆಟ್ಟಿತೆ ? ತಂದೆಯನ್ನು ಎದುರಿಸುವುದು ಹೇಗೆ ? ಯಾರಾದರೂ ನೋಡಿದ್ದರೆ ? ಅವರಿಗೆ ಸಂಶಯ ಬಂದಿದ್ದರೆ ?

ಗುಂದಣ್ಣನಿಗೆ ಈಗ ಊರನ್ನು ಬಿಡಲು, ಇಂಗ್ಲಿಶ ಸಾಲೆಗೆ ಹೋಗಲು ಮನಸ್ಸಾಗಲಿಲ್ಲ. ದಿನಾಲು ಭಾವಿಗೆ ಹೋಗುವ; ತನ್ನ ಬಟ್ಟೆಗಳನ್ನು ಒಗೆದುಕೊಳ್ಳುವ; ಹೆಚ್ಚಾಗಿ ಯಾರೊಡನೂ ಮಾತ ನ್ನಾಡಲೊಲ್ಲ. ರಾಯರಿಗೆ ಮುಗುಳ್ನಗೆ ಬಂದಿತು, ತಮ್ಮನ್ನು ಕಣ್ಣು ತಪ್ಪಿಸಿ ಜಾರಬೇಕೆನ್ನುವ ಮಗನನ್ನು ನೋಡಿ. ಆದರೂ ರಾಯರಿಗೆ ಸಮಾಧಾನ, ನಾಲ್ಕು ಒಳ್ಳೆಯ ಗುಣಗಳನ್ನಾದರೂ ಕಲಿಯುತ್ತಾನಲ್ಲ,

ಹಿಂದು. ಈಜುವುದಾಗಲಿ ಬಟ್ಟೆಯನ್ನು ಒಗೆದುಕೊಳ್ಳುವುದಾಗಲಿ— ಒಳ್ಳೆಯದೆ ಎಂದು ರಾಯರ ಅಭಿಪ್ರಾಯ.

ಗುಂಡಣ್ಣನ ವಿಚಾರವೇ ಬೇರೆಯಾಗಿತ್ತು. ಅವನು ದಿನಾಲು ಈಜಿ ಬಟ್ಟೆಗಳನ್ನು ಒಗೆದು ಕೊಳ್ಳುತ್ತಿದ್ದನೇನೊ ನಿಜ, ಆದರೆ ಅದರ ಪೂರ್ವಾಪರ ಸಂದರ್ಭ ರಾಯರು ತಿಳಿದಂತಿರಲಿಲ್ಲ. ಮನೆಯಲ್ಲಿ ಹಿರಿಯರೊಡನೆ ಸರಾಗವಾಗಿ ನಡೆಯುದ್ದಕ್ಕೆ ಗುಂಡಣ್ಣನಿಗೆ ಕ್ರಮೇಣ ಮತ್ತು ಆಮೇಲೆ ಅನುಭವದಿಂದ ಗಂಗಿಯ ಸಹವಾಸಕ್ಕೆ ಮನಸ್ಸು ಒಲಿದಿತ್ತು. ಕಾಳ್ಯಾನ ಸುದ್ದಿಯೂ ಇಲ್ಲದ್ದರಿಂದ ಗಂಗಿಗೆ ಸಂಕೋಚವಿದ್ದಂತಿರಲಿಲ್ಲ. ಅಂತೂ ಅನಿವಾರ್ಯವೆನ್ನಿಸಿದ ಆ ಸಹ ವಾಸದ ಮೈಲಿಗೆಯನ್ನು ತೊಳೆಯುವವನಂತೆ ಗುಂಡಣ್ಣ ನಿತ್ಯಕ್ರಮಕ್ಕೆ ತೊಡಗಿದ್ದ. ಆ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲವು ದಿನ ಕಳೆದನಂತರ ತಾನು ನಿಜವಾಗಿಯೆ ಶುಚಿರ್ಭೂತನಾಗುವ ಎಂದೂ ತಿಳಿದುಕೊಂಡ ಈ ವಿಚಾರದಿಂದ ಅವನ ಮನಸ್ಸು ಹಗುರಾಗಿತ್ತು. ಇದಲ್ಲದೆ ಗುಂಡಣ್ಣ ಹೆದರುವಂತಹದೇನಿದೆ? ಇನ್ನೊಬ್ಬರಿಗೆ ಗೊತ್ತಿಲ್ಲ. ಅದೂ ಅಲ್ಲದೆ ಮನೆತನದಲ್ಲಿ ಕೂಳಿಗಾಗಿ ಬಿದ್ದುಕೊಂಡವರ ಪೈಕಿ, ಬೇಡವಾದಾಗ ದೂಡಲು ಬರುವುದು, ಬೇಕೆನ್ನಿಸಿದಾಗ ಅಧಿಕಾರವಿರುವುದು, ಇಷ್ಟಾಗಿ ಕೊನೆಗೆ ತನಗೆಯೆ ಹೆದರಿಕೊಂಡು ನಡೆಯಬೇಕು ಆಕೆ. ಇದೂ ಅಲ್ಲದೆ ಪರಸ್ಥಾನ ಮನೆಯಾಕೆಯಾದದ್ದರಿಂದ ಗಂಗಿ ತನ್ನ ಸೊತ್ತು ಎಂಬ ಮಬ್ಬೊ ಗುಂಡಣ್ಣನಿಗಿದ್ದಿತು. ಆದ್ದರಿಂದ ಆ ಬಗ್ಗೆ ಗಂಗಿಯ ಮನಸಿನಲ್ಲಿ ಏನಿರಬಹುದೆಂಬುದನ್ನು ತಿಳಿದುಕೊಳ್ಳಲು ಅವನು ಯೋಚಿಸಿರಲಿಲ್ಲ ಕೂಡ.

ಗಂಗಿ ಮಾತ್ರ ಮೊದಲ ಸಲ ಬುದ್ಧಿಯನ್ನು ಕಳೆದು ಕೊಂಡಿದ್ದಳೆಂದು ಹೇಳಬಹುದು. ಅಂದು ಸಂಜೆಗೆ ಅದು ಏನು, ಹೇಗೆ ನಡೆಯಿತು ಎಂಬುದರ ಎಚ್ಚರ ಬರುವ ಮುಂಚಿತವಾಗಿಯೆ

ಎಲ್ಲ ನಡೆದು ಹೋಗಿತ್ತು. ಗಂಡನಾದ ಕಾಳ್ಯಾ ಅನೇಕ ತಿಂಗಳು ಗಳಿಂದ ತನ್ನನ್ನು ಬಿಟ್ಟು ಹೊರಟು ಹೋದದ್ದೊಂದು ಆಕೆಗೆ ನೋವನ್ನುಂಟು ಮಾಡಿದ್ದಿತು. ಕಾಳ್ಯಾನ ಬಗ್ಗೆ ಆಕೆಯಲ್ಲಿ ಆದರ, ಪ್ರೇಮ ಮುಂತಾದ ಯಾವ ಭಾವನೆಗಳೂ ಇದ್ದಿರಲಿಲ್ಲ. ಅವನೊಡನೆ ತನ್ನ ಮದುವೆ ಆಗಬೇಕೆಂಬುದೂ ಆದುದೂ ಎಲ್ಲವೂ ಎಷ್ಟೋ ವರ್ಷಗಳ ಮುಂಚಿತವೆ ನಿಶ್ಚಿತವಾದುದರಿಂದ ಅಂತಹ ಭಾವನೆಗೆ ಅವಕಾಶವಾಗಲಿ ಅಗತ್ಯವಾಗಲಿ ಇದ್ದಿರಲಿಲ್ಲ. ಮದುವೆ, ಗಂಡ ಎಲ್ಲವೂ ಬಿಡಲಾರದ ಕರ್ಮದಂತೆ. ಆದರೂ ತಾನು ವಯಸ್ಸಿಗೆ ಬರುವ ವೇಳೆಗೆಯೆ ತನ್ನನ್ನು ಬಿಟ್ಟು ಹೋಗುವುದೆಂದರೆ? ಜನ ಕೂಡ ಏನಾದರೂ ಆಡಿಕೊಳ್ಳಬಹುದಲ್ಲವೆ? ಯಾವಾಗಲೂ ಹೀಗೆ ಅಂತಹ ವಿಚಾರಗಳಲ್ಲಿಯೆ ತೊಡಗಿದ್ದ ಗಂಗಿಗೆ ಮೊದಲ ನಲ ಎಚ್ಚರದಿಂದ ಹೆಜ್ಜೆಯನ್ನಿಡುವುದು ಶಕ್ಯವಾಗಿರಲಿಲ್ಲ. ಒಂದೇ ಒಂದು ಕ್ಷಣ ಹಕ್ಕಿಲ್ಲದೆ ಭಾವಿಯಲ್ಲಿ ಇಳಿದು ವೈಲಿಗೆ ಮಾಡಿದ ವಿಚಾರಕ್ಕೆ ಹೆದರಿದ್ದಳೇನೊ ನಿಜ; ಆದರೆ ಗುಂಡಣ್ಣನ ಮುಖವನ್ನು ನೋಡಿ ದೊಡನೆ ಬೇರೆ ಯಾವುದರ ಎಚ್ಚರವೂ ಉಳಿಯುವಂತಿರಲಿಲ್ಲ. ಪಾಪ! ಆಕೆಗೆ ತಿಳಿದುಕೊಳ್ಳುವುದೂ ಶಕ್ಯವಿದ್ದಿರಲಿಲ್ಲ. ಎಷ್ಟು ಲಕ್ಷಾವಧಿ ವರ್ಷಗಳಿಂದ ಕಲಿತುಕೊಂಡ ವಿದ್ಯೆಯದು! ಪತಂಗವು ಬೆಳಕಿಗೆ ಧುಮುಕುವುದೆನ್ನಬಹುದು, ಭ್ರಮರ ಹೂವಿಗೆ ಧಾವಿಸು ವುದೆನ್ನಬಹುದು, ಕೋಗಿಲೆ ಹಾಡುವುದು – ನವಿಲು ಕುಣಿಯುವುದು ಇದೆಲ್ಲವೂ ಸೃಷ್ಟಿ ತನ್ನನ್ನು ತಾನು ಹುಟ್ಟಿಸಿಕೊಂಡು ಅಮರವಾಗಿ ಬೆಳೆದು ನಿಲ್ಲಲು ಕಲಿಯುತ್ತಿರುವ ವಿದ್ಯೆಯದು. ಗಂಡಿನ ಕಣ್ಣಿನಲ್ಲಿ ಬಯಕೆಯ ನೋಟವನ್ನೂ, ಹೆಣ್ಣಿನ ಕಣ್ಣಿನಲ್ಲಿ ಕರೆಯ ನೋಟ ವನ್ನೂ ಕಲಿಸಿದ ವಿದ್ಯೆಯದು. ಆ ವಿದ್ಯೆಯ ಉಜ್ವಲ ಬೆಳಕಿನಲ್ಲಿ ಅವರು ಒಬ್ಬರನ್ನೊಬ್ಬರು ನೋಡಿದಾಗ ಬೇರೆ ಯಾವುದರ ಎಚ್ಚರವೂ ಇರಲಿಲ್ಲ. ಎರಡು ಜೀವಗಳ ತಾತ್ಕಾಲಿಕ ತಟಸ್ಥತೆಯಿಂದ

ಮೂರನೆಯ ಜೀವ ಅಸ್ತಿತ್ವದಲ್ಲಿ ಬರುವ ಪಾಟಗಾರಿಕೆ ಮೊದಲು ನಿಸರ್ಗದಲ್ಲಿದೆ, ತರುವಾಯ ಹೆಣ್ಣಿನಲ್ಲಿದೆ. ಅದಕೆಂದೇ ಹೆಣ್ಣಿಗೆ ಕಾಮ ಒಂದು ಸಲ; ನೈಸರ್ಗಿಕ ಉದ್ದೇಶ ಸಫಲಗೊಂಡಲ್ಲಿ ಆ ಹೆಣ್ಣು ಹೆಣ್ಣಲ್ಲ, ಸೃಷ್ಟಿ, ಜನ್ಮದಾತೆಯಾದ ಸೃಷ್ಟಿ.

* * *

ಮೊದಲ ಸಲ ಮೈಮರೆತ ಗಂಗಿಗೆ ಮುಂದೆ ಮೈ ತುಂಬ ಕಣ್ಣಾದುವು. ಇದು ಒಳ್ಳೆಯದೆ ಕೆಟ್ಟದೆ ಎಂಬುದರ ಗೊಡವೆ ಅವಳಿಗಿರಲಿಲ್ಲ, ಇದು ನಡೆದು ಹೋಯಿತು ಎಂಬುದನ್ನು ಅವಳು ಬಲ್ಲಳು. ಅದನ್ನು ಒಪ್ಪಿಕೊಂಡೇ ಮುಂದಿನ ಯೋಚನೆಗೆ ತೊಡಗಿದಳು. ಗುಂಡಣ್ಣ ಯಾರು, ತಾನು ಯಾರು ಎಂಬುದರ ಅರಿವು ಆಕೆಗೆ ಪೂರ್ತಿಯಾಗಿ ಇದ್ದಿತು. ಅಗತ್ಯವಿದ್ದರೆ ತನ್ನನ್ನು ಬಲಾತ್ಕರಿಸಲು ಗುಂಡಣ್ಣನಿಗೆ ಶಕ್ಯವಿದ್ದಿತೆಂಬುದನ್ನೂ ಅವಳು ಬಲ್ಲಳು. ನಾಳೆ ಗುಂಡಣ್ಣನಿಗೆ ಬೇಡೆನ್ನಿಸಿದರೆ, ಮದುವೆಯಾಗಿ ಹೆಂಡತಿ ಬೇಕೆನ್ನಿಸಿದರೆ ತನ್ನ ಕಡೆ ಆತ ಕಣ್ಣೆತ್ತಿ ಕೂಡ ನೋಡಲಾರ ಎಂಬುದೂ ಆಕೆಗೆ ಗೊತ್ತಿದ್ದಿತು. ಇಷ್ಟೇಕೆ? ತನ್ನ ಸ್ಥಾನಕ್ಕಾಗಿ ತನ್ನನ್ನು ಯಾರೂ ನಂಬುವಂತಿಲ್ಲ, ಗುಂಡಣ್ಣನೆ ಒದ್ದು ಹೊರದೂಡಿದರೆ ತನಗೆ ಯಾವ ತರದ ಹಕ್ಕೂ ಇಲ್ಲ ಎಂಬುದು ಅವಳಿಗೆ ಗೊತ್ತಿರದಿರಲಿಲ್ಲ. ಅದಕಾಗಿ ಮೊದಲಿನಿಂದಲೆ ಮೈತುಂಬ ಕಣ್ಣಾಗಿಸಿಕೊಂಡಳು. ಗಂಡುಹೆಣ್ಣಿನ ಸಂಬಂಧ ನಿಸರ್ಗದಲ್ಲಿ ಒಂದು ಉದ್ದೇಶದ ಮಟ್ಟಿಗೆ ಸಾಧನವಾಗಿದ್ದರೂ ಮನುಷ್ಯಪ್ರಾಣಿಯಲ್ಲಿ ಅದೊಂದು ಜೀವನದ ಚಟವಾಗಿದೆ ಎಂಬ ವಿಚಾರವು ಗಂಗಿಗೆ ಗೊತ್ತಿರಬಹುದು, ಗೊತ್ತಿರಲಿಕ್ಕಿಲ್ಲ. ಆದರೆ ಗುಂಡಣ್ಣನು ಮುಂದೆಯಾದರೂ, ಕೆಲಕಾಲದ ಮಟ್ಟಿಗೆಯಾದರೂ ತನ್ನನ್ನು ಬಯಸದೆ ಇರುವುದಿಲ್ಲ ಎಂಬುದನ್ನು ಮಾತ್ರ ಆಕೆ ಅರಿತಿದ್ದಳು. ಆದ್ದರಿಂದ ಒಂದೆರಡು ದಿನಗಳಲ್ಲಿ ಆಕೆ ಅದೇ ಸಂಜೆಯ ಸಮಯಕ್ಕೆ ಭಾವಿಯ ಕಡೆ ಹೋದಳು. ಗುಂಡಣ್ಣನು ದಿನಾಲು

ಹೋಗುತ್ತಿದ್ದನೆಂಬುದನ್ನು ಆಕೆ ಅರಿತಿದ್ದಳು. ಬುದ್ಧಿಪೂರ್ವಕವಾಗಿ ಆ ಎರಡು ದಿನ ತಾನು ಹೋಗಿರಲಿಲ್ಲ. ಗುಂಡಣ್ಣನು ತನಗಾಗಿ ಹುಚ್ಚನಂತೆ ಕಾದಿರುವುದನ್ನು ಕಂಡು ಆಕೆಗೆ ಆಶ್ಚರ್ಯವಾಗಲಿಲ್ಲ. ಇಂದು ತನ್ನನ್ನು ಕಂಡೊಡನೆ ಆತ ಧಾವಿಸಿದಾಗ ಆಕೆ ವಿನಯವನ್ನೂ ಸಂಕೋಚವನ್ನೂ ನಟಿಸಿ ತಟ್ಟನೆ ದೂರ ಹಿಂದೆ ಸರಿದು ನಿಂತಳು. ಗುಂಡಣ್ಣ ಗಾಬರಿಗೊಂಡ ; ಏನು ಮಾತನಾಡಬೇಕೆಂಬುದು ತಿಳಿಯದೆ, ನಾಲಗೆಯನ್ನು ಸವರುತ್ತ, ಹಣೆಯ ಮೇಲೆ ಕೈಯ್ಯನ್ನಾಡಿಸಿದನು , ಹಣೆ ಬೆವತಿತ್ತು. ಮಾತನಾಡದೆ ಮತ್ತೆ ಒಂದೆರಡು ಹೆಜ್ಜೆ ಮುಂದೆ ನಡೆದನು . ಆದರೆ ಮುಂಚಿತ ಸರಕ್ಕನೆ ಅತ್ತಿತ್ತ ನೋಡಿದ್ದು ಗಂಗಿಯ ಲಕ್ಷ್ಯಕ್ಕೆ ಬಂದಿತು. 'ಹೆದರಿರುವನಲ್ಲ , ಅಂದರೆ ನನ್ನ ಕೈಯೊಳಗೆ ಸಿಗಬೀಳುವುದು ಸುಲಭವಾಯಿತಲ್ಲ' ಎಂಬ ವಿಚಾರದಿಂದ ಹೊರ ಚಿಮ್ಮಬೇಕೆನ್ನುವ ಮುಗುಳ್ನಗೆಯನ್ನು ತಡೆದಳು , ತಾನು ಅತ್ತಿತ್ತ ನೋಡಿ, ಹಿಂದೆ ಸರಿದು, ಗಿಡದ ಮರೆಗೆ ನಿಂತು, ನಿಜವಾಗಿಯೆ ಹೆದರಿದವಳಂತೆ ಕಳ್ಳದನಿಯಲ್ಲಿ ಮಾತಾಡಿದಳು:

" ಇದೇನ್ರಿ, ಅಣ್ಣಾವ್ರ ?"

" ಅಲ್ಲ — ಆಂ ?— ಎರಡು ದಿನ — ಹಂ— ಹೆಹ —"

" ಅಯ್ಯ — ಯಾರಾದ್ರೂ ನೋಡ್ಯಾರು ಬಿಡ್ರಿ " ಸೆರಗಿನ ತುದಿಯನ್ನು ಕಚ್ಚುತ್ತ ಗಂಗಿ ಹಿಂದೆ ಸರಿದಳು.

" ಹೆಂ — ಹ ! ಯಾರು ನೋಡ್ತಾರ ?" ಗುಂಡಣ್ಣ ಗಟ್ಟಿಗತನದ ಮಾತನ್ನು ಮೆಲುದನಿಯಲ್ಲಿಯೇ ಕೇಳಿದ.

ಗಂಗಿ ಈಗ ಗಿಡದ ಬುಡಕ್ಕೆ ಒರಗಿ ನಿಂತಿದ್ದಾಳೆ, ಹಿಂದೆ ಸರಿಯಬೇಕೆಂದರೆ ಜಾಗೆ ಇಲ್ಲ. ಪಾಪ ! ಹಿಂದೆ ಸರಿಯಬೇಕೆನ್ನುವಂತೆ ನಟಿಸಿ ಜಾಗೆ ಇಲ್ಲದ್ದು ಗುಂಡಣ್ಣನ ಲಕ್ಷ್ಯಕ್ಕೆ ಬರುವಂತೆ ಮಾಡಿದಳು. ಈಗ ಗುಂಡಣ್ಣನಿಗೆ ಧೈರ್ಯ ಬಂದಿತು. ಗಂಡುತನದ ಮೊದಲ ಅನುಭವ ಅವನಿಗೆ ಹೆದರಿಕೆಯನ್ನೂ ಹುಟ್ಟಿಸಿದೆ, ನಾಚಿಕೆಯನ್ನೂ

ಉಂಟುಮಾಡಿದೆ. ಜೊತೆಗೆ ಹೆಣ್ಣಿನ ಮೋಹಕ ಕರೆ ಎದುರಿಗೆ ನಿಂತು ಧೈರ್ಯವನ್ನು ತಂದುಕೊಡುತ್ತಿದೆ.

" ಹುಚ್ಚಿಯ ಹಾಂಗ ಮಾಡಬ್ಯಾಡ " ಎಂದ. ದನಿಯಲ್ಲಿ ತುಸು ಬಿರುಸುತನ ಬಂದಿತ್ತು. ದನಿಯಲ್ಲಿ, ಮುಖದಲ್ಲಿ ತೋರಿಸಿಕೊಳ್ಳದ ಕಸುವು ಕಯ್ಯಲ್ಲಿ ಕುಳಿತಿತ್ತೇನೊ ? ಅವನ ಹಿಡಿತದಲ್ಲಿ ಕಸುವಿದ್ದಿತು. ಆದರೂ ಗಂಗಿ ನಗುನಗುತ್ತಲೆ ಹಿಡಿತವನ್ನು ತಪ್ಪಿಸಿಕೊಂಡು ಗಿಡದ ಬುಡಕ್ಕೆ ಸುತ್ತರಿದು ಹಿಮ್ಮಗ್ಗಲಿಗೆ ನಿಂತಳು.

" ಇಷ್ಟ್ಯಾಕ ಹೆದರ್‍ತಿ ? ಯಾರೂ ನೋಡೋದಿಲ್ಲ ?" ಗುಂಡಣ್ಣನ ಧೈರ್ಯ.

" ಯಾರು ನೋಡ್ಯಾರನ್ನೋ ಹೆದರಿಕಿ ಇಲ್ಲ "

" ಅಂದ್ರ ?"

"ನನಗೇ ನಾಚಿಕೆ—"

"ಹಂ ಹಂ" ಎನ್ನುತ್ತ ಗದ್ದವನ್ನು ಹಿಡಿಯಲು ಹೋದ

ಗಂಗಿ ತಟ್ಟನೆ ದೂರ ಸರಿದು ನಿಂತಳು.

"ಅಲ್ಲರಿ, ಅಣ್ಣಾ ಅವ್ರ. ನನ್ನೋಡಿ ನನಗ ನಾಚಿಕೆ ಆಗ್ತೈತಿ ?"

"ಅಂದ್ರ ?"

"ಅಲ್ಲರಿ – ದಗದಾ ಮಾಡಿ ಮೈಕೈ ಹೊಲಸ ಆಗೇತಿ—ಉಟ್ಟ ಸೀರೆ ಹರಿದೇತಿ—"

"ಛೀ – ಹುಚ್ಚಿ !"

ಈಗ ಗಂಗಿ ದೂರ ಸರಿಯಲಿಲ್ಲ. ಇನ್ನು ಈಗ ದೂರ ಸರಿಯುವುದರಲ್ಲೇನಿದೆ ? ಮುಂದೆ ಕೆಲವೇ ನಿಮಿಷಗಳಲ್ಲಿ ಗುಂಡಣ್ಣ ಆಕೆಗೆ ವಚನವನ್ನು ಕೊಟ್ಟ, ಹೊಸ ಸೀರೆಯ ಬಗ್ಗೆ.

"ಆಯಿತಲ್ಲ ? ಇನ್ನು—"

"ಹೋಗಿರಿ ನಿವು ! ಅದೇ ! " ಎಂದು ನಗುತ್ತ ದೂರಸರಿದಳು.

* * *

ರಘುನಾಥರಾಯರ ಸಂಸಾರಸಾಗರದಲ್ಲಿ ಬಿರುಗಾಳಿ ಎದ್ದಿತು. ಅವರ ಜೀವನನೌಕೆ ಹೊಯ್ದಾಟಕ್ಕೆ ಸಿಕ್ಕಿತು. ಎಂತಹ ಅಕಸ್ಮಾತ್ತಾಗಿ ಬಂದಿದೆ ಆಪತ್ತು! ಯಾವ ಪೂರ್ವಸಂಕೇತದ ಶಾಪವಿದ್ದಿರಬಹುದು? ನಿಜವಾಗಿಯೆ ಯಾವುದಾದರೊಂದು ಘೋರ ಶಾಪದ ಪರಿಣಾಮವಿದಾಗಿರಬೇಕೆಂದು ರಾಯರಿಗೆ ಎನ್ನಿಸಿತು. ಚಿಕ್ಕಂದಿನಲ್ಲಿ ಪರಸ್ಯಾನ ಕೂಡ ಆಡಿದ್ದಕ್ಕೆ ತನ್ನ ತಂದೆ ಸಿಟ್ಟಾಗಿದ್ದರಲ್ಲ? ಆಗ ತಂದೆಯ ಬಗ್ಗೆ ತನಗೆಷ್ಟು ಅನಾದರವೆನಿಸಿತ್ತು? ಪರಸ್ಯಾನ ಕೈಮುರಿವಷ್ಟು ಹೊಡೆಯುವುದು ಅದೆಂತಹ ಧರ್ಮ ಎಂದು ಎಳೆ ಹರೆಯದ ರಘುನಾಥನು ತನ್ನನ್ನು ತಾನೇ ಕೇಳಿಕೊಂಡಿದ್ದನು ಆದರೂ ದೊಡ್ಡವನಾದಂತೆ, ತಂದೆಯ ತರುವಾಯ ಮನೆತನದ ಜವಾಬ್ದಾರಿ ತನ್ನ ಮೇಲೆ ಬಿದ್ದಂತೆ ರಘುನಾಥರಾಯರ ವಿಚಾರದಲ್ಲಿ ತುಸು ಬದಲಾವಣೆಯಾಗಿತ್ತು. ಬ್ರಾಹ್ಮಣನಾದ ತಾನು ಬ್ರಾಹ್ಮಣ್ಯ ವನ್ನು ನಡೆಸಿಕೊಂಡು ಹೋಗುವುದಾದರೆ ಮಿಕ್ಕವರೂ ಹಾಗೇ ಮಾಡ ಬೇಕಲ್ಲವೆ? ಅಸ್ಪೃಶ್ಯನಿಗೆ ಊರ ಹೊರಗಿರುವುದೆ ಧರ್ಮ, ಉತ್ತಮ ಜಾತಿಯವರನ್ನು ಮುಟ್ಟದಿರುವುದೆ ಭಾವೀ ಪುಣ್ಯಸಂಚಯ ಅದಕ್ಕಾಗಿ ರಾಯರು ಮಧ್ಯಾಹ್ನ ಮಡಿಯಲ್ಲಿದ್ದಾಗ, ಸಾಯಂಕಾಲ ಗುಡಿಗೆ ಹೋಗಿ ಬರುವಾಗ ಪರಸ್ಯಾ, ಕಾಳ್ಯಾ ಇಲ್ಲವೆ ಆ ಜನರ ಪೈಕಿ ಬೇರೆ ಯಾರೂ ಅವರ ದೃಷ್ಟಿಗೆ ಬೀಳತಕ್ಕದ್ದಲ್ಲ ಎಂದು ಕಟ್ಟಳೆ ಹಾಕಿದ್ದರು. ಅದರಲ್ಲಿ ತಪ್ಪು, ಅನ್ಯಾಯ, ನಿರ್ದಯ ಯಾವುದೂ ಕಂಡುಬಂದಿರಲಿಲ್ಲ. ತಪ್ಪು ಹೇಗಾದೀತು? ಅಸ್ಪೃಶ್ಯನು ತನ್ನ ಜಾತಿ-ಧರ್ಮವನ್ನು ನಡೆಸುವುದು ತಪ್ಪೆಂದರೆ ಬ್ರಾಹ್ಮಣರಾದ ತಾವೂ ಬ್ರಾಹ್ಮಣ್ಯದ ಆಚರಣೆಯನ್ನು ನಡೆಸುವುದು ತಪ್ಪೆನ್ನಬೇಕಾದೀತು. ಛೆ! ಅದರಲ್ಲಿ ತಪ್ಪು ಎಂಬುದು ಯಾವುದೂ ಇರಲಿಲ್ಲ. ಅದು ಅನ್ಯಾಯವೂ ಎನ್ನಿಸುತ್ತಿರಲಿಲ್ಲ. ಯಾಕೆನ್ನಿಸಬೇಕು? ಪ್ರತಿ ವರ್ಷ ತಪ್ಪದೆ ನ್ಯಾಯವಾಗಿ ಪರಸ್ಯಾನಿಗೆ ಸಲ್ಲಬೇಕಾದ್ದನ್ನು ಕಣದ ಮೇಲೆಯೆ

ಕೊಟ್ಟುಬಿಡುತ್ತಿದ್ದಿಲ್ಲವೆ ? ತನ್ನದಲ್ಲದನ್ನು, ಅನ್ಯರದನ್ನು ಬಯಸಲು ರಾಯರಿಗೆ ಅಗತ್ಯವಾದರೂ ಇದ್ದಿತೆ ? ದೇವರು ಸಮೃದ್ಧಿಯನ್ನು ಒದಗಿಸಿದ್ದಾನೆ. ಅದಕಾಗಿಯೆ ಕೈಯಿಂದೆತ್ತಿ ಕೊಡಲು ರಾಯರು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಹಬ್ಬ-ಹುಣ್ಣಿಮೆ ಬಂದಾಗ, ಉಪನಯನ - ವಿವಾಹ - ಶಾಂತಿ - ಸಮಾರಾಧನೆಗಳಾದಾಗ ಮನೆಯ ಹೆಂಗಸರು ಕೂಡ ಪರಸ್ಯಾನನ್ನು ಕರೆದು ಎಂಜಲೆಲೆಗಳೊಳಗಿನ ಎಲ್ಲ ಮುಸುರೆಯನ್ನೂ ಒಂದೆಡೆ ಕೂಡಿಸಿ ಬೇರೆ ಎಲೆಗಳಲ್ಲಿಟ್ಟು 'ನೀಡು' ತ್ತಿದ್ದರು. ಈ ನಡತೆ ನಿರ್ದಯವಾದುದು ಎಂದು ಯಾರಾದರೂ ಹೇಳಿದ್ದರೆ ಅವನು ಹುಚ್ಚ ಎಂದು ರಾಯರು ತಟ್ಟನೆ ಹೇಳಿಬಿಡು ತ್ತಿದ್ದರು ತಪ್ಪು, ಅನ್ಯಾಯ, ನಿರ್ದಯೆ ಇವುಗಳ ಸಂಬಂಧವೆ ರಾಯರಿಗೆ ತೋಚುತ್ತಿರಲಿಲ್ಲ. ತಾವು ಹುಟ್ಟಿದ್ದು ಬ್ರಾಹ್ಮಣರಾಗಿ, ಹಾಗೇ ತಮ್ಮ ಗುಂಡ, ಪರಸ್ಯಾ ಅಸ್ಪೃಶ್ಯನಾಗಿ ಹುಟ್ಟಿದವ, ಹಾಗೇ ಅವನ ಮಗ ಕಾಳ್ಯಾ ಇದರಲ್ಲಿ ತಪ್ಪೇನು ? ತಂದೆಯ ಹೊಲ-ಮನೆ, ಋಣ-ಧೇಯ ಇವುಗಳಿಗೆ ಹಕ್ಕಿದೆ, ತಂದೆಯ ರೂಪ-ಗುಣಗಳಿಗೂ ಹಕ್ಕಿದೆ ಎನ್ನಬಹುದು ; ಹೀಗಿರುವಾಗ ತಂದೆಯ ಚಾಲಿಗೂ ಹಕ್ಕಿದ್ದರೆ ತಪ್ಪೇನು ? ಇದಲ್ಲದೆ, ಸಂಸಾರಕ್ಕೆ ಕೊರತೆ ಇದೆಯೆ ? ಅದೂ ಇಲ್ಲ. ಆದ್ದರಿಂದ ಅಸ್ಪೃಶ್ಯರು ಎಷ್ಟಾದರೂ ಅಸ್ಪೃಶ್ಯರೆ, ಎಂದಿಗಾದರೂ ಅಸ್ಪೃಶ್ಯರೆ; ಚಿಕ್ಕಂದಿನಲ್ಲಿ ಅಂತಹ ಅಸ್ಪೃಶ್ಯನೊಡನೆ ತಾನೇ ಆಡಿರ ಲಿಲ್ಲವೆ ? ಹೀಗಿದ್ದು ಈಗ ತಾನೇ ಆ ಮಾತನ್ನು ಹೇಳುವುದಿಲ್ಲವೆ ?

ರಾಯರಿಗೆ ಈಗ ತಿಳಿಯಿತು, ತಾನು ಆ ಮಾತನ್ನು ಅಷ್ಟು ಸಮರ್ಪಕವಾಗಿ ಹೇಳುತ್ತಿರಲಿಲ್ಲ ಎಂದು. ಇಷ್ಟೇಕೆ ? ತಾವು ಸಾಕಷ್ಟು ಅಲಕ್ಷ್ಯವನ್ನು ವಹಿಸಿರಬೇಕು ಎಂಬ ಸಂಶಯವೂ ಈಗ ಬಂದಿತು. ಅಹುದು—ತಮ್ಮದೆ ತಪ್ಪು. ಕಿರಿಯರು ಮಾಡುವ ತಪ್ಪಿನ ಮೊದಲ ಹೊಣೆ ಹಿರಿಯರದು. ಅಹುದು, ತಪ್ಪು ತಮ್ಮದು. ಗುಂಡನನ್ನು ಕಾಳ್ಯಾನೊಡನೆ ಆಡಲು ಬಿಟ್ಟದ್ದೆ ತಪ್ಪು. ಎಷ್ಟಾದರೂ

ಜಾತಿಯ ಗುಣಗಳು ಬಿಡುವಂತಿಲ್ಲ. ಉದ್ಧಟತನ, ಸೋಮಾರಿತನ, ಒಟ್ಟಾರೆ ಅಲಕ್ಷ್ಯ, ಅಭ್ಯಾಸದ ಬಗ್ಗೆ ಅನಾದರ—ಇಂತಹ ಗುಣಗಳು ಗುಂಡನಲ್ಲಿ ಹೇಗೆ ಬಂದುವು? ಕಾಳ್ಯಾನ ಸಹವಾಸದಿಂದ. ಒಂದು ದೃಷ್ಟಿಯಿಂದ ಕಾಳ್ಯಾ ಊರನ್ನು ಬಿಟ್ಟು ಹೋದದ್ದು ಒಳಿತೇ ಆಯಿತು ಎಂದುಕೊಂಡರು ರಾಯರು. ಈಗ ಗುಂಡನ ಮೇಲೆ ಜವಾಬ್ದಾರಿಯನ್ನು ಹೊರಿಸಬೇಕು, ಸಂಸಾರವನ್ನು ಸಾಗಿಸುವ ದಕ್ಷತೆಯನ್ನು ಅವನಲ್ಲಿ ಬೆಳೆಯಿಸಬೇಕು, ಹೊಲ-ಮನೆಗಳನ್ನೂ ಅವನೇ ನೋಡಿಕೊಂಡರೂ ಸೈ—ಎಂದು ರಾಯರು ನಿರ್ಧರಿಸಿದರು ತಲೆಗೆ ಬಡಿಯದೆ ಎಚ್ಚರಾಗುವುದಿಲ್ಲ, ಹರೆಯದ ಮಬ್ಬಿನಲ್ಲಿ ನಿದ್ದೆಯಲ್ಲಿ ನಡೆಯುವವನ ಅವಸ್ಥೆಯಾಗುವುದು. ಇನ್ನು ಕ್ರಮೇಣ ಜವಾಬ್ದಾರಿಯನ್ನು ಇವನ ಮೇಲೆಯೆ ಹೊರಿಸೋಣ, ಎಂದುಕೊಂಡರು ರಾಯರು.

* * *

ಮೊಮ್ಮಗನು ಸಿಂಹಾಸನದ ಮೇಲೆ ಕೂತುದನ್ನು ನೋಡುವ ವರವನ್ನು ಪಡೆದುಕೊಂಡ ಕತೆಯೊಳಗಿನ ಕುರುಡನಂತೆ ಗುಂಡಣ್ಣನ ಭಾಗ್ಯ ತೆರೆಯಿತೆನ್ನಬಹುದು. ಪ್ರತಿನಿತ್ಯ ಹೆಚ್ಚೆಚ್ಚಾಗಿ ಗಂಗಿಯ ಬೇಡಿಕೆಗಳು ಬಾಧಿಸುತ್ತಿದ್ದಾಗ ಕೈಯಲ್ಲಿ ಅಧಿಕಾರ ಸೂತ್ರ ದೊರೆತುದು ಅವನಿಗೆ ಉಸಿರು ಬಂದಂತಾಯಿತು, ಈಗ ಗುಂಡಣ್ಣನ ಕಾರಭಾರ ಸುರುವಾಗಿದೆ ಎಂದು ತಿಳಿದೊಡನೆ ಗಂಗಿಯ ಬೇಡಿಕೆಯೂ ನೆಗಡಿಯಾಗುವಾಗಿನ ನೀರಡಿಕೆಯಂತೆ ತೃಪ್ತಿ ಹೊಂದದಷ್ಟು ಬೆಳೆಯಿತು. ಯಾರಿಗೆ ಗೊತ್ತು? ಬೇಕಾದಾಗ ಒದ್ದು ನೂಕಬಹುದಲ್ಲ ತನ್ನನ್ನು? ಅದು ಹೋಗಲಿ; ಫಕ್ಕನೆ ಕಾಳ್ಯಾ ಸಾಕ್ಷಾತ್ತಾಗಿ ತಿರುಗಿ ಬಂದು ನಿಂತರೆ? ಯಾವದೇ ಸಂದರ್ಭದಲ್ಲಿ ತನಗೆ ತನ್ನ ಕಾಲ ಮೇಲೆ ನಿಲ್ಲುವ ಪ್ರಸಂಗ ಬಂದಾಗ ತಕ್ಕಷ್ಟು ಆಧಾರ ಬೇಕೆಂಬ ವಿಚಾರದಿಂದ ಗಂಗಿ ಗುಂಡಣ್ಣನಿಂದ ಸಿಕ್ಕಾಬಟ್ಟೆಯಾಗಿ ಬೇಡಿ ಪಡೆದುಕೊಳ್ಳುತ್ತಿದ್ದಳು. ಕೆಸರಿನೊಳಗೆ ಕಾಲು ಜಾರಿದ್ದನ್ನು ಮುಚ್ಚುವುದು ಕಠಿಣ ಎಂದು

ಗುಂಡಣ್ಣನಿಗೂ ಈಗ ತಿಳಿದು ಬಂದಿತು. ಗಂಡುಹೆಣ್ಣಿನ ಸಂಬಂಧ ಎಷ್ಟು ತೊಡಕಿನದೆಂಬುದು ಪ್ರಾರಂಭದ ಹರೆಯದಲ್ಲಿದ್ದ ಈತನಿಗೆ ಗೊಂದಲದಲ್ಲಿ ನೂಕಿತು. ತಾನು - ಗಂಗಿ, ಗಂಡು - ಹೆಣ್ಣು, ಬಯಕೆ - ಸ್ವಾಗತ, ವಾಸನೆ - ಉದ್ದೀಪನೆ—ಈ ಅನುಭವ ಎಂದೋ ಏನೊ ಎನ್ನುವಂತಾಗಿತ್ತು. ಮೊದಲ ಅನುಭವ ಕನಸಿನಂತಾಗಿತ್ತು. ಈಗ ತಾನೆಂದರೆ ಬಲೆಯಲ್ಲಿ ಸಿಕ್ಕು ಒದ್ದಾಡುವ ಪಶು, ಗಂಗಿ ಎಂದರೆ ನಿರ್ದಯಳಾದ ಹೊಲೆಯ ಬುದ್ಧಿಯ ಸ್ವಾರ್ಥ ಸಾಧಕ ಪಿಶಾಚಿ – ಎಂದು ಒಮ್ಮೊಮ್ಮೆ ಎನ್ನಿಸುತ್ತಿತ್ತು. ಗಂಗಿಯನ್ನು ಇದ್ದಕ್ಕಿದ್ದಂತೆ ಬಿಡಲು ಅವನಿಗೆ ಕಠಿಣವಾಗಿರಲಿಲ್ಲ; ತಾನೊಬ್ಬನೆ ವಿಚಾರ ಮಾಡುವಾಗ ಎಷ್ಟೋ ಸಲ ಆ ನಿರ್ಧಾರಕ್ಕೆ ಬರುತ್ತಿದ್ದ. ಆದರೆ ಮತ್ತೆ ದಿವಸಕ್ಕೊಮ್ಮೆಯಾದರೂ ಆಕೆಯನ್ನು ಏಕಾಂತವಾಗಿ ಕಾಣದೆ ಹೋದಲ್ಲಿ ಹುಚ್ಚನಂತೆ ಅಲೆದಾಡುತ್ತಿದ್ದ. ಕೆಲವೊಮ್ಮೆ ಹೀಗೂ ವಿಚಾರ ಬರುತ್ತಿತ್ತು. ಮುಳ್ಳನ್ನು ಮುಳ್ಳಿನಿಂದ ತೆಗೆಯ ಬಾರದೇಕೆ? ಇನ್ನೊಂದು ಹೆಣ್ಣನ್ನು ನೋಡಿಕೊಂಡರೆ ಗಂಗಿಯ ಸೊಕ್ಕು ಮುರಿಯಬಹುದಲ್ಲ?

ಗುಂಡಣ್ಣನಿಗೆ ಹೆಚ್ಚಾಗಿ ಗೆಳೆಯರಿರದಿದ್ದರೂ ಊರ ಸಾವ್ಕಾರರ ಒಬ್ಬನೇ ಒಬ್ಬ ಮಗನಿಗೆ ಬಯಸಿದರೆ ಗೆಳೆಯರ ತಂಡಕ್ಕೆ ತಂಡವೆ ದೊರಕುವಂತಿತ್ತು. ಆದರೆ ಗುಂಡಣ್ಣನ ಸ್ವಭಾವ ಮುದುಡಿ ಕೊಳ್ಳುವಂತಹದಾದ್ದರಿಂದ ಅನಿವಾರ್ಯವೆನ್ನಿಸಿದಾಗ ಮಾತ್ರ ಗೆಳೆಯ ರನ್ನು ಬಯಸುತ್ತಿದ್ದ. ಹಾಗೆ ಬಯಸಿ ಬೆಳೆಸಿಕೊಂಡ ಗೆಳೆಯರು ೩–೪ ಸಮಾನವಯಸ್ಕರಿದ್ದರು. ಅವರಲ್ಲಿ ರಾಮಪ್ಪನು ಮುಖ್ಯನಾಗಿದ್ದ. ರಾಮಪ್ಪ ಊರ ಪೈಲವಾನ. ೧೯–೨೦ ವಯಸ್ಸಿನ ತರುಣ. ಚನ್ನಾಗಿ ವ್ಯಾಯಾಮ ಮಾಡಿ ಕಸುವನ್ನು ಬೆಳೆಸಿಕೊಂಡಿದ್ದ; ದಿನಾಲು ಎರಡು ಸಲವಾದರೂ ಪೂರ್ತಿಯಾಗಿ ಮೈಕೈಗಳನ್ನು ನೋಡಿಕೊಳ್ಳದೆ ಹೊರತು ಅವನಿಗೆ ಸಮಾಧಾನವಿದ್ದಿರಲಿಲ್ಲ. ಅವನದು ಒಂದೇ

ಒಂದು ಮಹತ್ತ್ವಾಕಾಂಕ್ಷೆ. ವರ್ಷಕ್ಕೊಮ್ಮೆ ಬೇಸಗೆಗೆ ಊರ ಹತ್ತಿರದ ಗುಡಿಯ ಸುತ್ತಲು ನೆರೆಯುವ ಜಾತ್ರೆಯಲ್ಲಿ ಬಂದ ಎಲ್ಲ ಕುಸ್ತಿಯಾಳುಗಳನ್ನು ಸೋಲಿಸುವುದು. ಅದಕಾಗಿ ಅವನು ಬೇಕಾದ್ದನ್ನು ಮಾಡಲು ಸಿದ್ಧ. ಅದಕಾಗಿಯೆ ಶ್ರೀರಾಮನಿಗೆ ಆಂಜನೇಯನಂತೆ ಗುಂಡಣ್ಣನಿಗೆ ರಾಮಪ್ಪ ಅನುಯಾಯಿಯಾಗಿದ್ದ. ಈಗ ರಾಮಪ್ಪ ಗುಂಡಣ್ಣನ ಕುಳ. ಅವನ ವ್ಯಾಯಾಮ ಸಾಧನೆಗೆ ಯಾವುದೂ ಕಡಮೆಯಾಗದಂತೆ ನೋಡುವುದು ಗುಂಡಣ್ಣನ ಹೊಣೆ. ಊರೊಳಗಿನ ನೇಮಚಂದ ಸೇಡಜಿಯ ಅಂಗಡಿಯಲ್ಲಿ ರಾಮಪ್ಪ ಬೇಕಾದಷ್ಟು ಖಜ್ಜೂರಿ – ಉತ್ತತ್ತಿಗಳನ್ನು ಕೊಳ್ಳಬಲ್ಲ; ತಳವಾರ ಬಂಗಾರೆವ್ವ ಎಮ್ಮೆಯನ್ನು ಹಿಂಡುವಾಗ ರಾಮಪ್ಪ ಬೇಕಾದಷ್ಟು ಹಾಲನ್ನು ಕುಡಿಯಬಲ್ಲ, ಎಲ್ಲ ವೆಚ್ಚವನ್ನು ನೋಡಿಕೊಳುವ ಹೊಣೆ ಗುಂಡಣ್ಣನದು. ಈ ಉದಾರ ಮನಸ್ಸಿಗಾಗಿಯೆ ಗುಂಡಣ್ಣನಿಗೆ ಊರಲ್ಲಿ 'ಗವರ್ನರ' ಗುಂಡಣ್ಣ ಎಂದು ಬಿರುದು ದೊರೆಯಿತು.

ರಾಮಪ್ಪನನ್ನು ಹಿಡಿದಿರುವಲ್ಲಿ ಗುಂಡಣ್ಣನಿಗೆ ಊರ ಅಭಿಮಾನವೊಂದೇ ಕಾರಣವಾಗಿರಲಿಲ್ಲ ರಾಮಪ್ಪನ ಹೆಂಡತಿ ಚೆನ್ನಿಯೆ ಗುಂಡಣ್ಣನ ಔದಾರ್ಯದ ಉಗಮ ಎಂದು ಹೇಳಬಹುದು. ಚೆನ್ನಿ ಸಾಮಾನ್ಯವಾದ ಹೆಂಗಸು ಆಗಿರಲಿಲ್ಲ. ಹರೆಯದಿಂದ ತುಂಬಿದ ಮೈಕಟ್ಟಿನಿಂದ ನೋಡಿದೊಡನೆ ವ್ಯಕ್ತಿತ್ವದ ಕಲ್ಪನೆ ಮೂಡುವಂತೆ, ಸ್ವಭಾವ ಮತ್ತು ಬುದ್ಧಿವಂತಿಕೆಯಿಂದಲೂ ಆಕೆಯ ವ್ಯಕ್ತಿತ್ವ ಪ್ರಭಾವಶಾಲಿಯಾಗಿದ್ದಿತು. ರಾಮಪ್ಪನಿಗಾಗಿದ್ದ ಅಭಿಮಾನ ಅವಳ ಜೀವನದ ನಗೆಯಾಗಿದ್ದಿತು, ಮದುವೆಯಾಗಿ ಎಷ್ಟೊ ವರ್ಷಗಳಾಗಿದ್ದರೂ ಇಂದಿಗೂ 'ನಮ್ಮವ' ಎದುರಿಗೆ ನಿಂತನೆಂದರೆ ಎದೆಯ ಮಿಡಿತ ತಟ್ಟನೆ ನಿಂತಂತಾಗುತ್ತಿತ್ತು. ಚೆನ್ನಿಯ ಕಣ್ಣುಗಳು ಒಲವಿನ ನಗೆಯಿಂದಾಗಲಿ, ಬಯಕೆಯ ಹಸಿವಿನಿಂದಾಗಲಿ ರಾಮಪ್ಪನನ್ನಲ್ಲದೆ ಬೇರೆ ಯಾರನ್ನೂ ನೋಡಿರಲಿಲ್ಲ, ನೋಡುತ್ತಿರಲಿಲ್ಲ, ನೋಡ ಬಯಸಿರಲಿಲ್ಲ. ಅದೂ

ಎಂತಹ ಒಲವು! ಅದಕ್ಕೆ ಮನ್ನಣೆ ಇಲ್ಲ, ಅದಕ್ಕೆ ಉತ್ತರವಿಲ್ಲ. ಅದನ್ನು ಗುರುತಿಸಿದ ಲಕ್ಷಣ ಕೂಡ ಇದ್ದಿರಲಿಲ್ಲ. ಆದರೂ — ರಾಮಪ್ಪ ತನ್ನನ್ನು ಕಣ್ಣೆತ್ತಿ ನೋಡುವುದೂ ಕಡಮೆ — ಎನ್ನುವಾಗಲೂ ಚೆನ್ನಿ ಅವನಿಗಾಗಿಯೆ ಒನಪು - ವಯ್ಯಾರಗಳನ್ನು ಧರಿಸುತ್ತಿದ್ದಳು.

ರಾಮಪ್ಪನಿಗೆ ಚೆನ್ನಿಯನ್ನು ನೋಡಿದೊಡನೆ ಹೆದರಿಕೆ, ಅದಕಾಗಿ ಮೇಲಿಂದ ಮೇಲೆ ಆಕೆಯಲ್ಲಿ ಸಿಟ್ಟುಮಾಡಿಕೊಳ್ಳುತ್ತಿದ್ದನು. ತುಂಬಿದ ಮುಖ, ಅರಳಿದ ಕಣ್ಗಳು, ಮುಖದಲ್ಲಿ ಮುಗುಳ್ನಗೆ, ಒಂದೆಡೆ ಸೆರಗು ಮುಚ್ಚದ ಎದೆ (ಅವನ್ನು ನೋಡಿದೊಡನೆ ಮುಚ್ಚಿದ ಎಡಬದಿಯ ಎದೆಯ ಚಿತ್ರವೂ ರಾಮಪ್ಪನ ಕಣ್ಣು ಕಟ್ಟುತ್ತಿತ್ತು), ಎದುರಿನಿಂದ ಬರುವಾಗ ಕುಣಿಯುತ್ತಿರುವ ತುಟಿಗಳ ದೃಶ್ಯ, ತನ್ನಿಂದ ನಡೆದು ಹೋಗುವಾಗ ಆಹ್ವಾನವನ್ನು ಕೊಡುವಂತೆ ಪುಟಿಯುವ ಜಘನಭಾಗ- ಈ ದೃಶ್ಯ ಕಂಡಾಗ ರಾಮಪ್ಪನಿಗೆ ಚೆನ್ನಿಯ ಹೆರೆಯವನ್ನೂ ಸೌಂದರ್ಯವನ್ನೂ ಸವಿಯುವುದರ ಮುಂದೆ ಬೇರೆ ಯಾವ ಸುಖವೂ ಇಲ್ಲ ಎನ್ನಿಸುತ್ತಿತ್ತು. ತತ್‌ಕ್ಷಣ ಹೆದರಿಕೆ. ತನ್ನ ಗತಿ ಏನು? ಯಾರೋ ಎಲ್ಲಿಯೋ ಹೇಳಿದಂತೆ ಅವನಿಗೆ ನೆನಪಿನಲ್ಲಿದ್ದಿತು: ಶರೀರ ಸಾಧನೆಯ ಜಟ್ಟಿಗೆ ಹೆಣ್ಣೆಂದರೆ ರೋಗವಿದ್ದಂತೆ ಎಂದು ಸುತ್ತಲಿನ ನೂರು ಮೈಲಿಗಳಲ್ಲಿ ತನ್ನಿಂದ ಮಣ್ಣುಮುಕ್ಕದೆ ಇದ್ದ ಜಟ್ಟಿ ಯಾರೂ ಇಲ್ಲ ಎಂದೆನ್ನಿಸಬೇಕೆಂಬ ರಾಮಪ್ಪನಿಗೆ ಚೆನ್ನಿಯ ಸಾನ್ನಿಧ್ಯ, ಸುಳಿದಾಟ ತಡೆಯಲು ಅಸಹ್ಯವಾಗಿ ಆಕೆಯನ್ನು ಕಂಡೊಡನೆ ಅನೇಕ ಸಲ ಅವನು 'ವಸಕ್ಕನೆ' ಮೈಮೇಲೆ ಹೋಗುತ್ತಿದ್ದನು.

ರಾಮಪ್ಪನ ಆಶ್ರಯದಾತನಾದ ಗುಂಡಣ್ಣನಿಗೆ ಈ ಪರಿಸ್ಥಿತಿಯು ಒಂದು ಅನುಕೂಲವಾದ ಅವಕಾಶವನ್ನು ಕಲ್ಪಿಸಿಕೊಟ್ಟಂತಾಯಿತು. ದಿನ ದಿನಕ್ಕೆ ಗಂಗಿಯ ಬೇಡಿಕೆಗಳು ಬೆಳೆಯತೊಡಗಿದುವು. ತನ್ನ ಮೇಲೆ ಆಕೆಗೆ ಒಂದು ತರದ ಅಧಿಕಾರವಿದೆ ಎಂದೇ ಗಂಗಿ ತಿಳಿದಿದ್ದ

ಳೇನೋ! ಆಕೆಗೊಂದು ಕೈ ತೋರಿಸಬೇಕು! ತಾನೊಬ್ಬಾಕೆಯೆ ಗುಂಡಣ್ಣನ ಕಾಮದ ಹೆಣ್ಣು ಎಂಬ ಭ್ರಾಂತಿಯನ್ನು ತೆಗೆದೊಗೆಯ ಬೇಕು. ಇದಲ್ಲದೆ ಇನ್ನೊಂದು ವಿಚಾರ. ಗಂಗಿ ಎಷ್ಟಾದರೂ ಹೊಲತಿ; ಜನರಿಗೆ ತನ್ನ ಆಕೆಯ ಸಂಬಂಧ ಗೊತ್ತಾದರೆ? ಅದೇ ಚೆನ್ನಿಯ ಮಾತು ಬೇರೆ ರಾಮಪ್ಪನ ಆಶ್ರಯದಾತ ತಾನು. ಆದ್ದರಿಂದ ಅವನೊಡನೆ ಬಳಕೆಯಾದಲ್ಲಿ ಸಂಶಯಕ್ಕೆ ಎಡೆ ಇಲ್ಲ. ರಾಮಪ್ಪನಿಗೇ ಯಾಕೆ? ಆಗಾಗ ಚೆನ್ನಿಗೂ ಪ್ರಿಯವಾದ ವಸ್ತುಗಳನ್ನು ತಾನು ಒದಗಿಸಿಕೊಡುತ್ತಿರಲಿಲ್ಲವೆ? ಎಷ್ಟಾದರೂ ಚೆನ್ನಿ ಹರೆಯದ ಹುಡುಗಿ. ಎಷ್ಟು ದಿನ ತಡೆದಾಳು ಗಂಡನ ಅಲಕ್ಷ್ಯವನ್ನು? ರಾಮಪ್ಪನ ಮಬ್ಬುತನಕ್ಕಾಗಿ ಗುಂಡಣ್ಣ ನಗದಿರಲಿಲ್ಲ. "ಕೋಣ! ಶುದ್ಧ ಕೋಣ ಇದ್ದಾನ! ಥೂ! ಕೋಣ ಕೂಡ ಅಲ್ಲ! ಬೀಜಕ್ಕಾಗಿ ಕಾದಿಟ್ಟ ಕೋಣ ಬ್ರಹ್ಮಚರ್ಯದಿಂದ ಇರಬೇಕು ಅನ್ನುವಷ್ಟು ಥಡ್ಡ ಇರೋದಿಲ್ಲ! ಹಹ! ಕೋಣನಕಿಂತ ಅತ್ತತ್ತ!" ಎಂದು ಗುಂಡಣ್ಣನು ಮೋಜನ್ನು ಸವಿಯುತ್ತಿದ್ದ. ಸರಿ. ಇಂತಹ ಬುದ್ಧಿಗೇಡಿಯ ಲಾಭವನ್ನು ಪಡೆದುಕೊಳ್ಳುವುದು ಸುಲಭದ ಮಾತು. ಕ್ರಮೇಣ ಗುಂಡಣ್ಣ ರಾಮಪ್ಪನೆದುರು—ಸಮಯ ಸಿಕ್ಕಾಗ—ತನ್ನ ಬಲೆಯನ್ನು ಬೀಸುತ್ತಿದ್ದ. ಅಂತಹದೊಂದು ಸಂದರ್ಭ ಬಂದಿತ್ತು. ಯಾವುದೋ ಕಾರಣಕ್ಕಾಗಿ ಒಂದು ಕುಸ್ತಿಯಲ್ಲಿ ಸಮ-ಬೆಸ ನಿರ್ಣಯ ಆಗದೆ ಹೋಯಿತು ಎಷ್ಟು ಮಾಡಿದರೂ ಎದುರಾಳಿಯನ್ನು ಬೆನ್ನಮೇಲೆ ಒಗೆಯುವುದು ರಾಮಪ್ಪನಿಗೆ ಶಕ್ಯವಾಗಿರಲಿಲ್ಲ. ಅಂತೂ ಅಂದು ಜೋಲುಮೋರೆಯಿಂದ ರಾಮಪ್ಪ ಗೆಳೆಯರೊಡನೆ ಮೌನವನ್ನು ತಳೆಯಬೇಕಾಯಿತು.

"ಅಲ್ರಿ-ಗವನೋರೆ-ಇದೇ ಹುಡುಗನ್ನ ಎಷ್ಟು ಸಲ ಉಳ್ಳಿಸಿ ಒಗೆದಾನ ರಾಮ!" ಎಂದ ಒಬ್ಬ.

"ಉಂ" ಎಂದು ದನಿ ಎಳೆದ ಗುಂಡಣ್ಣ, ವಿಚಾರದಲ್ಲಿ ತೊಡಕಿ

ದವರಂತೆ.

"ಅಂದ್ರ ಹೀಂಗ್ಯಾಕಾಯ್ತೀವತ್ತ?" ಎಂದು ಇನ್ನೊಬ್ಬ ಕೇಳಿದ.

ರಾಮಪ್ಪನಿಗೆ ಕಳವಳ. ಆದರೆ, ಪಾಪ!, ಮಾಡುವನೇನು ? ಕೇಳುತ್ತ ಕುಳಿತಿದ್ದಾನೆ.

"ಹುಂ" ಎಂದ ಗುಂಡಣ್ಣ.

ಅವನು ಉಸಿರೆಳೆದ ರೀತಿಯಲ್ಲಿ ಅಧಿಕಾರವಿತ್ತು, ವಿಶೇಷವಾದ ಒಂದು ಅರ್ಥವೂ ಇದ್ದಿತು. 'ನನಗ್ಗೊತ್ತು, ಆದರೆ ನಾನು ಹೇಳೋದಿಲ್ಲ' ಎಂಬುದನ್ನು ಆ 'ಹುಂ'ಕಾರವು ಸಾರುತ್ತಿತ್ತು.

ಆಗಿನ ಮಾತು ಹಾಗೂ ಹೀಗೂ ಅಲ್ಲಿಗೇ ಮುಗಿಯಿತು. ಮಿಕ್ಕವರ ಎದುರು ಹೇಳುವುದು ಬುದ್ಧಿವಂತಿಕೆಯಲ್ಲ ಎಂದು ಗುಂಡಣ್ಣ ಸರಿಯಾಗಿ ಎಣಿಕೆ ಹಾಕಿದ್ದ. ಇದಲ್ಲದೆ ತಾನು ಹಾಗೆ ದನಿಯನ್ನು ಎಳೆದದ್ದಕ್ಕಾಗಿ ರಾಮಪ್ಪನ ಕುತೂಹಲ ಕೆರಳಿ ಆತ ಇಂದಿಲ್ಲ ನಾಳೆ ಕೇಳಿಯೆ ಕೇಳುವನೆಂಬ ಭರವಸೆಯೂ ಗುಂಡಣ್ಣನಿಗಿತ್ತು. ಮುಂದೆ ಎರಡೇ ದಿನಗಳಲ್ಲಿ ಅಂತಹ ಸಂದರ್ಭ ಒದಗಿತು. ರಾಮಪ್ಪ-ಗುಂಡಣ್ಣ ಇಬ್ಬರೇ ಕುಳಿತಿದ್ದರು. ಆಗ ಹಾಗೂ ಹೀಗೂ ಸುತ್ತರಿದು ರಾಮಪ್ಪನೆ ಕೇಳಿದ :

"ಗುಂಡಣ್ಣೋರ, ಆವೊತ್ತು ಕುಸ್ತಿ ನನು-ಬಿಸ ಆಗವಾಗ ನೀವೇನೋ ಅಂದಿದ್ದಿರಲ್ಲ ?"

"ನಾನು ? ನಾ ಏನೂ ಅಂದಿರಲಿಲ್ಲ !"

"ಅಲ್ಲ–ಅಂದ್ರ–ಈ ಮಾತಿನ ಮ್ಯಾಗಿಂದ ಅನ್ನಿಸಿತು, ನಿಮ್ಮ ಮನಸಿನಾಗ ಏನೋ ಹೇಳೋದೈತಿ–ಅಂತ."

"ಇರಲಿ ಬಿಡೊ !"

"ಅಧ್ಯಾಂಗ್ರಿ, ಅಪ್ಪ ? ನನ್ನ ಮುಂದ ತಂದವರು ನೀವು."

"ಅಂದ್ರ ? ಅದಕೇನು ಉಪಕಾರ ಹಚ್ಚಿಗೋತಿ ಏನು ? ಏನೊ –ನಮ್ಮೂರ ಹುಡುಗ, ಊರ ಹೆಸರ ಮುಂದ ಬರೋದು ಅಂತ—"

"ಹೌದ್ರಿ, ಗವನೋರೆ. ನಾನೂ ಅದ್ನೇ ಅಂತೀನ್ರಿ, ಮತ್ತ ಮೊನ್ನೆ ಆಥಾಂಗ ಕುಸ್ತಿಯ ನಿಕಾಲೆ ಆಗಾಕ ಹತ್ತಿದರ ಊರ ಹೆಸರ ಏನ್ಮುಂದ ಬರ್ತೇತಿ?"

"ಹೋಗಲಿ, ಬಿಡೊ! ಏನೊ, ಒಮ್ಮೆ ಆಯ್ತು. ಮನುಷ್ಯ ಅಂದ ಮಾತಿಗೆ ಒಮ್ಮೊಮ್ಮೆ ಜೋಲಿ ಹೋಗೋದೆ?"

"ಆದರ ಯಾಕ ಜೋಲಿ ಹೋಗಬೇಕ್ರಿ?"

ತನ್ನ ಮಾತಿನ ಚಮತ್ಕೃತಿ ರಾಮುಪ್ಪನಿಗೆ ತಿಳಿದಿರಲಿಲ್ಲವೆಂದು ಕಂಡು ಗುಂಡಣ್ಣ ಹಿರಿತನದ ನಗೆಯಿಂದ ರಾಮುಪ್ಪನನ್ನು ದಿಟ್ಟಿಸಿದ.

"ಯಾಕ ಜೋಲಿ ಹೋಗಬೇಕು – ಅಂತೀಯಾ? ಹಹ! ನನಗೇನು ಕೇಳತೀ? ಹಹ! ನನಗೇನು ಮದುವೆ ಆಗಿದೆಯೆ? ಹಹಹ!"

ರಾಮುಪ್ಪನಿಗೆ ಗುಂಡಣ್ಣನ ನಗೆಯಿಂದ ಒಂದು ಕ್ಷಣ ಏನೂ ಅರ್ಥವಾಗದಂತಾಯಿತು. ಕ್ರಮೇಣ ನಗೆಯ ರೀತಿ, ಅನುಗುಣವಾದ ಹಾವಭಾವ — ಇವುಗಳಿಂದ ಗುಂಡಣ್ಣನು ಯಾವ ಸಂದರ್ಭವನ್ನು ಕುರಿತು ಮಾತನಾಡುತ್ತಾನೆ ಎಂಬುದು ತಿಳಿಯಿತು. ರಾಮುಪ್ಪ ನೊಂದುಕೊಂಡ. ಅಂಗಲಾಚಿ ಬೇಡುವವನಂತಹನ ದನಿಯಲ್ಲಿ ಹೇಳಿದ:

"ಗುಂಡಣ್ಣೋರ, ಗವ್ನೋರ, ಇಂಥಾದ್ದರಾಗ ನಿಮ್ಮುಂದ ಸುಳ್ಳು ಹೇಳ್ತೀನಿರಾ? ಉಣಿಸಿ ಬೆಳಸೋ ತಂದೆ ಅಥಾಂಗ ಅದೀರಿ, ನಿಂಪಾದ ಮುಟ್ಟಿ ಹೇಳ್ತೀನಿ ಚೆನ್ನೀದು ನೆರಳು ಸಹಿತ ಮುಟ್ಟಿಲ್ಲರಿ ಧಣೀರ, ನೀವು ನನ್ನ ದ್ಯಾವ್ರು ಅಥಾಂಗ—"

ರಾಮುಪ್ಪನ ಮುಗ್ಧ ಸ್ವಭಾವ, ಸರಲ ಹೃದಯ, ಅಚಲ ವಿಶ್ವಾಸ ಇವುಗಳನ್ನು ಕಂಡು ಗುಂಡಣ್ಣನಿಗೆ ಒಂದು ಕ್ಷಣ ಪಶ್ಚಾತ್ತಾಪ ವಾದಂತಾಯಿತು. ಆದರೇನು? ಸಮಯ ಸಿಕ್ಕಿದೆ, ಮತ್ತೊಮ್ಮೆ ಸಿಗಲಿಕ್ಕಿಲ್ಲ, ಈಗಲೇ ಮುಗಿಸಿಬಿಡೋಣ — ಎಂಬ ನಿರ್ಧಾರದಿಂದ

ಗುಂಡಣ್ಣ ಹೇಳಿದ:

"ನೋಡು, ರಾಮಿ, ನಾ ಹೇಳಿದೆನಲ್ಲ! ಸತ್ತಿಲ್ಲ, ಸ್ವರ್ಗ ಕಂಡಿಲ್ಲ ನಾ. ಅಂ? ಮದುವೆ ಆದವ ನೀನು. ಆದರೆ ಹೆಂಗಸರ ಸಂಬಂಧ ಅದೊಂದೇ ತರ ಅಲ್ಲ ಅಂತ—ಗೊತ್ತಿದ್ದವರು—ಹೇಳ್ತಾರ. ನನಗ್ಗೊತ್ತಿಲ್ಲ. ಅಂದೆನಲ್ಲ? ಬರೇ ಹೆಂಗಸರು ಕಣ್ಮಿಂದ ಸುಳಿ ದಾಡಿದರ ಒಳಗಿಂದೊಳಗೇ ಗಂಡಸಿನ ಮ್ಯಾಲೆ ಪರಿಣಾಮ ಆಗ್ತದ ಅಂತಾರ—"

ರಾಮಪ್ಪ ಕೆಳದುಟಿಯನ್ನು ಮೇಲಿನ ಹಲ್ಲುಗಳಿಂದ ಸವರುತ್ತ, ಹೆದರುತ್ತ ಹೆದರುತ್ತ ಕೇಳಿದ:

"ಅಂದ್ರ—ಏನ್ ಮಾಡಾಕಬೇಕು ಅಂತೀರಿ, ಧಣೇರ?" ಗುಂಡಣ್ಣ ನಕ್ಕ.

"ಒಳ್ಳೇ ಅನುಭವಿಕ ಅಂತ ನನಗ ಕೇಳ್ತಾನ! ಹಹ!"

"ಅಲ್ರಿ, ಗವ್ಡೇರ, ಮುಂದಿನ ಜಾತ್ರಿ ತಕ ಚೆನ್ನೀನ್ನ ತವರಮನೀಗೆ ಕಳಿಸಿಕೊಡಲೇನ್ರಿ?" ಗಣಪತಿ ಮಾಡಲು ಹೋದಾಗ ಮಂಗನ ಮೂರುತಿಗೊಳ್ಳುವುದಲ್ಲ ಎಂದು ಗುಂಡಣ್ಣ ಗಾಬರಿಗೊಂಡ.

"ಛೆ! ಛೆ! ಹುಚ್ಚಿದ್ದೀ ಏನು? ನನ್ನಂಥಾ ಹುಡುಗನ ಮಾತು ಕೇಳಿ ಏನಾರೆ ಮಾಡಬ್ಯಾಡ. ಮತ್ತು ಮಂದೀವಳಗೂ ಗುಜುಗುಜು ಸುರುವಾದೀತು" ಎಂದ.

"ಆದರ ಏನಾದ್ರೂ ಮಾಡಾಕೇ ಬೇಕ್ರಿ, ಗವ್ಡೇರ" ಎಂದು ಹಟಸಾರಿ ಹುಡುಗನಂತೆ ಹೇಳಿದ.

"ಏನ್ಬೇಕಾದ್ದನ್ನ ಮಾಡು. ಆದರೆ ಹರೆಯದ ಹೆಂಡತಿನ್ನ ತವರ್ಮನೀಗೆ ಕಳಿಸ್ಯಾನ–ಅಂತ ಮಂದಿ ಇಲ್ಲದ ಸುದ್ದಿ ಎಬ್ಬಿಸೋದು ಬ್ಯಾಡ."

ರಾಮಪ್ಪನಿಗೆ ವಿಚಾರ ಹೊಳೆಯಲೊಲ್ಲದು, ಹಟ ಮಾತ್ರ ಬಿಡಲೊಲ್ಲದು.

"ಆದ್ರೂ ಏನಾರೇ ಮಾಡಾಕೇ ಬೇಕ್ರಿ, ಧಣೀರ–ಮಾಡಾಕೇ ಬೇಕು."

ಗುಂಡಣ್ಣ ವಿಚಾರ ಮಾಡುವವನಂತೆ ನಟಿಸಿದ. 'ಹಾಂ–ಹುಂ' ಎಂದುಕೊಂಡ. ಕಡೆಗೆ ದೀರ್ಘವಾಗಿ ಉಸಿರನ್ನೆಳೆದು ಹೇಳಿದ :

"ಇಲ್ಲಿ ನೋಡು, ರಾಮೂ. ನನಗ ಒಂದ್ವಿಚಾರ ಬಂದಿದೆ. ನಿನ್ಹೆಂಡ್ತಿ ಮನ್ಯಾಗೇ ಇರ್ಲಿ. ನೀನೂ ಹೋಗ್ತಾ ಬರ್ತಾ ಇಲ್ಲಿಯೆ ಇರುವೆ ಅಂತ ಜನ ತಿಳಿದುಕೊಳ್ಳಲಿ ; ಆದರೆ ನಿನಗ ಒಪ್ಪಿಗೆ ಇದ್ದರ, ನೀ ಮಾತ್ರ ತಿಂಗಳೆರಡು ತಿಂಗಳು ಈ ಕಡೆ ನೆರಳು ಕೆಡವಬ್ಯಾಡ ಅಂ ?.. .ಆದರೆ—?.... ಇದೂ—" ಏನೊ ಹೊಳೆದಂತಾಗಿ ಗುಂಡಣ್ಣ ನಿರಾಶೆಯನ್ನು ಸೂಚಿಸುವಂತ ತಲೆಯನ್ನಲ್ಲಾಡಿಸಿದ.

ರಾಮಪ್ಪನಿಗೆ ಗಾಬರಿ, ಏನೊ – ಏನೊ – ಎಂದು

"ಯಾಕರಿ, ಗವ್ನೋರೆ, ಮತ್ತೇನು ?"

"ಅದ್ಕೇ ಹೇಳಿದೆನಲ್ಲೊ, ಸತ್ತಿಲ್ಲ ಸ್ವರ್ಗ ಕಂಡಿಲ್ಲ ಅಂತ ? ಅಂ ? ನಮ್ಮಿಷ್ಟಕ್ಕ ನಾವು ಇಲ್ಲಿ ಕುಳಿತು ಹಾಂಗ್ಮಾಡಬೇಕು, ಹೀಂಗ್ಮಾಡಬೇಕು ಅಂತೀವಿ. ಆದರೆ–ನಿನ್ನ ಹೆಂಡತಿಗೆ ಯಾರು ಸಮಾಧಾನ ಹೇಳಬೇಕು ? ಇಲ್ಲಾ ಅಂದ್ರ, ನೀ ಆಕೆಗೊಮ್ಮೆ ಭೆಟ್ಟಿಯಾದ ಮ್ಯಾಲೇ ಹೋದೀಯಂತ."

"ಛೆ–ಛೆ !" ಎಂದು ಚೇಳುಕಡಿದವರಂತೆ ರಾಮಪ್ಪ ಎದ್ದ.

"ಅಪ್ಪಾ ಅವರ, ನಾ ಆಕೆಗೆ ಭೆಟ್ಟಿಯಾಗೋದೇ ಬ್ಯಾಡ್ರಿ—"

"ಅಲ್ಲೊ—ತಿಳಿಸಿ ಹೇಳಲ್ಲ ಆಕೆಗೆ ? ಇನ್ನೊಬ್ಬರ ಮಾತು ಕೇಳ್ತಾಳ ಆಕೆ ?"

"ಎಂಥಾ ಮಾತರಿ, ಗವ್ನೋರ ? ನೀವು ಹೇಳಿದರ ಅದರ ಅಪ್ಪ ಕೇಳ್ಯಾನು, ಅಡ್ಡಬಿದ್ದು ಕೇಳ್ಯಾನು—ಅಂದ್ನಿ. ಅದೀಟ ಉಪಕಾರಾ ಮಾಡಿದರ—"

"ಆಗಲೆಪಾ. ಹನುಮಪ್ಪನ ಊರ ಹೊರಗ ಯಾಕ

ಇಟ್ಟಿರತಾರ ಈಗ ನನಗ ತಿಳೀತು ನೋಡು. ಅಂ ? ಹಪ ! ತನಗ ಮದಿವಿ ಇಲ್ಲ, ಮದಿವಿ ಆದವರ ನಡುವೆ ಬರೋದನ್ನ ಬಿಡೋದಿಲ್ಲ ! ಆಂ ? ಹಹಹ !"

ಅಂತೂ ಮುಂದಿನ ದಾರಿ ಸುಗಮವಾಯಿತು ಎಂದು ಗುಂಡಣ್ಣ ತಿಳಿದುಕೊಂಡ. ಸುಗಮವಾಗಬಹುದಿತ್ತು, ಆದರೆ ಅಷ್ಟರಲ್ಲಿಯೆ ಎರಡು ಸಂಗತಿಗಳು ನಡೆದುವು. ಒಂದು: ಗಂಗಿ ತನಗೆ ಗರ್ಭ ನಿಂತಿದೆ ಎಂದು ಗುಂಡಣ್ಣನ ಎದುರು ಸಾರಿದಳು.

ಇನ್ನೊಂದು, ಹೋದಂತೆಯೆ — ಅಕಸ್ಮಾತ್ತಾಗಿ ಕಾಳ್ಯಾ ತಿರುಗಿ ಬಂದು ಬಿಟ್ಟ. ಅದೆಲ್ಲಿಯೊ 'ಮೆಸೊಪೊಟೊಮಿ'ಗೆ ಹೋಗಿದ್ದನಂತೆ.

೬

ರಘುನಾಥರಾಯರ ಸಂಸಾರಸಾಗರದಲ್ಲಿ ಬಿರುಗಾಳಿ ಎದ್ದಿತು, ಅವರ ಜೀವನನೌಕೆ ಹೊಯ್ದಾಟಕ್ಕೆ ಸಿಕ್ಕಿತು, ಗಾಳಿಯೊಡನೆ ಹೋರಾಡಿ ಹೊಯ್ದಾಟಕ್ಕೆ ಹಣ್ಣಾಗಿ ಕೊನೆಗೆ ಬಂಡೆಗಲ್ಲಿಗೆ ಅಪ್ಪಳಿಸಿತು. ನೌಕೆ ಚೂರು ಚೂರಾಗಿ ಹೋಗಿ ರಾಯರು ನಡುನೀರಿನಲ್ಲಿ ನಿರಾಧಾರರಾಗಿ ಬಿದ್ದಂತಾಯಿತು. ಸಾಯುವುದು ಬೇಕು, ಇದು ಬೇಡ ಎನ್ನಿಸಿತು. ಎಂತಹ ಆಘಾತ! ಸರಸ್ವತಿ-ಹೇಳಿದ್ದು ನಿಜವಿರಬಹುದೆ ? ಸುಬ್ಬಿಗೆ ನಾನಾದರೂ ಕೇಳಲಿಯಾ—ಎಂದುಕೊಂಡರು. ಛಿ! ತಾನು ಆ ಕೂಸನ್ನು ಇಂತಹ ವಿಷಯ ಮಾತನಾಡಿಸುವುದು ಹೇಗೆ ? ಎಂತಹ ವಿಪರೀತಕಾಲ ! ಈ ಅವಸ್ಥೆಯನ್ನು ಕಣ್ಣಾರೆ ನೋಡುವುದಕ್ಕೆ ಜೀವ ದಿಂದಿರಬೇಕೆ ? ಊರೆಲ್ಲ ಸುದ್ದಿ ಹರಡಿದ್ದರೆ ? ಥೂ ! ಇದೆಲ್ಲ ಸರಸ್ವತಿಯ ಹುಚ್ಚುತನ. ನಾನು ಎಂದೋ ಹೇಳಿದ್ದೆ ಆಕೆಗೆ—ಮದುವೆ ಯನ್ನು ಮಾಡಿಬಿಡೋಣ–ಎಂದು ? ಈಗ ? ಅದೇ ಸರಸ್ವತಿಯೆ ತನಗೆ ಎದುರು ನಿಲ್ಲಬಹುದೆ ?

* * *

ಸರಸ್ವತಿಯ ದೃಷ್ಟಿಯಿಂದ ಹೇಳುವುದಾದರೆ ಅಣ್ಣನ ಹೆದರಿಕೆಗೆ ಕಾರಣವೇ ಇದ್ದಿರಲಿಲ್ಲ, ಸರಸ್ವತಿಯು ಸಿಟ್ಟಿಗೆ ಬಂದಿದ್ದಳು, ಕೂಗಾಡಿ

ದಳು, ಚೀರಿದಳು, ಹಣೆಹಣೆ ಬಡಿದುಕೊಂಡಳು, ಸುಬ್ಬಿಯ ಕೆನ್ನೆಗೆ ಒಂದು ಏಟನ್ನು ಕೂಡ ಕೊಟ್ಟಳು. ನಿಜ. ಮಿಕ್ಕವರು ಇದನ್ನು ಕಣ್ಮುಟ್ಟ ನೋಡಿದರು ಕೂಡ. ಆದರೆ ಯಾರೂ ನೋಡದ ಇನ್ನೊಂದು ಸಂಗತಿ ನಡೆದಿತ್ತು. ಅದೆಂದರೆ ಎಲ್ಲ ರಂಭಾಟ ಮುಗಿದು, ಗದ್ದಲ ಶಾಂತವಾಗಿ ಸರಸ್ವತಿ ಒಬ್ಬಳೇ ಕುಳಿತಾಗ ನಡೆದ ಸಂಗತಿ. ಆ ಸಂಗತಿ–ಎಂದರೇ ಸರಸ್ವತಿಯು ಕದ್ದು ಅತ್ತಿತ್ತ ನೋಡಿ ಒಮ್ಮೆಲೆ ನಕ್ಕಿದ್ದಳು, ತನ್ನ ವಿಚಾರಕ್ಕೆ ತಾನೇ ನಾಚಿಕೊಂಡಂತಾಗಿ ಕೊನೆಗೆ ಸೆರಗಿನ ತುದಿಯನ್ನು ಮುದ್ದೆಯಾಗಿ ಬಾಯಲ್ಲಿರಿಸಿ ನಗೆಯ ಸದ್ದನ್ನು ಅಡಗಿಸಲು ಯತ್ನಿಸಿದ್ದಳು.

ಸರಸ್ವತಿಗೆ ಒಟ್ಟಿನ ಮೇಲೆ ಮೋಜು ಎನ್ನಿಸಿತ್ತು. ಮೊನ್ನೆ ಮೊನ್ನಿನ ಹುಡುಗ, ಗುಂಡ್ಯಾ, 'ಇಷ್ಟು ಪಟಾನೆ ದೊಡ್ಡವ ಆದನಲ್ಲ ?' ಎಂದು ಸರಸ್ವತಿಗೆ ಮೋಜು. ನಡೆದದ್ದೆಲ್ಲ ನಿಜ ಎಂಬುದರ ಬಗ್ಗೆ ಸರಸ್ವತಿಗೆ ಸಂದೇಹವೇ ಇರಲಿಲ್ಲ, 'ಅದ್ಯಾಕ ? ಸುಬ್ಬಿ ಅಪ್ಪಗೂ ೧೮ ವರ್ಷೇ ಆಗಿದ್ದವು ಸುಬ್ಬಿ ಆದಾಗ' ಎಂದು ನೆನೆದುಕೊಂಡಳು. ಆದರೆ ಸರಸ್ವತಿಗೆ ಒಂದೇ ಖೇದ, ಗುಂಡಣ್ಣನ ಗಂಡು ಮುಂಗತನ ಗಂಗಿಯಂಥಾ ಹೊಲತಿಯಲ್ಲಿ ನಡೆಯಿತಲ್ಲ–ಎಂದು. ಎಂಥಾ ಹುಚ್ಚಿ ಸುಬ್ಬಿ ! ಅಕಸ್ಮಾತ್ ತಾ ನೋಡಿದ್ದಿಲ್ಲ ಅಂದ್ರ ಹೇಳತಿದ್ದಳೊ ಇಲ್ಲೊ? ಗುಂಡ್ಯಾ ಆದ್ರೂ ಎಂಥಾ ಲುಚ್ಚಾ ! ಹುಚ್ಚ ಸುಬ್ಬಿ ಕಡಿಂದ ಕೆಲಸ ಮಾಡಿಸಿಕೊಂಡ ! ತನಗಾದರೂ ತಿಳಿದದ್ದು ಎಂಥಾ ಅಕಸ್ಮಾತ್ತಾಗಿ ! ೩–೪ ದಿನ ಸುಬ್ಬಿ ಏನೇನೇನೊ ತಿನ್ನಲಿಕ್ಕೆ ಮಾಡಿಕೋತಿದ್ದಳು. ಹೋಗಲಿ, ಮಾಡಲಿಕ್ಕೂ ಕಲಿಧಾಂಗ ಆಯ್ತು, ಹುಡುಗಿ ತಿಂಧಾಂಗೂ ಆಯ್ತು ಅಂತ ತಾನೂ ಸುಮ್ಮನೆ ಇದ್ದಳು. ಆ ಹೊತ್ತೇನೊ–ಇನ್ನೂ ಸುಬ್ಬಿ ಮಾಡ್ತಾ ಇದ್ದಾಳ ಪದಾರ್ಥ ಅನ್ನೋವಾಗ ಅಕಸ್ಮಾತ್ ತಾನು ಒಳಗೆ ಹೋದದ್ದು. ನೋಡಿದರ ಎಲ್ಲಾ ಸ್ವಚ್ಛ ! "ಅಯ್ಯ, ಇದೇನೆ, ಸುಬ್ಬಿ—ಇಷ್ಟರಾಗೇ ತಿಂದೂ ಬಿಟ್ಟೆ ಏನು" ಅಂತ ಕೇಳಿದಳು ಸುಬ್ಬಿ

ಮೋಲಿ-ಹುಚ್ಚಿಟ್ಹಾಂಗೇ ಆಯ್ತು. "ನಾ ಒಂದು ತಿನ್ನೋದಿಲ್ಲ; ಆ ಗುಂಡ್ಯಾಗಾದ್ರೂ ಕೊಡ್ತೀಯೊ? ಏನು ಒಬ್ಬಾಕೀನೇ ಬತ್ಕರಿ ಸತೀಯೋ?" ಎಂದು ಕೇಳಿದಳು ಮಗಳನ್ನು. ಸುಬ್ಬಿ ಗಾಬರಿಗೊಂಡಂತಾಗಿ ಸುಮ್ಮನೆ ನಿಂತಿದ್ದಳು. "ಅಲ್ಲ—ನಾಳೆ ಅತ್ತೆಯ ಮನೆಗೆ ಹೋಗೋ ಹುಡುಗಿ, ಹೀಂಗ ಬಕಾಸುರನ್ಹಾಂಗ ಮಾಡಬಾರದು ಅಂತೀನಿ" ಅನ್ನೋದೊಂದೇ ತಡ ಸುಬ್ಬಿ ಒಮ್ಮೆಲೆ ದನೀನೇ ತೆಗೀಬೇಕ?

ಆಗ ಸರಸ್ವತಿ-ಮಗಳನ್ನು ಕೆಣಕಿ-ಕೇಳಿದಳು. ಕೊನೆಗೆ ಸುಬ್ಬಿ ಹೇಳಿದಳು, "ತಿನ್ನಲು ಮಾಡುವುದೆಲ್ಲ ತನಗಲ್ಲ, ಗುಂಡಣ್ಣನಿಗಾಗಿ ಅಲ್ಲ—ಆದರೆ—ಆದರೆ—ಆ ಈಕೇ ಸಲುವಾಗಿ" ಅಂತ.

"ಈಕೆ ಯಾರು? ಏನ್ಮಾತಾಡ್ತೀಯೆ?" ಸರಸ್ವತಿ-ಸಿಟ್ಟಿನಿಂದ ಕೇಳಿದಳು.

ಸುಬ್ಬಿ ಮತ್ತೆ ಬಿಕ್ಕಿದಳು.

ಆಗ ಸರಸ್ವತಿ-ಮಗಳ ಕೆನ್ನೆಗೆ ಒಂದೇಟನ್ನು ಬಿಗಿದದ್ದು.

ಹೊಡೆದ ಮರುಗಳಿಗೆಯಲ್ಲಿ ಹಾಗೆ ಮಾಡಬಾರದಾಗಿತ್ತು ಎಂದೆನಿಸಿದರೂ ಆ ಏಟಿನ ಹೆದರಿಕೆಯಿಂದಲೆ ಸುಬ್ಬಿ ಎಲ್ಲವನ್ನೂ ಹೇಳಿದಳು.

ಗಂಗಿಗೆ ಬಯಕೆಯಾಗಿದೆಯಂತೆ!

ಸರಸ್ವತಿ-ಕಲ್ಲುಬೊಂಬೆಯಂತೆ ನಿಂತಳು.

"ಏನ್ಮಾತಾಡ್ತೀಯೋ ಹುಚ್ಚ ಭೋಸಡಿ?" ಎಂದು ಕಿರುಚಿದಳು ತಾಯಿ

"ನೀ ಮಾತಿಗೊಮ್ಮೆ ನನ್ನ ಮ್ಯಾಲೆ ಒದರಬ್ಯಾಡ. ಗಂಗಿ ಹೆಂಗಸಿದ್ದಾಳ, ಬಯಕೆ ಆಗಬಾರ್ದೇನು ಆಕೆಗೆ?" ಎಂದು ಚೀರುತ್ತ, ಇನ್ನು ನಿಂತರೆ ಮತ್ತೆ ಅಳು ಇಲ್ಲವೆ ಏಟು ಬರುವುದೆಂದು ಸುಬ್ಬಿ ಬಿರಿಬಿರಿ ನಡೆದು ಹೋದಳು.

ಸರಸ್ವತಿ-ಹಣೆಹಣೆ ಗಟ್ಟಿಸಿಕೊಂಡಳು.

ಗಂಗಿಗೆ ಬಯಕೆ !
ಕಾಶ್ಯಾ ಊರಲ್ಲಿಲ್ಲ !

* * *

ಸರಸ್ವತಿಗೆ ಗುಂಡಣ್ಣನ ಬಗ್ಗೆ ಒಳಿತು ಕೆಟ್ಟುದು ಎಂಬ ವಿಚಾರವೆ ಇರಲಿಲ್ಲ. ಗಂಡಸು, ಎಲ್ಲ ಗಂಡಸರ ಹಣೆಬರೆಹವೆ ಗುಂಡಣ್ಣನದು, ಇದಲ್ಲದೆ ಹೊಲತಿಯ ಮೇಲೆ ಬ್ರಾಹ್ಮಣನ ಅಧಿಕಾರವಿದೆ ಗುಂಡಣ್ಣನ ಬಗ್ಗೆ ಆಕೆಗೆ ವಿಚಾರವೆ ಇದ್ದಿರಲಿಲ್ಲ. ವಿಚಾರವೆಲ್ಲ ಅಣ್ಣನ ಸಲುವಾಗಿ. ಪಾಪ ! ಚಿಕ್ಕವನಿದ್ದಾಗ ಪರಸ್ಯಾ ನೊಡನೆ ಆಡಿದ್ದಕ್ಕೆ ಎಷ್ಟೊಂದು ಕುರು–ಪಾಂಡವ ಆಗಿತ್ತು. ಈಗ ಅದೇ ಅಣ್ಣನೇ ಎಂತಹ ಪ್ರಸಂಗವನ್ನು ಕಣ್ಮುಟ್ಟ ನೋಡಬೇಕಾಯಿತಲ್ಲ ? ಅದೇನೆ ಇರಲಿ, ಇನ್ನು ತಡಮಾಡಿ ಉಪಯೋಗವಿಲ್ಲ. ಗುಂಡ್ಯಾನ ಮದುವೆ ಆಗಲೇಬೇಕು, ಅದೂ ಸುಬ್ಬಿಯ ಕೂಡವೆ ಆಗಬೇಕು. ‘ನಮ್ಮ ಜೀವಮಾನದೊಳಗಾದರೂ ಹೊಲೆಯ-ಹನ್ನೆರಡು ಜಾತಿ ಒಂದಾಗೋದು ಬ್ಯಾಡ’ ಎಂದಳು.

ರಘುನಾಥರಾಯರಿಗೆ ಆ ಭರವಸೆಯೆ ಇದ್ದಿರಲಿಲ್ಲ. ಒಟ್ಟ ಈ ಸುದ್ದಿಯನ್ನು ಕೇಳಿ ಅವರ ಜಗತ್ತೇ ಕಳಚಿ-ಬಿದ್ದಂತಾಗಿತ್ತು. ತಮ್ಮ ಚಿಕ್ಕತನದಲ್ಲಿ ಹುಡುಗರಾಟ ಎನ್ನಿಸಿತ್ತು. ಈಗ ಗಂಗಿ ಗುಂಡಣ್ಣನದೂ ಹುಡುಗರಾಟ ಎನ್ನಬಹುದೆ ? ಹುಡುಗ–ಹುಡುಗರಲ್ಲಿ ಜಾತಿ ಇಲ್ಲ, ಗಂಡುಹೆಣ್ಣುಗಳ ನಡುವೆ ಜಾತಿ ಇಲ್ಲ ! ಎಂತಹ ಮಾತು ! ಇದುವರೆಗೂ ಅವರಿಗೆ ತಿಳಿದಿರಲಿಲ್ಲ. ಹೀಗಿದ್ದರೆ ತಮ್ಮ ಜೀವಮಾನದೊಳಗೆ ಹೀಗೇ ಆದೀತೆಂಬ ಭರವಸೆ ಎಲ್ಲಿ ?

ರಾಯರಿಗೆ ಹೆಚ್ಚಿನ ವಿಷಾದದ ಮಾತೆಂದರೆ ಕುಲದ ಮಾನ ಮರ್ಯಾದೆಯ ಪ್ರಶ್ನೆ. ಇಂದಿನವರೆಗೆ ಊರಿನವರೆಲ್ಲರೂ ತಮ್ಮ ಮನೆಯ ರೀತಿ–ನೀತಿಗಳಿಗಾಗಿ ಆದರವನ್ನು ತಳೆದಿದ್ದರು. ಇನ್ನು ಮುಂದೆ ? ಸಂಪ್ರದಾಯವನ್ನು ನಡೆಸಿಕೊಂಡು ಬಂದವರು ರಘುನಾಥ

ರಾಯರು ಎಂದು ಎಲ್ಲರೂ ಅವರಿಗೆ ಗೌರವವನ್ನು ತೋರಿಸುತ್ತಿದ್ದರು. ಆದರೆ ಈಗ ?

ಮೊದಲು ಒಂದು ಕೆಲಸ ಅಗತ್ಯದ್ದು ಎಂದು ರಾಯರು ನಿರ್ಧಾರ ಮಾಡಿದರು. ಅದೆಂದರೆ ಗುಂಡಣ್ಣನ ಮದುವೆ. ಅದೂ ಸುಬ್ಬಿಯ ಕೂಡ.

ತಂದೆಯು ತನ್ನನ್ನು ಕರೆಯಿಸಿಕೊಂಡಾಗ ಗುಂಡಣ್ಣ ಲೆಕ್ಕ ಹಾಕಿದ್ದ, 'ಇನ್ನು ಇಲ್ಲಿಯ ಋಣಾನುಬಂಧ ಕಡಿಯಿತು' ಎಂದು. ತನ್ನ ರಹಸ್ಯವೆಲ್ಲ ಹೊರಬಿದ್ದಿದೆ ಎಂಬುದು ಅವನಿಗೆ ಗೊತ್ತಿತ್ತು. ಮನೆತನದ ಗೌರವದ ಪ್ರಶ್ನ ಅಡಕವಾದ್ದರಿಂದ ಯಾರೂ ಬಹಿರಂಗ ವಾಗಿ ಚರ್ಚಿಸುವುದಿಲ್ಲ ಎಂಬ ಧೈರ್ಯವೂ ಅವನಿಗಿದ್ದಿತು, ಅದ ಕಾಗಿಯೆ ಈಗ ತಂದೆ ಏಕಾಂತಸಮಯಕ್ಕೆ ಕರೆಸಿದ್ದಕ್ಕಾಗಿ ಅವನು ಹೆದರಿಕೊಂಡಿದ್ದ. ಕೇಳಿದರೆ ಏನು ಮಾಡಬೇಕು—ಎಂಬ ಯೋಚನೆ ಬಗೆ ಹರಿಯುವ ಮುಂಚಿತವೆ ತಂದೆಯ ಎದುರಿಗೆ ಬಂದು ನಿಂತಿದ್ದ.

ಇಬ್ಬರೂ ಒಬ್ಬರೊಬ್ಬರ ಪರಿಚಯವಿಲ್ಲದವರಂತೆ ಮುಖ ತಪ್ಪಿಸಿ ಅತ್ತಿತ್ತ ನೋಡಿದರು.

" ಕರೆದಿರಿ ಅಂತ " ಎಂದು ಗುಂಡಣ್ಣನ ಬಾಯಿಯಿಂದ ಬಂದೇ ಬಿಟ್ಟಿತು.

"ಕರೆಯೋದು ಅಂದ್ರ — ಹೀಂಗೇ ನುಳ್ಳೀ ಈ ಸರಸ್ವತೀದೇ ಅವಸರ" ಎಂದರು ರಾಯರು. ಸೋದರತ್ತೆಯ ಸಂದರ್ಭ ಬಂದೊಡನೆ ಗುಂಡಣ್ಣನ ಕಾಲ್ಗಳ ಶಕ್ತಿಯೆ ಉಡುಗಿತು. ಆಕೆಯ ಸೂಕ್ಷ್ಮ ನಿರೀಕ್ಷಣ ಶಕ್ತಿಗೆ ಆತ ಎಂದಿನಿಂದಲೂ ಹೆದರಿದ್ದ.

" ಎಲ್ಲಿ ಹೋಗಬೇಕಾಗೇದೇನು ?" ಎಂದು ಕೇಳಿದ. ಹೊರ ದೂಡುವವರಿದ್ದರೆ ಅವರ ಕೆಲಸವನ್ನು ಹಗುರಮಾಡಿದಂತಾಯಿತು ಎಂದುಕೊಂಡ.

" ಛೆ ! ಛೆ ! ಎಲ್ಲಿ ಹೋಗೋದು ? ಮನೆಯೊಳಗೇ. ಹಾಂಗ

ಕೇಳಿದರ ನಿನಗೇನು ಹೇಳಬೇಕಾಗಿಲ್ಲ—" ಅಧೈರ್ಯದ ನಗೆಯಿಂದ, "ಆದರೂ ಈಗಿನ ಹುಡುಗರ ರೀತೀನೇ ಬ್ಯಾರೇ ಆಗೇದ, ಅದಕ್ಕ ಹೇಳ್ತೇನಿ. ಆದಷ್ಟು ಬೇಗ ಸುಬ್ಬಿಯು ಕೂಡ ನಿನ್ನ ಮದುವೆ ಮಾಡಬೇಕು ಅಂತ—"

ಮಗ ಚಕಿತನಾಗಿ ಸೆಟೆದುದಕ್ಕೆ ರಾಯರು ತುಸು ಹೆದರಿ ಅವಸರದಿಂದಲೆ ಮುಂದೆ—ಸಾಗಿದರು:

" ಅಂದ್ರ - ಮನೀವಳಗಿದ್ದು ಮನೀವಳಗ - ಅಲ್ಲ ಅಂದ್ರ ಆಕೇಗೂ ಯಾರಿಲ್ಲ-ಅಂದ್ರ ನಿಂ ಸೋದರತ್ತೆಗೆ ಯಾರಿಲ್ಲ-ನೀವಿಬ್ಬರೂ ಕೂಡಿ ಆಡಿ ಬೆಳೆದವರ—ಅಂದ್ರ ನೀನೂ ಸುಬ್ಬಿ."

"ನಾನು ಏನೂ ಹೇಳೋದಿಲ್ಲ ಆದರೆ ನೀವು ಹೇಳಿದ ಹಾಂಗ ಸಂತೋಷದಿಂದ ನಡೆದುಕೋತೀನಿ."

"ಆಂ ?" ಎಂದು ರಾಯರು ಚಕಿತರಾಗಿ ಮಗನನ್ನು ನೋಡಿದರು. ತಂದೆಯನ್ನು ಎದುರಿಸಲಾರದೆ ಮಗ ಕೆಳಗೆ ಮುಖ ಮಾಡಿದ. ಒಂದು ಕ್ಷಣ ರಾಯರಿಗೆ ವಿಶ್ವಾಸವಾಗಲಿಲ್ಲ. ಆಮೇಲೆ ಎಲ್ಲ ಸಂದರ್ಭವೂ ನೆನಪಿಗೆ ಬಂದಿತು. ಮುಂದೆ ತಲೆ ತಗ್ಗಿಸಿ ನಿಂತ ಬೆಳೆದ ಮಗನನ್ನು ಮತ್ತೊಮ್ಮೆ ನೋಡಿದರು. ರಾಯರ ಮುಖದಲ್ಲಿ ಮುಗುಳ್ನಗೆ ಮೂಡಿತು. ಮಗ ಮೆಲ್ಲಗೆ ತಲೆ ಎತ್ತಲು ರಾಯರು ಮುಗುಳ್ನಗೆಯನ್ನು ಅಳಿಸಲು ಯತ್ನಿಸುವಂತೆ ತುಸು ಸಿಟ್ಟಿನ ದನಿಯಲ್ಲಿಯೆ ಹೇಳಿದರು:

"ಇರಲಿ ಹೋಗೊ ! ಬಹಾಳ ಬುದ್ಧಿವಂತ ಆಗೀದಿ !"

ಪಾರಾದೆ ಎಂಬ ಸಂತೋಷದಿಂದ ನೆಲಮುಟ್ಟದವನಂತೆ ಗುಂಡಣ್ಣ ಅಲ್ಲಿಂದ ಜಗಿದ ರಾಯರು ಮುಗುಳ್ನಗೆಯ ಮುಖದಿಂದಲೆ ಮಗನು ಹೋದುದನ್ನು ದಿಟ್ಟಿಸುತ್ತಿದ್ದರು.

ಏನು ನೆನಪಿಗೆ ಬಂದಿತೊ !

ಒಮ್ಮೆಲೆ ವಿಷಾದದಿಂದ ಉಸುರ್ಗರೆದು ತಲೆ ಜಾಡಿಸಿದರು.

* * *

ಮುಂದೆ ಸ್ವಲ್ಪ ದಿನಗಳಲ್ಲಿಯೆ ಸುಬ್ಬಿ-ಗುಂಡಣ್ಣರ ಮದುವೆಯಾಯಿತು.

ಊರಿಗೆ ಊರೇ ಊಟಕ್ಕೆ ಆಮಂತ್ರಿತವಾಗಿತ್ತು.

ಎಂದಿನಂತೆ ವರಸ್ಯಾನಿಗೆ ತಾಜಾ ಅಡಿಗೆಯನ್ನೆ-ಆದರೆ ಎಂಜಲೆಲೆಗಳಲ್ಲಿ-ಬಡಿಸಿದರು. ಕಾಳ್ಯಾ ಎಲೆಗಳನ್ನು ಒಯ್ಯಲು ಬಂದಿರಲಿಲ್ಲ, ಅಪೇಕ್ಷಿಸಿಯೂ ಬಂದಿರಲಿಲ್ಲ.

ಸುಬ್ಬಿಯೊಬ್ಬಳನ್ನು ಬಿಟ್ಟು ಗುಂಡಣ್ಣನ ಮದುವೆಯಿಂದ ಬೇರೆ ಯಾರಿಗೂ ಆನಂದವಾಗಿರಲಿಲ್ಲ. ವಿಶೇಷವಾಗಿ ಯಾರದಾದರೂ ಮನ ನೊಂದಿದ್ದರೆ ಅದು ಕಾಳ್ಯಾನದೆಂದು ಹೇಳಬಹುದು. ತಿರುಗಿ ಬಂದಂದಿನಿಂದ ಆತ ಮೊದಲಿನ ಕಾಳ್ಯಾ ಆಗಿರಲಿಲ್ಲ, ಒಳಗೂ ಹೊರಗೂ ಕೂಡಿಯೆ ಬದಲಾಯಿಸಿದ್ದ. ಎಂದಿನಿಂದಲೂ ರಾಯರನ್ನು ಇಲ್ಲವೆ ಚಿಕ್ಕ ಧಣಿಯರನ್ನು ಕಂಡಾಗ ನೆಲವನ್ನು ಮುಟ್ಟಿ, ಮಣ್ಣನ್ನು ಹಣೆಗೆ ಹಚ್ಚಿಕೊಂಡು ನಮಸ್ಕಾರ ಮಾಡುವುದು ವರಸ್ಯಾ ಮತ್ತು ಕಾಳ್ಯಾ ಇಬ್ಬರದೂ ರೂಢಿಯಾಗಿತ್ತು. ಆದರೆ ಈಗ ಕಾಳ್ಯಾ ಬಾಗುವುದೆ ಇಲ್ಲ ಎಂಬುದು ಅವನ ತಂದೆಗೆ ದುಃಖದ ಮಾತಾಗಿತ್ತು. ಅವರವರ ಕೆಲಸವನ್ನು ಅವರು ಮಾಡುವುದೆ ಅವರ ಪಾಲಿನ ಪುಣ್ಯ ಎಂದು ಬಗೆದ ವರಸ್ಯಾನಿಗೆ ತನ್ನ ಮಗ ಪರಂಪರಾಗತವಾಗಿ ಬಂದ ಸೇವಾಬುದ್ಧಿಯನ್ನು ತೋರಿಸುವದಿಲ್ಲವಲ್ಲ ಎಂದು ವಿಷಾದವಾಗಿತ್ತು. ಮೊದಲ ಸಲ ಕಾಳ್ಯಾನನ್ನು ನೋಡಿದಾಗ ರಾಯರೂ ಬೆರಗಾಗಿದ್ದರು; ಅವನ ವೇಷ, ಅವನ ಠೀವಿ, ಎಲ್ಲಕ್ಕೂ ಹೆಚ್ಚಾಗಿ ಅವನು ಬಾಗದೆ ಸೆಟೆದು ನಿಂತು ಕೈಯನ್ನು ಹಣೆಗೆ ಹಚ್ಚಿ-ನಮಸ್ಕರಿಸುವ ರೀತಿ, ಇದೆಲ್ಲ ರಾಯರಿಗೆ ಏನೊ-ಏನೊ ಎನ್ನಿಸಿತು.

“ಕಾಳ್ಯಾ ವಿಲಾಯತಿಗೆ ಹೋಗಿ ಎಷ್ಟು ಬದಲಾಗ್ಯಾನೊ !” ಎಂದು ರಾಯರು ನಗೆದನಿಯಲ್ಲಿಯೆ ನುಡಿದಿದ್ದರು.

“ಅಲ್ಲಿ ಯಲ್ಲಾರು ಹಿಂಗೇ ಇರ್ತಾರ್ರಿ.”

ಅಬ್ಬ ! ರಾಯರು ಅವಾಕ್ಕಾದರು. ತಮ್ಮ ದನಿಗೆ ಕಾಳ್ಯಾ ದನಿಗೂಡಿಸಿದ್ದಾನೆ ! ತಮ್ಮ ಮಾತಿಗೆ ಕಾಳ್ಯಾ ಉತ್ತರ ಕೊಟ್ಟಿದ್ದಾನೆ ! ಇಂತಹ ಘಟನೆ ಇಂದಿನವರೆಗೆ ನಡೆದಿಲ್ಲ. ತಮ್ಮ ಮಾತಿಗೆ ಇದಿರಾಗಿ ಯಾವ ಅಸ್ಪೃಶ್ಯನೂ ಮಾತನಾಡಿದ್ದಿಲ್ಲ. ಹೀಗೆ ಮಾಡುವುದು ತಪ್ಪು ಎಂದು ಈ ಹುಡುಗನಿಗೆ ಗೊತ್ತಿರಲಿಕ್ಕಿಲ್ಲವೆ ? ರಾಯರು ತುಸು ಅಧಿಕಾರದ ದನಿಯಲ್ಲಿಯೆ ಹೇಳಿದರು, "ಒಂದಿಷ್ಟು ಹಾದಿ ಬಿಟ್ಟು ನಿಲ್ಲೊ" ಎಂದು.

ಕಾಳ್ಯಾನಿಗೆ ಎಷ್ಟು ಆಶ್ಚರ್ಯವೊ ಅಷ್ಟೆ ವಿಷಾದವೂ ಆಯಿತು. ತಾನು ಎಲ್ಲಿಯವರೆಗೆ ಹೋಗಿ ಬಂದಿದ್ದಾನೆ, ಏನೇನು ಮಾಡಿದ್ದಾನೆ, ನೋಡಿದ್ದೇನು, ಅಲ್ಲಿಯ ಜನ ಹೇಗೆ ಎಂದು ಇದುವರೆಗೆ ಒಬ್ಬರೂ ಪ್ರಶ್ನಿಸಬಾರದೆ ? ಹೇಳಬೇಕೆಂದು ಕುತೂಹಲ ಹೆಚ್ಚಿದಾಗೊಮ್ಮೆ ಪ್ರತಿಯೊಬ್ಬನೂ "ದೂರ ಸರಿ" ಎಂದೇ ಎಚ್ಚರ ಕೊಡುವ ! ಎಂತಹ ವಿಚಿತ್ರವಿದು ! ತಾನು ಸೈನ್ಯದೊಡನೆ ಪರದೇಶಕ್ಕೆ ಹೋದಾಗ ಅಲ್ಲಿ ಯಾರೂ ತನ್ನನ್ನು "ದೂರ ಸರಿ" ಎಂದಿರಲಿಲ್ಲ. ಮೊದ ಮೊದಲಿಗೆ ತಾನೇ ಹೆದರಿ, ಮುದುರಿ ದೂರದೂರ ಇರುತ್ತಿದ್ದ. ಆದರೆ ಮಿಕ್ಕವರು ಬಂದು ಗೆಳೆತನದಿಂದ ಬೆನ್ನನ್ನು ಚಪ್ಪರಿಸಿದಾಗ ಮೊದಲು ಒಂದೆರಡು ಸಲ ನೆಲಕ್ಕೆ ಕುಸಿದಂತಾಗಿತ್ತು, ಅಷ್ಟು ಹೆದರಿಕೆ, ಇನ್ನೊಬ್ಬರನ್ನು ಮುಟ್ಟಿದೆನಲ್ಲ ಎಂದು. ಎಲ್ಲರೂ ತನ್ನೊಡನೆ ಬೆರೆತು ನಡೆದುಕೊಂಡಿದ್ದರಲ್ಲದೆ ಯಾರ ದೇಶದಲ್ಲಿಯೂ ಇಂತಹ ಮಡಿ-ಮೈಲಿಗೆ ಇದ್ದಿರಲಿಲ್ಲ ಎಂದು ಅವನು ತಿಳಿದುಕೊಂಡಿದ್ದ. ಇನ್ನೊಬ್ಬರನ್ನು ಕೇಳಿರಲಿಲ್ಲ ಮಾತ್ರ, ಹೇಗೆ ಕೇಳುವುದು ? "ನಿಮ್ಮನ್ನು ಮುಟ್ಟಿಸಿಕೊಳ್ಳುವರೆ ?" ಎಂದು ಕೇಳಿದರೆ ಅವರಿಗೆ ಅರ್ಥವಾದರೂ ಆಗಲಿಕ್ಕಿಲ್ಲ, ತನ್ನನ್ನು ಹುಚ್ಚ ಎಂದಾದರೂ ತಿಳಿದಾರು ಎಂದು ಸುಮ್ಮನಿದ್ದ.

ಕಾಳ್ಯಾನಿಗೆ ಕೆಲ ದಿನಗಳಲ್ಲಿ ಆ ವಿಚಾರವೆ ಮರೆತುಹೋಗಿತ್ತು. ತಾನೂ ಮಿಕ್ಕವರಿಗೆ ಸರಿಸಮಾನ ಎಂಬ ರೂಢಿ ಅವನಿಗಾಗುತ

ಲಿದ್ದಿತು. ಹಣವನ್ನೂ ಕೂಡಿಸಿಡತೊಡಗಿದ್ದ. ಯಾಕೆಂದು ಹೇಳಬೇಕೆ? ಅವನಿಗೊಂದು ಆಸೆ. ಒಂದು ಹೊಲವನ್ನು ಕೊಳ್ಳಬೇಕು, ಅದರಲ್ಲಿ ಧಾನ್ಯವನ್ನು ಬೆಳೆಯಬೇಕು ಆ ಧಾನ್ಯದಿಂದ ಮನೆಯಲ್ಲಿ ಬಿಸಿ ಅಡಿಗೆಯನ್ನು ಮಾಡಬೇಕು, ಒಮ್ಮೆಯಾದರೂ ಎಂಜಲ ಅನ್ನವನ್ನು ಬಿಟ್ಟು ಸ್ವಂತದ ಬಿಸಿ ಅಡಿಗೆಯನ್ನು ಉಣ್ಣಬೇಕು—ಎಂದು. ಸಾಕಷ್ಟು ದುಡ್ಡನ್ನು ಕೈಯಲ್ಲಿ ಕೂಡಿಸಿಕೊಂಡು ಉತ್ಸಾಹದಿಂದ ಬಂದರೆ ಇಲ್ಲೇನಿದೆ? ಮತ್ತೆ 'ಮುಟ್ಟಬೇಡ' ಎಂದರು, ತಾನು ಲಕ್ಷಾವಧಿ ಜನರನ್ನು ಮುಟ್ಟಿ ಬಂದಿದ್ದ; ಊರೊಳಗಿನ–ರಾಯರ ಮನೆಯ ಮುಂದಿನ–ಕಸ ಗುಡಿಸಬೇಕಾಗಿ ಬಂತು, ಇಷ್ಟು ದಿನ ತಾನೂ ಮಿಕ್ಕವರಂತೆಯೆ—ಎಂದುಕೊಂಡು ಬಂದಿದ್ದ; ಹೊಲವನ್ನು ಕೊಳ್ಳಬೇಕೆಂದರೆ ತನ್ನ ಕೈಯೊಳಗಿನ ಹಣವನ್ನಾದರೂ ಮುಟ್ಟುವರೊ ಇಲ್ಲವೊ ಎಂದು ಅಧೈರ್ಯವಾಯಿತು. ಇನ್ನು ತನ್ನನ್ನು ಎಲ್ಲರೂ ತುಚ್ಛ ಎಂದು ನೋಡುವರಲ್ಲ ಎಂದು ಸಂತಾಪವಾಯಿತು. ಆದರೆ ಮಾಡುವನೇನು? ಸದ್ಯಕ್ಕೆ ಹೊಲದ ಮಾತಿರಲಿ–ಎಂದುಕೊಂಡು, ಮನದ ಕುದಿಯನ್ನೂ ಅಸಮಾಧಾನವನ್ನೂ ಮರೆಯಿಸಲು ಸಮೀಪದ ದೊಡ್ಡೂರಿಗೆ ಹೋಗಿ ಸಾಕಷ್ಟು ಮದ್ಯವನ್ನು ಕುಡಿದು ಮನೆಗೆ ಬಂದ.

ಮನೆಗೆ ಬಂದಾಗ ಸಾವಿರ ಸೈನಿಕರ ಶಕ್ತಿ ತನ್ನಲ್ಲಿದೆ ಎಂಬ ಭರವಸೆ ಅವನಲ್ಲಿ ಮೂಡಿತ್ತು.

"ಏ – ಮನಗಿಕೊಂಡೆ ಏನು" ಎಂದು ಕೂಗಿದ.

ಗುಡಿಸಲಿನ ಬಾಗಿಲಿಗೆ ಕೋಣೆಯ ತಟ್ಟಿನ ಪರದೆ ತೂಗಬಿದ್ದಿತ್ತು. ಪರಸ್ಯಾ ಎಂದೂ ಅಲ್ಲಿ ಮಲಗಿದ್ದನ್ನು ಅವನ ಮಗ ನೋಡಿರಲಿಲ್ಲ. ರಾಯರ ತಲೆಬಾಗಿಲಿನ ಮುಂದೆ ತುಸು ದೂರದಲ್ಲಿ ಒಂದು ಹಳೆಯ ಮರ ಇದ್ದಿತು. ಅಲ್ಲಿಯೆ ಸದಾಕಾಲ ಪರಸ್ಯಾ ರಾತ್ರಿ ಮಲಗಿರುತ್ತಿದ್ದನು. ಮನೆಯ ಮುಂದೆ ರಾಯರ ಧಾನ್ಯದ ಹಗೆಗಳಿದ್ದುವು. ಆ ಊರಿನಲ್ಲಿ ರಾಯರಿಗೆ ಕಳ್ಳರ ಹೆದರಿಕೆ ಇದ್ದಿರಲಿಲ್ಲ.

ಆದರೆ ಪರಸ್ಯಾನಿಗೆ ಕೆಲಸ ಬೇಕಲ್ಲ; ರಾತ್ರಿ ಕಾವಲು ಅವನ ಕರ್ತವ್ಯವಾದ್ದರಿಂದ ಅವನು ಅಲ್ಲಿಯೆ ಗಿಡದ ಕೆಳಗೆ ಬಿದ್ದಿರುತ್ತಿದ್ದ. ಮಳೆಗಾಲದ ಒಂದು ತಿಂಗಳ ಮಟ್ಟಿಗೆ ಟೊಂಗೆಗಳ ಮೇಲೆ ಒಣ ಹುಲ್ಲು ಇಲ್ಲವೆ ಮೇಲಿನ ಚಪ್ಪರ ಹಾಕಿ ಕೆಳಗೆ ಮಲಗುತ್ತಿದ್ದ. ಅಂತೂ ತಂದೆ ಗುಡಿಸಲಿನಲ್ಲಿ ಇರುವುದಿಲ್ಲ ಎಂಬ ಧೈರ್ಯ ಕಾಳ್ಯಾನಿಗೆ ಇದ್ದಿತು. ಜೊತೆಗೆ ಇನ್ನೂ ಒಂದು ಕೆಣಕಿದ ಧೈರ್ಯದ ಕಿಡಿ ಹಾರುತ್ತಿತ್ತು. ತಾನು ಬಂದಂದಿನಿಂದ ಗಂಗಿ ತುಸು ಸಟೆದು ದೂರದೂರದಲ್ಲಿಯೆ ಇದ್ದಾಳೆ. ಪ್ರತಿ ಸಲವೂ ಒತ್ತಾಯವಡಿಸಿಯೆ ಆಕೆಯನ್ನು ಒಲಿಸಿಕೊಳ್ಳಬೇಕಾಗುತ್ತಿತ್ತು. ಸೈನ್ಯದಲ್ಲಿದ್ದಾಗಿನ ಅನುಭವದಿಂದ ಒಂದು ಮಾತು ಕಾಳ್ಯಾಗೆ ತಿಳಿಯುತ್ತಿತ್ತು. ಹೆಣ್ಣು ಮನಸ್ಸಿಲ್ಲದೆ ಗಂಡನ್ನು ಕೂಡುವ ರೀತಿ. ಗಂಗಿಯಲ್ಲಿ ಆ ರೀತಿಯನ್ನು ಕಂಡಿದ್ದ ಯಾಕೆ? ತನಗಾಗಿ ಆಕೆಯಲ್ಲಿ ಅಭಿಮಾನವಿರಬೇಕಿತ್ತು, ಈಗ ತನ್ನ ನಡತೆ, ತನ್ನ ವೇಷ ಎಲ್ಲವೂ ಬದಲಾಗಿದ್ದು ಯಾವ ಹೆಂಗಸಾದರೂ ತನ್ನನ್ನು ಮೆಚ್ಚಬಹುದಾಗಿತ್ತು. ಆದರೆ ಈ ಗಂಗಿ ಬೆದರಿದ ದನದಂತೆ ಮೈ ಬಿಗಿಯಿಸಿ ದೂರ ಸರಿಯುವಳಲ್ಲ? ಆ ಬಗ್ಗೆ ಒಂದು ಅಸಮಾಧಾನ ದಿನೇ ದಿನೇ ಕುದಿಯುತ್ತಿತ್ತು. "ನೋಡೋಣ, ಒಂದು ದಿನ ನೋಡಿಯೆ ಬಿಡೋಣ" ಎನ್ನುತ್ತಿದ್ದ, ಇಂದು ಮದ್ಯವು ಆ ಧೈರ್ಯವನ್ನು ಅವನಲ್ಲಿ ಕೆಣಕಿದೆ.

"ಏ—ಮಲಗಿಕೊಂಡ್ಯೇನು ?" ಎಂದು ಗದ್ದರಿಸಿದ

ಒಳಗಿನಿಂದ ಯಾವ ಸದ್ದೂ ಬರಲಿಲ್ಲ.

"ಏ—ಕೇಳ್ತೈತಿಯೊ ಇಲ್ಲೊ ?" ಎಂದು ಅಧಿಕಾರದಿಂದ ತೊದಲಿಸಿದ.

ಒಳಗಿನಿಂದ ಏನೊ ಗೊಣಗಿದ್ದು ಕೇಳಿದ ಹಾಗಾಯ್ತು. ಹತ್ತಿರ ಹೋಗಿ "ಏನಂದಿ ?" ಎಂದು ಅಬ್ಬರಿಸಿದ.

"ಲಥಾಯೀಗ ಹೋಗಿ ಬಂದ ಸೂರ ಬಂದೇತಿ-ಅಂದೆ!"

ಎಂದಳು ಗಂಗಿ.

ಕಾಳ್ಯಾನಿಗೆ ಎರಡು ಕಾರಣಗಳಿಗಾಗಿ ತಡೆಯುದಾಯ್ತು. ಆಕೆಯ ದನಿಯಲ್ಲಿಯ ತಿರಸ್ಕಾರ, ಅದಕ್ಕ ಹೆಚ್ಚಾಗಿ ಮೈತುಂಬಿ ಕೊಂಡು ಸೊಕ್ಕಿನಿಂದ ನೆಟೆದು ಇದಿರಾಗಿ ನಿಂತ ಹೆಣ್ಣು ದೇಹ. ಯಾವ ಮಾತಿಲ್ಲದೆ ಆಕೆಯನ್ನು ಹಿಡಿದ, ಬಿಡಿಸಿಕೊಳ್ಳಲು ಯತ್ನಿಸಿದಷ್ಟು ಗಟ್ಟಿಯಾಗಿ ಹಿಡಿದ, ಮದವೇರಿದ ಗಂಡು ಶಕ್ತಿಯ ಮುಂದೆ ಹೆಣ್ಣು ಸೋತಿತು, ಇದಲ್ಲದೆ ದೇಹದ ಧರ್ಮ ಒಂದಿದೆಯಲ್ಲ? ಅದಕಾಗಿಯೂ ಮನಸ್ಸಿಲ್ಲದ ಹೆಣ್ಣು ಮೈಯಿಂದ ಸೋತಿತು.

ಕಾಳ್ಯಾನ ಮದ ಒಂದೇಟಿಗೆ ಇಳಿಯಿತು.

"ಥುತ್ ನಿನ!" ಎಂದವನೆ ಆಕೆಯ ಎದೆಯ ಮೇಲೆ ಕೈಯೂರಿ ಎದ್ದು ನಿಂತ. ಪಾಪ! ಗಂಗಿ ಚೀರಿದಳು.

"ಅಯ್ಯಯ್ಯ! ನನ ಕೊಲ್ಲಬೇಕಂತೀಯೇನೊ? ಎಂಥಾ ಪರಿ ಜೋರಿನಿಂದ ಕೈಯೂರಿದಿಯಲ್ಲ? ಅಯ್ಯಯ್ಯ!" ಎಂದು ಹಲುಬಿದಳು.

ಕಾಳ್ಯಾನಿಗೆ ಮದ ಇಳಿದಿದ್ದರೂ ಗುಂಗು ಆರಿರಲಿಲ್ಲ. ಇದಲ್ಲದೆ ಹೊಳೆದ ವಿಚಾರದಿಂದ ಅವನ ತಲೆಯೊಳಗೆ ಬೆಂಕಿ ಇಟ್ಟಂತಾಗಿತ್ತು.

"ನಿನ್ನ ಕೊಲ್ಲೋದ? ಅದೂ ಯಾಳೇ ಬರ್ತೈತಿ. ಆದ್ರೆ ಮುಂಚೆ ನಿನ್ಬಾಯಿಯಿಂದೇ ಕೇಳದ ಹೊರತು ನಿನ್ನ ಕೊಲ್ಲೋ ಹಾಂಗಿಲ್ಲ" ಎಂದ.

ಗಂಗಿ ತುಸು ಗಾಬರಿಗೊಂಡಳು.

"ನನ್ನ ಬಾಯಿಯಿಂದ? ಏನದು ಕೇಳೋದು?" ಎಂದಳು

"ನಿನ್ನ ಮಿಂಡ ಯಾವ—"

"ಮತ್ಯಾರಾರಾಗಿದ್ರ ಬಾಯಿಗಟ್ಟಿಸ್ತಿದ್ದೆ ಹಲ್ಲು ಉದುರೋ ಹಾಂಗ" ಎಂದು ಮೈ ದೂಳನ್ನು ಜಾಡಿಸುತ್ತ ಗಂಗಿ ನೆಟೆದಿದ್ದಳು.

ಕಾಳ್ಯಾ ತಟ್ಟನೆ ಆವಳ ಕೈಯನ್ನು ಹಿಡಿದ.

"ಬಿಡು ನನ್ನ ಕೈ !"। ಎಂದು ಕೊಸರಿಕೊಳ್ಳಲು ಯತ್ನಿಸಿದಳು.

ಕಾಳ್ಯಾ ಇನ್ನಿಷ್ಟು ಗಟ್ಟಿಯಾಗಿ ಹಿಡಿದ, ಹಿಡಿತದ ಬಿಗಿತದಿಂದ ಆಕೆಗೆ ನೋವಾಗಲಿ ಎಂದೇ ಅವನ ಮನಸ್ಸಿನಲ್ಲಿದ್ದಿತು.

"ನಿನ್ನ ಕೈಯೊಳಗ ಉಗಳಾಕ ಇಲ್ಲ. ಒಮ್ಮೆ ಕರೇ-ಖೊಟ್ಟಿ ನಿಕಾಲಿ ಆದರೆ" ಎಂದ.

"ಅಯ್ಯ! ನೋವಾಗ್ಹತ್ತ್ಯೋ—" ಗಂಗಿಯ ದನಿಯಲ್ಲಿ ಅಳುವು ಹಣಿಕಿಕ್ಕುತ್ತಿತ್ತು.

"ಭಲೆ! ಭಲೆ! ಗಂಡನ ಕೈ ಹತ್ತಿದರ ನೋವಾಗತೇತಲ್ಲ? ಗಂಡ ಮುಟ್ಟಿದರ ಮೈ ಮುದುರಿಕೊಂತೇತಲ್ಲ? ಅದಕೇ ಕೇಳಿದೆ ನಿನ್ನ—"

"ಸುಮ್ಮಾಗತ್ಯೋ ಏನು—"

"ಅಬ್ಬ! ಯಾರಿಗೆ ಹೆದರಿಸ್ತೀ ನೀ? ನಿನಗೇನೊ ಲಡಾಯಿ ಸೂರ ಅಂತಾ ಚಾಷ್ಟಿ ಆಗಿರಬಹುದು. ಆದರೆ ಮರೀಬ್ಯಾಡ. ಹುಳಾ ಸತ್ಹಾಂಗ ಮಂದಿ ಸತ್ತದ್ದನ್ನ ನೋಡೀನಿ, ಕೈಯಿಂದ ಕೊಂದೀನಿ. ನನಗೇನೂ ಹೆದರಿಕೆ ಇಲ್ಲ ನಿಂತ ಮಟ್ಟಿಗೀ ಮ್ಯಾಗ ನಿನ್ನ ಹೆಣ ಕೆಡವಲಾಕ. ಆದರೆ ಮೊದಲು ನಿನ್ನ ಬಾಯಿಯಿಂದೇ ಬರಲಿ ಹರೇಕತ್ತು—"

"ಯಾತರದು? ಏನಂತೀ?"

"ಇಕ! ಒಂದ್ಮಾತು ಹೇಳ್ತೀನಿ. ಹಳ್ಳೀ ಊರ ಹೊಲೆಯ ಆಗಿ ಹುಟ್ಟಿದ್ದಕ ಮಂದೀ ಎಂಜಲ ಅನ್ನ ಉಂಡೀನಿ, ಆದರೆ ಮಂದೀ ಎಂಜಲ ಹೆಣ್ಣೂ ಭೋಗಿಸ್ತೀನಿ ಅಂತ ತಿಳಿದಿದ್ದರ—ಅಬ್ಬ! ಯಾರನ್ನ ತಪ್ಪಿಸಬೇಕಂತೀ ಹೊಲಸೂಳೆ—" ಎಂದವನೆ ಬಲವಾಗಿ ಒಂದೇಟನ್ನು ಕೊಟ್ಟ. ಕೈ ಕೊಸರಿಕೊಂಡು ಓಡಿಹೋಗಬೇಕೆಂಬ ಗಂಗಿಗೆ ಆ ಏಟು ಬಿದ್ದೊಡನೆ ಕಣ್ಣಿಗೆ ಕತ್ತಲೆ ಬಂದು ಜಗತ್ತೆ ತಿರುಗಿ ದಂತಾಯಿತು. ಗಂಗಿ ಚೀರಿದಳು, ದೊಪ್ಪೆಂದು ಬಿದ್ದಳು. ಎಲ!

ಎಲ! ಇದೇನು ಎಂದು ಕಾಳ್ಯಾ ಹಿಡಿಯ ಹೋಗುವಷ್ಟರಲ್ಲಿ ಅವನ ಕಣ್ಣಿಗೂ ಕತ್ತಲೆ ಬರುವಂತೆ ರಕ್ತದ ಧಾರೆ ಕಂಡಿತು. "ಗಂಗೀ-ಗಂಗೀ-ನಿನ್ನ ಕೊಲ್ಲಬೇಕಂತ ಹೊಡೆದಿದ್ದಿಲ್ಲ, ಗಂಗೀ. ಇನ್ನೊಮ್ಮೆಂದಿಗೂ ಕುಡಿಯೋದಿಲ್ಲ, ಗಂಗೀ." ಎನ್ನುತ್ತ ಕಾಳ್ಯಾ ಅವಳ ದೇಹವನ್ನು ಮೆಲ್ಲನೆ ಮುಖ ಮೇಲೆ ಮಾಡಿ ಮಲಗಿಸಿದ. ಅವಳ ಮುಖದಲ್ಲಿ ಸೋಲು-ಗೆಲುವುಗಳ ಸಮ್ಮಿಶ್ರ ನಗೆಯಿದ್ದರೂ ಕಾಳ್ಯಾನ ಎದುರಿಗೆ ಕಂಡ ದೃಶ್ಯ ಅವನಿಗೆ ಭೀಕರವಾಗಿದ್ದಿತು. ರಕ್ತದ ಧಾರೆ ಚಿಮ್ಮುತ್ತಿತ್ತು.

* * *

"ಎಷ್ಟಾದರೂ ಜಾತಿ ಬಿಟ್ಟಿದ್ದಲ್ಲ" ಎಂದು ಜನ ಆಡಿಕೊಳ್ಳುವುದನ್ನು ಕೇಳಿ ಕಾಳ್ಯಾನಿಗೆ ಓಡಿಹೋಗಬೇಕು ಇಲ್ಲವೆ ಉರುಲು ಹಾಕಿಕೊಂಡು ಸಾಯಬೇಕು ಎಂದೆನ್ನಿಸುತ್ತಿತ್ತು.

"ನೋಡಿದಿರೊ ಇಲ್ಲೊ? ಶಿಸ್ತಾಗಿ ಕೋಟು-ಬೂಟು ಹಾಕಿಕೊಂಡು ಬಂದ! ಆದರೇನು? ಮಂಗಗ ಅಂಗಿ ಹಾಕಿದರೆ ಮನುಷ್ಯ ಆದೀತೆ?" ಎಂದು ಒಂದು ಅಭಿಪ್ರಾಯ

"ಅಲ್ಲೊ—ಹೆಂಡ್ತೀನ್ನ ಅಂಥಾಪರಿ ಹೊಡೆಯೋದಂದ್ರ?" ಎಂದು ಒಬ್ಬರ ಆಶ್ಚರ್ಯ.

"ಸೆರೆ ಕುಡಿದು ಉನ್ಮತ್ತ ಆದಾಗ ಹೆಂಡತಿ ಇಲ್ಲ. ಮಕ್ಕಳಿಲ್ಲ" ಮತ್ತೊಬ್ಬರ ತತ್ತ್ವಜ್ಞಾನ.

"ಅವ ಹೊಲ ಏನೂ ಕೊಂಡುಕೋಬೇಕು ಅಂತ ಹೊರಟಿದ್ದನಂತಲ್ಲೊ?"

"ಹೇಂಗೇನು? ಜರ್ಮನಿಯ ಕೈಸರನ್ನ ಇದೇ ಮಗ ಸೋಲಿಸಿದ್ದ ಕಾಣಿಸ್ತದ! ಹ ಹ! ಅಲ್ಲಿಯೆ ಜರ್ಮನಿಯ ರಾಜಾ ಆಗೋದ್ಬಿಟ್ಟು ಇಲ್ಲಿಗ್ಯಾಕ ಬಂದ? ಆಂ?"

"ಮುಖ್ಯ ತಪ್ಪು ಅಂದ್ರ ಇವರ್ನ ಸರಕಾರ ಏರಿಸಿ ಕೂಡಿಸೇದ".

"ನಂನಮ್ಮೊಳಗ ಜಗಳ ಹಚ್ಚ್ಯೋ ಗತ್ತು ಅದು!"

"ಆದಲ್ದಿ ಲಢಾಯಿ ರಿಕ್ರೂಟಿನಾಗ ಸೇರಿದ್ದುವಲ್ಲ ಈ ಹುಚ್ಚು ಮುಂಡೇವು! ಅದಕ್ಕ ಏನಾದರೂ ಇಷ್ಟು ಆಶಾ ತೋರಿಸಬೇಕಲ್ಲ?"

ಕಾಳ್ಯಾನಿಗೆ ಏನೂ ತಿಳಿಯದಂತಾಯಿತು. ತನ್ನ ಬಗ್ಗೆ ಜನರಿಗೆ ಇಷ್ಟೇಕೆ ಅಸಹ್ಯ ಎಂಬುದು ಅವನಿಗೆ ಗೂಢವಾಗಿದ್ದಿತು. ತಾನು ಹೆಂಡತಿಯನ್ನು—ತನ್ನ ಹೆಂಡತಿಯನ್ನು ಹೊಡೆದದ್ದು ನಿಜ. ಆದರೆ ಆಕೆ ಸತ್ತಿಲ್ಲ, ಕೆಟ್ಟಿಲ್ಲ—ಆದರೂ ಜನ ಮನಬಂದಂತೆ ಸುದ್ದಿಯನ್ನು ಹರಡುವುದಲ್ಲ? ತಾನು ಹೆಂಡತಿಯನ್ನು ಹೊಡೆದದ್ದು ನಿಜ. ಯಾಕೆ ಹೊಡೆಯಬಾರದು? ಯಾರು ಹೊಡೆಯಲಿಕ್ಕಿಲ್ಲ ಅಂತಹ ಸಂದರ್ಭ ದಲ್ಲಿ? ಗಂಡನ ಗಂಡಸುತನಕ್ಕೆ ಅವಮಾನಕಾರಕವಾದ ಸ್ಥಿತಿ ಅದು. ಅದಕಾಗಿಯೆ ತನಗೆ ಒಮ್ಮೆಂದೊಮ್ಮೆಲೆ ಆಪರಿ ಸಿಟ್ಟು ಬಂದಿತು. ಗಂಗಿ ಕೆಳಗೆ ಬಿದ್ದು ರಕ್ತದ ಧಾರೆ ಹರಿಯುವುದನ್ನು ಕಂಡಾಗಲೆ ತನಗೆ ಎಚ್ಚರ ವಾದದ್ದು, ಒಂದು ಕ್ಷಣ ಗಂಗಿ ಸತ್ತಳೆಂದೇ ತಿಳಿದಿದ್ದ. ಮುಂದೆ ಗತಿ? ರಾತ್ರಿಯ ಸಮಯ, ಓಡಿಹೋಗೋಣವೆ ಎಂದೆನ್ನಿಸಿತ್ತು. ಆಗ ಗಂಗಿಯ ಮುಖದಲ್ಲಿ ನಗೆಯ ಕಳೆಯನ್ನು ನೋಡಿ ಅವನಿಗೆ ಆಶ್ಚರ್ಯ ವಾಗಿತ್ತು, ನಾಚಿಕೆಯಾಗಿತ್ತು. ಗಂಗಿ ಸತ್ತಿಲ್ಲ ಎಂದು ಮೊದಲ ಸಮಾಧಾನ. ಆದರೆ ನಗುವಳೇಕೆ—ಎಂಬುದು ಅವನಿಗೆ ತಿಳಿದಿರಲಿಲ್ಲ. ಗಂಗಿ ಆ ಪರಿ ಗಂಡಸುತನದ ಶಕ್ತಿಗೆ ಸೋತಿದ್ದರೂ ನಗುತ್ತಿದ್ದಳು. ನಗಬಾರದೇಕೆ? ತೋರಿಕೆಗೆ ಸೋತರೂ ನಿಜವಾಗಿ, ಆಕೆಯೆ ಗೆದ್ದಿದ್ದಳು. ಆ ರಕ್ತದ ಧಾರೆ ಆಕೆಯ ಜಯಪತಾಕೆಯಾಯಿತು, ಆ ರಕ್ತದ ಧಾರೆ ಕಾಳ್ಯಾನ ಪೌರುಷವನ್ನು ತೇಲಿಸಿಕೊಂಡು ಹೋಗುವ ಹಳ್ಳದ ಪ್ರವಾಹದಂತಾಯಿತು; ಒಂದು ಕ್ಷಣದಲ್ಲಿ ಅಬ್ಬರಿಸಿ ಬಂದ ಪ್ರವಾಹ ಇನ್ನೊಂದು ಕ್ಷಣದಲ್ಲಿ ಇಲ್ಲವೇ ಇಲ್ಲ! ಇಷ್ಟೊಂದು ಕ್ಷಣಿಕ ಕಾರಣದಿಂದ ಒಬ್ಬ ಮನುಷ್ಯನ ಮನುಷ್ಯತ್ವ, ಕಾಳ್ಯಾನ ಪೌರುಷ, ಚಿರಂತನವಾಗಿ ತೇಲಿಹೋಗಬೇಕೆಂದರೆ— ಈ ಜೀವನದಲ್ಲಿ ಯಾವ

ಸೌಭಾಗ್ಯವಿದೆ ?

ಆದರೆ ಅದೆಲ್ಲ ಆ ಕ್ಷಣದಲ್ಲಿಯೆ ತಿಳಿದಿರಲಿಲ್ಲ ಕಾಳ್ಯಾನಿಗೆ. ಹೆಂಡತಿ ಜೀವದಿಂದಿರುವಳು ಎಂಬುದಕ್ಕೆ ಧೈರ್ಯ ತಂದುಕೊಂಡು, ತನಗೆ ತಿಳಿಯದ ಆಪತ್ತನ್ನು ಸುಧಾರಿಸಲು ವ್ಯರ್ಥವಾಗಿ ಯತ್ನಿಸುವ ಕಾಳ್ಯಾನನ್ನು ನೋಡಿ ಗಂಗಿಯ ಮುಗುಳ್ನಗೆಯಲ್ಲಿ ಕನಿಕರದ ನೆರಳು ಮೂಡಿತು. ಕಾಳ್ಯಾನಿಗೆ ಇನ್ನಿಷ್ಟು ಆಶ್ಚರ್ಯ-ರಕ್ತ ಹೋಗುವಾಗಲೂ ನಗುವುದೆಂದರೆ—?

"ಹೆಣ್ಣು ಅದೀಯೊ ? ರಾಕ್ಷಸ ಅದೀಯೊ ?" ಎಂದ

"ನಾ ಸತ್ತಿದ್ದರ ತಿಳೀತಿತ್ತು ನಿನಗ ನಾ ಏನು ಅದೀನಿ ಅಂತ" ಎಂದಳು ಗಂಗಿ.

"ಹೇಳಲ—ಎಲ್ಲಿ ಪೆಟ್ಟು ಹತ್ತೇತಿ ?"

"ಪೆಟ್ಟು ಹತ್ತೇತಿ—ಹೊಟ್ಟೀವಳಗಿನ ಕರಳಿಗೆ"

"ಏನಂದಿ ? ಒದ್ದೀ ಪಟ್ಟೀ ಕಟ್ಟೀನಿ ರಗತ ಸೋರಧಾಂಗ"

"ವದ್ದೀ ಪಟ್ಟಿ !"

ಗಂಗಿ ತ್ರಾಣವಿಲ್ಲದಿದ್ದರೂ ಗಟ್ಟಿಯಾಗಿ ನಕ್ಕಳು, ಕಾಳ್ಯಾ ಪೆಚ್ಚಾಗಿ ನೋಡತೊಡಗಿದ.

"ವದ್ದೀ ವಟ್ಟಿ ! ಹ ಹ ! ಮೂಳಾ-ಹುಚ್ಚಮೂಳಾ ! ಅದೇನಂತ ತಿಳಿದೀದಿ ? ಪೆಟ್ಟು ಬಡೆದಿಲ್ಲ—ಹೊಟ್ಟೀಲೆ ಆಯ್ತು—"

"ಏ-ಏ-ಏನಂದೀ—?"

"ಅಯ್ದು ತಿಂಗಳಾಗಿತ್ತು." ಇದುವರೆಗೆ ಪಟ್ಟ ಪ್ರಯಾಸವೆಲ್ಲ ಈಗ ಮರುಕಳಿಸಿದಂತಾಗಿ ಕಣ್ಣು ಮುಚ್ಚಿದಳು........

ಕಾಳ್ಯಾನಿಗೆ ೨-೩ ದಿನಗಳಲ್ಲಿ ಎಲ್ಲ ತಿಳಿದು ಬಂದಿತು. ತನ್ನ ಸಂಶಯ ನಿಜ ಎಂಬ ಘೋರ ಸತ್ಯ ತಿಳಿಯಿತು. ಆದರೆ ಏನು ಮಾಡಬಲ್ಲ ? "ದ್ಯಾವ್ರಾಣೀ ಮಾಡಿ ಹೇಳ್ತೀನಿ, ನಿನ್ನ ಕೊಳ್ಳ ಮುಟ್ಟಿ ಹೇಳ್ತೀನಿ, ಚಿಕ್ಕ ಧಣೇರ ಹೊರತು ಯಾರೂ ನನ್ನ ಸನಿಯಕ್ಕ

ಹಾಯ್ದಿಲ್ಲ" ಎಂದು ಗಂಗಿ ಹೇಳಿದಾಗ ಕಾಳ್ಯಾ ಪೂರ್ತಿಯಾಗಿ ಪಶ್ಚಾತ್ತಾಪ ಸಾಗಿದ್ದ. ಏನು ಮಾಡಬಲ್ಲ ಚಿಕ್ಕ ಧಣಿಯರಿಗೆ? "ಯಾತಕ್ಕ ಗಂಡಸಾಗೇದಿ?" ಎಂದಿದ್ದಳು ಗಂಗಿ. ಕಾಳ್ಯಾನಿಗೆ ಎಲ್ಲ ತಪ್ಪು ತನ್ನದು ಎಂದು ಈಗ ಎನ್ನಿಸತೊಡಗಿತ್ತು. ಗುಂಡಣ್ಣನ ಸಂದರ್ಭ ವನ್ನು ಹೇಳುವಾಗ ಗಂಗಿ ಬಿಕ್ಕಿ ಬಿಕ್ಕಿ ಅತ್ತಳು. ಕೈಗೆ ಬಂದ ಹೆಂಡತಿ ಯನ್ನು ಹಾಗೆ ಬಿಟ್ಟು ಹೋದಾಗ, ಧಣಿಯರು ಒಡೆತನದ ಹಕ್ಕಿನಿಂದ ಒತ್ತಾಯಪಡಿಸಿದಾಗ ತಾನು ಏನು ಮಾಡಬಲ್ಲಳು—ಎಂದು ಗಂಗಿಯ ಪ್ರಲಾಪ.

"ಅವರ ಜಾತೀವಳಗ ಹೆಂಗಸರೂ ಹಾಂಗೇ" ಎಂದು ಜನ ಆಡಿಕೊಳ್ಳುವುದನ್ನು ಕೇಳಿ ಕಾಳ್ಯಾನಿಗೆ ಕಳವಳವಾಯಿತು. 'ಅನ್ನಿಸಿ ಕೊಳ್ಳುವುದಕ್ಕೆಯೆ ಈ ಹಾಳು ಜಾತಿಯೆ?' ಎಂದು ಗೋಳಾಡಿದ.

ಈಗ ಅವನು ಗಂಗಿಯ ಕೈಗೊಂಬೆಯಾದ. ಗಂಗಿಗೂ ಒಂದು ಆಯುಧ ಬೇಕಾಗಿತ್ತು. ಇತ್ತೀಚೆಗೆ ಗುಂಡಣ್ಣ ತನ್ನನ್ನು ದೂರ ಇಡು ತ್ತಿರುವನೆಂಬುದನ್ನು ಅವಳು ತಿಳಿಯದೆ ಇರಲಿಲ್ಲ. ಗುಂಡಣ್ಣ ತನ್ನನ್ನು ಇಂದಿಲ್ಲ ನಾಳೆ ಬಿಡುವವ ಎಂದು ಗಂಗಿಗೆ ಗೊತ್ತಿತ್ತು. ಆದರೆ ಚೆನ್ನಿಯಂಥಾ ಮತ್ತೊಬ್ಬಾಕೆಗಾಗಿ ತನ್ನನ್ನು ಅವನು ಬಿಡುವನಲ್ಲ ಎಂಬುದಕ್ಕೆ ಅವಳಿಗೆ ವ್ಯಥೆ. ಗಂಡುಜಾತಿಗಾಗಿಯೆ ಆಕೆಯಲ್ಲಿ ದ್ವೇಷ ಭಾವನೆ ಮೂಡತೊಡಗಿತು. ಕಾಳ್ಯಾ, ರಾಮಪ್ಪ, ಇದೊಂದು ಮಾದರಿ ಗಂಡಿನದು, ತನ್ನ ಹೆಣ್ಣನ್ನು ತನ್ನ ಕಣ್ಣೆದುರಿನಲ್ಲಿಯೆ ಕೆಡಿಸಿ ದರೂ ಕಾಣದ, ಕಂಡರೂ ಕೈ ಎತ್ತದ ಮಬ್ಬು - ಮುಗ್ಗಲಗೇಡಿ ಜಾತಿಯ ಗಂಡು! ಗುಂಡಣ್ಣ—ಇನ್ನೊಂದು ಮಾದರಿ, ಬೇಕಾದ ಹೆಣ್ಣನ್ನು ಬೇಕಾದಾಗ ಭೋಗಿಸಿ ಬೇಡಾದೊಡನೆ ಯಾರ ಹಂಗೂ ಇಲ್ಲದಂತೆ ಬಿಸಾಡುವ ಬೆರಿಕೆ ಜಾತಿ! ಆಗಲಿ, ಮುಳ್ಳಿನಿಂದ ಮುಳ್ಳನ್ನು ತೆಗೆವಂತೆ ಕಾಳ್ಯಾನಿಂದ ಗುಂಡನನ್ನು ಕೆಡಹಿಸುವೆ—ಎಂದುಕೊಂಡಳು ಗಂಗಿ. ದಿನದಿನಕ್ಕೆ ಕಾಳ್ಯಾನ ಮೇಲೆ ಪ್ರೇಮವನ್ನು ತೋರತೊಡಗಿ

ದಳು. ಕೈಹಿಡಿದೆಳೆದರೂ ಬಾರದ ಹೆಣ್ಣು ತಾನಾಗಿಯೆ ಒಲಿದು ಬಂದುದಕ್ಕೆ ಕಾಳ್ಯಾನ ಪೌರುಷ ತೀಕ್ಷ್ಣವಾಗಿ ಜಾಗೃತವಾಯಿತು. ಗುಂಡಣ್ಣನನ್ನು ದ್ವೇಷಿಸಲು ಅವನಿಗೆ ಹೆಚ್ಚು ಸಮಯ ಬೇಕಿರಲಿಲ್ಲ.

ಆಗ ಗುಂಡಣ್ಣನ ಮದುವೆಯಾದದ್ದು.

ಊರಿಗೆ ಊರೇ ಆಮಂತ್ರಿತವಾಗಿದ್ದರೂ, ಪರಸ್ಯಾನಿಗೆ ಎಂಜಲೆಲೆಗಳಲ್ಲಿ ತಾಜಾ ಅಡಿಗೆಯನ್ನೆ ನೀಡಿದ್ದರೂ ಕಾಳ್ಯಾ ಬರಲಿಲ್ಲ. ಗುಂಡಣ್ಣನ ಎಂಜಲು ಅವನಿಗೆ ವಿಷವಾಗಿತ್ತು ; ಗುಂಡಣ್ಣನ ಎಂಜಲು ಅವನಿಗೆ ಆಹ್ವಾನವೂ ಆಗಿತ್ತು.

# ೫

"ಪರಸ್ಯಾ, ನಮ್ಮಿಬ್ಬರ ಕಾಲ ಮುಗೀತೀಗ."

"ಹಾಂಗೇ ಅನ್ನಬೇಕಾಗೇದ್ರಿ, ಧಣೇರ."

"ಕಾಳ್ಯಾನ್ನ ಮಾತಾಡಿಸಿ ನೋಡೀದೇನು?"

ಪರಸ್ಯಾ ಕೆಳಗೆ ಮುಖ ಮಾಡಿಕೊಂಡು ಕುಳಿತ.

ಗುಂಡಣ್ಣನ ಮದುವೆ ಮುಗಿದ ಕೆಲವು ದಿನಗಳ ತರುವಾಯದ ಮಾತು. ರಾಯರಿಗೆ ಮನಸ್ಸು ತುಸು ಹಗುರಾದಂತಿತ್ತು. ಒಟ್ಟಾರೆ ಗುಂಡಣ್ಣನ ಸಲುವಾಗಿ ಅವರಿಗಿದ್ದ ಹೆದರಿಕೆ ತಾತ್ಪೂರ್ತಿಕವಾಗಿಯೆ ಆಗಲಿ, ಹಿಂದೆ ಸರಿದಿತ್ತು. ಹೆಂಡತಿ ಬಂದ ಮೇಲೆ ಮಕ್ಕಳು ಎದುರಿದ್ದರೆ ಮನುಷ್ಯನಿಗೆ ಸಂಸಾರದ ಜವಾಬ್ದಾರಿ ತಾನಾಗಿಯೇ ಬರುವುದು–ಎಂದು ರಾಯರು ಸಮಾಧಾನವನ್ನು ತಂದುಕೊಂಡಿದ್ದರು. ಇತ್ತಿತ್ತಲಾಗಿ ಗುಂಡಣ್ಣನ ವಿಚಾರ ರಾಯರ ತಲೆಯನ್ನು ತಿಂದಿತ್ತು. ಜನರು ಏನೇನೋ ಮಾತನಾಡುತ್ತಿದ್ದರು. ಮೊದಲು ಗಂಗಿಯ ಪ್ರಕರಣವಾಯಿತು; ಅಷ್ಟರಲ್ಲಿ ಆ ಹುಡುಗ ರಾಮ್ಯಾನ ಬಗ್ಗೆ ಗುಂಡಣ್ಣನ ಸಂಬಂಧವನ್ನು ಸೂಚಿಸಿ ಮಾತನಾಡಿದ್ದಾಯಿತು. ಅದು ಅಷ್ಟು ಮಹತ್ತ್ವದ್ದೆನ್ನಿಸಿರಲಿಲ್ಲ ರಾಯರಿಗೆ. ಹೊಸ ಹರೆಯದ ಹುಡುಗಾಟ, ಯಾರನ್ನೂ ಬಿಟ್ಟಿದ್ದಲ್ಲ. ಬೇಸಗೆಯ ಅಡ್ಡಮಳೆಯಂತೆ

ಮುಂದೆ ಮದುವೆಯಾದರೆ, ಮಳೆಗಾಲ ಪ್ರಾರಂಭವಾದರೆ ಆ ಆರ್ಭಟ ವೆಲ್ಲ ಮರೆಯುವುದು. ಅದಕಾಗಿ ರಾಯರಿಗೆ ಆ ನಡತೆಯ ಬಗ್ಗೆ ಚಿಂತೆ ಇದ್ದಿರಲಿಲ್ಲ ಆದರೆ ಯಾವುದೊ ಒಂದು ಉತ್ಸಾಹದಿಂದ ಕೆಲವೊಂದು ಅಧಿಕಾರವನ್ನು ಅವನಿಗೆ ಒಪ್ಪಿಸಿದ್ದರಲ್ಲ ? ಆ ವಿಷಯದಲ್ಲಿ ಮಾತ್ರ ಅವರಿಗೆ ಅಸಮಾಧಾನವಾಗಿತ್ತಲ್ಲದೆ, ಮನಸ್ಸೂ ನೊಂದಿತ್ತು. ಎಂತಹ ಬೇಜವಾಬ್ದಾರಿ ವರ್ತನೆ? ಏನು ವೆಚ್ಚದ ಅವಸ್ಥೆ ? ರಾಮಪ್ಪನ ಶರೀರಸಾಧನಕ್ಕಾಗಿ ಎಷ್ಟೊ ಹಣವನ್ನು, ತಂದೆಯ ಕಣ್ಣು ತಪ್ಪಿಸಲು ಯತ್ನಿಸಿ, ಗುಂಡಣ್ಣ ಖರ್ಚು ಮಾಡಿದ್ದ. ಅದನ್ನೆಲ್ಲಾ ನೆನೆದು ಉಪಯೋಗವೇನು ? ಗಂಗಿ-ಚೆನ್ನಿಯರ ಸಲುವಾಗಿ ಕೂಡ ಎಷ್ಟೊ ಹಾಳು ಮಾಡಿಕೊಂಡಿದ್ದ ಗುಂಡಣ್ಣ. ಈ ಮಾತಿಗಾಗಿ ರಾಯರ ಎದೆ ನಡುಗುತ್ತಿತ್ತು. ಇಂದಿಲ್ಲ ನಾಳೆ ಎಲ್ಲ ಕಾರಭಾರ ಈ ಹುಡುಗನ ಕೈಗೆ ಬರುವುದು, ಆಗಲೂ ಈ ಹುಡುಗ ಇದೇ ಚಟವನ್ನು ನಾಗಿಸಿಕೊಂಡರೆ ಗತಿ-ಏನು–ಎಂದು ರಾಯರ ಹೆದರಿಕೆ. ಹೆದರಲು ಸಾಕಷ್ಟು ಕಾರಣವೂ ಇದ್ದಿತು. ಮದುವೆಯ ಕಾಲಕ್ಕೆ, ಆ ಸಂಧಿಯ ಲಾಭವನ್ನು ಪಡೆದುಕೊಂಡು ಗುಂಡಣ್ಣ ತನ್ನ ಸ್ಥಿತಿಯನ್ನು ಸುಧಾರಿಸಿ ಕೊಂಡಿದ್ದ. ರಾಯರಿಗೇ ಗೊತ್ತು—ಆ ದುಃಸ್ಥಿತಿ. ನಾಲ್ಕಾರು ಕಡೆ ಸೇರಿ ಒಟ್ಟು ಮೂರುಸಾವಿರದವರೆಗೆ ಗುಂಡಣ್ಣ ಸಾಲ ಮಾಡಿದ್ದ ! ಏನೊ ಹುಡುಗನ ಹುಚ್ಚುತನ–ಎಂದು ಹಾರಿಸಿ ರಾಯರು ಎಲ್ಲವನ್ನೂ ಸರಿಪಡಿಸಿದ್ದರು. ಅವರ ಮನಸ್ಸಿಗೆ ಮಾತ್ರ ಸಮಾಧಾನವಾಗಿರಲಿಲ್ಲ. ಇಂತಹ ಸಂಗತಿ. ತಮ್ಮಲ್ಲಿ–ಮನೆತನದಲ್ಲಿ–ಇದುವರೆಗೂ ನಡೆದಿರಲಿಲ್ಲ ಹಿರಿಯರಿಂದ ನಡೆದುಬಂದುದನ್ನು ಶಿರಸಾವಹಿಸಿದಂತೆ ಉಳಿಸಿ ಬೆಳೆಸಿ ಕೊಳ್ಳುವುದು ರೂಢಿ. ಆದರೆ ಈ ಹುಡುಗನಿಗೆ ಮನೆತನದ ಅಭಿಮಾನವೇ ಇಲ್ಲವೆ? ಮಾತಾಡಿಸಿ ನೋಡೋಣ ಎಂದರೂ ರಾಯರಿಗೆ ಅಧೈರ್ಯ. ಒಟ್ಟು ಈಗಿನ ಹುಡುಗರ ಸ್ವಭಾವವೇ ವಿಚಿತ್ರವಾಗಿದೆ. ತಾನು ಹಿರಿಯ ಎಂದು ಮಾತಾಡಿಸಬೇಕು, ಹುಡುಗ ಥಟ್ಟನೆ ಏನಾದರೊಂದು ಉತ್ತರ

ಕೊಡಬೇಕು! ಇಂತಹ ಪ್ರಸಂಗಕ್ಕಾಗಿ ರಾಯರಿಗೆ ಎದೆಯುಳುಕು. ಇದೇ ಅನುಭವ ಎಲ್ಲ ತಂದೆಗಳದಾಗಿದ್ದರೆ ಪ್ರಪಂಚ ಯಾವ ಸ್ಥಿತಿಗೆ ಬಂದಿತೆನ್ನಬೇಕು?. ರಾಯರು ಉಸಿರೆಳೆದರು, ತುಸು ದೂರದಲ್ಲಿ ಮುಖ ಕೆಳಗೆ ಮಾಡಿ ಕುಳಿತ ಪರಸ್ಯಾನನ್ನು ದಿಟ್ಟಿಸಿ ನೋಡಿ ಮತ್ತೆ ಕೇಳಿದರು,

"ನಿಂ ಕಾಳ್ಯಾನ್ನ ನೀ ಮಾತಾಡಿಸಿ ನೋಡೀದಿ ಏನು-ಅಂದೆ" ಎಂದು.

ಧಣಿಯರ ಪ್ರಶ್ನೆ, ಉತ್ತರವನ್ನು ಕೊಡದೆ ಹಾಗೇ ನಾಗಿಸುವುದು ಹೇಗೆ? ಪರಸ್ಯಾ ಮುಖವನ್ನು ಮೇಲಕ್ಕೆತ್ತಿ ರಾಯರ ಮುಖ ವೊಂದನ್ನು ಬಿಟ್ಟು ಉಳಿದೆಲ್ಲ ಕಡೆ ನೋಡಿದ.

"ಬೆಳದ ಹುಡುಗ, ನನ್ಮಾತ ಕೇಳ್ಯಾನ್ರಿ? ಅದಕ, ಧಣೀರೇ ಒಂದೀಟು ಛೀ ಹಾಕ್ಬೇಕು ಅಂತ—"

ರಾಯರ ದನಿಯಲ್ಲಿ ಅಧಿಕಾರದ ದರ್ಪ ಗುಡುಗಿತು, ಮುಖದಲ್ಲಿ ಧಣಿಯತನದ ಗಾಂಭೀರ್ಯ ಮೂಡಿತು.

"ಯಾಕ? ಏನಂತಾನ ಅವ? ಮೊದಲು ನಿನ್ನ ಕೇಳಿ ಮುಂದೆ ವಿಚಾರ ಮಾಡೋಣ ಅಂತ ಬಿಟ್ಟಿದ್ದೆ. ಯಾಕಂದ್ರ, ಜನ ಏನೇನೋ ಹೇಳ್ತಾರ. ಹೊಲ ಕೊಂಡುಕೋಬೇಕು ಅಂತಾನ ಅಂತಿದ್ರು, ಏನೊ ಕಾರ್ಖಾನೆ ತಗೀಬೇಕಂತಾನ ಅಂತ ಮತ್ತ ಯಾರೊ ಅಂತಿದ್ರು. ಅದಕ್ಕ ಕೇಳ್ತೀನಿ. ಅವನಿಗೇನು ಬುದ್ಧಿಗಿದ್ಧಿ ಕೆಟ್ಟಿಲ್ಲ ಅಹುದಲ್ಲೊ?"

"ನುಂದೀ ಮಾತು ಕೇಳ್ಬಾರದರಿ ಧಣೇರ್ರು. ಹುಚ್ಚ ಹುಡುಗ! ಅವ ಏನಂತಾನೊ, ಜನ ಅವನ ಬಾಯಿವಳಗ ಯಾವ ಮಾತು ಆಡಿಸ್ತದೊ? ಅವನಿಗೇನು ಗೊತ್ತಿಲ್ಲೇನ್ರಿ, ಧಣೇರ ಸೇವಾದಿಂದೇ ನಂ ಪರಪಂಚ ನಡೆದೇತಿ-ಅಂತ?"

"ಮತ್ತೇನೊ—ಕುಡಿಯೋದು ಹೊಡೆಯೋದು ಮಾಡ್ತಾ ನಂತಲ್ಲೊ?"

"ಛಿ! ಛಿ! ಧಣೇರ ಪಾದದ ಮ್ಯಾಗ ಅಡ್ಡಬಿದ್ದು ಹೇಳ್ತಾನ್ರಿ ಈ ಪರಸ್ಯಾ. ಅಂಥಾದ್ದ್ಯಾವ್ದೂ ನಂಬಬಾರದು ಧಣೇರು. ಇನ್ನೇನು? ಹುಡುಗ ಬುದ್ಧಿ, ಒಂದೆಡ್ವರ್ಸ ಕೆಟ್ಟ ಜನದ ಸಹವಾಸ ಆಗೇತಿ-ಆದರ—ಛಿ! ಛಿ!—ತಂ ಪದರಿನಾಗ ಬಿದ್ದು ಇಂಥಾ ಕೆಲಸ ಮಾಡಾಣ-ಅಂದ್ರೇನು?"

"ನಾನೂ ಅದೇ ಅಂತೀನಿ. ನನಗ ಇದೊಂದೂ ತಡಿಯೋದಿಲ್ಲ. ನಾನೂ ನೋಡೀನಿ ನಿಂ ಕಾಳ್ಯಾ ಒಂದಿಷ್ಟು ಗೌರವ-ಮರ್ಯಾದಿ ಮರೆಥಾಂಗ ಕಾಣ್ತದ. ಅದಕ್ಕ ಹೇಳ್ತೀನಿ ನೀನೇ ನೋಡೀದಿ ಅಲ್ಲ, ನಾವು ಸಣ್ಣವರಿದ್ದಾಗ ನಮ್ಮನ್ನ ಹ್ಯಾಗ ಅಂಜಿಕೀನೊಳಗ ಇಟ್ಟಿದ್ದರು ಅಪ್ಪ ಯಾಕ? ಈಗ ನಂ ಗುಂಡ್ಯಾನ್ನೇ ನೋಡಲ್ಲಿ?" ರಾಯರು ಗಂಟಲನ್ನು ಸರಿಪಡಿಸಿಕೊಂಡು ಆ ವಾಕ್ಯವನ್ನು ಮತ್ತೊಮ್ಮೆ ಹೇಳಿದರು

"ಚಿಕ್ಕ ಧಣೇರ ಮಾತೇನ್ರಿ? ಇನ್ನೂ ಹೊಸ ಹರೇವು—"

"ಅದಲ್ಲೋ! ಧಡ್ಡ ಸೂಳೇಮಗನ್ನ ತಂದು! ನಾ ಒಂದು ಹೇಳಿದರ ತಾ ಒಂದು ತಿಳೀತಾನ. ನಂ ಗುಂಡ್ಯಾ ಸಹಿತ ನಂ ಅಂಜಿಕೇ ವಳಗ ಇದ್ದಾನ, ನೋಡು ಅಂತ ನಾ ಹೇಳ್ತೀನಿ."

"ನಾನೂ ಅದೇ ಅಂದಿನ್ರಿ. ಮತ್ತೆ ಧಣೇರಾದ್ರೂ ಛಲೋ ದಾಗಲಿ ಅಂತೇ ಮಾಡೋದಲ್ಲೇನರಿ? ಮದುವೀದೊಂದು ಮುಗದಾಣ ಹಾಕಿದ್ದು —"

"ಹುಚ್ಚುಮುಂಡೇಗಂಡ! ಮುದುಕ ಆದಿ ನೀನು-ಇನ್ನೂ ನಿನ್ನ ತಲಿ ತಾಳೀಕ್ಕ ಬಂದಿಲ್ಲ! ಆಂ? ಹಾಂ-? ಹಹ! ಹಹಹ!... ಅದಕೇ ನೋಡು, ನಿನ್ನ ಮಗ ನಿನ್ನ ಮಾತು ಕೇಳೋದಿಲ್ಲ, ಆಂ?"

"ಕಾಲ ಬದಲಾಗೇತ್ರಿ. ಮನೆ-ಹಿರೇರು-ಕುಲ-ಜಾತಿ-ಎಲ್ಲಾ ಹೋಗಿಬಿಡಾಕ್ಹತ್ತೇತರಿ. ಅದರಾಗಂತೂ ಈ——

"ಏ, ಹುಚ್ಚುಮುಂಡೇಗಂಡಾ, ಒಂದಿಷ್ಟು ಹೇರಗ ಮಾತಾಡು-"

"ಅಲ್ಲರಿ–ನಂ ಕಾಳ್ಯಾನ ಮಾತು ಹೇಳಿದೆ. ಅದೇನು ಲಢಾಯಿ ಗ್ಹೋಗಿದ್ದನೊ ಮತ್ತೆ ಇಲ್ಲೇ ಯಾರಾದ್ರೂ ಮಾಟಾ ಮಾಡಿಸಿ ಓಡಾಡಿಸಿ ತಲೆ ಕೆಡಿಸ್ಯಾರೊ! ಬಂದವನೆ ಫಿರಂಗೇರ್ಹ್ಾಂಗೇ ಮಾತಾಡ್ತಾನರಿ! ಕಾಲೇ ಬದಲಾಗೇತ್ರಿ."

"ಅವನ ಮಾತು ಯಾರು ಕೇಳಲಿಕ್ಕೆ ಬಂದಾರ ಅನ್ನು ಆದರೆ–ಒಂದಿಷ್ಟು ಎಚ್ಚರದಿಂದಿರು ಅಂತ ಹೇಳು. ಸಂಜೆಯ ಹೊತ್ತು, ನಾವೇ ಆಗಲಿ, ಮನೆಯ ಹೆಣ್ಮಕ್ಕಳೇ ಆಗಲಿ ಗುಡಿಗೆ ಹೋಗತೀರತೀವಿ, ಆಗ ಸಿಕ್ಕಸಿಕ್ಹಾಂಗ ರಸ್ತೇದಮ್ಯಾಲೆ ತಿರುಗಾಡ್ತಿರತಾನಂತ"

"ಎಲ ಇವನ ಮುಂಜಾಳ್ಹೋಗಲಿ! ನನಗೊತ್ತಿಲ್ಲ ಬಿಡ್ರಿ. ಇಲ್ಲಾ ಅಂದ್ರ—"

"ಸಿಕ್ಕಸಿಕ್ಹಾಂಗ ಏನಾರೇ ಮಾಡಲಿಕ್ಕೆ ಹೋಗಬ್ಯಾಡ. ಒಂದಿಷ್ಟು ತಿಳಿಸಿ ಹೇಳು ಇಂದಿಲ್ಲ ನಾಳೆ ನಿನ್ನ ಜಾಗಾಕ್ಕ ಬರೋವನ—" ಎನ್ನುತ್ತ ರಾಯರು ಎದ್ದರು ಪರಸ್ಯಾನ ಮುಟ್ಟಿಗೆ ಅಷ್ಟಕ್ಕೆ ಅಂದಿನ ದರ್ಬಾರು ಮುಗಿಯಿತು

*  *  *

ಕಾಳ್ಯಾನ ಮನಸಿನಲ್ಲಿ ಒಂದೇ ವಿಚಾರ. ಗುಂಡಣ್ಣ ತನ್ನ ಶತ್ರು, ಅವನ ಸೇಡನ್ನು ತೀರಿಸಿಕೊಳ್ಳುವುದು ತನ್ನ ಕರ್ತವ್ಯ, ಆಮೇಲೆ ಈ ಹಾಳು ಊರನ್ನು ಬಿಟ್ಟುಬಿಡುವುದು ಇತ್ತಿತ್ತಲಾಗಿ ಅವನು ಮದ್ಯ ಕುಡಿಯುವುದನ್ನು ಬಿಟ್ಟಿದ್ದನಾದರೂ ಉನ್ಮತ್ತಾವಸ್ಥೆ ಅವನನ್ನು ಬಿಟ್ಟಿರಲಿಲ್ಲ ಎಂದು ಹೇಳಬಹುದು. ಈಗ ಮದ್ಯದ ಬದಲು ಗಂಗಿ ಅವನಿಗೆ ಮದನನ್ನುಂಟುಮಾಡುತ್ತಾಳೆ. ದಿನದಿನಕ್ಕೆ ಗುಂಡಣ್ಣನ ಬಗ್ಗೆ ಕಾಲ್ಪನಿಕ ಚಿತ್ರಗಳನ್ನು ಕಾಳ್ಯಾನ ಮುಂದೆ ಹಿಡಿಯುತ್ತಾಳೆ.

"ಒಂದಿನ ಏನ್ಮಾಡಿದಾ ಅಂತೀ?" ಎಂದು ಒಮ್ಮೆ ಏನೂ ಅರಿಯದ ಹಸುಳೆಯಂತೆ ಕಾಳ್ಯಾನನ್ನು ಕೇಳಿದಳು.

"ಅದನ್ನೆಲ್ಲಾ ತಗೊಂಡೇನ್ಮಾಡ್ತೀ, ನಾ ಯಿಲ್ಲಾಗ ಏನ್ಮಾಡಿದ

ಏನ್ಬಿಟ್ಟ ಅಂತ?" ಗಂಡ ಎಂಬ ಹಕ್ಕು, ಗಂಡಸು ಎಂಬ ಸೊಕ್ಕು–ಇವೆರಡರಿಂದಲೂ ಉಬ್ಬಿದವನಾಗಿ ಕಾಳ್ಯಾ ಹೇಳಿದ.

"ಈಗ ನಾ ಬಂದೀನಿಲ್ಲೊ? ಇನ್ನು ಯಾರು ಏನಾರೆ ಮುಂಗ ತನಾ ಮಾಡ್ತಾರೇನು ನೋಡು" ಎಂದು ಜಗತ್ತನ್ನು ಆಹ್ವಾನಿಸು ವವನಂತೆ ನುಡಿದ.

"ಆದರೂ ನೆಪ್ಪಾದಾಗೊಮ್ಮೆ ನಡಕ ಹುಟ್ಟತೈತಿ ನೈಯಾಗ.... ಒಂದಿನಾ ಭಾವೀ ದಂಡೀ ಮ್ಯಾಗ ಏನಾಯ್ತಂತೀ—"

ಗಂಗಿ ನಿಜವನ್ನು ನುಡಿಯುವವಳಂತೆ ಮಾತಿಗೆ ತೊಡಗುವಳು. ಆದರೆ ಅದನ್ನು ಕೇಳಲು ಕಾಳ್ಯಾನಿಗೆ ಇಷ್ಟವಿಲ್ಲ. ತನ್ನ ಅವಮಾನದ ನೆನಪು ಅದು, ಅಷ್ಟೆ ಅಲ್ಲ ಅದನ್ನು ಕೇಳಿಯೂ ತಾನು ಏನೂ ಮಾಡಲಾರ ಎಂಬುದನ್ನು ಬಲ್ಲ, ಅದಕಾಗಿ ತನ್ನ ಅಸಹಾಯತೆಯ ನೆನಪೂ ಅವನಿಗೆ ಬೇಡವಾಗಿತ್ತು. ಆದರೆ ಎಷ್ಟೆಷ್ಟು ಸಲ ಗಂಗಿಯನ್ನು ಅಂತಹ ಮಾತುಗಳಿಂದ ತಡೆಯುತ್ತಿದ್ದನೊ ಅಷ್ಟು ಸಲವೂ ಒಳಗಿನ ಸಿಟ್ಟಿನ ಮೇಲೆ ಊದಿದಂತಾಗುತ್ತಿತ್ತು, ಬೂದಿ ಹಾರಿ ಕೆಂಡ ನಿಗಿನಿಗಿ ಕಂಡಂತಾಗುತ್ತಿತ್ತು.

ಒಮ್ಮೆ ತಾನು ಸೇಡನ್ನು ತೀರಿಸಿಕೊಂಡನೆಂದರೆ ಈ ಊರನ್ನು ಬಿಟ್ಟು ಹೋಗುವುದೆ ಒಳಿತು ಎಂಬ ನಿರ್ಧಾರಕ್ಕೆ ಬಂದಿದ್ದನು. ಅದಕ್ಕೆ ಎರಡು ಕಾರಣಗಳಿದ್ದುವು. ಒಂದನ್ನು ಅವನು ತನ್ನ ತಂದೆಯ ಎದುರು ಸ್ಪಷ್ಟವಾಗಿ ಆಡಿತೋರಿಸಿದ್ದನು. "ಹೊರಗ ಹೋದರ ನಮ್ಮನ್ನ ಕೇಳೋರು ಯಾರು? ಉಪಾಸ ಬಿದ್ದು ಸತ್ತು ಹೋದೇವು" ಎಂದು ತಂದೆ ಹೆದರಿಸಿದ್ದನಾದರೂ ಕಾಳ್ಯಾನ ನಿರ್ಧಾರ ಬದಲಾಗಿರಲಿಲ್ಲ.

"ಇಂಥಾ ಪರಿ ಇರೋದರಾಗ ಏನು ಸುಕಾ ಐತಿ-?" ಎಂದು ತಂದೆಗೆ ಮರುಸವಾಲನ್ನು ಹಾಕಿದ್ದ. ಹಾಗೆ ಹೇಳುವಾಗ ಜಗತ್ತಿನಲ್ಲಿ ಹೆಣ್ಣು-ಗಂಡು ಹುಟ್ಟಿದ ಲಕ್ಷಾವಧಿ ವರ್ಷಗಳಲ್ಲಿ ಗಳಿಸಿದ ಗಂಡಿನ ಸ್ವಾಭಿಮಾನಕ್ಕೆ ಧಕ್ಕೆಯಾದ ನೋವಿನ ದನಿ ಇದ್ದಿತು. ಗಂಗಿಯನ್ನು,

ತನ್ನ ಹೆಂಡತಿಯನ್ನು ಗುಂಡಣ್ಣ ಭೋಗಿಸಿದ್ದ. ತಾನು, ಆಕೆಯ ಗಂಡ, ಹೆಣ್ಣಿನ ಒಡೆತನದ ಗಂಡು, ಅದಕ್ಕೆ ಪ್ರತಿಯಾಗಿ ಏನನ್ನೂ ಮಾಡಲಾರದ ಷಂಢನಾಗಬೇಕಿತ್ತು !

"ಇಂಥಾ ಪರಿ ಇರೋದರಾಗ ಏನು ಸುಕಾ ಐತಿ-?" ಎಂದು ಮತ್ತೊಮ್ಮೆ ತಂದೆಯನ್ನು ತುಸು ಹಟದ ದನಿಯಲ್ಲಿಯೆ ಕೇಳಿದ.

ಪರಸ್ಯಾನಿಗೆ ಮಗನ ದನಿಯನ್ನು ಕೇಳಿ ಅಸಮಾಧಾನವಾಯಿತು. ಈ ಹುಡುಗ ಯಾಕೆ ಹೀಗೆ ಆದ ಎಂಬುದೆ ಅವನಿಗೆ ತಿಳಿಯದಾಯಿತು. ಮದುವೆ ಆಗಿದೆ, ಹೆಂಡತಿ ಕೈಗೆ ಬಂದಿದ್ದಾಳೆ, ರಾಯರೂ ಮಗನ ಮದುವೆಯನ್ನು ಮಾಡಿದ ಖುಶಿಯಲ್ಲಿದ್ದಾರೆ: ಆದರೆ ಈ ಹುಡುಗನಿಗೆ ಒಂದೂ ತಿಳಿಯಲೊಲ್ಲದು. 'ಯಿಲಾಯ್ತಿಗೆ ಹೋಗಿ ತೆಲಿ ಕೆಡಿಸಿ ಕೊಂಡು ಬಂದೇತಿ. ಹೀಂಗಾದ್ರ ಏನ್ ಗತಿ?' ಎಂದು ಪರಸ್ಯಾನ ಚಿಂತೆ. ಅಲ್ಲ! ಏನು ಕೆಟ್ಟೇತಿ ಅಂತ ಹೀಂಗ ಮಾತಾಡ್ತದ ಈ ಹುಡುಗ ?

"'ಹಿಂತಾ ಪರಿ' ಅಂದ್ರ ಏನಾಗೇತಪ?" ಎಂದು ಸೌಮ್ಯದನಿಯಲ್ಲಿಯೆ ಕೇಳಿದ.

ಕಾಳ್ಯಾನ ತುಟಿ ತಿರಸ್ಕಾರದಿಂದ ಬಿರಿದುವು 'ಏನಾಗೇತಿ' ಅಂದರೆ ಏನು ಹೇಳಬೇಕು ಇವನಿಗೆ? ನಿಜವಾಗಿ ನೋಡಿದರೆ ಏನಾಗಿದೆ ಎಂಬುದು ಕಾಳ್ಯಾನಿಗೇ ಚನ್ನಾಗಿ ತಿಳಿದಿರಲಿಲ್ಲ. ಆದರೆ ಒಂದು ಅವನಿಗೆ ಗೊತ್ತು. ತಾನು ಹೊರಗೆ ಹೋದಾಗ ನೋಡಿದ ಜಗತ್ತು, ಜನ ಎಲ್ಲ ಬೇರೆ ಇದ್ದಿತು. ಅಲ್ಲಿ ತನಗೆ ಯಾವ ಸಂಕೋಚವೂ ಎನ್ನಿಸುತ್ತಿರಲಿಲ್ಲ. ತಿಳಿದದ್ದನ್ನು ಮಾತಾಡಿದರೆ ಮಿಕ್ಕವರು ಕೇಳುತ್ತಿದ್ದರು. ತನ್ನನ್ನು ಕಂಡರೆ ಯಾರೂ ದೂರ ಹಾಯುತ್ತಿರಲಿಲ್ಲ. ತನ್ನ ಬಗ್ಗೆಯೆ ತನ್ನಲ್ಲಿ ಒಂದು ಅಭಿಮಾನ ಹುಟ್ಟಿತು. ಆದರೆ ಇದೆಲ್ಲ ಈ ರೀತಿ ಸ್ಪಷ್ಟವಾಗಿ ಅವನಿಗೆ ತಿಳಿದಿರಲಿಲ್ಲ. 'ನಾಕ್ಮಂದೀವಳಗ ಮೀಸೆ ಹೊತ್ತ ಗಂಡಸು ಅಂತ ಅನ್ನಿಸತಿತ್ತು' ಎಂದು ಅವನು

ತಿಳಿದುಕೊಂಡಿದ್ದನು. ಆದರೆ ಇಲ್ಲಿ ಬಂದಂದಿನಿಂದ—? ಏನಿದೆ? ಹೆಃ! ಮನೆಯ ಹೆಂಡತಿಗೂ ತನ್ನ ಕಿಮ್ಮತ್ತಿಲ್ಲ! ಅನುಭೋಗಿಸುವವರಿಗೇ ಗೊತ್ತು. ಮತ್ತೆ ಏನಾಗಿದೆಯಂತೆ? ಇನ್ನೂ ಏನಾಗಬೇಕು?

"ತಂದ್ರ? ಇನ್ನೂ ಏನಾಗ್ಬೇಕಂತೀ?"

"ಅಲ್ಲ – 'ಹಿಂತಾ ಪರಿ' ಅಂದಿ—ಅದಕ್ಕ ಕೇಳ್ತೇನಿ—"

"ಹೌದೆಪ್ಪಾ, ಮುಂಜಾನೆಯಿಂದ ಸಂಜೇತಕ ತಲಿ ತಗ್ಗಿಸಿ, ಸಂದಿ–ಸಂದಿ ಇಡಿಕಳ ದನ ಹಾಯೋ ಹಾಂಗ ಇರೋದಕಿಂತ—"

"ಹುಚ್ಚುಗೊಟ್ಟಿ ಇದ್ದೀ ನೀ, ಕಾಳ್ಯಾ" ಹಿರಿತನದಿಂದ, ತುಸು ಕಳಕಳಿಯಿಂದಲೆ ಪರಸ್ಯಾ ಹೇಳತೊಡಗಿದ.

"ಹುಚ್ಚುಗೊಟ್ಟಿ ಇದ್ದೀ, ಅಂದೆ. ಸಿಕ್ಕಲ್ಲಿ ಹೋಗಿ ತಲಿ ಕೆಡಿಸಿಕೊಂಡ್ಬಂದೀದಿ, ಅಂತೀನಿ. ಅಲ್ಲೊ, ಹೀಂಗ್ಮಾತಾಡಿದ್ರ ಏನು ಶಾಣೇತನ ಆಯ್ತು ಅಂತ ತಿಳಿದೀದಿ? ಯಾವ ಜಾತ್ಯಾಗ ಹುಟ್ಟತಾನ ಮನಸ್ಯಾ ಹಾಂಗ ಇರಬೇಕಾಗತೇತಿ—ಏನಪ—"

"ಅದಕೇ ಹಿಂತಾ ಪರಿ ಬ್ಯಾಡ ಅಂತೀನಲ್ಲ?" ಹಟಮಾರಿ ಹುಡುಗನಂತೆ ಕಾಳ್ಯಾ ದನಿ ಎಳೆದ.

"ಎಲೆ ನಿನ! ಮತ್ತ ಅಪ್ನೆ ಅಂತಾನಲ್ಲೊ? ಬ್ಯಾಡ—ಅಂದ್ರ? ಹೊಟ್ಟೀ ಹ್ಯಾಂಗ ಹೊರೆದುಕೋತಿ?"

"ಈಗೊಮ್ಮ ನೌಕರಿ ಮಾಡಿಲ್ಲೇನು?"

"ಅದss ನೋಡು, ನಿನ್ನ ತಲಿ ಕೆಡಿಸಿದ್ದೇ ಆ ನೌಕರಿ ನೋಡು. ಇನ್ನೇನು ಸಾಯೋತನಕ ಯಿಲಾಯ್ತೀಗೆ ಹೋಗವ ಏನು?"

"ಯಿಲಾಯ್ತೀಗ ಯಾಕ? ಇಲ್ಲೇ ಬ್ಯಾರ ಕಡೆ—"

"ಹುಚ್ಚುಗೊಟ್ಟಿ! ಹಹ!" ಪರಸ್ಯಾ ಹಿರಿತನದ ಬುದ್ಧಿವಂತಿಕೆಯ ಪ್ರದರ್ಶನದ ನಗೆಯನ್ನು ನಕ್ಕ. "ಅಂ? ಅದಕೇ ಹುಚ್ಚುಗೊಟ್ಟಿ ಅಂದೆ. ಇಲ್ಲೇ ಬ್ಯಾರೆ ಕಡೆ ಅಂತ! ನಿನಗ ನೌಕರಿ ಕೊಡೋರು ಯಾರು? ನಾಕ್ಮಂದ್ಯಾಗ ನಿನ್ನ ಕೂಡಿಸಿಕೊಂಬೋರು ಯಾರು?

ಹುಚ್ಚುಗೊಟ್ಟೆ! ನಂ ಕೆಲಸ, ನಾವು ಮಾಡಾಕೇ ಬೇಕು. ಬ್ಯಾರೇ ಕಡೆ ಅಂದ್ರ—ಅಲ್ಲಿ, ಹೊರಗ ಹೋದರ ನಮ್ಮನ್ನ ಕೇಳೋರು ಯಾರು? ಉಪಾಸ ಬಿದ್ದು ಸತ್ತು ಹೋದೇವು."

ಕೊನೆಗೆ ಅಲ್ಲಿಗೇ ಬಂದು ಮುಟ್ಟಿತು ಉಪವಾಸ! ಮುಖ್ಯ ಪ್ರಶ್ನೆ ಇದು ಎಂಬುದು ಕಾಳ್ಯಾನಿಗೆ ಮೊದಲ ಸಲ ಹೊಳೆದಂತಾಯಿತು. ಇದುವರೆಗೆ ತಂದೆಯ ಹಿರಿತನದ ನೆರಳಿನಲ್ಲಿ ಬೆಳೆದ ಕಾಳ್ಯಾನಿಗೆ ಊಟ ಹೇಗೆ ದೊರಕುವುದು ಎಂಬುದರ ವಿಚಾರವಾಗಲಿ ಜ್ಞಾನವಾಗಲಿ ಇದ್ದಿರಲಿಲ್ಲ. ತುಸು ಬೆಳೆದ ಮೇಲೆ ರಾಯರ ಮನೆಯ ಎಂಜಲನ್ನಕ್ಕೆ ತಮ್ಮದೇ ಹಕ್ಕು ಎಂದು ಅಭಿಮಾನದಿಂದ ತಿಳಿದುಕೊಂಡಿದ್ದ. ಎಂಜಲಕ್ಕಾಗಿ ಬಿದ್ದವರಿಗೆ ಎಷ್ಟೆಷ್ಟು ಸರಿಯಾಗಿ "ಎಂಜಲ-ನಾಯಿ" ಆಗಬೇಕಾಗುವುದೆಂಬುದು ಗಂಗಿಯ ಪ್ರಕರಣದಲ್ಲಿ ತಿಳಿದು ಬಂದಿತ್ತು. ಆಗ ಆ ಅನ್ನಕ್ಕಾಗಿ, ಅದು ದೊರಕುವ ರೀತಿಗಾಗಿ ಅವನಿಗೆ ಹೇಸಿಕೆ ಹುಟ್ಟಿತ್ತು. ಈಗ ಮುಂದಿನ ವಿಚಾರ ಈ ಅನ್ನವನ್ನು ಬಿಟ್ಟರೆ ಉಪವಾಸವೆ ಗತಿ-ಎಂದು ತಂದೆ ಹೇಳುತ್ತಿದ್ದಾನೆ. ನಿಜವೆ? ಈ ದುರವಸ್ಥೆ ತನಗೆ ಬಿಟ್ಟಿಲ್ಲವೆ? ಯಾರ ತಪ್ಪಿಗಾಗಿ ಹುಟ್ಟಿದ್ದಕ್ಕೆ ಯಾರು ಭೋಗಿಸಬೇಕು? ತಂದೆ ಹೇಳುವುದು ನಿಜವೆ? ಬೇರೆ ಎಲ್ಲಿ ಹೋದರೂ ಜನ ತನ್ನನ್ನು ದೂರ ಇಡುವರೆ? ಹೀಗಿದ್ದರೆ ಈ ಜನರಿದ್ದಲ್ಲಿ ಇದ್ದು ಉಪಯೋಗವೇನು? ಇವರನ್ನು ತಪ್ಪಿಸಬೇಕು ಹೇಗೆ? ವಿಲಾಯಿತಿ—? ಛೆ! ಅದೇನೋ, ಗುಂದ್ಧವ ನೆವದಿಂದ ತನಗೆ ಅಲ್ಲಿಯವರೆಗೆ ಹೋಗಲು ಶಕ್ಯವಾಗಿತ್ತು. ಈಗ ಶಕ್ಯ ಇದ್ದಲ್ಲಿಯೆ ಏನಾದರೂ ಮಾಡಬೇಕು, ನಮ್ಮ ಜನರ ಸಂಬಂಧವನ್ನು ಕಡಿದು ಕೊಳ್ಳುವಂತೆ ಏನಾದರೂ ಮಾಡಬೇಕು—ಎಂದು ವಿಚಾರಗೊಂದಲದಲ್ಲಿ ಹೊಯ್ದಾಡುತ್ತ ನಿಂತುಕೊಂಡ.

"ತಿಳೀತೇನವ? ಉಪಾಸ ಬಿದ್ದು ಸತ್ತು ಹೋದೇವು-ಅಂದೆ." ಎಲ್ಲಿಂದಲೊ ತೇಲಿಬಂದ ವಾಕ್ಯವನ್ನು ಕೇಳಿ ನಿದ್ದೆಯಿಂದ ಎಚ್ಚೆತ್ತ

ವನಂತೆ ಚಕಿತನಾದ ಕಾಳ್ಯಾ. ಎದುರು ನೋಡಿದರೆ ತಂದೆ ಮಾತಾಡು ತ್ತಿದ್ದಾನೆ.

"ಅದಕ್ಕ ಹೇಳ್ತೀನಿ. ದಿವಸ್ಗಾಲ ಕೆಟ್ಟ ಬಂದಾವ್ರು—ನಂ ಯೋಗ್ಯತಾ ತಿಳ್ಕೊಂಡಿರಬೇಕು. ಸಣ್ಣರಾಯರನ್ನ ಹಚ್ಚಿಕೊಂಡಿದ್ದೀ ಯಂದ್ರ – ನಿನಗ ಯಾತರದೂ ಕಾಳಜಿ ಇಲ್ಲ – ಏನವ-ಆಂ?" ಎಂದು ಪರನ್ಯಾ ಅಲ್ಲಿಂದ ಎದ್ದು ಹೋದ.

* * *

"ಸಣ್ಣರಾಯರನ್ನ ಹಚ್ಚಿಕೊಂಡು! ಹಹ!" ತಂದೆಯ ಮಾತನ್ನು ನೆನೆದು ಕಾಳ್ಯಾ ಅತ್ಯಂತ ತಿರಸ್ಕಾರದಿಂದ ತನ್ನಷ್ಟಕ್ಕೇ ನಕ್ಕ. ಹೆಂಡತಿಯ ಪಾಳಿ ಮುಗಿಯಿತು, ಇನ್ನು ಗಂಡನ ಪಾಳಿ ಏನೊ, ಸಣ್ಣರಾಯರನ್ನ ಹಚ್ಚಿಕೊಂಡಿರಲಿಕ್ಕೆ — ಎಂದು ಅತ್ಯಂತ ದ್ವೇಷದಿಂದ ಒಳಗಿಂದೊಳಗೆಯೆ ಹಲ್ಲು ಕಟೆಯುತ್ತ ಎಂದುಕೊಂಡ ಸಣ್ಣರಾಯರು! ಅವರನ್ನು ಹಚ್ಚಿಕೊಂಡು? ಹಃ! ಅವನ ಸಂಬಂಧ ವನ್ನೇ ಕಡಿದುಕೊಳ್ಳುವ ಕಾರಣಕ್ಕಾಗಿಯೂ ಊರನ್ನು ಬಿಡಬೇಕೆನ್ನು ವಾಗ ತಂದೆ ಹಾಗೆ ಹೇಳಬೇಕೆ?

ಗುಂಡಣ್ಣನನ್ನು ತಾನು ದ್ವೇಷಿಸುವಾಗ ಗುಂಡಣ್ಣನೂ ತನ್ನನ್ನು ದ್ವೇಷಿಸುತ್ತಿರಬಹುದೆಂಬ ಸಂಶಯ ಕಾಳ್ಯಾನಿಗೆ ಬಂದಿರಲಿಲ್ಲ ತನ್ನ ಹೆಂಡತಿಯನ್ನು ಠಕ್ಕಿಸಿ ಕೆಡಿಸಿದ ದುಷ್ಟ, ಸ್ವಾರ್ಥ ಸಾಧಿಸಿತು ಈಗ ಆಕೆಯನ್ನು ಮರೆತು ಬಿಟ್ಟಿದ್ದಾನೆ, ಮದುವೆಯನ್ನೂ ಮಾಡಿ ಕೊಂಡಿ ದ್ದಾನೆ! ಎಂತಹ ನಾಚಿಕೆಗೇಡು ಜಾತಿ! ಹೊಸತಾಗಿ ಮದುವೆ ಯಾದರೂ ಆ ರಾಮ್ಯಾನ ಹೆಂಡತಿಯನ್ನು ಇಟ್ಟುಕೊಂಡಿದ್ದಾನಂತೆ! ಎರಡನೇಯವರು ಹೆಂಡಂದಿರನ್ನು ಮಾಡಿಕೊಂಡು ತರುವಾಗ ಜಕಾತಕಟ್ಟೆಗೆ ಕೂತು ಸುಂಕ ಬೇಡುವ ಘಟಿಂಗ—ಇವನನ್ನು ಹಚ್ಚಿ ಕೊಂಡು ಇರಬೇಕೆ?—ಎಂದು ಕಾಳ್ಯಾ ಕುದಿಯುತ್ತಿದ್ದ.

ಕಾಳ್ಯಾ ತಿಳಿದಂತೆ ಗುಂಡಣ್ಣ ಮರೆತಿರಲಿಲ್ಲ; ಗಂಗಿಯನ್ನೂ

ಮರೆತಿರಲಿಲ್ಲ, ಕಾಳ್ಯಾನನ್ನೂ ಮರೆತಿರಲಿಲ್ಲ. ಸಿಕ್ಕಿದ್ದನ್ನು ಬೇಡಿ ತನ್ನನ್ನು ಪೀಡಿಸುತ್ತಿದ್ದಳೆಂದು ಗಂಗಿ ಬೇಡಾಗಿದ್ದಳು ಗುಂಡಣ್ಣನಿಗೆ. ಆದರೆ ಮುಂದೆ ಗಂಗಿ ತನಗೆ ಕಾಣಿಸಿಕೊಳ್ಳುವುದಿಲ್ಲ ಕೂಡ ಎಂಬುದನ್ನು ಕಂಡಾಗ ಗುಂಡಣ್ಣನಿಗೆ ಕೆಣಕಿದಂತಾಯಿತು. 'ಎಲ! ಹೊಲರಂಡಿ! ಇಷ್ಟು ಏರಿ ಕೂತಳೇನು?' ಎಂದು ಹಲ್ಲು ತಿಂದ. ಹರೆಯದ ಮೊದಲ ಅನುಭವ ಗಂಗಿಯಿಂದಲೆ ಬಂದಿತ್ತು ಅವನಿಗೆ, ಆದುದರಿಂದ ಆಕೆಯ ದುಂಡು ಮೊಗ, ನುಣುಪಾದ ಗಲ್ಲ, ತುಂಬಿದ ಮೈ — ಇವು ಆಗಾಗ ಗುಂಡಣ್ಣನ ನೆನಪನ್ನು ಕೆಣಕುತ್ತಿದ್ದವು ಈಗಲಾದರೂ ಆಕೆಯ ಸ್ಪರ್ಶದ ಹಸಿವು ಅವನನ್ನು ಬಿಟ್ಟಿರಲಿಲ್ಲ ಆಕೆ ತನ್ನನ್ನು ಬೇಕಾದಂತೆ ಕುಣಿಸಲು ಶಕ್ಯವಿಲ್ಲ ಎಂಬುವನ್ನು ತೋರಿಸಿಕೊಡಲು ತಾನು ಆಕೆಯನ್ನು ಹಾಗೆ ಮಾಡಿಸಿಕೊಂಡಿದ್ದು. ಹೀಗಿರುವಾಗ ಈಗ ಆಕೆ ಕಣ್ಣೆತ್ತಿ ನೋಡುವುದಿಲ್ಲವಲ್ಲ?

ಗುಂಡಣ್ಣನಿಗೆ ಒಂದು ಸಂಶಯವಿದ್ದಿತು ಗಂಗಿಯ ಈ ಉದ್ಧಟತನಕ್ಕೆ ಕಾಳ್ಯಾ ಕಾರಣವಾಗಿರಬಹುದೆ? ಚಿಕ್ಕಂದಿನಿಂದಲೂ ಒಂದು ರೀತಿ ನೆರಳಿನಂತೆ ಜೊತೆಯಾಗಿದ್ದ ಕಾಳ್ಯಾ—"ಶಕ್ಕವ್ವಾಳೀ ಮಗ! ಖರೇನ ಲಫಾಯಿಗೆ ಹೋಗಿದ್ದನೋ ಏನು ಎಲ್ಲಾದರೂ ಲಫಂಗತನ ಮಾಡಿ ಜೇಲಿನೊಳಗ ಬಿದ್ದಿದ್ದನೊ?—ತಿರುಗಿ ಬಂದಂದಿನಿಂದ ತನ್ನಿಂದ ದೂರವಾಗಿ ಇದ್ದನಲ್ಲ? ತನ್ನನ್ನು ನೋಡಿದಾಗ ನೆಟಿದು ನಿಲ್ಲಲು ಯತ್ನಿಸಿದ್ದ! ಹಹ! ನಾಯಿಯ ಬಾಲದಂತೆ ಜನ್ಮಜನ್ಮಾಂತರ ಡೊಂಕಾಗಿದ್ದ ಅವನ ಬೆನ್ನು ನೆಟೆದು ನಿಲ್ಲಲು ಯತ್ನಿಸುತ್ತಿರುವಾಗ ಅದೊಂದು ಮೋಜೇ ಮೋಜು! ಹಹ! ಸೊಕ್ಕು ಬಂದಿದೆ ಅವನಿಗೆ. ಗಂಗಿಯ ಬಗ್ಗೆ ಗೊತ್ತಾಯಿತೇನೊ? ಅವನೇ ಆಕೆಯನ್ನು ಒತ್ತಾಯಪಡಿಸಿ ತನ್ನಿಂದ ದೂರ ಇರಿಸಿರುವನೆ? ಅಬ್ಬ! ಇವನಿಗೂ ದುರಭಿಮಾನವೆ?

ಗಂಗಿ ತನ್ನನ್ನು ಯಾವಾಗಲೂ ಒಲಿದಿರುವಳು, ಕಾಳ್ಯಾನೇ

ಅವಳನ್ನು ಹಿಡಿದಿಟ್ಟಿದ್ದಾನೆ ಎಂಬ ಸಂಶಯ ಕ್ರಮೇಣ ಗುಂಡಣ್ಣನ ಮನಸ್ಸಿನಲ್ಲಿ ಬೆಳೆದು ಬೆಳೆದು ನಂಬುಗೆಯೆ ಆಗಬಟ್ಟಿತು. ಗುಂಡಣ್ಣನಿಗೆ ಈಗ ಸಂಶಯವೇ ಉಳಿದಿರಲಿಲ್ಲ. ಈ ಕಾಳ್ಯಾ ತನಗೆ ಒಲಿದಿದ್ದ ಹೆಣ್ಣನ್ನು ತಡೆದುಹಿಡಿದಿದ್ದಾನೆ! ಇಷ್ಟೆ ಅಲ್ಲ, ಅವಳ ಮನಸ್ಸಿನಲ್ಲಿ ತನ್ನ ವಿರುದ್ಧ ಏನೇನನ್ನೊ ಹೇಳತೊಡಗಿದ್ದಾನೆ, ಅಲ್ಲ – ತುಂಬತೊಡಗಿದ್ದಾನೆ! ಎಲಾ! ನೀಚ! ಅದಕಾಗಿಯೆ ನನ್ನ ವಿರುದ್ಧ ಹೀಗೆ ಚಾಡಿ ಹೇಳುತ್ತಿದ್ದಾನೆ — ಇದಕ್ಕೇನಾದರೂ ಉಪಾಯವನ್ನು ಮಾಡಲೇ ಬೇಕು—ಎಂದು ಗುಂಡಣ್ಣ ಲೆಕ್ಕಹಾಕತೊಡಗಿದ.

ಉಪಾಯವನ್ನು ಹುಡುಕಲು ಗುಂಡಣ್ಣನಿಗೆ ತಡ ಹಿಡಿಯಲಿಲ್ಲ. ಅದಾದರೂ ಎಂತಹ ಉಪಾಯ! ಅನೇಕಭೇದಿ ಬಾಣವಾಗಿತ್ತು; ಒಂದೇ ಗುರಿಗೆ ಸಹಜವಾಗಿಯೆ ಎರಡು ಆಹುತಿಗಳನ್ನು ತೆಗೆದುಕೊಳ್ಳುವಂತಹದಾಗಿತ್ತು. ಚೆನ್ನಿಯ ಬಗ್ಗೆ ಕಾಳ್ಯಾ ಏನೇನೊ ಸುದ್ದಿಗಳನ್ನು ಹರಡುತ್ತಿದ್ದಾನೆ. ಈ ಸುದ್ದಿಗಳು ರಾಮಿಗೂ ಮುಟ್ಟಬಹುದಲ್ಲ? ಅವನೇನೊ ವಿಶ್ವಾಸವಿಡಲಿಕ್ಕಿಲ್ಲ, ಆದರೂ ಹೇಗೆ ಹೇಳುವುದು? ಒಂದೇ ಸವನೆ ಹೆಚ್ಚೆಚ್ಚು ಜನರು ಅದೇ ಮಾತನ್ನು ಆಡತೊಡಗಿದರೆ ವಿಶ್ವಾಸವಿಡಲೇಬೇಕಾಗುವುದು. ಹಾಗೆ ರಾಮಿ ವಿಶ್ವಾಸವನ್ನಿಟ್ಟರೆ ತನ್ನ ಗೌರವಕ್ಕೆ ಇನ್ನೊಂದು ಕುಂದು ಬಂದಂತಾಗುವುದು ಎಂದು ಗುಂಡಣ್ಣನ ವಿಚಾರ. ಚೆನ್ನಿಯ ಸಂಬಂಧ ಗುಂಡಣ್ಣನಿಗೆ ನಿಜವಾಗಿಯೆ ಗೌರವದ ಮಾತಾಗಿತ್ತು. ಇದಲ್ಲದೆ ಕಷ್ಟಪಟ್ಟು ಗಳಿಸಿದ್ದನ್ನು ಕೆಡಿಸಿಕೊಳ್ಳುವುದು ಯಾವ ಜಾಣತನ? ಕಷ್ಟಬಟ್ಟು—? ನೆನೆದಾಗಲೊಮ್ಮೆ ಗುಂಡಣ್ಣನ ಮೈ ಜುಂ ಎನ್ನುತ್ತಿತ್ತು. ಚೆನ್ನಿಯನ್ನು ವಶಮಾಡಿಕೊಳ್ಳುವುದು ಸುಲಭವಾಗಿರಲಿಲ್ಲ ಗಂಡನು ತನ್ನಿಂದ ದೂರ ಇರಬೇಕಾಗಿ ಬಂದುದಕ್ಕೆ ಆಕೆಗೆ ಅಭಿಮಾನವೆ ಇದ್ದಿತು. ಒಮ್ಮೆ ದೊಡ್ಡ ಕುಸ್ತಿಯಲ್ಲಿ ಗೆದ್ದನೆಂದರೆ ಆಯಿತು, ಮುಂದೆ ರಾಮಿ ತನ್ನವನೆ ಎಂದು ಮುಂದಿನ ಕನಸುಗಳನ್ನು

ಕಟ್ಟುತ್ತ ಚೆನ್ನಿ ಸಂತೋಷದಿಂದ ವಿಯೋಗವನ್ನು ತಡೆದುಕೊಳ್ಳಲು ಸಿದ್ಧಳಿದ್ದಳು. ‘ಹುಚ್ಚರಂಡಿ! ಈಕೆಯು ಪಾತಿವ್ರತ್ಯದ ಪರೀಕ್ಷಾ ಮಾಡಲಿಕ್ಕೆ ನಾ ರೊಕ್ಕ ಖರ್ಚ ಮಾಡ್ತೇನಿ ಅಂತ ತಿಳಿದಾಳ!’ ಎಂದು ಗುಂಡಣ್ಣ ಗೊಣಗಬೇಕಾಯಿತು. ಎರಡೂ ಹೊತ್ತು ಹಾಲು, ಒಳ್ಳೆಯ ಊಟ, ಪೌಷ್ಟಿಕ ತಿನಿಸುಗಳು, ನಯವಾದ ಬಟ್ಟೆ— ರಾಮಿಗೆ ಇದನ್ನೆಲ್ಲ ಒದಗಿಸಲು ಹಣವನ್ನು ಪೂರಯಿಸುವವ ಗುಂಡಣ್ಣ. ಚೆನ್ನಿ ತನ್ನ ವಶವಾಗದಿದ್ದರೆ ಈ ಹಣವೆಲ್ಲ ವ್ಯರ್ಥ ಹಾಳಾದಂತಾಯಿತಲ್ಲ—ಎಂದು ಕಳವಳ ಗುಂಡಣ್ಣನಿಗೆ. ಆದುದರಿಂದ ಎಲ್ಲ ರೀತಿಯಿಂದ ಯತ್ನ ಮಾಡಿದ. ಚೆನ್ನಿ ಇವನ ಕಡೆ ಲಕ್ಷ್ಯವನ್ನೆ ಕೊಟ್ಟರಲಿಲ್ಲ, ಇವನ ಸಂಕೇತಗಳಿಗೆ ಅರ್ಥವನ್ನೂ ಮಾಡಿಕೊಳ್ಳಲಿಲ್ಲ. ಕೊನೆಗೆ ಗುಂಡಣ್ಣ ‘ತೀವ್ರ’ ಉಪಾಯವನ್ನೆ ಕೈಕೊಳ್ಳಬೇಕಾಯಿತು. ಒಂದು ದಿನ ರಾತ್ರಿ ರಾಮಿಯು ಮನೆಗೆ ಹೋದ, ಚೆನ್ನಿ ಬಾಗಿಲನ್ನು ತೆರೆಯಲಿಲ್ಲ, ರಾಮಿಗಾಗಿ ಅಗತ್ಯದ ಕೆಲಸವಿದೆ ಅದಕಾಗಿ ತಾನು ಬಂದಿರುವ ಎಂದು ಹೇಳಿದ, ಆಕೆ ಗಾಬರಿಗೊಂಡು ಬಾಗಿಲನ್ನು ತೆಗೆದಳು ಒಳಗೆ ಬಂದವನೆ ತಟ್ಟನೆ ಬಾಗಿಲನ್ನು ಹಾಕಿದ, ಚೆನ್ನಿ ತುಸು ಗಾಬರಿಗೊಂಡು ಬಾಗಿಲನ್ನು ತೆರೆದಿಡಬೇಕೆ ಹೇಗೆ ಎಂಬ ಅನುಮಾನದಿಂದ ಬಾಗಿಲದ ಕಡೆ ಬಂದಳು.

"ಎಲ! ನನ್ನ ಮ್ಯಾಲೂ ವಿಶ್ವಾಸ ಇಲ್ಲೇನು?" ಎಂದ ನಗೆಯಿಂದ.

ಚೆನ್ನಿ ಸುಮ್ಮನಿದ್ದಳು.

"ವಿಶ್ವಾಸ ಇಲ್ದಿದ್ರ ಹೋಗ್ಬಿಡ್ತೇನಿ ಯಾಕಂದ್ರ—" ಎಂದು ಹೊರಡುವವನಂತೆ ಕಾಲನ್ನೆತ್ತಿಟ್ಟನು

ಚೆನ್ನಿ ಒಮ್ಮೆ ಮುಖವನ್ನೆತ್ತಿ ಆವನನ್ನು ನೋಡಿದಳು. ಗಂಡನ ಮೇಲೆ ಎಂತಹ ಪ್ರಸಂಗ ಒದಗಿದೆಯೊ ಎಂಬ ಅಧೈರ್ಯದ ಕುತೂಹಲ ಒಂದೆಡೆ, ಮಾತನಾಡಿಸಿದರೆ ಮತ್ತೆ ಯಾವ ಪ್ರಸಂಗ ತನ್ನ

ಮೇಲೆ ಬರಬಹುದೊ—ಎಂಬ ಅಧೈರ್ಯದ ಮೌನ ಇನ್ನೊಂದೆಡೆ ಮುಖದಲ್ಲಿ ಹೆದರಿಕೆ, ಕಣ್ಣುಗಳಲ್ಲಿ ಪ್ರಶ್ನೆ, ಒಮ್ಮೆ ಗುಂಡಣ್ಣನನ್ನು ನೋಡಿ ತಟ್ಟನೆ ಮುಖವನ್ನು ಕೆಳಗೆ ಮಾಡಿದಳು.

"ಅಲ್ಲ–ಯಾಕಂದ್ರ–ನಾ ಏನು ಹೇಳಲಿಕ್ಕೆ ಬಂದೀನಿ ಅವರ ಅಪಾರ್ಥ ಆದೀತು. ನನ್ನ ಮ್ಯಾಲೆ ಅಷ್ಟು ವಿಶ್ವಾಸ ಇಲ್ಲದ್ರ—" ಎಂದು ಗುಂಡಣ್ಣ ತಡೆದ.

ಚೆನ್ನಿ ಎಷ್ಟೊತ್ತು ವಿಚಾರ ಮಾಡಿದಳೊ! ಯಾವ ಹೆದರಿಕೆ ಆಕೆಗೆ ಧೈರ್ಯವನ್ನು ಕೊಟ್ಟಿತೊ! ಕೊನೆಗೆ ಮುಖ ಕೆಳಗೆ ಮಾಡಿಯೆ ಕೇಳಿದಳು.

"ಅವನ ನಲುವಾಗಿ ಬೇಕಾದ್ದ್ಮಾಡಲಿಕ್ಕೆ ತಯಾರ ಅದೀನಿ—"

"ಅದೆಲ್ಲಾ ಹೌದವ್ವ. ಈಗ ಹೇಳಲಿಕ್ಕೆ ಆಯಿತು ಮುಂದೆ ನಾ ಹೇಳೋದನ್ನ ಕೇಳಿದ ಮ್ಯಾಲೆ ನನ್ನ ಮ್ಯಾಲೆ ತಿರುಗಿ ಬಿದ್ದೀ ಸೀನು .. ಹಂ....ಒಟ್ಟು ಈ ಜನಕ್ಕ ಸಹಾಯ ಮಾಡಬೇಕನ್ನೋದೇ ತಪ್ಪು"

ಕೊನೆಗೆ ಚೆನ್ನಿಗೆ ಕುತೂಹಲ ತಡೆಯದಂತಾಯಿತು.

"ನನಗ ಯಿನ್ನ್ಯಾನ ಅದ ನಿಂಮ್ಯಾಗ. ಇಂಥಾ ಅಪರಾತ್ರೀ ವಳಗ ಬಂದೀರಿ ಒಬ್ಬರೇ ಅಂದ್ರ—"

"ನೋಡಿದ್ಯಾ? ಒಬ್ಬನೇ ಬಂದೀನಿ – ಅಂದ್ರ? ನಾ ಯಾಕ ಬಂದೀನಿ ಅಂತ ತಿಳಿದೀದಿ? ರಾಮ್ಯಾ ಖಾತ್ರಿಲೆ ಬಂದಿರ್ತಾನ ಅಂತ ಲೆಕ್ಕ ಹಾಕಿ—"

"ಖಾತ್ರೀಲೆ?" ಚೆನ್ನಿ ಚಕಿತಳಾದಳು ಇಷ್ಟು ಖಾತ್ರಿ ಇವರಿಗೆ ಇರಬೇಕಾದರೆ ಅಂತಹದ್ದೇನಾದರೂ ಆಗಿರಲೇಬೇಕು. ಏನಿರ ಬಹುದು–ಎಂದು ಚೆನ್ನಿಯ ಕುತೂಹಲ ಇನ್ನಿಷ್ಟು ಕೆರಳಿದಂತಾಯಿತು "ಖಾತ್ರೀಲೆ? ಜಡ್ಡು – ಕಸಾರಿಕೆ ಆಗೇತೇನು?" ಎಂದಳು.

ಗುಂಡಣ್ಣ ಒಮ್ಮೆಲೆ ನಕ್ಕ. ಚೆನ್ನಿಗೆ ತಿಳಿಯದಾಯಿತು. ಬೆಪ್ಪುವಡೆದು, ಮುಖವನ್ನೆತ್ತಿ ಗುಂಡಣ್ಣನನ್ನು ನೋಡತೊಡಗಿದಳು.

ಆಕೆ ನೋಡಿನೋಡಿದಂತೆ ಗುಂಡಣ್ಣನಿಗೆ ನಗೆ ತಡೆಯದಾಯಿತು. "ಜಡ್ಡು - ! ಹಹ! ಕಸಾರಿಕೆ - ಹಹಹ! ಕಸಬಾರ್ಕ್ತಿ - ಹಹ!" ಎಂದು ಒಂದೇ ಸಮನೆ ನಗುತ್ತ ಕ್ರಮೇಣ ನಗೆಯನ್ನು ತಡೆದನು.

ಚೆನ್ನಿಯ ಮುಖದಲ್ಲಿ ಸಿಡುಕಿನ ಗೆರೆಗಳು ಮೂಡಿದುವು.

ಗುಂಡಣ್ಣನಿಗೆ ಏನು ಹೇಳಬೇಕೊ ತಿಳಿಯದಾಯಿತು.

"ಅಲ್ಲ - ಯಾತ್ರೀಲಿ ಬಂದಿರ್‍ತಾನ ಅಂದ್ರೆ-" ಚೆನ್ನಿ ಮೆಲ್ಲಗೆ ಮಾತನಾಡಿದಳು.

"ಅಂದ್ರೇನಾಯ್ತು ?"

"ಅದಕ್ಕ ಜಡ್ಡು —"

"ಹೆಂಡತೀನ್ನ ನೋಡಬೇಕನ್ನೋ ಜಡ್ಡು. ಹಹ! ಹಹಹ!" ಎಂದು ಮತ್ತೆ ಗುಂಡಣ್ಣ ಗಟ್ಟಿಯಾಗಿ ನಕ್ಕ. ಚೆನ್ನಿ ನಾಚಿಗೊಂಡಳು. ಆದಕಾಗಿ ಗುಂಡಣ್ಣ ಗಹಗಹಿಸಿ ನಕ್ಕ.

ಕೊನೆಗೂ ಚೆನ್ನಿ ಸೋತಳು. ಆದರೆ ಗಂಡನಿಗಾಗಿ ಅಭಿಮಾನವನ್ನಿಟ್ಟುಕೊಂಡೇ ಸೋತಿದ್ದಳು. ರಾಮಿಗೆ ಆಗದವರು ಯಾರೊ ಅವನ ಹೆಸರನ್ನು ಕೆಡಿಸುತ್ತಾರೆ, ರಾಮಿ ಹೆಂಡತಿಯನ್ನು ಬಿಟ್ಟಿರುವುದಕ್ಕೆ ರಾಮಿಯ ಮೇಲೆ ಅಪವಾದ ಹೊರಿಸುತ್ತಾರೆ, ರಾಮಿ ಹೆಂಡತಿಯ ಮೋಹಕ್ಕೆ ಸಿಕ್ಕು ಎಲ್ಲಿ ಕೆಡ ನೋಡಬೇಕು ಈ ಜನರ ಇಚ್ಛೆ—ಎಂದು ಏನೇನೊ ಕತೆಯನ್ನು ಕಟ್ಟಿ ಹೇಳಿದ. ರಾಮಿಯ ಹೆಸರು ಉಳಿಯುವುದಾದರೆ ಚೆನ್ನಿಗೆ ಮಕ್ಕಳಾಗಬೇಕು, ಚೆನ್ನಿಗೆ ಮಕ್ಕಳಾಗುವಾಗ ರಾಮಿಯ ಶರೀರ ಸಾಧನಕ್ಕೆ ಧಕ್ಕೆ ಬರಬಾರದು. ಆದುದರಿಂದ ಇದಕ್ಕೆ ಯಾವ ಉಪಾಯ—ಎಂದು ಚೆನ್ನಿಯ ಮುಂದೆ ತಲೆ ಹಿಡಿದುಕೊಂಡು ಕುಳಿತನು. ಕೊನೆಗೂ ಅವನು ಬಯಸಿದಂತೆಯೆ ಆಯಿತು. ಅವನ ಮಾತಿನಿಂದ ದಿಗ್ಭ್ರಮೆಗೊಂಡ ಸರಲಬುದ್ಧಿಯ ಹೆಣ್ಣು ಅವನ ಬಲೆಯಲ್ಲಿ ಸಿಕ್ಕಿತು. ಇನ್ನು ಒದ್ದಾಡುವಂತಿಲ್ಲ, ಬಿಡುಗಡೆಯೂ ಇಲ್ಲ. ಯಾಕೆಂದರೆ ಚೆನ್ನಿ ಹಾಗೇನಾದರೂ ಮಾಡಲು

ಯತ್ನಿಸಿದರೆ ಆಕೆಯ ಹೆಸರನ್ನು ಕೆಡಿಸುವುದು ಈಗ ಗುಂಡಣ್ಣನಿಗೆ ಸುಲಭವಿದ್ದಿತು.

ಕ್ರಮೇಣ ಗುಂಡಣ್ಣನು ತನ್ನನ್ನು ಮೋಸ ಮಾಡಿದನೆಂದು ಚೆನ್ನಿಗೆ ತಿಳಿಯಿತು. ಚೆನ್ನಿ ತನ್ನನ್ನು ಮನಸಾ ಒಲಿದಿಲ್ಲವೆಂದು ಗುಂಡಣ್ಣನೂ ತಿಳಿದಿದ್ದನು. ಅದಕಾಗಿ ಗುಂಡಣ್ಣನಿಗೆ ಒಂದು ಹೆದರಿಕೆ. ಇಂದಿಲ್ಲ ನಾಳೆ ರಾಮಿಗೆ ಗೊತ್ತಾದರೆ, ಅವನು ತನ್ನನ್ನೂ ಚೆನ್ನಿಯನ್ನೂ ಕೊಲ್ಲಲು ಹಿಂದು ಮುಂದೆ ನೋಡಲಿಕ್ಕಿಲ್ಲ. ಒಂದು ವೇಳೆ ಜೀವವನ್ನು ಉಳಿಸಿಗೊಳ್ಳುವುದಕ್ಕಾಗಿ ಚೆನ್ನಿ ತಾನಾಗಿಯೆ ತನ್ನ ವಿರುದ್ಧ ಹೇಳಬಹುದು—ಎಂದೂ ಗುಂಡಣ್ಣನಿಗೆ ಸಂಶಯ ವಿದ್ದಿತು. ಅದಕಾಗಿಯೆ ಅವನು ಈಗ ಅನೇಕ ಭೇದಿ ಬಾಣವನ್ನು ಪ್ರಯೋಗಿಸಬೇಕಾಯಿತು. ಇತ್ತ ರಾಮಿಯ ಕಾಟವೂ ತಪ್ಪುವುದು, ಇತ್ತ ಕಾಳ್ಯಾನ ಕಾಟವೂ ತಪ್ಪುವುದು ಎಂದು ಎಣಿಕೆ ಹಾಕಿ ಸಮಯ ವನ್ನು ಕಾಯುತ್ತ ಕುಳಿತನು

ಶೀಘ್ರದಲ್ಲಿಯೆ ಅಂತಹ ಸಮಯ ಬಂದಿತು. ಹೆಂಡತಿಯು ಇದಿರಿರುವಾಗ ಆಕೆಯನ್ನು ಅಲಕ್ಷ್ಯ ಮಾಡುತ್ತಿದ್ದ ರಾಮಿಗೆ ಹೆಂಡತಿ ಕಣ್ಣಿಗೆ ಕೂಡ ಬೀಳದಂತೆ ಇರಬೇಕೆಂದಾಗ ಮನಸ್ಸು ಹೆಚ್ಚು ವ್ಯಗ್ರವಾಗಿತ್ತು. ಒಂದಿಲ್ಲೊಂದು ನೆವದಿಂದ ಕೊನೆಗೆ ಹೆಂಡತಿಯ ದನಿಯಾದರೂ ಕಿವಿಗೆ ಬೀಳಬೇಕೆಂದು ಯತ್ನಿಸುತ್ತಿದ್ದನು. ಆದರೆ ಗುಂಡಣ್ಣನ ಕಾವಲು ಗಟ್ಟಿಮುಟ್ಟಾಗಿತ್ತೆನ್ನಬಹುದು. ರಾಮಿಯ ಮನಸ್ಸು ಚಂಚಲವಾದುದರ ಸುಳಿವು ಹತ್ತಿದೊಡನೆ ಗುಂಡಣ್ಣ ಅವನೊಡನೆ ಹೆಚ್ಚು ಸ್ನೇಹದಿಂದ ವರ್ತಿಸುವ, ಅವನನ್ನು ಸ್ತುತಿಸುವ ; ಹಾಗೆಯೆ ಒಂದು ಪ್ರಸಂಗದಲ್ಲಿ ಮಾತನಾಡುವಾಗ–"ಸಾಕ್ಮಹಾರಾಯಾ ನಿನ್ನ ಸಹವಾಸ" ಎಂದುಬಿಟ್ಟ ಗುಂಡಣ್ಣ. ರಾಮಿಗೆ ಎದೆಯಲ್ಲಿ ಏನೋ ತಿವಿದಂತಾಯಿತು. ಯಾಕೆ ? ಏನು ? ತಾನು ಮಾಡಿದ್ದೇನು ? 'ಇನ್ನು ನಾಕು ಸಹವಾಸ' ಎಂದರೆ ? ಇದುವರೆಗಿನ ತಯಾರಿ ವ್ಯರ್ಥ

ವಾಯಿತೆ ? ಮುಂದಿನ ಆಶೆಗಳ ಗತಿ ಏನು ? ರಾಮಿ ಗಾಬರಿಯಾದ. ಯಾಕೆ ಈ ಆಪತ್ತು ಬಂದಿತೊ ನನ್ಮೇಲಿ ?

"ಯಾಕರೀ, ಧಣೇರ ? ಹಿಂಗ್ಯಾಕಂತೀರಿ ?" ದನಿ ಸಾಲದವನಂತೆ ರಾಮಿ ಉಸುರಿದ

"ಯಾಕಂದ್ರೇನೊ ? ನಿಂದೇನು ಹೋದೀತು ?"

"ಅಲ್ಲ – ಗವ್ರ್ನೋರೇ – ನನ್ ತಪ್ಪೇನಾದ್ರೂ ಆಗಿದ್ರ—"

"ತಪ್ಪು ನಿನ್ನದಲ್ಲವ, ತಪ್ಪು ನನ್ನದು, ಪೂರ್ತಿ ನನ್ನದು, ನಿಮ್ಮಂಥವ್ರಿಗೆ ಉಪಕಾರ ಮಾಡ್ಲಿಕ್ಕೆ ಹೋದದ್ದೇ ತಪ್ಪು. ಆದಕ್ಕೇ ಅಂದೆ, ತಪ್ಪು ನನ್ನದು ಅಂತ."

ಗುಂಡಣ್ಣನ ಮುಖವನ್ನು ಪಶ್ಚಾತ್ತಾಪದ ಛಾಯೆ ಮೋಡಿನಂತೆ ಆವರಿಸಿತು. ಗುಂಡಣ್ಣ ಉಸುರ್ಗರೆದ. ರಾಮಿಗೆ ಕರುಳಿನಲ್ಲಿ ಚೂರಿಯನ್ನು ಇರಿದಂತಾಯಿತು. ಏನಾಗಿದೆ? ಏನಾಗಿರಬಹುದು ? ತನ್ನ ಸಲುವಾಗಿ ಗುಂಡಣ್ಣನಿಗೆ ತೊಂದರೆಯೆ ? ಯಾರವರು— ತೊಂದರೆ ಕೊಟ್ಟವರು ? ಅವರನ್ನು ನೆಲಕ್ಕೆ ಉರುಳಿಸಿ ಮೊಣಕಾಲಿನಿಂದ ತಿವಿದು ಮಣ್ಣುಮುಕ್ಕುವಂತೆ ಮಾಡಬೇಕು—ಎಂಬ ವಿಚಾರದಿಂದ ರಾಮಿ ಹಲ್ಲು ತಿಂದ. ತನ್ನಿಂದ ಧಣೇರಿಗೆ ಈ ತೊಂದರೆ! ತನಗಾಗಿ ಬೇಕಾದ್ದನ್ನು ಮಾಡಲು ಸಿದ್ಧರಿದ್ದ ಗವ್ನರ್ ಗುಂಡಣ್ಣ ಅವರಿಗೆ ಮನಸ್ತಾಪ!—ಅದೂ ತನ್ನ ನಿಮಿತ್ತವಾಗಿ. ನಡುಪೇಟೆಯಲ್ಲಿ ಯಾರೋ ಮೊಚ್ಚೆಯಿಂದ ಹೊಡೆದಂತೆ ನಾಚಿಕೆಗೊಂಡ ರಾಮಿ, ಮುಖವನ್ನು ಕೆಳಗೆ ತೂಗಬಿಟ್ಟ.

ಗುಂಡಣ್ಣ ಯಾವದೋ ನಿರ್ಧಾರಕ್ಕೆ ಬಂದಂತೆ ಉಸುರ್ಗರೆದು 'ತಪ್ಪು—ನನ್ನದು' ಎಂದ.

ರಾಮಿಗೆ ಈಗ ತಡೆಯದಾಯಿತು. ಮುಖವನ್ನು ಮೇಲಕ್ಕೆತ್ತಲಾರದೆಯೆ ಗುಂಡಣ್ಣನ ಕಾಲ್ಗಳನ್ನು ಗಟ್ಟಿಯಾಗಿ ಹಿಡಿದುಕೊಂಡ. "ಗವ್ನೋರ, ನಿಂ ಪಾದಾ ಮುಟ್ಟಿ ಹೇಳ್ತೀನಿ. ನಿಮಗೆ ಯಾರು

ಹೆಸರಿಟ್ಟವರು ಹೇಳಿರಿ, ಅವರ ಹೆಣ ಸುಲಗಿಸಿ ಹೊಂಡದಾಗ ಹೂಳತೀನಿ—"

"ಅಲ್ಲೊ – ಹುಚ್ಚ! – ನಾ ಅಂಜತೀನಿ ಅಂತ ನಿನ್ನ ಮುಂದ ತಕರಾರು ಹೇಳ್ತೀನಿ ಅಂತ ತಿಳಿದೀಯೇನು? ಕಪಾಳಿಗೆ ಎರಡು ಬಿಗಿದು ಮುಗಿಸೂ ಹಾಗಿದ್ದರೆ—ನಾನೇ ಮುಗಿಸತಿದ್ದೆ. ಆದರೆ ನಿನಗ ಗೊತ್ತಿಲ್ಲ, ನಿನಗೇ ಗೊತ್ತಾದರ ನೀಯೇನು ಮಾಡತೀಯೋ? ನಾಕಂದ್ರ, ನೀನ ವಿಶ್ವಾಸ ಇಟ್ಟಿ ಅಂದ್ರ, ಮುಗಿದೇ ಹೋಯಿತು, ಉರುಲು ಹಾಕಿಕೊಳ್ಳೋದೊಂದೆ ಉಳಿಯೋದು ನನ್ನ ಪಾಲಿಗೆ."

"ಖುಂಡ ಮನೆಗಳ ಎಣಿಸೋ ಕುಲಗೇಡಿ ನಾ ಅಲ್ಲರಿ, ಧಣೇರ. ನಿಂ ಸಲುವಾಗಿ ಜೀವಾ ಸುದ್ಧಾ ಕೊಡಲಾಕ—"

"ಅದ್ಕ್ಕ ಅಹುದೊ! ಆದರೆ, ನೋಡು, ರಾಮೀ, ಕೆಲವು ಮಾತಿನೊಳಗ ಮನುಷ್ಯ ಯಾವುದನ್ನೂ ನೋಡೋದಿಲ್ಲ, ಸಿಟ್ಟಿನಿಂದ ಕುರುಡೇ ಆಗ್ತಾನ—"

"ಇದೇನ್ರಿ, ಗಪ್ಪ್ನೇರು? ಬಡರಂಡೇಮಗ ನಾ ಏನು? ನಿಂ ಮ್ಯಾಗ ಸಿಟ್ಟಂದ್ರೇನು?"

"ಅದಕ್ಕೇ ಹೇಳಿದೆನಲ್ಲೊ, ಕೆಲವು ಮಾತಿನಾಗ ಬಡವ ಇಲ್ಲ, ಶ್ರೀಮಂತ ಇಲ್ಲ ಒಣಹುಲ್ಲಿನ ಹತ್ತಿರ ಕಡ್ಡಿ ಕೊರೆಧಾಂಗ ಆಗ್ತದ ಆ ಮಾತು ಎದ್ದರ"

"ನೀವು ನನ್ಮ್ಯಾಗ ವಿಶ್ವಾಸ ಇಟ್ಟು ಹೇಳಿ ನೋಡಿರಿ—"

"ಹೇಳಿ ನೋಡಿರಿ—ಅಂದ್ರ? ಅದು ನನ್ನ ಮಾತಲ್ಲ. ನಿನ್ನ ಸಲುವಾಗಿ, ನನ್ನ ಸಲುವಾಗಿ ಮುಂದ ಆಡಿಕೊಳ್ಳೋ ಮಾತು ಮುಂದಿನ ಮಾತಂತಲೇ ಇರಲಿ. ನಂ ಕಾಳ್ಯಾ ಗೊತ್ತದ ಇಲ್ಲ? ನಮ್ಮಲ್ಲಿಯೆ ಹುಟ್ಟಿ ಬೆಳೆದವ ಅನ್ನಬಹುದು. ಆ ಸೂಳೇಮಗ ನಟಿತ ಅನಬೇಕ?"

"ಏನಂದಾನ ಹೇಳಿರಿ, ಧಣೇರ. ಹೊಲಗೇರೀವಳಗ ನಟಿತ

ಆ ಮನೀಗೆ ಜಾಗಾ ಸಿಗಧಾಂಗ—”

“ಆಯ್ತು – ಒಹಾಳ ಬುದ್ಧಿವಂತ! ನಿಮ್ಮಂಥಾ ಹುಂಬರನ್ನ ಕಟ್ಟಿಕೊಂಡರ ಮಾನ-ಮರ್ಯಾದೆಯಿಂದ ಇರೋದೇ ಕಠಿಣ. ಹಂ ಸೇನ ಕೇಳಿ ಹೋಲಿಯ ಅವ. ಅವನ ಜೋಡಿ ನೀ ಜಗಳಾ ತೆಗೆಯುವವನ? ಅಂದ್ರ — ಮುಂದಿಗೆ ಮತ್ತಿಷ್ಟು ಮಾತಾಡ್ಲಿಕ್ಕೆ ಅನುಕೂಲ ಮಾಡಿ ಕೊಟ್ಟ ಹಾಂಗ”

“ಇಲ್ಲಿ—ಧನೀರ—ನನಗಂದಿದ್ರ ಆ ಮಾತು ಬ್ಯಾರಿ. ಆದರ ನಿಮಗ? ನಿಂ ನೆರಳಿನಾಗ ಹಾಯೂಕ ಯೋಗ್ಯತಾ ಇಲ್ಲ—ಅಂಥಾವ—ನಿಮಗ—”

“ಅಹುದು. ನಿನಗ ಸಹಾಯ ಮಾಡುವವ ನಾನು, ಅತ್ತ ನಿಮ್ಮನೀಗೆ ಹೋಗಿ ಬರುವವನೂ ನಾನು.”

‘ಅಂದ್ರ? ಅಲ್ಲ—ಅದರಾಗೇನು ತಪ್ಪು—ಅಲ್ಲ—”

“ಹುಚ್ಚ ಇದ್ದೀ! ಇಷ್ಟು ತಿಳೀಬಾರದ? ನಿನಗ ತಿನ್ನಲಿಕ್ಕೆ-ಉಣ್ಣಲಿಕ್ಕೆ ಕೊಟ್ಟು ಮನೆಯಿಂದ ದೂರ ಇಟ್ಟೀನಿ. ನಾ ನಿಮ್ಮನೀಗ ಹೋಗ್ತೀನಿ—”

ಗುಂಡಣ್ಣ ಸೂಚ್ಯವಾಗಿ ತಡೆದ. ರಾಮಿಯನ್ನು ದಿಟ್ಟಿಸಿದ. ಕಣ್ಸನ್ನೆ ಮಾಡಿದ, ‘ತಿಳೀತೇನವ?’ ಎಂದು ಕೇಳಿದ

ರಾಮಿಯ ಸರ್ವಾಂಗ ನಡುಗಿತು. ಸಿಟ್ಟು, ಸಂತಾಪ, ಸ್ವಾಭಿಮಾನ — ಇವೆಲ್ಲವುಗಳ ಜ್ವಾಲೆ ಧಗಧಗಿಸುವಾಗ ಆ ಕಾವಿ ನಿಂದೇನೊ ಎನ್ನುವಂತೆ ಪ್ಪಿ ಬಿಸುರೊಡೆಯಿತು. “ಛೀಲ್ಯಾ! ಸೂಳೀರ ರಕ್ತದಾಗ ಹುಟ್ಟಿದ—”

“ಇಲ್ಲ ನೋಡು ರಾಮೀ, ನೀನು ಸಿಟ್ಟಿಗೆ ಬರೋ ಹಾಂಗಿಲ್ಲ. ಗೊತ್ತದನೊ ಇಲ್ಲೊ? ಯಾವುದನ್ನೂ ಮನಸಿಗೆ ಹಚ್ಚಿಕೊಳ್ಳೋ ಹಾಂಗೂ ಇಲ್ಲ, ತಿಳೀತೇನು? ಇವಕ್ಕ ಒಪ್ಪಿದೀ, ನಾ ನಿನ್ನ ಬೆನ್ನು ಬಿಡೋದಿಲ್ಲ. ಏನೊ ಮಾತಿಗೆ ಮಾತು ಹೊರಟಿತು ಅಂತ ಹೇಳಿದೆ–”

ಏನೇನೊ ಹೇಳಿ ಗುಂಡಣ್ಣ ರಾಮಿಯನ್ನು ಸಾಂತ್ವನ ಗೊಳಿಸಿದ. ಆದರೆ ಅವನಿಗೆ ಗೊತ್ತು; ಹೀಗೆ ಒತ್ತಿ ಹಿಡಿಯಲ್ಪಟ್ಟ ಸಿಟ್ಟು, ಮೂಲದ ನಿದಾನವಿಲ್ಲದ ರೋಗದಂತೆ, ರಬ್ಬರ್ ಚಂಡಿನಂತೆ ಅವಕಾಶ ದೊರೆತೊಡನೆ ಹೆಚ್ಚು ರಭಸದಿಂದ ಪುಟಿದೇಳುವುದು ಎಂಬುದನ್ನು ಗುಂಡಣ್ಣ ಚನ್ನಾಗಿ ಬಲ್ಲ.

ಅದಕಾಗಿಯೆ ಅವನ ಮುಖದಲ್ಲಿ ಮುಗುಳ್ನಗೆ ಮೂಡಿತು.

ಕಾಳ್ಯಾ ಮತ್ತು ರಾಮಿ.

ಮುಳ್ಳಿಗೆ ಮುಳ್ಳು.

ಗುಂಡಣ್ಣನ ಮುಗುಳ್ನಗೆ ಇನ್ನಿಷ್ಟು ಅರಳಿತು 'ಹುಂಬ ನೋಡು, ಶುದ್ಧ ಹುಂಬ ನೀನು!' ಎನ್ನುತ್ತ ರಾಮಿಯ ಬೆನ್ನು ಮೇಲೆ ಕೈಯನಾಡಿಸಿದ.

* * *

ರಾಮಿಯ ಕಾಟ ಹೆಚ್ಚಾಗುತ್ತ ನಡೆದಿತ್ತು. ಇದೆಲ್ಲ ಕಿಡಿಗೇಡಿತನ ರಾಮಿಯದೆ ಎಂಬುದರ ಬಗ್ಗೆ ಕಾಳ್ಯಾನಿಗೆ ಸಂಶಯವಿದ್ದಿರಲಿಲ್ಲ. ಹೊಲಗೇರಿಯವರೆಗೆ ಬಂದು ಈ ಪರಿ ತೊಂದರೆ ಕೊಡುವವರು ಮತ್ತೆ ಯಾರು? ಇದಲ್ಲದೆ–ಒಂದು ದಿನ ರಾತ್ರಿ ಗುಡಿಸಲಿನ ಮೇಲೆ ಕಲ್ಲುಗಳು ಬೀಳುತ್ತಿರುವಾಗ ಮುಂದೆ ಹೋಗಿ ನೋಡಿದರೆ ನಾಯಿ ಕುಳಿತಲ್ಲಿಯೆ ಕೂತಿತ್ತು. ಕಾಳ್ಯಾನಿಗೆ ಆಗ ಸಂಶಯ ಬಂದಿತು. ಊರವರು–ನಾಯಿಗೆ ಗೊತ್ತಿದ್ದವರು–ಕಲ್ಲನ್ನು ಒಗೆದಿರಬೇಕು. ಇಲ್ಲವಾದರೆ ನಾಯಿ ಬೊಗಳುತ್ತಿರಲಿಲ್ಲವೆ? ಅದರಂತೆಯೆ ಇನ್ನೊಂದು ಸಂಜೆಗೆ ತಾನು ನೆರೆಹಳ್ಳಿಯಿಂದ ಬರುತ್ತಿರುವಾಗ ಹಿಂದಿನಿಂದ ಯಾರೊ ಬಂದು, ಮಾತಿಲ್ಲದೆ ಯಾವ ಸದ್ದೂ ಇಲ್ಲದೆ, ತನ್ನನ್ನು ಎತ್ತಿ ಕೆಡವಿ ಹೋಗಿದ್ದರಲ್ಲ? ಆ ಘಟನೆಯಿಂದಂತೂ ಕಾಳ್ಯಾನಿಗೆ ಖಾತ್ರಿಯಾಗಿತ್ತು; ಆ ಕಸುವು, ಆ ಹಿಡಿತ, ಹಾಂಹಾಂ ಎನ್ನುವಷ್ಟರಲ್ಲಿ ತನ್ನನ್ನು ಕೆಡವಿದ ಆ ಪೇಚು–ಇದೆಲ್ಲ ಕುಸ್ತಿ ಆಡುವವನ ಲಕ್ಷಣಗಳು ಎಂಬುದು ಕಾಳ್ಯಾ

ನಿಗೆ ಸ್ಪಷ್ಟವಾಗಿತ್ತು. ಆದರೆ ಎಲ್ಲಕ್ಕೂ ನಿಸ್ಸಂದಿಗ್ಧವಾದ ಘಟನೆಯೊಂದು ನಡೆದಿತ್ತು. ಅಂದಿನಿಂದ ರಾಮಿಯೆ ತನ್ನ ಶತ್ರು ಎಂದು ಕಾಳ್ಯಾ ಬಹಿರಂಗವಾಗಿಯೆ ಒಪ್ಪಿಕೊಂಡಂತಾಗಿತ್ತು. ಕುಸ್ತಿಯ ಆಳು ಎಂಬ ಸೊಕ್ಕು ಇದೆಯಲ್ಲ ಅವನಿಗೆ? ಎಂತಹ ನಾಚಿಕೆಗೇಡಿ ಗಂಡಸು! ತನ್ನ ಹೆಂಡತಿಯನ್ನು ಇನ್ನೊಬ್ಬರಿಗೆ ಬಿಟ್ಟುಕೊಟ್ಟು ತಾನು ಹೀಗೆ ನಡೆಯುವುದೆಂದರೆ–? ಕಾಳ್ಯಾನಿಗೆ ಏನು ಮಾಡಬೇಕೆಂಬುದು ತಿಳಿಯದಾಗಿತ್ತು. ಶಕ್ತಿ ರಾಮಿಯದಾಗಿತ್ತು, ಪ್ರಸಂಗ ಬಂದಲ್ಲಿ ಜನರ ಬೆಂಬಲವೂ ರಾಮಿಗೇ ದೊರೆಯಬಹುದು, ಇದಲ್ಲದೆ–ತಮ್ಮ ಹೆಂಗಸರ ಗೌರವದ ಬಗ್ಗೆ ಮಿಕ್ಕವರು ವಿಚಾರವನ್ನೆ ಮಾಡುವುದಿಲ್ಲ ಎಂಬುದೂ ಕಾಳ್ಯಾನಿಗೆ ಗೊತ್ತಿತ್ತು. ಆದರೇನು? ಒಂದು ಹುಂಜ ಕೂಡ ಇನ್ನೊಂದನ್ನು ತನ್ನ ಕೋಳಿಯ ಹತ್ತಿರ ಬರಗೊಡುವುದಿಲ್ಲ ಎಲ್ಲಿ ನೋಡಿದರೂ ಗಂಡಿನ ಸ್ವಭಾವ ಒಂದೇ, ತನ್ನ ಹೆಣ್ಣಿಗಾಗಿ ಅಭಿಮಾನ. ತಾನು ಹೊಲೆಯ, ಗಂಗಿ ಹೊಲತಿ, ಆದರೆ ಗಂಗಿ ತನ್ನವಳಲ್ಲವೆ? ರಾಮಿಯಂತಹ ಉಡಾಳನೊಬ್ಬನು ಬೇಕಾದಾಗ ಬೇಕಾದಂತೆ ಆಕೆಯನ್ನು ಅವಮಾನಗೊಳಿಸಬಹುದೆ? ಗಂಗಿ ಗಟ್ಟಿ, ಹಾಗೆ ಕೇಳಿದರೆ ತನ್ನ ಜಾತಿಯ ಹೆಂಗಸರೆ ಗಟ್ಟಿ, ಇನ್ನೊಬ್ಬರ ಸಹಾಯವಿಲ್ಲದಿರುವಾಗ ಅವರು ಗಟ್ಟಿಯಾಗಲೇಬೇಕಲ್ಲ? ಆದರೆ ಗಟ್ಟಿಗತನ ಗಂಡರಾಮಿತನ ಎನ್ನಿಸುವುದು, ಗಂಡರಾಮಿತನ ಸೂಳೆಯ ಲಕ್ಷಣ ಎಂದು ತಿಳಿಯಲ್ಪಡುವುದು....ಕಾಳ್ಯಾನಿಗೆ ಒಮ್ಮಿಂದೊಮ್ಮೆಲೆ ನಗೆಬಂದಿತು. ಈ ವಿಚಾರ ನಡೆದಾಗ ತಟ್ಟನೆ ಅವನಿಗೆ ಗಂಗಿ ಹೇಳಿದ ಮಾತುಗಳು, ಆಕೆಗೂ ರಾಮಿಗೂ ನಡೆದ ದೃಶ್ಯ ಕಾಳ್ಯಾನ ನೆನಪಿಗೆ ಬಂದವು. "ಸಾಕಷ್ಟು ಬೆರಕಿ–ಐತಿ—ಈ ಹೆಣ್ಣಿನ ಜಾತಿ!" ಎಂದು ಆ ಘಟನೆಯನ್ನು ಗಂಗಿ ಹೇಳಿದಾಗ ಕಾಳ್ಯಾ ನಗೆಯಿಂದ, ಅಭಿಮಾನದಿಂದ ಗಂಗಿಯನ್ನು ನೋಡುತ್ತ ನುಡಿದಿದ್ದ. ಅಲ್ಲದೆ ಮತ್ತೇನು? ಏನೇನೊ ಹುಂಬತನ ಮಾಡುತ್ತ ಮೈಮೇಲೆ ಏರಿ ಬರುತ್ತಿರುವ

ರಾಮಿಯನ್ನು ಒಂದು ಮಾತಿನಿಂದ ಜಾಡಿಸಿಬಿಟ್ಟಿದ್ದಳಲ್ಲ? ಹಹ! ಕುಸ್ತಿಯ ಆಳು, ಮೈ ಕೈ ಗಟ್ಟಿ, ತಾನೇನೊ ರೂಪದಿಂದ ಮದನ ಅನ್ನುವ ಹಾಗೆ ಮೀಸೆಯನ್ನು ಹುರಿಮಾಡುತ್ತ ಗಂಗಿಗೆ ರಾಮಿ ತೊಂದರೆ ಕೊಡುತ್ತಿರುವಾಗ ಗಂಗಿ ತಟ್ಟನೆ ನುಡಿದಿದ್ದಳು :

"ಅಯ್ಯ ಗಂಡಸ! ಮನೀ ಹೆಂಡ್ತೀನ್ನ ಸೈರೆ ಬಿಟ್ಟು ಮಂದೀ ಹೆಂಡ್ತೀಗ ಹಪಾಪಿಸೋ ಗಂಡಸು! ಮೀಸೆ ಹುರಿಹಾಕ್ತೀತಿ! ಪಾಪ! ಗಂಡಸುತನ ಅಂದ್ರ ಮೀಸೆ ಒಂದೇ ಅಂತ ತಿಳಿದೇತಿಯೊ ಏನೊ?"

ಹಹ! ಗಂಗಿಯ ಮಾತನ್ನು ಕೇಳಿದಾಕ್ಷಣ ರಾಮಿ ಅಲ್ಲಿ ನಿಂತಿರಲಿಲ್ಲ.

ಆದರೆ ತನ್ನನ್ನು ಪೀಡಿಸುತ್ತಿರುವವ ರಾಮಿ ಎಂಬುದರ ಬಗ್ಗೆ ಕಾಳ್ಯಾನಿಗೆ ಅಂದಿನಿಂದ ಸಂಶಯ ಉಳಿದಿರಲಿಲ್ಲ.

ಗಂಗಿಯ ಬಗ್ಗೆಯೂ ಅಂದು ಅವನ ಅಭಿಮಾನ ಹೆಚ್ಚಲು ಕಾರಣವಿದ್ದಿತು.

ರಾಮಿಯ "ಫಜೀತಿ"ಯನ್ನು ಹೇಳುವ ಹುರುಪಿನಲ್ಲಿಯೆ ಗಂಗಿ ಇನ್ನೊಂದು ಸಂತೋಷದ ಸುದ್ದಿಯನ್ನು ಹೇಳಿದ್ದಳು

ಗಂಗಿಗೆ ಬಸಿರು ನಿಂತಿತ್ತು.

# ೬

ರಾಯರ ಸಂಸಾರ ಇಳಿಮುಖಕ್ಕೆ ಬಿದ್ದಿತು. ಇಂತಹದೆ ಕಾರಣ ಎಂದು ಹೇಳಲು ಬರುವಂತಿಲ್ಲ, ಆದರೂ ದಿನದಿನಕ್ಕೆ ಪರಿಸ್ಥಿತಿ-ಹದಗೆಡುತ್ತ ನಡೆದಿದೆ. ರಾಯರ ವಿಚಾರ ಗೊಂದಲಕ್ಕಿಟ್ಟಿತು. ಯಾಕೆ ಹೀಗಾಗಬೇಕು ? ನಾನು ಯಾವ ತಪ್ಪನ್ನು ಮಾಡಿದ್ದೇನೆ, ಹಿಂದಿನ ಜನ್ಮದ ಯಾವ ಪಾಪಕ್ಕಾಗಿ ಇದನ್ನು ಕಣ್ಮುಟ್ಟಿ ನೋಡುವ ಕಷ್ಟ ನನ್ನ ಪಾಲಿಗೆ ಬಂದಿದೆ. ಹಿರಿಯರಿಂದ ನಡೆದು ಬಂದುದನ್ನು ಉಳಿಸಿಕೊಳ್ಳುವ ಯೋಗ್ಯತೆ ಕೂಡ ನನ್ನಲ್ಲಿಲ್ಲದೆ ಹೋಯಿತೆ, 'ರಾಘವಾ, ರಘುಪತೀ, ನೀನೇ ಮಾಡುವಾತಾ ಮಾಡಿಸುವಾತಾ. ಇನ್ನೂ ಏನೇನಿದೆಯೊ ?' ಎಂದು ರಾಯರು ಆಗಾಗ ತಳಮಳಿಸುತ್ತಿದ್ದರು. ಈ ಅವಸ್ಥೆಗೆ ಮನೆತನ ಮುಟ್ಟೀತು, ಅದೂ ತಮ್ಮ ಜೀವಮಾನದಲ್ಲಿ-ಎಂದು ರಾಯರು ಕನಸು-ಮನಸುಗಳಲ್ಲಿ ಊಹಿಸಿರಲಿಲ್ಲ. ಅದೂ ಹೋಗಲಿ—ಇದನ್ನು ನೋಡಲು ತಾವು ಜೀವದಿಂದುಳಿಯಬೇಕೆ ? ಲಕ್ಷಾವಧಿ ಜನರು ಸತ್ತರು, ಆದರೆ ತನಗೆ ಏನೂ ಆಗಲಿಲ್ಲವಲ್ಲ ! ಯಾರು ಇನ್‌ಫ್ಲುಎಂಝಾ ಎಂದರು, ಯಾರು ನ್ಯುಮೋನಿಯಾ ಅಂದರು—ಹೆಸರನ್ನೇನೊ ಕೊಟ್ಟರು, ಆದರೆ ಸರಿಯಾದ ಔಷಧವನ್ನು ಕೊಡಲಿಲ್ಲ ; ಬಿಟ್ಟೂರಂತಹ ಹಳ್ಳಿಯಲ್ಲಿ ಕೂಡ ೩೦೦–೪೦೦ ಜನ

ಸತ್ತರು! ದೇಶದಲ್ಲಿ ಸಾವಿರಗಟ್ಟಲೆ ಜನ ಸತ್ತರಂತೆ! ಆದರೆ ಮನೆಯಲ್ಲಿಯೆ ತಮ್ಮ ತಂಗಿ ಸರಸ್ವತಿ – ಆಹುತಿಯಾದಳು, ತಮಗೆ ಮಾತ್ರ ಏನೂ ಸಂಪರ್ಕವೆ ಇಲ್ಲದೆ ಹೋಯಿತಲ್ಲ? ಇಷ್ಟೊಂದು ನಿರ್ಭಾಗ್ಯನಾಗಿರುವೆನೆ ನಾನು—ಎಂದು ಮೇಲಿಂದ ಮೇಲೆ ಉಸು ಗರರೆಯುತ್ತಿದ್ದರು ಸರಸ್ವತಿ ಹೋದಳು—ಈಗ ಮನೆಯಲ್ಲಿ ಯಾರಾದರೂ ಹೆಣ್ಣುಮಗಳ ಅಗತ್ಯ ಬಹಳವಾಗಿತ್ತು — ರಾಯರ ಮಗಳಾದ ಶಾಂತಳ ಮದುವೆಯಾಗಬೇಕಾಗಿದೆ — 'ಮಗಳು ಬೆಳೆ ದಳು, ರಘಣ್ಣಾ. ಬ್ಯಾಗನೆ ವರಾ ನೋಡು' ಎಂದು ಸರಸ್ವತಿ ಬೆನ್ನು ಹತ್ತಿದ್ದಳಲ್ಲ? ಈಗ ಆಕೆಯೆ ಇಲ್ಲ. ಆದರೂ ಮಗಳ ಮದುವೆಯಾಗಬೇಕು, ವಯಸ್ಸು ೧೫ಕ್ಕೆ ಮಿಕ್ಕಿ ಹೋಗಿದೆ.

"ನಂ ವ್ಯಾಳ್ಯಾಕ್ಕ ಇಷ್ಟು ದಿವಸಕ್ಕ ಮದುವೆ ಆಗಲಿಲ್ಲ ಅಂದ್ರ ಹೊಟ್ಟೆತುಂಬ ಊಟಕ್ಕ ಹಾಕತಿದ್ದಿಲ್ಲ, ತಿಳೀತೇನು, ಶಾಂತೀ?"

"ಆದರೆ ಬೇಡಿದ್ದನ್ನ ಮಾಡಿ ಹಾಕತೀ ಅಲ್ಲ ನೀನೇ, ಅತ್ತೆ?"

"ಏನ್ಮಾಡ್ಬೇಕವ್ವಾ? ನಾಳೆ ಗಂಡನ ಮನೆಗೆ ಹೋದಿ ಅಂದ್ರ, ತಾಯಿ ಇಲ್ಲದ ಹುಡುಗಿ, ಯಾರು ಹೊಟ್ಟೆ ತುಂಬ ಊಟಕ್ಕ ಸಹಿತ ಹಾಕಿಲ್ಲ ನೋಡು ಅಂದಾರು ನನಗೇ."

ಅಂತೂ ಶಾಂತಾ ಸುಖದಿಂದ ಬೆಳೆದಿದ್ದಳು. ಮೈಕೈಗಳಲ್ಲಿ ಯೌವನದ ಸೌಷ್ಠವವು ಸೂಸುತ್ತಿತ್ತು. ರಾಯರ ದೃಷ್ಟಿಯಿಂದಲೂ ಆಕೆಯ ಮದುವೆಯ ವಯಸ್ಸು ಮೀರಿತ್ತು. ಮಗಳನ್ನು ಮದುವೆ ಇಲ್ಲದೆ ಬೆಳೆಯಗೊಟ್ಟುದೆ ಪಾಪವಾಯಿತೆ?—ಎಂದು ಒಮ್ಮೊಮ್ಮೆ ಅನುಮಾನಿಸುವರು. ಆದರೇನು? ನಿರ್ವಾಹವೆ ಇಲ್ಲ. ಮಗಳ ಮದುವೆ ಎಂದರೆ ಸಣ್ಣ ಕೆಲಸವೆ? ಕೈಯಲ್ಲಿ ದುಡ್ಡು ಬೇಕು. ಎಲ್ಲಿಂದ ತರುವುದು? ಹೇಗೆ ಎಂಬುದು ತಿಳಿಯುವ ಮುಂಚಿತವಾಗಿಯೆ ಒಂದೊಂದಾಗಿ ಹೊಲ ಕೈಬಿಟ್ಟಿದ್ದುವು. ತಮ್ಮ ತಂದೆಯ ಉತ್ತರ ಕ್ರಿಯೆ, ಮುಂದೆ ತಂಗಿಯ ಸಂಸಾರಕ್ಕಾಗಿ ವೆಚ್ಚ, ಅಷ್ಟರಲ್ಲಿಯೆ ತಮ್ಮ

ಹೆಂಡತಿ ತೀರಿದ್ದು, ಗುಂಡಣ್ಣನ ಶಿಕ್ಷಣ, ಗುಂಡಣ್ಣನ ಮದುವೆ—ಒಂದೊಂದೇ ನಿಮಿತ್ತವಾಗಿ ಆಸ್ತಿ ಕೈಬಿಡುತ್ತಿದ್ದು ಈಗ ಒಬ್ಬಳೇ ಒಬ್ಬಳಾದ ಮಗಳ ಮದುವೆ ಮಾಡುವುದೆಂದರೆ ದುಸ್ತರವಾಗಿಬಿಟ್ಟಿದೆ. ಒಮ್ಮೊಮ್ಮೆ ರಾಯರಿಗೆ ಸಂಶಯ ಬರುತ್ತಿತ್ತು, ಗುಂಡಣ್ಣನ ದುಂದುಗಾರಿಕೆ ಹೆಚ್ಚಾಗಿದೆ, ಎಂದು ಆದರೇನು? ಒಬ್ಬನೇ ಮಗ, ಹರೆಯದ ವಯಸ್ಸು, ಈಗಲ್ಲದೆ ಹುಡುಗ ಇನ್ನು ಯಾವಾಗ ಖರ್ಚು ಮಾಡಬಲ್ಲ—ಎಂದು ಲೆಕ್ಕವನ್ನು ನೋಡಲು ಕೂಡ ಹೋಗಿರಲಿಲ್ಲ. ಈಗ—ಶಾಂತಳ ಮದುವೆ ಆಗಬೇಕು—ಹಣ ಬೇಕು.

"ಹಣ ಬೇಕು ಅಂದ್ರ, ಹ್ಯಾಂಗ, ಮಾವಾ? ಏನು ಮನೆ ತುಂಬ ಹೆಣ್ಮಕ್ಕಳು ಅವನ? ಏನು ಮತ್ತೆ ಯಾರಾದರೂ ನೋಡವರು ಮಾಡವರು ಇದ್ದಾರ? 'ಶಾಂತಿಯ ಮದಿವಿ ಆಗೋದನ್ನ ನೋಡ್ತೀನ್ಯೋ ಇಲ್ಲೊ' ಅಂತ ಹಂಬಲಿಸಿ ಪಾಪ! ಅವ್ವ ಎಲ್ಲಾ ನೀಗಿದಳು" ಎಂದು ಸುಬ್ಬಕ್ಕ ಗಂಟಲು ತುಂಬಿ ಬಂದು ತಡೆದಳು.

ಸರಸ್ವತಿಯು 'ಹೋದಂ'ದಿನಿಂದ ಸುಬ್ಬಕ್ಕನೆ ಮನೆಗೆ ಯಜಮಾನಿತಿ. ಮಾವ ಬೇರೆ, ಸೋದರ ಮಾವ ಬೇರೆ ಅಲ್ಲವಲ್ಲ? ಅದಕಾಗಿ ಆಕೆ ಎಲ್ಲದರಲ್ಲಿಯೂ ಮುಂದಾಗಿ ಮನಸ್ಸನ್ನು ಹಾಕುತ್ತಿದ್ದಳು ಈಗ ಮನೆಗೆ ತಾನೆ ಯಜಮಾನತಿ, ಆದ್ದರಿಂದ ಶಾಂತಳ ಮದುವೆಯನ್ನು ಮಾಡಿಸುವುದು ತನ್ನ ಕರ್ತವ್ಯ ಎಂದು ಸುಬ್ಬಕ್ಕ ನಂಬಿಕೊಂಡಿದ್ದಳು. ಇದಲ್ಲದೆ ಶಾಂತಳ ಮದುವೆ ತನ್ನ ತಾಯಿಯ ವಾಸನೆಯಾಗಿತ್ತು, ಆ ಮದುವೆಯನ್ನು ಮಾಡಿಸಿದರೆ ತಾಯಿಯ ಇಚ್ಛಾಪೂರ್ತಿಯಾಗುವುದೆಂದೂ ಸುಬ್ಬಕ್ಕ ತಿಳಿದಿದ್ದಳು. ಮೇಲಿಂದ ಮೇಲೆ ಮಾವನ ಮುಂದೆ ಪ್ರಶ್ನೆ ಎತ್ತುವಳು, ರಾಯರೂ ಕೇಳಿದಾಗ ಒಮ್ಮೆ "ಮದಿವಿ ಅಂದ್ರ ಸಣ್ಮಾತೇನವ್ವ ಸುಬ್ಬಕ್ಕ? ದುಡ್ಡು ಬೇಕು ಕೈಯಾಗ" ಎನ್ನುವರು ರಾಯರು; ಅಷ್ಟು ಹೇಳಿ ವಿಷಾದದಿಂದ ತಲೆ ಜಾಡಿಸುತ್ತ ಅಲ್ಲಿಂದ ನಡೆದು ಹೋಗುವರು.

ಸುಬ್ಬಕ್ಕನೂ ಅಂತಹ ಸಂದರ್ಭಗಳಲ್ಲಿ ಉಸುರ್ಗರೆಯುತ್ತಿದ್ದಳು —ರಾಯರು ಮರೆಯಾದ ಮೇಲೆ. ಆಕೆಗೇನು ತಿಳಿಯದೆ? ಮುಂಚಿನಿಂದಲೂ ಅಲ್ಲಿಯೆ ಬೆಳೆದವಳು. ಚಿಕ್ಕಂದಿನ ವೈಭವವೆಲ್ಲಿ? ಈಗಿನ ಸ್ಥಿತಿ ಎಲ್ಲಿ? ಮನೆ ತುಂಬ ದನ-ಕರು, ಆಳು-ಹೋಳು, ಮೇವು-ಧಾನ್ಯ —ಮುಂಚಿನ ಕಾಲದ ಆ ಐಸಿರಿ ಎಲ್ಲಿ? ಈಗ? ವಾರಕ್ಕೊಮ್ಮೆ ಕೂಡ ಪರಸ್ಥನಿಗೆ ಊಟ ಕೊಡುವ ಸ್ಥಿತಿ ಇಲ್ಲ! ಕೆಲಸ ಬಿದ್ದಾಗ ಅಂಗಡಿಯವರೆಗೆ ಹೋಗಿ ಸಾಮಾನು ತಂದುಕೊಡಲು ಒದಗುವ ಆಳು ಇಲ್ಲ! ತನ್ನ ತಾಯಿ ಪುಣ್ಯವಂತೆ, ಇನ್ನೂ ಏನೇನು ಬರೆದಿದೆಯೊ ಈ ಮನೆಯ ಹಣೆಬರೆಹದಲ್ಲಿ, ನೀಗಿದಳು ಪುಣ್ಯಾತ್ಮಳು—ಎಂದು ಒಮ್ಮೊಮ್ಮೆ ತಾಯಿಗಾಗಿ ಸಮಾಧಾನವನ್ನು ತಂದುಕೊಳ್ಳುತ್ತಿದ್ದಳು ಶಾಂತಳ ಮದುವೆಗೆ ದುಡ್ಡು ಬೇಕು ಎಂಬುದನ್ನು ಸುಬ್ಬಕ್ಕ ಅರಿಯಳೆ? ಆದರೆ ಆ ಯೋಚನೆ ತನ್ನ ಗಂಡನಿಗಿಲ್ಲವಲ್ಲ, ಮಾವನೆ ಅದಕಾಗಿ ಗೋಳಾಡಬೇಕಾಗುವುದಲ್ಲ—ಎಂದು ಅವಳ ವ್ಯಥೆ. ಗಂಡನ ಬಗ್ಗೆ ಅವಳಿಗೆ ತಪ್ಪು ಕಲ್ಪನೆ ಯಾವುದೂ ಇದ್ದಿರಲಿಲ್ಲ. ಗುಂಡಣ್ಣನ ಯೋಗ್ಯತೆಯನ್ನು ಪೂರ್ತಿಯಾಗಿ ಬಲ್ಲಳು. ಹಿಂದಕ್ಕೊಮ್ಮೆ ಆ ಹೊಲತಿಗಾಗಿ ತಾನು ಏನೊ ಮಾಡಿದ್ದಳಲ್ಲ? ಹುಚ್ಚಿ—ಶುದ್ಧ ಹುಚ್ಚಿ ತಾನು! ಈಗ ತನಗೆ ಬುದ್ಧಿ ಬಂದಿದೆ. ಆದರೆ—? ಶಾಂತಳ ಮದುವೆಯ ವಿಚಾರ ಬಂದಾಗೊಮ್ಮೆ ಸುಬ್ಬಕ್ಕನಿಗೆ ಈ ಮಾತು ನೆನಪಿಗೆ ಬರುವುದು. ತನಗೆ ಬುದ್ಧಿ ಬಂದಿದೆ, ಆದರೆ ತನ್ನ ಗಂಡ ಮಾತ್ರ ಮೊದಲಿನಂತೆಯೆ ಇದ್ದಾನೆ! ಮದುವೆಯಾದ ಸ್ವಲ್ಪೇ ದಿನಗಳಲ್ಲಿ ಸುಬ್ಬಕ್ಕನಿಗೆ ತಿಳಿದು ಬಂದಿತ್ತು. ತಾಯಿಯ ಹಂಬಲಕ್ಕಾಗಿ ಗಂಡನ ಮುಂದೆ ಒಮ್ಮೆ ಏಕಾಂತದಲ್ಲಿ ಶಾಂತಳ ಮದುವೆಯ ಮಾತನ್ನು ತೆಗೆದಿದ್ದಳು

ಚಿಕ್ಕಂದಿನಿಂದಲೂ ಕೂಡಿ ಬೆಳೆದವರೆ ಆಗಿದ್ದರೂ ಗಂಡ-ಹೆಂಡಿರ ನಡುವೆ ವಿಶೇಷ ಸಲಿಗೆ ಇದ್ದಿರಲಿಲ್ಲ. ಗುಂಡಣ್ಣ ಹೊರಗೆ ಆಡುವ ವಯಸ್ಸಿಗೆ ಬಂದಂದಿನಿಂದ ಸುಬ್ಬಕ್ಕನನ್ನು ತಿರಸ್ಕಾರದಿಂದಲೆ ನೋಡು

ತ್ತಿದ್ದ. ಜೊತೆಗೆ ಸರಸ್ವತಿಯು ಸಂತತ ಪ್ರಭಾವ ಸುಬ್ಬಕ್ಕನ ಮೇಲೆ, ಇಂದಿಲ್ಲ ನಾಳೆ ತನ್ನ ಮಗಳು ಗುಂಡಣ್ಣನನ್ನು ಮದುವೆಯಾಗುವಳೆಂದು. ಅದಕ್ಕಾಗಿ ಸುಬ್ಬಕ್ಕ ತುಸು ತಿಳಿಯುವ ವಯಸ್ಸಿಗೆ ಬಂದಂದಿನಿಂದ ಗುಂಡಣ್ಣನನ್ನು ಭಯ ಮತ್ತು ಆದರಗಳಿಂದ ನೋಡುತ್ತಿದ್ದಳು. ಕ್ರಮೇಣ ಗುಂಡಣ್ಣನಲ್ಲಿ ಗಂಡಸಿನ ಅಧಿಕಾರಬುದ್ಧಿಯೂ ಮೂಡಿತು. ಎಲ್ಲಕ್ಕೂ ಹೆಚ್ಚೆಂದರೆ ಗಂಗಿಯ ಪ್ರಕರಣದಲ್ಲಿ ಸುಬ್ಬಕ್ಕ ತಿಳಿಯದೆ ಸಹಾಯಮಾಡಲು ಹೋದದ್ದು. ಮದುವೆಯಾದ ಮೇಲೆ ಸುಬ್ಬಕ್ಕನಿಗೆ ಎಲ್ಲವೂ ಅರ್ಥವಾಗಿತ್ತು, ಅದನ್ನರಿತ ಗುಂಡಣ್ಣನು ಸದಾ "ದುಸು ಮುಸು" ಆಗಿಯೆ ಇರುತ್ತಿದ್ದನು. ಸುಬ್ಬಕ್ಕನ ಬಗ್ಗೆ ಗುಂಡಣ್ಣ ತಾನಾಗಿಯೆ ಹೆಂಡತಿಯೊಡನೆ ಮಾತನಾಡುವುದೆ ಕಡಮೆ. ಯಾವಾಗಲಾದರೊಮ್ಮೆ ಕವಾಯಿತ ಮಾಡಿಸುವ ಸೈನ್ಯಾಧಿಕಾರಿಯಂತೆ ಒಂದೊ ಎರಡೋ ಶಬ್ದಗಳಿಂದ ಸುಬ್ಬಕ್ಕನನ್ನು ಸಂಬೋಧಿಸುವನು ಸುಬ್ಬಕ್ಕನಾದರೂ ಹೆಚ್ಚು ಮಾತನಾಡುವ ಗೋಜಿಗೆ ಹೋಗುತ್ತಿರಲಿಲ್ಲ. ಆದರೂ ಹೆಂಗರುಳು! ಸರಿವಯಸ್ಕರ ಸಹವಾಸವೆಂದರೆ ಗಂಡನೊಬ್ಬನದೆ ಸಹವಾಸ. ಒಮ್ಮೊಮ್ಮೆ ಅನಿವಾರ್ಯವಾಗಿ ಸುಬ್ಬಕ್ಕ ಗಂಡನೊಡನೆ ಮಾತಾಡುತ್ತಿದ್ದಳು. ಗುಂಡಣ್ಣ "ಹಾಂ-ಹುಂ"ಗಳಿಂದ ಮುಗಿಸಿಬಿಡುತ್ತಿದ್ದ. ಈಗ ತಾಯಿಯ ಒತ್ತಾಯಕ್ಕಾಗಿ ಮಾತಾಡಬೇಕಾಗಿದೆ, ಹೆಂಡತಿಯ ಮಾತನ್ನು ಕೇಳಬಹುದು ಎಂದು ಮಿಕ್ಕವರು ತಿಳಿದುಕೊಂಡುದರ ದುರಭಿಮಾನಕ್ಕಾಗಿ ಮಾತಾಡಬೇಕಾಗಿದೆ, ಎಷ್ಟಾದರೂ ತನ್ನ ಸ್ಥಾನದಿಂದ ಶಾಂತಳಾಗಿ ತಾನೀಗ ಹಿರಿಯಳಲ್ಲವೆ? ಅದಕಾಗಿ ಮಾತಾಡಬೇಕಾಗಿದೆ—ಎಂದು ಏನೇನೊ ಧೈರ್ಯ ತಂದುಕೊಂಡು ಮಾತಾಡಿದಳು.

"ಶಾಂತಕ್ಕನ ಮದುವೆ ಒಂದು ಉಳೀತು" ಎಂದು ಸುತ್ತರಿದು ವಿಷಯವನ್ನು ಪ್ರಸ್ತಾಪಿಸಲು ನಿಶ್ಚಯಿಸಿ ನುಡಿದಳು.

"ಉಂ".

"ಅಲ್ಲ-ಏನಾದ್ರೂ ವಿಚಾರ ಮಾಡ್ತೀರೇನು ?"

"ಆಂ?-ಹಂ".

"ಇನ್ನು ಮಾವನವರೆ ಎಲ್ಲ ಎಷ್ಟು ದಿವಸ ಮೈಮ್ಯಾಲೆ ಹಾಕಿಕೋಬೇಕು ?"

"ನಿದ್ದೆ ಬಂದಿಲ್ಲೇನು ನಿನಗ ?" ಎಂದು ಗುಂಡಣ್ಣ ಮಗ್ಗುಲಾಗಿ ಆಕೆಯ ಕಡೆ ಬೆನ್ನನ್ನು ತಿರುಗಿಸಿದ.

"ಶಾಂತಕ್ಕನ ಮದುವೆಯ ನಲುವಾಗಿ ಕೇಳಿದೆ."

"ಕೇಳಿಸಿತು. ನುಮ್ಮ ಬಿದ್ದುಕೋಬಾರದ ಅಂತೀನಿ ?"

"ಮನೆಯ ಮ್ಯಾಲೆ ಮನಸ್ಸಿದ್ದರೇ ಅಲ್ಲ, ಇವರ ಜೋಡಿ ಮಾತಾಡೋದು ?" ಸುಬ್ಬಕ್ಕ ಅತ್ಯಂತ ವಿಷಾದದ ದನಿಯಲ್ಲಿ ನುಡಿದಳು.

ಗುಂಡಣ್ಣನಿಗೆ ತಿಳಿಯಿತು ಇನ್ನು ಯಾವ ವಿಷಯದ ಪ್ರಸ್ತಾಪ ಬರುವುದು ಎಂಬುದು. ಈ ಹಾಳು-ಹೆಂಗಸರಿಗೆ ಎರಡನೇ ವಿಚಾರನೇ ಇಲ್ಲ! ಎಂದಿನ ಮಾತೊ ಏನೊ! ಅದನ್ನೆ ಹಿಡಿದುಕೊಂಡು ಕಟಿಯೋದು! ಥೂ!—ಎಂದುಕೊಂಡು ಮೈಮೇಲೆ ಹೊದ್ದು ಕೊಳ್ಳುವುದನ್ನು ಬಿಗಿದೆಳೆದುಕೊಂಡ.

"ನಾ ಏನಂತೀನಿ ಲಕ್ಷ್ಯ ಅದ ಏನು ?" ಎಂದು ಬೇಜಾರದ ದನಿಯಲ್ಲಿ ಕೇಳಿದಳು ಸುಬ್ಬಕ್ಕ.

'ಹಗಲೆಲ್ಲ ದುಡಿದು, ಓಡಾಡಿ ಬಂದು ಒಂದಿಷ್ಟು ಶಾಂತ ನಿದ್ದೆ ಮಾಡಬೇಕು ಅಂದ್ರ ನನ್ನ ಹಣೆಬರಹಕ್ಕ ಇಲ್ಲ" ಎಂದು ಎದ್ದು ಕುಳಿತು ಸಾವರಿಸತೊಡಗಿದನು.

"ಆಯ್ತು—ಯಾವದಾದರೂ ನೆಪ ತೆಗೆದು ಹೊರಗ ಮಲಗಿ ಕೊಳ್ಳಲಿಕ್ಕೆ ಹೋಗೋ—" ಛಟ್-ಎಂಬ ಸದ್ದು ಕೋಣೆಯ ತುಂಬ ಪ್ರತಿಧ್ವನಿಸಿತು. ರಾತ್ರಿಯ ಶಾಂತ ವಾತಾವರಣದಲ್ಲಿ ಆ ಸದ್ದು ಒಂದಕ್ಕೆ ಹತ್ತರಷ್ಟು ಗಡುಚಾಗಿ ಕೇಳಿಸಿತು. ಆ ಸದ್ದಿನೊಡನೆಯೆ

ಸುಬ್ಬಕ್ಕನ ಮಾತು ತಡೆದಿತ್ತು. ಕೋಣೆಯಲ್ಲಿ ಮಂದವಾದ ಬೆಳಕು ಇದ್ದರೂ ಗುಂಡಣ್ಣನ ಗುರಿ–ಜನ್ಮಜನ್ಮಾಂತರಗಳ ರೂಢಿ ಇದ್ದಿತೇನೊ ಎನ್ನುವಂತೆ—ತಪ್ಪಿರಲಿಲ್ಲ ಸುಬ್ಬಕ್ಕನ ಎಡಕೆನ್ನೆಗೆ ಸರಿಯಾಗಿ, ಪೂರ್ತಿಯಾಗಿ ಪೆಟ್ಟು ಬಿದ್ದಿತು. ಒಂದು ಕ್ಷಣ ಏನಾಯಿತೆಂಬುದು ಇಬ್ಬರಿಗೂ ತಿಳಿದಿರಲಿಲ್ಲ. ಆ ಏಟು ಸುಬ್ಬಕ್ಕನಿಗೆ ತೀರ ಅಕಲ್ಪಿತವಾಗಿತ್ತು. ಸಾಮಾನ್ಯವಾಗಿ ಗುಂಡಣ್ಣ ಹೊಡೆಯುತ್ತಿರಲಿಲ್ಲ; ಅಷ್ಟೇಕೆ—ಹೆಂಡತಿಯನ್ನು ಆಗೀಗ ಹೊಡೆಯಲು ಬೇಕಾಗುವಷ್ಟು ಸಲಿಗೆಯನ್ನೆ ಗುಂಡಣ್ಣ ಸುಬ್ಬಕ್ಕನೊಡನೆ ಇಟ್ಟುಕೊಂಡಿರಲಿಲ್ಲ. ಇದಲ್ಲದೆ ತನ್ನ ಮಾತು ಅಂತಹದು—ಏಟನ್ನು ಕೊಡಿಸುವಂತಹದು–ಎಂಬ ಸಂಶಯ ಕೂಡ ಆಕೆಗಿದ್ದಿರಲಿಲ್ಲ. ಆದುದರಿಂದ ಮೊದಲ ಕ್ಷಣ ಕೆನ್ನೆ ಜುಣುಜುಣು ಎಂದು ಕಣ್ಣಿಗೆ ಕತ್ತಲೆ, ಮನಸ್ಸಿಗೆ ದಿಙ್ಮೂಢತೆ ಬಂದಂತಾಗಿ ಸುಬ್ಬಕ್ಕ ಕಲ್ಲುಬೊಂಬೆಯಂತೆ ಕುಳಿತಳು. ಗುಂಡಣ್ಣನ ಅವಸ್ಥೆ ಬೇರೆಯಾಯಿತು. ಏಟನ್ನು ಕೊಟ್ಟ ನಂತರ ಅವನಿಗೆ ಎಚ್ಚರ ಬಂದಂತಾಯಿತು. ಅಕಸ್ಮಾತ್ತಾಗಿ ಕನಸಿನಿಂದ ಎಚ್ಚೆತ್ತವನಿಗೆ ಎಚ್ಚರಾದ ಕೂಡಲೆ ತನ್ನನ್ನು ಎಚ್ಚರಗೊಳಿಸಿದ ಸದ್ದು ಯಾವುದು ಎಂಬುದೆ ತಿಳಿಯುವುದಿಲ್ಲ. ಹಾಗಾಯಿತು ಗುಂಡಣ್ಣನ ಅವಸ್ಥೆ. ತಾನು ಮಾಡಿದ್ದೇನು—ಎಂಬುದೇ ಅವನಿಗೆ ತಿಳಿಯದಂತಾಯ್ತು. ಕೈ ಜುಣುಜುಣು ಎನ್ನುತ್ತಿದೆ, ಹೊಡೆದ ಸದ್ದು ಕೇಳಿಸಿದಂತಾಗಿದೆ; ತಾನೇ ಹೊಡದಿರಬಹುದೆ—ಎನ್ನುವಂತೆ ಅವನ ಮನಸ್ಸು ದಿಗ್ಭ್ರಮೆಗೊಂಡಿತು. ಆಂ–ಹಾಂ–ತಿಳಿಯಿತು. ತಪ್ಪು ಆಕೆಯದೆ–ನಿಸ್ಸಂಶಯವಾಗಿ ಸುಬ್ಬಿಯದೆ ತಪ್ಪು. ಯಾವ ಮಾತು ಬರಬಾರದೆಂದು ತಾನು ಬಯಸುತ್ತಿದ್ದನೊ, ಯಾವ ಮಾತು ಬಂದೀತೆಂದು ಹೆದರಿದ್ದನೊ–ಅದೇ ಮಾತು ಬರಬೇಕೆ? ತನ್ನ ಹೆಂಡತಿಗೆ ಚೆನ್ನಿಯ ಮತ್ತು ತನ್ನ ಸಂಬಂಧವೂ ಗೊತ್ತಾಗಿದೆ ಎಂದು ಅವನು ಊಹಿಸಿದ್ದನು. ಆದರೆ ಈ ರೀತಿ–ಹೆಂಡತಿ–ತನ್ನನ್ನು ಮಾತಿನಿಂದ ಅವಮಾನಗೊಳಿಸುವಳೆಂದು

ನಂಬಿರಲಿಲ್ಲ. ಅದಕಾಗಿಯೆ ಗುಂಡಣ್ಣನಿಗೆ ತಡೆಯದಷ್ಟು ಸಿಟ್ಟು ಬಂದಿತು, ತಿಳಿಯುವ ಮುಂಚಿತ ಹೊಡೆದು ಬಿಟ್ಟನು.

ಶಾಂತಕ್ಕನ ಮದುವೆ! ಸುಬ್ಬಕ್ಕನಿಗೆ ನಾಚಿಕೆಯಾದಂತಾಯಿತು. ಮದುವೆಯಾಗಿ ತಾನು ಕಾಣುತ್ತಿರುವ ಸುಖ ಯಾವುದು ? ಇದೇ–ಏನು ?–ಎನ್ನುತ್ತ ಕೆನ್ನೆಯ ಮೇಲೆ ಮೆಲ್ಲನೆ ಕೈಯನ್ನಾಡಿಸಿಕೊಂಡಳು.

ಗುಂಡಣ್ಣನಿಗೂ ನಾಚಿಕೆಯಾಯಿತು–ಹೆಂಡತಿಯು ಕೈಯನಾಡಿಸಿಕೊಂಡುದು ತನ್ನ ತಪ್ಪನ್ನು ಎತ್ತಿ ತೋರಿಸಿದಂತಾಯಿತು. ಈಗ ಎದ್ದು ಹೋಗುವುದು ಹುಂಬತನ ಎನ್ನಿಸುವುದು; ಶಾಂತಿಯ ಮದುವೆಯ ಬಗ್ಗೆ ಮಾತನಾಡುವುದು ನಾಚಿಕೆಗೇಡಿತನವಾದೀತು, ಏನೂ ಮಾಡದೆ ಉಳಿದರೆ ಕಟುಕ ಎನ್ನಿಸಿಕೊಳ್ಳಬೇಕಾದೀತು. ಹೇಗೆ ಮಾಡುವುದು ? ಈ ಅವಮಾನಕಾರಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದು ಹೇಗೆ ? ಸುಬ್ಬಿಯನ್ನು ಅಷ್ಟರಮಟ್ಟಿಗಾದರೂ ರಮಿಸಬೇಕು-ಎಂದುಕೊಂಡ. ಅರೆ ಬೆಳಕಿನಲ್ಲಿ ಹೆಂಡತಿಯನ್ನು ನೋಡಿದ. ಪಾಪ! ಎಡಗೈಯನ್ನು ಕೆನ್ನೆಯಮೇಲೆ ಮೆಲ್ಲನೆ ಆಡಿಸುತ್ತ, ಹೆದರಿಕೆ ಮತ್ತು ಕಣ್ಣೀರಿನ ಒತ್ತಡ ಇವುಗಳಿಗಾಗಿ ಅರಳಿದ ಕಣ್ಗಳಿಂದ ಮಗ್ಗುಲಿಗೆ ಕುಳಿತ ಗಂಡನನ್ನು ದಿಟ್ಟಿಸುತ್ತ ಮುಖ ಮೇಲೆ ಮಾಡಿಕೊಂಡು ಮಲಗಿದ್ದಾಳೆ! ಗುಂಡಣ್ಣನಿಗೆ — ಆ ಅರೆಬೆಳಕಿನಲ್ಲಿಯೂ ತನ್ನ ಮುಖವನ್ನು ಮರೆಮಾಡಿಸಿಕೊಳ್ಳಬೇಕು ಎಂದೆನ್ನಿಸಿತು. ಕ್ಷಮೆ ಬೇಡಲು ಕೈಜೋಡಿಸುವವನೇನೋ ಎನ್ನುವಂತೆ ಎರಡೂ ಕೈಗಳನ್ನು ಎತ್ತಿ ಒಮ್ಮೆಲೆ ಅವೇ ಕೈಗಳಿಂದ ಆಕೆಯ ಗಲ್ಲಗಳನ್ನು ಗಟ್ಟಿಯಾಗಿ ಹಿಡಿದನು. ಸುಬ್ಬಕ್ಕ ಕಣ್ಗಳನ್ನು ಮುಚ್ಚಿದಳು. 'ಗಂಡ ಇಲ್ಲಿದ್ದರ ಗಂಡಸಮಗ—ಇವರೇ ಆಧಾರ ಹೆಂಗಸಿಗೆ' ಅನ್ನೋ ಮಾತು ಕಣ್ಣು ಮುಚ್ಚಿದಾಕ್ಷಣ ಆಕೆಯ ಮನಸಿನಲ್ಲಿ ಮಿಂಚಿಹೋಯಿತು. 'ಬ್ಯಾಗ ಒಂದು ಗಂಡಸ ಮಗ ಹುಟ್ಟಲಿ, ದೇವರೆ' ಎಂದು ಬೇಡಿಕೊಂಡಳು. ಹೆಣ್ಣಿನ ಜೀವ ಎಷ್ಟು ಪರತಂತ್ರ—ಎಂಬ ಭಾವನೆಯಿಂದ ಅವಳ

ಕಂಠ ಬಿಗಿದುಬಂದಿತು. ಇದ್ದ ಒಂದು ಆಧಾರ ತಪ್ಪೀತಲ್ಲ ಎಂದು ಹೆದರಿ ಅದನ್ನು ಗಟ್ಟಿಯಾಗಿ ಹಿಡಿವಂತೆ ಗಂಡನನ್ನು ಬಿಗಿದಪ್ಪಿದಳು . . ಗುಂಡಣ್ಣ ಇನ್ನಿಷ್ಟು ನಾಚಿಕೆಗೊಂಡ, ಕೆಳಗೆ ಸರಿದು ಹೆಂಡತಿಯ ಕಡೆ ಬೆನ್ನು ಮಾಡಿ ಪೂರ್ತಿಯಾಗಿ ಹೊದ್ದುಕೊಂಡು ಮಲಗಿದ.... ಬೆಳಗಿನಲ್ಲಿ ಸುಬ್ಬಕ್ಕ ಎಚ್ಚರಾದಾಗ ಗುಂಡಣ್ಣನ ಮುಖ ತನ್ನ ಕಡೆ ಗಿದ್ದುದನ್ನು ಕಂಡಳು , ಅರಳಿದ ಮುಖದಿಂದ, ಮೆಲ್ಲಗೆ ತನ್ನ ಭುಜವ ಮೇಲಿದ್ದ ಗಂಡನ ಕೈಯನ್ನೆತ್ತಿ ಸರಿಸಿ ಎದ್ದು ಹೋದಳು

* * *

ಸುಖ-ದುಃಖ, ನಗೆ–ಸಿಟ್ಟುಸಿರು, ಸಮಾಧಾನ–ಸಂಶಯ ಹೀಗೆ ಯಾವನ್ನೊ ಎರಡು ಪರಸ್ಪರ ವಿರುದ್ಧ ಅನುಭವಗಳ ನಡುವೆ ಸುಬ್ಬಕ್ಕನ ಹೃದಯ ಹೊಯ್ದಾಡುತ್ತಿತ್ತು. ಒಮ್ಮೊಮ್ಮೆ ಇದು ಆನಂದದ ಕಾಲ, ನಕ್ಕು ನಲಿದಾಡಬೇಕಾದ ಕಾಲ ಎಂದುಕೊಳ್ಳುವಳು. ಅಲ್ಲದೆ ಮತ್ತೇನು? ಶಾಂತಕ್ಕನ ಮದುವೆ ಗೊತ್ತಾಗಿದೆ, ಇಷ್ಟೇಕೆ–ತನ್ನ 'ದಿವಸ'ಗಳ ಮುಂಚಿತವಾಗಿಯೆ ಮುಹೂರ್ತವನ್ನು ಗೊತ್ತುಮಾಡಿವೆ. ಎರಡೂ ಒಳ್ಳೆಯ ಕೆಲಸಗಳೇ ಅಲ್ಲವೆ? ಮನೆಯಲ್ಲಿ ಮದುವೆ, ಸಮಾರಂಭ ಇಂತಹ ಉತ್ಸವದ ಪ್ರಸಂಗಗಳು ಸಂತೋಷದ ಸಂದರ್ಭಗಳು. ಅದೂ ತಾನು ಯಜಮಾನತಿ-ಎನ್ನುವಾಗ ಶಾಂತಕ್ಕನ ಮದುವೆ ನಡೆಯುವುದು ಆಕೆಗೆ ಇನ್ನಿಷ್ಟು ಸಮ್ಮೋದದ ಮಾತಾಗಿದೆ. ಜೊತೆಗೆಯೆ ಗಂಡು ಮಗುವಿನ ಜನನ ಸುಬ್ಬಕ್ಕನಿಗೆ ಸಂದೇಹವೆ ಇದ್ದಿರಲಿಲ್ಲ. ತನಗೆ ಮೊದಲನೆಯದು ಗಂಡುಮಗುವೆ ಆಗುವುದು ಎಂದು ಪೂರ್ತಿ ಭರವಸೆ ಸುಬ್ಬಕ್ಕನಿಗೆ. ದೇವರ ರೀತಿಯೆ ಹಾಗಿದೆ, ಕೊಡುವ ಕಾಲಕ್ಕೆ ಒಂದರ ಮೇಲೊಂದು ಒಳ್ಳೆಯದನ್ನೆ ಕೊಡುತ್ತಾನೆ.

'ಒಳ್ಳೆಯದು, ಕೆಟ್ಟುದು—'ಎಂದು ತನ್ನಷ್ಟಕ್ಕೆ ಗೊಣಗಿಕೊಂಡಳು.

'ಹಂ — ಯಾವುದು ಒಳ್ಳೆಯದೊ ? ಯಾವುದು ಕೆಟ್ಟುದೊ ?'

ಎಂದು ನಿಟ್ಟುಸಿರಿಟ್ಟಳು.

ಸುಬ್ಬಕ್ಕನಿಗೆ ಒಮ್ಮೊಮ್ಮೆ ತಿಳಿಯದಂತಾಗುತ್ತಿತ್ತು. ಶಾಂತಕ್ಕನ ಮದುವೆ, ಗಂಡು ಮಗುವಿನ ಜನನ—ಇವು ಒಳ್ಳೆಯವೆ ಎಂಬುದೆ ಒಂದೊಂದು ಸಲ ಸುಬ್ಬಕ್ಕನಿಗೆ ಸಂದೇಹ.

ಮದುವೆ! ಏನಿದೆ ಅದರಲ್ಲಿ ಒಳ್ಳೆಯದು? ಸುಬ್ಬಕ್ಕನಿಗೆ ಪೂರ್ತಿ ಯಾಗಿ ಗೊತ್ತಿತ್ತು, ಈ ಮದುವೆಗಾಗಿ ಮಾವನು ಹೇಗೆ ಸಾಲ ತೆಗೆದಿದ್ದಾನೆ ಎಂಬುದು. ಒಂದುವೇಳೆ ಸಾಲವೆಂದರೆ ಕೆಟ್ಟದೇ ಎಂದೂ ಸುಬ್ಬಕ್ಕ ಹಟ ತೊಡುತ್ತಿರಲಿಲ್ಲ. ಯಾಕೆಂದರೆ ಬರೀ ಹೊಲ-ಮನೆಗಳ ಉತ್ಪನ್ನವಿದ್ದವರಿಗೆ ಮದುವೆ—ಮುಂಜಿವೆ—ಸಮಾರಾಧನಗಳಿಗಾಗಿ ಬೇಕಾಗುವ ನಗದು ಕೈಯಲ್ಲಿಲ್ಲದಿರುವುದು ಆಶ್ಚರ್ಯವಲ್ಲ. ಕಾಳು—ಕಡಿಗಳನ್ನು ಮಾರಿ, ಇಲ್ಲವೆ ದನ-ಕರುಗಳನ್ನು ಕೊಳ್ಳುವುದನ್ನು ಮುಂದೂಡಿ, ಕೊನೆಗೆ ಅಸ್ಸರಮಟ್ಟಿಗೆ ನಾಲ್ಕಾರು ಎಕರೆ ಒತ್ತೆಯಿಟ್ಟು ಹಣವನ್ನು ಪಡೆಯಬಹುದು, ಮುಂದಿನ ವರ್ಷ ಅದನ್ನು ತುಂಬಿಕೊಳ್ಳಬಹುದು ಆದರೆ ಮಾವನು ಮಾಡಿದ ಸಾಲ ಈ ತರದ್ದಾಗಿರಲಿಲ್ಲ ಎಂಬುದನ್ನು ಸುಬ್ಬಕ್ಕ ಬಲ್ಲಳು. ತಗೆ ತೂತು ಬಿದ್ದಂತಿತ್ತು ಈ ಸಾಲ. ಆದರೆ ಬರೀ ಇಷ್ಟಕ್ಕೆಯೆ ಸುಬ್ಬಕ್ಕ ಹೆದರುತ್ತಿರಲಿಲ್ಲ. ಗಂಡನು ತಾರುಣ್ಯದ ಭರದಲ್ಲಿದ್ದಾನೆ, ಇಂದಿಲ್ಲ ನಾಳೆ ಮುಂದೆ ನಿಂತು ಮೈಸುರಿ ದುಡಿಯ ಬಹುದು ಎಂಬ ಭರವಸೆ ಇದ್ದರೆ ಸುಬ್ಬಕ್ಕ ಸುಖದಿಂದ ಸಂಸಾರವನ್ನು ಸಾಗಿಸಿಕೊಂಡು ಹೋಗುತ್ತಿದ್ದಳು. ಆದರೆ ಗುಂಡಣ್ಣನನ್ನು ಎಲ್ಲರೂ ಬಲ್ಲರು. ಗುಂಡಣ್ಣನ ದುಶ್ಚಟ—ಹವ್ಯಾಸಗಳಿಗಾಗಿಯೆ ಆಸ್ತಿ ಕರಗುತ್ತಿರುವುದು ಎಂಬುದು ಜಗಜ್ಜಾಹೀರವಾಗಿತ್ತು. ಗಳಿಸುವ ಯೋಗ್ಯತೆ ಗುಂಡಣ್ಣನಿಗಿರಲಿಲ್ಲ; ಉಳಿಸುವ ಸ್ವಭಾವವೂ ಇರಲಿಲ್ಲ. ತನ್ನ ಗಂಡನಿಗಾಗಿಯೆ ಮನೆತನ ಈ ದುರವಸ್ಥೆಗೆ ಇಳಿದಿದೆ ಎಂಬುದು ಸುಬ್ಬಕ್ಕನಿಗೆ ವಿಷಾದದ ಮಾತಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಮದುವೆಯನ್ನು ಮಾಡುವಾಗ ಸಮಾಧಾನವೆನ್ನಿಸುವುದಾದರೂ ಹೇಗೆ?

ಸುಬ್ಬಕ್ಕ ಇಂತಹ ವಿಚಾರಗಳಿಗಾಗಿ ನಿಟ್ಟುಸಿರನ್ನು ಬಿಡುವಳು ಇತ್ತಿತ್ತಲಾಗಿ ಆಕಳಿಕೆ, ನಿಟ್ಟುಸಿರು ಇವುಗಳಿಗೆ ಕಾರಣವೆ ಬೇಕಿಲ್ಲ-ಎಂದು ನೆನೆದಾಗ ಆಕೆಗು ಮುಖದಲ್ಲಿ ಮುಗುಳ್ನಗೆ ಅರಳುವುದು ಮರುಗಳಿಗೆಯಲ್ಲಿ ತನ್ನ ಮಗ ಮನೆತನದ ಇಳಿಕೆಯ ಕಾಲಕ್ಕೆ ಹುಟ್ಟುವನಲ್ಲ-ಎಂದು ನಿಟ್ಟುಸಿರು. ಆಗಲಿ-ಯಾರು ಹೇಳಬಲ್ಲರು ?— ಮನೆತನದ ಉದ್ಧಾರ ತನ್ನ ಮಗನಿಂದಲೆ ಆಗುವುದಿದ್ದರೆ? ಇಂತಹ ವಿಚಾರ ಬಂದಾಗ ಅಭಿಮಾನ-ನಗೆ-ಆಕಳಿಕೆ ಇವೆಲ್ಲವುಗಳ ಜೋಕಾಲಿಯಾಟದಿಂದ ದಣಿದವಳಂತೆ ಸಮಾಧಾನದಿಂದ ಕಣ್ಣುಗಳನ್ನು ಮುಚ್ಚುವಳು

* *

ರಾಯರಿಗೆ ವಯಸ್ಸೇನೊ ನಲವತ್ತೇ ಆಗಿದೆ, ಆದರೆ ಮುಪ್ಪಿನ ಕಳೆ ಅವರನ್ನು ಇಷ್ಟರಲ್ಲಿಯೆ ಆವರಿಸಿಕೊಂಡು ಬಿಟ್ಟಿದೆ ಮೊದಲಿನಿಂದಲೂ ಊರಿಗೆ ಹಿರಿಯರು. ಈಗಂತೂ ಸ್ವಭಾವ ಸಿಡುಕಿನದಾಗಿದೆ. ಯಾರೂ ಮಾತನಾಡಿಸುವ ಧೈರ್ಯವನ್ನೆ ಮಾಡುವುದಿಲ್ಲ ರಾಯರಿಗೂ ಇನ್ನೊಬ್ಬರ ಸಹವಾಸ ಅಷ್ಟಕ್ಕಷ್ಟೆ ಎನ್ನಿಸಿದೆ, ತಮ್ಮಷ್ಟಕ್ಕೆ ಮಾತನಾಡಿಕೊಳ್ಳುತ್ತಿರುತ್ತಾರೆ. ಒಮ್ಮೊಮ್ಮೆ ಎರಡೂ ಕೈಗಳ ಬೆರಳುಗಳಿಂದ ಏನನ್ನೊ ಎಣಿಸುತ್ತಾರೆ, ಆಸ್ತಿ ಕರಗುವುದನ್ನೂ, ಮಗ ಸಂಸಾರಕ್ಕೆ ನಿರುಪಯುಕ್ತನಾಗುವುದನ್ನೂ ನೋಡಿ ತಡೆಯಲು ರಾಯರಿಗೆ ಶಕ್ತಿ ಉಳಿದಿಲ್ಲ. ಏಳೆಂಟು ತಿಂಗಳ ಹಿಂದೆ ಮೊಮ್ಮಗ ಹುಟ್ಟಿದಾಗ ರಾಯರಲ್ಲಿ ತುಸು ಚೈತನ್ಯ ತೋರಿತ್ತು ; ಆದರೆ ಅದು ಉಳಿಯಲಿಲ್ಲ. ಹೊಸ ಆಪತ್ತೊಂದು ಕಾದು ನಿಂತಿತ್ತು ರಾಯರಿಗಾಗಿ. ಮಗಳ ಮದುವೆಯನ್ನು ಮಾಡಿ ನಿಶ್ಚಿಂತನಾದೆ ಎಂದು ತಿಳಿದ ರಾಯರಿಗೆ ಕೆಲವೇ ತಿಂಗಳುಗಳಲ್ಲಿ ಮಗಳಿಗೆ ವೈಧವ್ಯ ಪ್ರಾಪ್ತವಾದುದು ದೊಡ್ಡ ಆಘಾತವಾಯಿತು. ಶಾಂತಳು ಬುದ್ಧಿಪೂರ್ವಕ ತಮಗೆ ಈ ಆಪತ್ತನ್ನು ಒದಗಿಸಿದಳೆಂಬಂತೆ ಅವಳ ಮೇಲೆ ಸಿಟ್ಟಾದರು.

ಆಕೆಯನ್ನು ಮನೆಯಲ್ಲಿಯೆ ತಂದಿಟ್ಟುಕೊಂಡರೂ ಆಕೆ ಕಣ್ಣೆದುರಿಗೆ ಹಾಯ್ದರೆ ಅವರಿಗೆ ಸಹನವಾಗುತ್ತಿರಲಿಲ್ಲ. ಹದಿನಾರು ವಯಸ್ಸಿನ ಹುಡುಗಿ. ಆಕೆಯನ್ನು 'ಶುದ್ಧ' ಮಾಡಿ ವಿರೂಪಗೊಳಿಸಬೇಕಲ್ಲ? ತಂದೆಯ ಹೃದಯ ಅದಕ್ಕೆ ಒಪ್ಪದು; ಆದರೆ ಧರ್ಮದ ಹೆದರಿಕೆಯು ಇದೆ. ಹೀಗೆ ಅಡಕೊತ್ತಿನಲ್ಲಿ ಸಿಕ್ಕ ಕಲ್ಲಡಿಕೆಯಂತೆ—ಯಾವ ನಿರ್ಣಯಕ್ಕೂ ಬಾರದವರಾಗಿ — ಹೆಚ್ಚೆಚ್ಚು ಪುಟಿಯುತ್ತಿದ್ದರು, ಸಿಡಿಯುತ್ತಿದ್ದರು.

"ಹಿಂದಿನ ಜನ್ಮದ ಪಾಪ" ಎಂದುಕೊಂಡರು ರಾಯರು.

"ಅಥವಾ ಕಾಲವೆ ವಿಪರೀತವಾಗಿದೆಯೊ?" ಎಂದು ಆಗಾಗ ತಮ್ಮನ್ನು ತಾವೇ ಕೇಳಿಕೊಳ್ಳುತ್ತಿದ್ದರು.

ವಿಪರೀತವಾದದ್ದು ಕಾಲವಲ್ಲ ಎಂದು ಒಂದು ಸಂಜೆಗೆ ತಮ್ಮನ್ನು ತಾವೇ ತಿದ್ದಿಕೊಂಡಂತೆ ಮಾತನಾಡಿಕೊಂಡರು.

ಸುಮಾರು ೩೫ ವರುಷಗಳ ಮುಂಚೆ ತಮ್ಮ ಚಿಕ್ಕಂದಿನಲ್ಲಿ ನಡೆಯುವಂತೆಯೇ ಎಲ್ಲವೂ ನಡೆಯುತ್ತಿದೆ, ಇಂದಿಗೂ ನಡೆಯುತ್ತಿದೆ!

ಹೀಗಿರುವಾಗ ಕಾಲವು ವಿಪರೀತ ಎನ್ನುವುದು ಹೇಗೆ?

ರಾಯರು ಮತ್ತೊಮ್ಮೆ ಇದಿರು ನೋಡಿದರು. "ಎಲ! ಏ ಹೊಲೆರಂಡೇಗಂಡ! ಇಲ್ಲಿ ಯಾಕೊ? ಧೂ! ಸರಿಯೊ—! ನಿನ್ನ ತಲೆ ಒಡೀತೀನಿ ನೋಡು?" ಎಂದು ಆರ್ಭಟಿಸಿದರು ರಾಯರು

ರಾಯರ ಸರ್ವಾಂಗ ನಡುಗುತ್ತಿತ್ತು. ತಮ್ಮ ಮೊಮ್ಮಗ—ಎಂಟು ತಿಂಗಳ ಎಳೆಗೂಸು—ನಿಲ್ಲಲು ಯತ್ನಿಸುತ್ತಿದೆ, ಬೀಳುತ್ತಿದೆ, ಬಿದ್ದಂತೆ ಹೆಚ್ಚೆಚ್ಚು ಗಟ್ಟಿಯಾಗಿ ನಗುತ್ತಿದೆ! ಎದುರಿಗೆ ನಾಲ್ಕು ವರ್ಷದ ಭರಮ್ಯಾ! ಕಾಳ್ಯಾನ ಮಗ! ಪರಸ್ಯಾನ ಮೊಮ್ಮಗ! ನಗುತ್ತಿದ್ದಾನೆ, ನಗಿಸುತ್ತಿದ್ದಾನೆ, ಚಪ್ಪಾಳೆ ತಟ್ಟುತ್ತಿದ್ದಾನೆ, ಕೇಕೆ ಹಾಕುತ್ತಿದ್ದಾನೆ! ಅದನ್ನು ನೋಡಿ ಕೇಳಿ, ರಾಯರ ಮೊಮ್ಮಗ ("ಯಾಕ ರಘುನಾಥ ಅಂತ ಹೆಸರಿಟ್ಟಿರೊ?") ರಾಗ್ಯಾ ಹೆಚ್ಚೆಚ್ಚು ಜೋರಿನಿಂದ ಏಳಲು

ಹೋಗಿ ನೆಲಕ್ಕೆ ಕುಕ್ಕರಿಸುತ್ತಿದ್ದಾನೆ. ಆದರೆ "ಈ ಹೊಲೆ ಮುಂಡೇದ್ದು ಇಲ್ಲಿ ಯಾಕ?" ರಾಯರು "ನಿನ್ನ ತಲೆ ಒಡೀತೀನಿ ನೋಡು!" ಎಂದು ಮತ್ತೊಮ್ಮೆ ಆಕ್ರೋಶ ಮಾಡಿ ಕಲ್ಲನ್ನೆತ್ತಿದರು. ಕೂಸು ಗಾಬರಿಯಿಂದ ಅಜ್ಜನನ್ನು ನೋಡಿತು, ತತ್‌ಕ್ಷಣ ಭರಮ್ಯಾ ರಾಯರನ್ನು ನೋಡಿದ, ತಟ್ಟನೆ ಲಕ್ಷಣವನ್ನು ಗುರುತಿಸಿ ಓಡಿಹೋದ. ರಾಯರಿಗೆ ತಡೆಯಲಿಲ್ಲ, ಕಲ್ಲನ್ನು ಬೀಸಿದರು, ಆದರೆ ಮನಸ್ಸು ಇಲ್ಲದ್ದಕ್ಕಾಗಿ ಅದು ಗುರಿಗೆ ಹತ್ತಿರ ಕೂಡ ಹೋಗಿರಲಿಲ್ಲ.

ಕಲ್ಲಿನೊಡನೆ ರಾಯರ ಸಿಟ್ಟೂ ಜಾರಿಹೋಯಿತು. 'ಛೆ! ಇದೇನ್ಮಾಡ್ತೀನಿ ನಾನು ಹುಚ್ಚನ್ಹಾಂಗ?' ಎಂದುಕೊಂಡರು. ಎಷ್ಟು ವರ್ಷಗಳ ಮುಂಚಿತ? ಹೋಗಲಿ–ತಾನೂ ಚಿಕ್ಕವನಿದ್ದಾಗ ಪರಸ್ಯಾನೊಡನೆ ಆಡಿದ್ದರು, ಈಗ ರಾಗಣ್ಣ ಭರಮ್ಯನೊಡನೆ ಆಡುತ್ತಿದ್ದಾನೆ. ಕಾಲ ಬದಲಾಗಿಲ್ಲ–ಎಂದೆನ್ನಿಸಿತು ರಾಯರಿಗೆ. ಅಂದು ತಾನು ತನ್ನ ತಂದೆಯ ಮೇಲೆ ಸಿಟ್ಟಾಗಿದ್ದರು, ಅದೇ ತಾನು ಇಂದು ಹುಡುಗರ ಮೇಲೆ ಸಿಟ್ಟಾಗಿದ್ದಾರೆ. ಬದಲಾಯಿಸಿದ್ದು ತಾನು! ಕಾಲವಲ್ಲ! ಚಳಿ ಏರಿಕೊಂಡಂತೆ ರಾಯರ ಮೈ ಗಡಗಡ ನಡುಗಿತು. ಬದಲಾಯಿಸಿದ್ದು ತಾನು! ಅಷ್ಟೊಂದು ಹಣ್ಣಾದರೆ ತಾವು? ವಯಸ್ಸಿನಿಂದಲೊ? ಅನುಭವದಿಂದಲೊ? "ಹಾಳಾಗಲಿ–ಆದರೆ ನಾನು ಕಲ್ಲನ್ನು ಒಗೆಯಬಾರದಾಗಿತ್ತು" ಎಂದು ತಮ್ಮಷ್ಟಕ್ಕೆ ತಾವೇ ಗಟ್ಟಿಯಾಗಿ ಹೇಳಿಕೊಂಡರು.

"ಆ ಹುಡುಗನಿಗೆ ತಾಕಿತೊ ಏನೊ?" ಎಂದು ಇನ್ನಿಷ್ಟು ಗಟ್ಟಿಯಾಗಿಯೆ ಕೇಳಿದರು, ಈ ಸಲ ತಮ್ಮಷ್ಟಕ್ಕೆ ಅಲ್ಲ ಎದುರಿನಿಂದ ಶಾಮಣ್ಣ ಬರುವುದನ್ನು ನೋಡಿ ರಾಯರು ಗಟ್ಟಿಯಾಗಿ ಕೇಳಿದರು.

"ತಾಕಿತೇನು, ಶಾಮಣ್ಣ? ಅಂ?" ತುಸು ಹಟದ ದನಿಯಲ್ಲಿ ಕೇಳಿದರು.

"ಏನದು, ರಾಯರ?" ಸಂದರ್ಭದ ಅರಿವಿಲ್ಲದ್ದರಿಂದ ಶಾಮಣ್ಣ

ಕೇಳಿದ.

"ಏನಿಲ್ಲ. ಹೋಗಲಿ ಬಿಡು."

"ಅಲ್ಲ—ಏನೋ 'ತಾಕಿತು' ಅಂದಿರಿ–?"

ರಾಯರು ಒಂದೆರಡು ನಿಮಿಷ ಶಾಮಣ್ಣನನ್ನು ದಿಟ್ಟಿಸಿ ನೋಡಿದರು. ಏನು ಹೊಳೆಯಿತೊ ಏನೋ! ಖೊಳ್ಳನೆ ನಕ್ಕರು.

"ಹೇಳ್ತೀನಪ, ಶಾಮಣ್ಣ. ಯಾಕಂದ್ರ ಆ ಸುದ್ದಿ ನಿನಗ ಮುಟ್ಟೋದು ಖಾತ್ರಿ. ಮುದುಕ ಮುಚ್ಚಿಟ್ಟ ಅಂತ ನನ್ನ ಮ್ಯಾಲಿ ಸಂಶಯ ಬ್ಯಾಡ" ಎಂದರು ನಗೆ ತಡೆಯುತ್ತ

"ಛೆ! ಛೆ! ಇದೇನು, ರಾಯರ?"

"ಇಲ್ಲಿ ನೋಡು, ಶಾಮಣ್ಣಾ. ಇದೇ ಈಗ—ಅಥವಾ ಅದೂ ಹೋಗಲಿ, ನೀ ನಮ್ಮೂರಿಗೆ ಬಂದು ಎಷ್ಟು ದಿನ ಆಯಿತು?"

"ಎರಡು ವರ್ಷ ಆಯ್ತು" ಎಂದು ಶಾಮಣ್ಣ, ಸಂದರ್ಭ ತಿಳಿಯದ್ದಕ್ಕೆ, ಬೆದರಿದವನಂತೆಯೆ ಹೇಳಿದ.

"ನಿನ್ನ ಚಕವಳ ನೋಡಿತು ನೋಡು" ರಾಯರು ನಗುಮೊಗದಿಂದಲೆ ಹೇಳಿದರು. "ಹುಂ, ಕೂಡು–"ಎನ್ನುತ್ತ ತಾವು ಕುಳಿತರು.

"ಏ, ಯಾರ್ಯಾದರೂ ರಾಗ್ಯಾನ್ನ ಒಳಗ ಕರಕೊಂಡು ಹೋಗಿರಿ. ಇಲ್ಲಿ ಪಡಸಾಲೀಒಳಗ ಹೀಂಗ ಬಿಟ್ಟು ಹೋಗತ ಬರಬ್ಯಾಡಿರಿ' ಎಂದು ಒಳಗೆ ಕೂಗಿ ಹೇಳಿದರು.

"ಯಾಕ? ಭರಮ್ಯಾ ಎಲ್ಲಿ ಹೋದ? ಕೂಸಿನ್ನ ನೋಡತಿರು ಅಂತ–" ಎನ್ನುತ್ತ ಸುಬ್ಬಕ್ಕ ಬಂದಳು, ಶಾಮಣ್ಣನನ್ನು ನೋಡಿ ತಡೆದು ತಲೆಯ ಮೇಲೆ ಸೆರಗನ್ನು ಎಳೆದುಕೊಂಡು ಕೂಸನ್ನು ಎತ್ತಿಕೊಂಡು ಹೋದಳು.

ರಾಯರು ಒಳಗೆ ಹೋಗುವ ಸೊಸೆಯನ್ನು ನೋಡಿದರು, ಚಕಿತ ಮುದ್ರೆಯಿಂದ.

ಆಮೇಲೆ ಬದಿಗೆ ಕುಳಿತ ಶಾಮಣ್ಣನನ್ನು ನೋಡಿದರು,

ನಗೆಮೊಗದಿಂದ.

ಕೆಲಹೊತ್ತು ಹಾಗೆ ಸುಮ್ಮನಿದ್ದು, ಕೊನೆಗೆ "ಹುಂ" ಎಂದು ಉಸಿರನ್ನೆಳೆದರು

"ಚಳವಳ ಸೋತಿತು ಅಂತ ಹೇಳತಿದ್ದೆ, ಇನ್ನು ಇಷ್ಟರೊಳಗೇ ಗೆದ್ದಿತು ಅಂತ ಹೇಳೋ ಪ್ರಸಂಗ ಬಂದಿತಲ್ಲೊ, ಶಾಮಣ್ಣಾ ?" ಎಂದು ಸೋಲನ್ನೊಪ್ಪಿಕೊಳ್ಳುವವರಂತೆ ನಟಿಸುತ್ತ ಕೆಣಕಿದರು ಶಾಮಣ್ಣನನ್ನು

"ಯಾವ ಚಳವಳ, ರಾಯರ?"

"ಯಾವದಂದರೇನೊ ? ಅವನ್ನೂ ೮-೧೦ ಇಟ್ಟುಕೊಂಡೀದೇನು ? ಇಲ್ಲಿ ನೋಡು, ನೀನು ಬರೋವುಂಚೆ ಭರಮ್ಯಾ ಇಲ್ಲಿ ಕೂಸಿನ್ನ ನೋಡಿಕೋತ ನಿಂತಿದ್ದ. ನನಗೆ ಒಮ್ಮಿಲೆ ತಲೀದಾಂಗ ಆಯ್ತು ಒಂದು ಕಲ್ಲೆತ್ತಿದೆ, ಒಡಿದ ನೂಕೇನುಗ, ಇಲ್ಲಾ ಅಂದ್ರೆ ಬಿಗೀತಿದ್ದೆ ಒಂದು ! ಯಾಕೋ ಏನೋ—ಭರಮ್ಯಾ ಪದನಾಲೀತನಕ ಬರೋದು ನನಗ ತಡೀಲಿಲ್ಲ. ಅದಕೇ ನಿನ್ನ ಚಳವಳ ಸೋತಿತು ಅಂತ ಹೇಳಿದೆ." ರಾಯರು ಯಾವುದೊ ವಿಚಾರಕ್ಕೆ ತೊಡಗಿದವರಂತಾಗಿ ತಡೆದರು

ಶಾಮಣ್ಣನಿಗೆ ಈಗ ಸಂದರ್ಭ ತಿಳಿಯಿತು.

ಈಗ ವಿಷಯವನ್ನು ತಿಳಿದುಕೊಂಡು ನಕ್ಕ. "ಆದರ ಸುಬ್ಬಕ್ಕನವರು ಹೇಳಿದರು—"

"ಅದಕೇ ಹೇಳಿದೆನಲ್ಲೊ, ನಿನ್ನ ಚಳವಳ ಗೆದ್ದಿತು ಅನ್ನೋ ಪ್ರಸಂಗ ಬಂದಿತು ಅಂತ?" ಎಂದು ರಾಯರು ನಡುವೆಯೆ ಬಾಯಿ ಹಾಕಿ ನುಡಿದರು.

"ರಾಯರ, ನಂ ಚಳವಳೀಗ ಸೋಲು ಇಲ್ಲ ಗೆಲುವು ಇಲ್ಲ ಸತ್ಯ ಯಾವಾಗಲೂ ಒಂದು ಅಂದವ್ಯಾಲೆ ಸೋಲು-ಗೆಲುವು ಅನ್ನೋ ದ್ವಂದ್ವನೇ ಅನ್ವಯಿಸೋದಿಲ್ಲ"

"ಏನೊ-ಅಪ್ಪ! ನಾ ಮುದುಕ ಆದೆ. ಆಂ ? ನೀವು-ನಣ್ಣ ಸಣ್ಣ

ಹುಡುಗರು–ಎಂಥೆಂಥಾ ಮಾತು ಆಡ್ತೀರಿ, ನನಗ ಅದರ ಅರ್ಥನೇ ಆಗೋದಿಲ್ಲ. ಆದರೆ ಒಂದು ಮಾತ್ರ ಹೇಳ್ತೀನಿ, ಶಾಮಣ್ಣಾ. ನಾನು ಸಣ್ಣಾವ ಇದ್ದಾಗ ಹೀಂಗೇ ಒಂದು ಆಯ್ತು, ಪರಸ್ಯಾನ ಜೋಡಿ. ಆಗ ನಂ ತಂದೆಯವರಿಗೆ ಸಿಟ್ಟು ಬಂದಿತ್ತು, ನನಗೆ ಮಾತ್ರ ಏನೂ ಅನ್ನಿಸಿರಲಿಲ್ಲ. ಅದೇ ನೆಸಪಾಯ್ತೊ ಏನು–ಭರಮ್ಯಾಗ ಹೊಡೀ ಬೇಕು ಅನ್ನುವಾಗ ಒಮ್ಮೆಲೆ ಕಯ್ಯ್ಯಾಗಿನ ಜೋರು ಹೋಯ್ತು! ಆದರೆ–ನಿಂ ಗಾಂಧೀ ಹಾಂಗ ಹೊಲೇರ ಓಣೀವಳಗ ಹೋಗಿ ಅವರ್ನ ತೆಕ್ಕೆ ಬಿದ್ದು ಬಾ ಅಂದ್ರ ಮಾತ್ರ ಆಗೋದಿಲ್ಲ ಧರ್ಮ ಅನ್ನೋದು ಅಷ್ಟು ಸುಳ್ಳು ಇರೋದಿಲ್ಲ? ನೋಡಲ್ಲ ? ಹೊಲಸ ಇರ್ತಾರ, ಸೆರೆ-ಸಿಂದೀ ಕುಡೀತಾರ-ಅವರ್ನ ನಾವಾಗೇ ಮುಟ್ಟೋದಂದ್ರ–ಯಾಕೊ ? ನಗ್ತೀ ಯಾಕ ?"

"ಅಲ್ಲ ರಾಯರ, 'ನಿಂ ಗಾಂಧಿ' ಅಂತ ಎಲ್ಲಾ ಜವಾಬ್ದಾರಿ ನಂ ಮ್ಯಾಲೆ ಹೊರಿಸಿ ಮಾತಾಡ್ತೀರಿ, ಮೋಜು ಅನ್ನಿಸಿತು."

"ಅಹುದು, ಮತ್ತೆ ? ಅವನೇ ದೊಡ್ಡ ಮನುಷ್ಯ, ಮಹಾತ್ಮ ಅನ್ನತಾ ಮನೆ—ಮಾರುಬಿಟ್ಟು ಅವ ಹೇಳಿಧಾಂಗ ಮಾಡತಾ ತಿರಗ್ತೀರಿ—".

"ನಾವೇನು ತಿರಗ್ತೀವಿ ? ನೀವೆಲ್ಲಾ ಸುಮ್ಮನಿದ್ದೀರಿ ಅಂತ ನಮ್ಮ ಆಟ ನಡೆದಿದೆ."

"ಸುಮ್ಮನಿದ್ದೀವಿ ಅಂದ್ರ? ನಾವೇನು ಮಾಡ್ತೀವೊ, ಶಾಮಣ್ಣಾ. ನೀ ಬಂದು ನಂ ಕಾಳ್ಯಾನ ತಲೀ ಪೂರಾ ಕೆಡಿಸಿಬಿಟ್ಟೆ. ಆದರೂ ನಾವೇನು ಮಾಡಬಲ್ಲಿವಿ, ಹೇಳು."

"ಅದಕೇ ಕಾಲ ಬದಲಾಗೇದ ಅನ್ನೋದು, ರಾಯರ."

"ಕಾಲ ಅಲ್ಲೊ, ಶಾಮಣ್ಣಾ. ನನಗೂ ಈಗ ಅದೇ ವಿಚಾರ ಬಂದಿತ್ತು. ಕಾಲ ಅಲ್ಲ, ನಾವೇ ಬದಲಾಗ್ತೀವಿ ಅಂತ."

"ನಮಗ ವಯಸ್ಸು-ಅನುಭವ ಆಗಿ ನಾವು ಬದಲಾಗ್ತೀವಿ

ಅಂದ್ರ, ಅದೂ ಕಾಲದ ಪರಿಣಾಮೋ ಅಲ್ಲೇನು, ರಾಯರ ?"

"ಆಂ ? ಹಂ–ಹೀಂಗ ಅಂತೀಯಾ ? ಹೌದು ನೋಡು. ಆ ದೃಷ್ಟಿಯಿಂದ ನೋಡಿದರ ಹಾಂಗ ಅನ್ನಬೇಕಾಗತದ, ಅದೇನು ಸುಳ್ಳಲ್ಲ, ಈಗ ನೋಡಲ್ಲ ? ನನ್ನದೆ ಮಾತು ಹೇಳಿದೆನಲ್ಲ ? ಈಗ ಮನೀವಳಗ ನೋಡು. ಈ ಸೊಸೆ ಇಂಥಾಕೆ, ನೀ ಕೇಳಿದಿಯಲ್ಲ ಆಕೆ ಏನು ಹೇಳಿದಳು ? ಇನ್ನು ಮಗಳು ಹಾಂಗ. ಹತ್ತು-ಹದಿನೈದು ವರುಷ ಮುಂಚೆ ಆಗಿದ್ದರ ನಾ ಹ್ಯಾಂಗ ಇದನ್ನ ತಡೆದುಕೊಳ್ಳತಿದ್ದೀನಿ—ಅನ್ನೋದೆ ಪ್ರಶ್ನ........"

* * *

ರಾಯರ ಮಾತು ಹಾಗೇ ಸಾಗುವುದು. ಹಿಂದಿನ ನೆನಪು ಹೊರಟಿತೆಂದರೆ ಸಾಕು, ಯಾರು ಕೇಳಲಿ ಕೇಳದಿರಲಿ, ರಾಯರ ವಾಕ್‌ಪ್ರವಾಹ ಒಂದೇ ಸವನೆ ಸಾಗುವುದು. ಇತ್ತಿತ್ತಲಾಗಿ ಮಗ, ಸೊಸೆ, ಮಗಳು,—ಇವರೊಡನೆ ಆತ್ಮೀಯತೆ ಉಳಿಯುತ್ತಿರಲಿಲ್ಲ. ಶಾಮಣ್ಣನೆ ಅವರಿಗೆ ಆಧಾರ, ಅವರ ಉದ್ವೇಗಕ್ಕೆ ಸಮಾಧಾನ. ರಾಯರಿಗೇ ಆಶ್ಚರ್ಯ, ಶಾಮಣ್ಣನಲ್ಲಿ ತಮ್ಮದು ಈ ರೀತಿ ವಿಶ್ವಾಸ ಕೂತುದು ಹೇಗೆ ? ಶಾಮಣ್ಣ ಬಿಟ್ಟೂರಿನವನಲ್ಲ, ಬಿಟ್ಟೂರಿಗೆ ಮುಂಚೆ ಎಂದಿಗೂ ಬಂದು ಹೋದವನೂ ಅಲ್ಲ ; ಎರಡು ವರ್ಷಗಳ ಮುಂಚೆ ಒಂದು ದಿನ ಅಕಸ್ಮಾತ್ತಾಗಿ ಬಂದ ; ಅವನ ಖಾದೀ ವೇಷ, ಗಾಂಧಿಯ ಟೊಪ್ಪಿಗೆ ನೋಡಿ ಜನ ಹೆದರಿತ್ತು. ಬಂದವನೆ ಅಲ್ಲಿಯೆ ನೆಲಸಿದ. ಇಷ್ಟೆ, ತನ್ನಷ್ಟಕ್ಕೆ ತಾನು ಇರುತ್ತಿದ್ದ. ಕ್ರಮೇಣ ತಾನು ರಾಟೆಯನ್ನು ತಿರುಗಿಸುವುದು ಜನರಿಗೆ ರೂಢಿಯಾಯಿತೆಂಬುದನ್ನರಿತು ಕೆಲವರಿಗೆ ರಾಟೆಯ ರೂಢಿಯನ್ನು ಹಚ್ಚಿಕೊಟ್ಟ ; ಅದರ ಜೊತೆಗೆಯೆ ಎರಡು ಮಗ್ಗಗಳನ್ನು ಹಾಕಿದ. ಯಾರಿಂದಲೂ ಉಪಕಾರವನ್ನು ಬಯಸದವ ; ಎಲ್ಲರ ಜೊತೆ ಸ್ನೇಹದಿಂದಿರುವವ ; ಕ್ರಮೇಣ ಊರಿನ ಜನರಿಗೆ ಬೇಕಾದವ ಎನ್ನಿಸಿದ. ಆದರೆ ಒಂದೇ ಒಂದು ವಿಷಯ

ಜನ ಅವನನ್ನು ಮೆಚ್ಚುತ್ತಿರಲಿಲ್ಲ, ಅದೆಂದರೆ, ಅಸ್ಪೃಶ್ಯರನ್ನು ಮುಟ್ಟಿ ನಡೆಯುವುದು. ಆದರೆ ತಾನು ಮಾಡಿದ್ದೇ ನಿಜ ಎಂಬ ಹಟ ಅವನಿಗಿದ್ದಿರಲಿಲ್ಲ, ಮಿಕ್ಕವರಿಗೆ ಉಪದೇಶ ಮಾಡಲಿಲ್ಲ, ಹೀಗಾಗಿ ಯಾರಿಗೂ ಇವನ 'ಚಳವಳ'ದಿಂದ ತೊಂದರೆಯಾಗಿರಲಿಲ್ಲ.

ಶಾಂತಳ ಮದುವೆಯ ಕಾಲಕ್ಕೆ ರಾಯರಿಗೆ ಇವನ ನಿಕಟ ಪರಿಚಯವಾಯಿತು. ಎಲ್ಲ ರೀತಿಯಿಂದಲೂ ಮದುವೆಯ ಕಾಲಕ್ಕೆ ದುಡಿದ, ಸಹಾಯ ಮಾಡಿದ, ಕೆಲವು ಹುಡುಗರಿಗೆ ಶಿಸ್ತನ್ನು ಕಲಿಸಿ ಅವರಿಂದ ವ್ಯವಸ್ಥೆ ಮಾಡಿಸಿದ. ಅವನದು ಒಂದೇ ಬೇಡಿಕೆ ರಾಯರಿಗೆ. ಊರವರಿಗೆಲ್ಲ ಊಟಕ್ಕೆ ಹೇಳುವುದಾದರೆ ಅಸ್ಪೃಶ್ಯರಿಗೂ ಹೇಳಬೇಕು ಬೇಕಾದರೆ ಅವರನ್ನು ಪ್ರತ್ಯೇಕವಾಗಿ ಕೂಡಿಸಲಿ, ಆದರೆ ಮಿಕ್ಕವರಿಗೆ ಬಡಿಸಿ ಉಣ್ಣಿಸುವುದನ್ನೇ ಅವರಿಗೂ ಒದಗಿಸಬೇಕು ಎಂದು. ರಾಯರು ಆ ಮಾತಿಗೆ ಒಪ್ಪಿದ್ದರು.

ಮದುವೆಗಿಂತ ತರುವಾಯದಲ್ಲಿ ಶಾಮಣ್ಣನ ಬಗ್ಗೆ ರಾಯರ ಆದರ ಹೆಚ್ಚಿತು. ಕೆಲವೇ ತಿಂಗಳುಗಳಲ್ಲಿ ಶಾಂತಳು ವಿಧವೆಯಾದಳಲ್ಲ? ಆಗಂತೂ ರಾಯರಿಗೆ ಹುಚ್ಚು ಹಿಡಿಯುವುದೊಂದೆ ಉಳಿದಿತ್ತು. ಕೂಡಿಬಂದಿದ್ದರೆ ಮಗಳು ಆತ್ಮಹತ್ಯೆ ಮಾಡಿಕೊಳ್ಳುವಂತೆಯೂ ಅವರು ಪ್ರೇರೇಪಿಸಬಹುದಾಗಿತ್ತು. ಆಗ ಶಾಮಣ್ಣ ರಾಯರ ಕಣ್ಣನ್ನು ತೆರೆಯಿಸಿದ. ಹೆಣ್ಣಿನ ಹೆಂಗಸತನ ಗಂಡನಿದ್ದರೆ ಮಾತ್ರ ಎಂದು ಹಟ ತೊಡುವುದು ತಪ್ಪು, ಗಂಡನಿರಲಿ ಇಲ್ಲದಿರಲಿ ಹೆಣ್ಣಿಗೆ ನಿಸರ್ಗದಲ್ಲಿ ತಾಯ್ತನದ ಹೃದಯ ಬಿಟ್ಟಿದ್ದಲ್ಲ, ಗಂಡನಿದ್ದರೆ ಸ್ವಾರ್ಥವನ್ನು ಸಾಧಿಸುತ್ತ ತಾಯ್ತನ ಬೆಳೆಯುವುದು, ಗಂಡನಿಲ್ಲದ ಪಕ್ಷದಲ್ಲಿ ನಿಸ್ವಾರ್ಥದ ತಾಯ್ತನ ಶಕ್ಯವಿದೆ, ಹೆಣ್ಣು ಸಮಾಜದ ತಾಯಿಯಾಗಬಹುದು—ಎಂದು ಏನೇನೊ ಹೇಳಿದ್ದ.

"ಶಾಮಣ್ಣಾ, ನೀ ಹೇಳೋದರ ಅರ್ಥ ನಿನಗಾದರೂ ಆಗತದೊ ಇಲ್ಲೊ? ಆದರೆ ಒಟ್ಟು ಹೆಂಗಸಿನ ಸಲುವಾಗಿ ಗೌರವಬುದ್ಧಿ ನಿನ್ನಲ್ಲಿ

ಅದ ಅಂಥಾಂಗಾಯ್ತು" ಎಂದಿದ್ದರು ರಾಯರು.

"ಹೆಂಗಸಿನ ಸಲುವಾಗಿ ಗಂಡಸಿಗೆ ಗೌರವಬುದ್ಧಿ ಇದ್ದರೆ ಆ ಹೆಂಗಸಿಗೆ ಯಾರಿಂದಲೂ ಸಂರಕ್ಷಣೆ ಅಗತ್ಯ ಇಲ್ಲ ನೋಡು, ಶಾಮಣ್ಣಾ" ಎಂದಿದ್ದರು

"ನೀ ಹೇಳೋದೂ ಅಷ್ಟೇನು ತಪ್ಪು ಅಲ್ಲ" ಎಂದೂ ಅನುಮಾನದ ಅನುಮತಿಯನ್ನು ಕೊಟ್ಟಿದ್ದರು

"ನಿದಾನ, ಖರೇ ಇರ್ಬೇಕು ಅನ್ನಿಸೋ ಹಾಂಗ ಹೇಳತೀ ನೋಡು" ಎಂದು ನಕ್ಕಿದ್ದರು

"ನಿನ್ನ ಗುರುತು ಆಗಿದ್ದಿಲ್ಲಿ ಅಂದ್ರ ಹ್ಯಾಂಗ ತಡೆದುಕೊಳ್ಳುತ್ತಿದ್ದೆನೊ!" ಎಂದು ಕಲವು ದಿವಸಗಳ ತರುವಾಯ ಒಮ್ಮೆ ಒಪ್ಪಿಕೊಂಡಿದ್ದರು

* * *

"ಪ್ರಶ್ನ ಏನು, ಸುಟ್ಟಿತು ೧೦-೧೫ ಮುಂಚೆ ಇಂಥಾದ್ದನ್ನು ತಡೆದುಕೊಳ್ಳೋದೇ ಶಕ್ಯ ಇರಲಿಲ್ಲ. ಈಗ ನೋಡು, ನೀನು ಒಪ್ಪೆಯುವ ಅಂತ ಗೊತ್ತದ, ಎಲ್ಲಾರದೂ ರೂಢಿ ಆಗೇದ, ನಂ ಶಾಂತಿಗೆ ಸಹಿತ ಓದು ಬರೆ ಕಲಿಸಿಕೊಟ್ಟ. ಆದರೆ ಮುಂಚಿನ ಕಾಲದಾಗ ನೀನು ಒಳ್ಳೆಯವನೊ ಕೆಟ್ಟವನೊ ನೋಡುವ ಗೋಜಿಗೇ ಹೋಗತಿದ್ದಿಲ್ಲ. ನಿನ್ನಂಥವಗ ಸಮೀಪ ಹಾಯಗೊಡತಿದ್ದಿಲ್ಲ. ಆಂ? ಈಗಾದರೂ ನಾ ಇರೋತನಕ ಎಚ್ಚರದಿಂದಿರು ಅಂದೆ. ಆಂ? ಹಹ!"

ರಾಯರಿಗೆ ಸಮಾಧಾನ ಶಾಮಣ್ಣ ನೊಬ್ಬನಿಂದಲೆ.

## ೮

ಶಾಮಣ್ಣ ಬಿಟ್ಟ್ರೋರಿಗೆ ಬಂದುದು ಅನೇಕರಿಗೆ ಸಮಾಧಾನದ ಮಾತಾಗಿತ್ತೆಂದು ಹೇಳಬಹುದು. ಮುಖ್ಯವಾಗಿ ಶಾಮಣ್ಣನಿಗೇ ಅದೊಂದು ವಿಶೇಷ ಸಮಾಧಾನದ ಅವಕಾಶವಾಗಿತ್ತು. ಶಾಮಣ್ಣನಿಗೆ ಒಂದು ತರದ ಅಸಂತೋಷವಿದ್ದಿತು; ಯಾವುದನ್ನು ಮಾಡಿದರೂ ಸಮಾಧಾನವಿರಲಿಲ್ಲ. ಅಂತಹ ಮನಃಸ್ಥಿತಿ ಗಾಂಧಿಜಿಯವರ ಅಸಹಕಾರ ಚಳವಳಕ್ಕೆ ಪ್ರಾರಂಭವಾಯಿತು. ಶಾಮಣ್ಣ ಚಳವಳದಲ್ಲಿ ಭಾಗವಹಿಸಿದ; ಆದರೆ ತನ್ನ ಸ್ವಭಾವಕ್ಕನುಸರಿಸಿ ಯಾವ ಗಲಾಟೆಯಲ್ಲಿಯೂ ತೊಡಗದೆ ತನ್ನಷ್ಟಕ್ಕೆ ರಾಟೆಯ ಕೆಲಸದಲ್ಲಿ ತೊಡಗಿದ. ಮುಂದೆ ಗಾಂಧಿಜಿಯವರನ್ನು ಕೈದು ಮಾಡಲಾಯಿತು, ಅವರಿಗೆ ಶಿಕ್ಷೆಯೂ ವಿಧಿಸಲ್ಪಟ್ಟಿತು,ಎಲ್ಲ ಕಡೆ ಚಳವಳ ತಣ್ಣಗಾಗುವ ಲಕ್ಷಣಗಳು ಕಂಡುವು; ಆದರೆ ಶಾಮಣ್ಣನ ಚಟುವಟಿಕೆಗೆ ಕಡ್ಡಿಯಷ್ಟು ಧಕ್ಕೆ ತಗಲಲಿಲ್ಲ. ಶಾಮಣ್ಣನಿಗೆ ಮಹಾತ್ಮರು ಸತ್ಯವನ್ನು ತೋರಿಸಿಕೊಟ್ಟು ಮುಂದಾಳಾಗಿದ್ದರು; ಆದ್ದರಿಂದ ಅವರು ಕಣ್ಣುಮುಂದೆ ಇರಲಿ ಇಲ್ಲದಿರಲಿ, ಅವರು ತೋರಿಸಿದ ಸತ್ಯದ ಮಾರ್ಗವನ್ನು ಹಿಡಿದು ಸಾಗಲು ಯಾವ ಅಡ್ಡಿ ? ಶಾಮಣ್ಣ ಆ ಮಾರ್ಗದಿಂದಲೆ ನಡೆಯುವುದಕ್ಕಾಗಿ ತನ್ನ ಊರನ್ನು ಬಿಟ್ಟು ಬಿಟ್ಟ್ರೋರಿಗೆ ಬಂದ. ಇಲ್ಲಿ

ಪರಿಚಯದವರಿಲ್ಲ, ಆದುದರಿಂದ ದುಡಿಯಲು ಹೆಚ್ಚು ಅನುಕೂಲ-ಎಂದು ಅವನ ವಿಚಾರ. ಬಂದಾಗ ಜನರ ಸಂಬಳಗೆ ಅವನಲ್ಲಿ ಇರಲಿಲ್ಲ ; ಇಷ್ಟೇ ಅಲ್ಲ, ಅಸ್ಪೃಶ್ಯರನ್ನು ಮುಟ್ಟುವ ಇವನನ್ನು ಜನರು ಸಂಶಯ ದೃಷ್ಟಿಯಿಂದಲೆ ನೋಡುತ್ತಿದ್ದರು. ಆದರೆ ಅಷ್ಟರಲ್ಲಿ ಶಾಂತಳ ಮದುವೆ, ಆ ನಿಮಿತ್ತದಿಂದ ರಾಯರ ಗುರುತು, ಮುಂದೆ ಶಾಂತಳು ವಿಧವೆಯಾದದ್ದು, ಆ ನಿಮಿತ್ತದಿಂದ ರಾಯರ ನಿಕಟ ಸಂಬಂಧ ಹೀಗಾಗಿ ಶಾಮಣ್ಣನ ಪತ್ತು ಬೆಳೆಯಿತು

ರಾಯರ ಮನೆಯಲ್ಲಿ ಇತ್ತೀಚೆಗೆ ಶಾಮಣ್ಣನಿಗೆ ಮುಕ್ತದ್ವಾರ ವಿದ್ದಿತು ಎಲ್ಲರಿಗೂ ಆಶ್ಚರ್ಯದ ಮಾತೆಂದರೆ ಗುಂಡಣ್ಣನ ನಡತೆ, ಮನೆಯೊಳಗೆ ಯಾರೊಡನೆಯೂ ಒಳ್ಳೆತನದಿಂದ ನಡೆದುಕೊಳ್ಳದ ಈ ಉತ್ಸವಮೂರ್ತಿ ಶಾಮಣ್ಣನ ಕೂಡ ಇಷ್ಟು ಹತ್ತಿಕೊಂಡಿರುವುದು ಹೇಗೆ—ಎಂದು ರಾಯರಿಗೂ ಕೂಡ ಆಶ್ಚರ್ಯ. ವಯಸ್ಸಿನಲ್ಲಿ ಶಾಮಣ್ಣ ೩-೪ ವರ್ಷ ಹಿರಿಯನಾಗಿರಬಹುದು ಈ ಕಾರಣಕ್ಕಾಗಿ ಅವರವರ ಸ್ನೇಹ ಇಷ್ಟು ಬೇಗ ಬೆಳೆದಿರಬಹುದೆ-ಎಂದೂ ರಾಯರಿಗೆ ಸಂಶಯ.

ಶಾಮಣ್ಣನಿಗೆ ಮಾತ್ರ ಇದರಲ್ಲಿ ಯಾವ ವಿಶೇಷವೂ ಕಂಡು ಬರಲಿಲ್ಲ ಗುಂಡಣ್ಣನ ಸ್ವಭಾವವನ್ನು ಮೊದಲಿನಿಂದಲೂ ಅರಿಯದ ಅವನಿಗೆ ಯಾವ ಪೂರ್ವಗ್ರಹವೂ ಇದ್ದಿರಲಿಲ್ಲ. ಇದಲ್ಲದೆ ಒಂದು ದಿನ ಗುಂಡಣ್ಣ ತಾನಾಗಿಯೆ ಬಂದು ಗುರುತು ಮಾಡಿಕೊಂಡಿದ್ದ. ಶಾಮಣ್ಣ ರಾಯರೊಡನೆ ಮಾತನಾಡಿ ಅದೇ ಹೊರಬೀಳುವವನಿದ್ದ : ಆ ಹೊತ್ತಿಗೆ ಸರಿಯಾಗಿ ಗುಂಡಣ್ಣ ಹೊರಗಿನಿಂದ ಬಂದ.

"ನಮಸ್ಕಾರ, ಶಾಮಣ್ಣವರೆ" ಎಂದ ಗುಂಡಣ್ಣ

"ಆಂ—ನಮಸ್ಕಾರ—ಹಂ—ನಮಸ್ಕಾರ, ರಾಯರ" ಎಂದು ಶಾಮಣ್ಣ, ಗುಂಡಣ್ಣನ ಅಕಲ್ಪಿತ ನಮಸ್ಕಾರಕ್ಕಾಗಿ ಚಕಿತನಾಗಿ ತೊದಲಿದ.

"ಮನೀಗೆ ಹೊರಟಿರೇನು?"

"ಹಂ—ಹೊರಟ—ನಾನೂ ಬಂದು ಬಹಳೊತ್ತಾಗಿತ್ತು—"

"ನಿಮಗ ತಪ ಆಗ್ತಿದ್ದರ ಹೋಗಬಹುದು" ಎಂದು ಗುಂಡಣ್ಣ ಸೂಚಕವಾಗಿ ನುಡಿದ

"ತಪ ಏನ್ನಲಿಲ್ಲ ಏನವ? ನಿಮ್ಮನ್ನಾವತ್ತು ಜಪದ ಕೇಳಿಸಿದ್ದ—'

"ಆವ ಎಂದ್ರ ಅದ, ಇಲ್ಲಂದ್ರ ಇಲ್ಲ, ಶಾಮಣ್ಣಾವರ."

"ಸಂಕೋಚ ಯಾಕ ಮಸ್ಕೂಡ, ರಾಯರ" ಎಂದು ಶಾಮಣ್ಣ ನಲಿಗಯು ಮುಗುಳು ನಗೆಯಿಂದ ಕೇಳಿದ.

"ಅಲ್ಲ—ನಮ್ಮ ಕೆಲಸ ಏನಿರಬೇಕು? ನಿಮಗೇ ಕೇಳಬೇಕು ಅಂತಿದ್ದ—"

"ಕೇಸರಿ ಅಲ್ಲ, ರಾಯರ"

ನನಗೂ ರಾಟಿ ತಿರುಗಿಸೋದನ್ನ ಕಲಿಸಿಕೊಡ್ತೀರಾ?"

"ಆಂ? ಇದೇನು? ನಿಮಗ ಯಾಕ—'

'ನಾನೂ ಖಾದೀ ಬಟ್ಟೇನೆ ಧರಿಸ್ಬೇಕು ಅಂತೀನಿ—'

"ಹಾಂಗಿದ್ರ ಬಹಾಳ ಅನುಕೂಲ ಆಯ್ತು ನೋಡರಿ, ರಾಯರ" ಎಂದು ಶಾಮಣ್ಣ ನಗತೊಡಗಿದ. "ರಾಟಿ ತಿರುಗಿಸಬೇಕು ಅಂತ ಇಲ್ಲ, ಖಾದೀ ಬಟ್ಟೆ ತೊಡೋದು ಮುಖ್ಯ" ಎಂದು ಒತ್ತಿ ಹೇಳಿದ ಶಾಮಣ್ಣ

'ಹೇಳಿರಿ, ನೀವು ಹ್ಯಾಗ ಮಾಡಂತೀರಿ ಹಾಂಗೇ."

"ಅಂದ್ರ ನೋಡ್ರಿ ರಾಯರ, ನಾವು ನೂಲೋದನ್ನ ನೀವು ಕೊಂಡುಬಿಟ್ಟರ ಸಾಕು. ಅಂದ್ರ ನಿಮಗೂ ಇಲ್ಲಿಂದಲೆ ಅರಿವೆ ಸಿಕ್ಹಾಂಗ ಆಗ್ತದ."

"ಯಾಕರಿ? ನೂಲುವವರು ಬಹಾಳ ಜನ ಇದ್ದಾರೇನು? ನನಗ ಬ್ಯಾಡ ಅಂತೀರಿ."

"ಬಹಾಳ ಜನ ಇಲ್ಲ. ನಾವೇ ೩-೪ ಜನ. ಆದರೆ ಈಗ ಕೊಳ್ಳುವವರಿದ್ದರ ಒಂದು ಕೆಲಸ ಸಾಧಿಸಿಧಾಂಗ ಆಗ್ತದ. ಅಗತ್ಯ ಇದ್ದವರಿಗೆ ಹೊಟ್ಟೆ ತುಂಬಿಕೊಳ್ಳಲಿಕ್ಕೆ ಗಳಿಸಿದ ಹಾಂಗ ಆಗ್ತದ."

ಗುಂಡಣ್ಣ ಒಮ್ಮೆಲೆ ನಕ್ಕ.

ಅದು ಪೂರ್ತಿ ಕೃತಕ, 'ಬೇಪಾವರಿ' ನಗೆ ಎಂಬುದು ಸ್ಪಷ್ಟವಿದ್ದಿತಾದರೂ ಶಾಮಣ್ಣ ಸರಳ ಮನಸ್ಸಿನಿಂದಲೇ ಕೇಳಿದ, "ಯಾಕ, ರಾಯರ? ಏನು ತಪ್ಪಿತೇನು?" ಎಂದು.

"ತಪ್ಪೇರಿ ಯಾಕ? ಹಹ! ಅಲ್ಲ, ನೀವೂ ಒಳ್ಳೇ ಯುಕ್ತಿಗಾರರು ಕಾಣ್ತೀರಿ! ಆಂ? ಹಹ, 'ಅಗತ್ಯ ಇದ್ದವರಿಗೆ ಹೊಟ್ಟೆ ತುಂಬಿಕೊಳ್ಳಲಿಕ್ಕೆ' ಅಂತ! ಹಹ! ಸುಮ್ಮನೇನು ಮಾಡಿದ್ಯಲಿಗೆ ಮನುಷ್ಯ ಅಲ್ಲ, ನನಗ್ಯಾಕ ಇಷ್ಟು ಸುತ್ತಿಸುತ್ತಿ ಹೇಳ್ತೀರಿ? ಆಂ? ಹಹ!"

"ಇ...-ಅಂದ್ರ?-ಸುತ್ತಿಸುತ್ತಿ-ಅಂದ್ರ-"

"ನೋಡಿರಿ, ಶಾಮಣ್ಣಾ, ಆ ಹೊಲೇರು ನೂಲೋದನ್ನ ನಾ ಕೊಳ್ಳಬೇಕು ಅಂತೀರಿ—"

"ಛೆ! ಛೆ! ನನ್ದೇನು ಹಾಂಗ ವಿಚಾರ ಇಲ್ಲ. ನಾನು ನೂಲೋದನ್ನೇ ನೀವು ಕೊಂಡುಕೊಳ್ಳಿರಿ; ಉಳಿದವರನ್ನ ನಾ ಕೊಂಡು ಬ್ಯಾರೆ—"

"ಏನೇನೂ ಬ್ಯಾಡ. ನಾನೇ ಕೊಳ್ತೀನಿ. ಆ ಕಾಳ್ಯಾ, ಅವರ ಅಪ್ಪ, ಕಾಳ್ಯಾನ ಹೆಂಡತಿ—ಇವರು—ನಿಮಗ ಸಹಿತ ಗೊತ್ತಿರಲಿಕ್ಕಿಲ್ಲ—ನಮಗ ಮನೆಯವರು ಇದ್ಧಾಂಗ ಇದ್ದಾರ ಹೋಗಲಿ ಬಿಡ್ರಿ. ಸದ್ಯಕ್ಕ ಟೊಪ್ಪಿಗಿ ಒಂದನ್ನ ಬಿಟ್ಟು ಉಳಿದದ್ದನ್ನೆಲ್ಲ ಖಾದೀ ಹಾಕ್ತೀನಿ. ನಡೀತದ ಹೌದಲ್ಲೊ?"

ಗುಂಡಣ್ಣ ತನ್ನ ಪ್ರಶ್ನದ ಉತ್ತರಕ್ಕಾಗಿ ಕೂಡ ತಡೆದಿರಲಿಲ್ಲ; ನಗುತ್ತ ಹೊರಟೇಬಿಟ್ಟ. ಶಾಮಣ್ಣನಿಗೆ ಎಲ್ಲವೂ ಒಂದು ಕನಸಿನಂತೆ

ಅನ್ನಿಸಿತೇನೋ! ತಲೆಯನ್ನೊಮ್ಮೆ ಜಾಡಿಸಿ ಹೊರಬಿದ್ದ.

* * *

ಗುಂಡಣ್ಣನಿಗೆ ಮಾತ್ರ ಒಳ್ಳೇ ಕನಸು ಬಿದ್ದಂತಾಯ್ತು, ಕನಸಿನಲ್ಲಿ ನಡೆವಂತೆ ನಡೆದ, ಹವೆಯಲ್ಲಿ ತೇಲುತ್ತಿರುವಂತೆ. ಶಾಮಣ್ಣನೊಡನೆ ಮಾತನಾಡುತ್ತಿರುವಾಗ ತಟ್ಟನೆ ಒಂದು ವಿಚಾರ ಹೊಳೆದಿತ್ತು, ಅದಕ್ಕಾಗಿ ಅವನು ಕನಸಿನಲ್ಲಿಯಂತೆ ಮೈಮರೆತಿದ್ದ. ಎಷ್ಟು ಅಚಾನಕವಾಗಿ ಕೂಡಿ ಬಂದಿತಲ್ಲ? 'ಹೊಲೇರು ನೂಲೋದನ್ನ' ಎಂದು ತಾನು ಆ ರೀತಿ ನುಡಿದಾಗ ಆ ಮಬ್ಬು ಶಾಮಣ್ಣನಿಗೆ ಸಂಶಯ ಪತ್ತಿರ ಕೂಡ ಸುಳಿದಿರಲಿಕ್ಕಿಲ್ಲ. ಹಹ! 'ಅವರೆಲ್ಲಾ ನಮಗ ಮನೆಯವರು ಇದ್ದಾಂಗ' ಅನ್ನೋ ಮಾತಿನ ಮೋಜು ಅವನಿಗೆ ತಿಳಿಯೋದು ಶಕ್ಯನೆ ಇಲ್ಲ! ಹಹ! ಈ ಸಲ ಮಾತ್ರ ಆಕೆಯ ಮ್ಯಾಲಿನ ಹಿಡಿತ ಸಡಿಲು ಆಗಗೊಡಬಾರದು–ಎಂದು ಮನಸ್ಸಿನ ಆವೇಶದಲ್ಲಿ ಮುಷ್ಟಿಯನ್ನು ಬಿಗಿಯುತ್ತ ವಿಚಾರ ಮಾಡಿದ. ತಾ ಇಲ್ದಾಗ ತನ್ನ ಹೆಂಡ್ತೀನ್ನ ಮೋಸದಿಂದ ಒಲಿಸಿಕೊಂಡೆ ಅಂತ ಆ ಮಗ ಕಾಳ್ಯಾ ತಿಳಿದಿದ್ದನಲ್ಲ? ಹಃ! ಏನು ಜೋರಿಡಿ ಇದ್ದವರ ಹಾಂಗ ಮಾತಾಡ್ತಾನ, ಏನು ಸೊಕ್ಕು ಇವನದು! ಆಗಲಿ, ಈಗ ಇವನ ಕಣ್ಮುಂದೇ ಇವನ ಹೆಂಡ್ತೀನ್ನ ಇವನಿಂದ ಬಿಡಿಸಲಿಲ್ಲ–ಅಂದ್ರ? —ಗುಂಡಣ್ಣ ಮೀಸೆಯ ಮೇಲೆ ಕೈಯನಾಡಿಸುತ್ತ ಹೇಳಿಕೊಂಡ.

ಕೆಲವು ವಿಷಯಗಳಲ್ಲಿ ಗುಂಡಣ್ಣ ಬಲು ಚುರುಕು; ವಿಚಾರ ಬಂದೊಡನೆ ಕೆಲಸಕ್ಕೆ ತೊಡಗುವ, ಅಂತಹ ವಿಷಯಗಳಲ್ಲಿ ಗಂಗಿಯ ಸಂಬಂಧವು ಒಂದು ಮುಖ್ಯವಾದದ್ದಾಗಿತ್ತು. ಆದುದರಿಂದ ಮುಂದೆ ಎರಡೇ ದಿನಗಳಲ್ಲಿ ಅವನು ಗಂಗಿಯನ್ನು ಸಂಧಿಸಿದ. 'ಕಾಳ್ಯಾನ ಹಾದಿ ಬ್ಯಾರೆ ಆದದ್ದರಿಂದ ನನ್ನ ಹಾದಿ ಸುಗಮ ಆಯ್ತು' ಅಂದ್ಕೊಂಡು ಸಹಜವಾಗಿ ಆ ಕಡೆ ಹೋಗುತ್ತಿರುವವನಂತೆ ನಟಿಸುತ್ತ ಗುಡಿಸಲಿಗೆ ಬಂದ. ಹಿಂದೆ ಗುಡಿಸಲದ ನೆರಳಿನಲ್ಲಿ ಗಂಗಿ ಕುಳಿತಿದ್ದಳು;

ಒಂದು ಕಣ್ಣು ಅಲ್ಲಿಯೆ ಸುತ್ತಲು ಮೇಯುವ ದನಗಳ ಮೇಲೆ, ಇನ್ನೊಂದು ಕಣ್ಣು ನೂಲುತ್ತಿರುವ ರಾಟೆಯ ಮೇಲೆ. ಬೇರೆ ಯಾರೂ ಇಲ್ಲದ್ದನ್ನು ಕಂಡು ಗುಂಡಣ್ಣನ ಹೃದಯ ನಗುತ್ತಲಿತ್ತು, ನೆರಳು, ಆಮೇಲೆ ಕಾಲು ಸದ್ದು. ಗಂಗಿ ಓರೆಯಾಗಿ ನೋಡಿದಳು ಓಹೊ–ಎಂದುಕೊಂಡಳು, ತಟ್ಟನೆ ತಲೆಯ ಮೇಲಿನ ಸೆರಗನ್ನು ಸಾವರಿಸಿಕೊಂಡು ಮುಖವನ್ನು ಇನ್ನಿಷ್ಟು ತಿರುಗಿಸಿದಂತೆ ಮಾಡಿ ಕುಳಿತಳು.

ಗುಂಡಣ್ಣ ಒಂದು ನಿಮಿಷ ನಿಂತ. ಜಾತಿಗೂ ಸೌಂದರ್ಯಕ್ಕೂ ಸಂಬಂಧವೆ ಇಲ್ಲವೆ? ಅಥವಾ ಸೌಂದರ್ಯದ ಸವಿಯನ್ನುಣ್ಣುವು ದೆಂದರೆ ತನ್ಮಯನಾಗುವುದೆ? ವಿಚಾರ—ಇಂತಹ ಯಾವುದೊ ಒಂದು ವಿಚಾರ ಹೊಳೆದಿರಬಹುದು ಅವನಿಗೆ, ಆದರೆ ಅದಕ್ಕೆ ಸರಿಯಾದ ಶಬ್ದಗಳು ದೊರೆಯುದಂತಾಗಿ ತನಗೆಯೆ ತಿಳಿದಿಲ್ಲವೇನೋ ಆ ವಿಚಾರ! ನಾಲಿಗೆಯ ತುದಿಯ ಮೇಲಿದೆ, ಉಚ್ಚರಿಸಲು ಬಾರದು ಎಂಬ ವಿದ್ಯಾರ್ಥಿಯಂತೆ ಒಂದು ತರದ ಪೆಚ್ಚು ಕಳೆ ಮೂಡಿದೆ ಅವನ ಮುಖದ ಮೇಲೆ.

ಗುಂಡಣ್ಣ ಹಾಗೆಯೆ ನಿಂತುಕೊಂಡ

ಗಂಗಿಗೆ ಅವನ ಅರಿವು ಇದ್ದಂತಿರಲಿಲ್ಲ.

ಹೃದಯದ ನಗೆ ಮುಖದಲ್ಲಿ ಮೂಡಿತು ಗುಂಡಣ್ಣನಿಗೆ.

ಆ ನಗೆ ಬಿಸಿಲಿನಂತಾಯಿತೇನೊ ಗಂಗಿಗೆ! ಸೆರಗನ್ನು ಮತ್ತೆ ಸಾವರಿಸಿಕೊಂಡಳು.

ನಗೆಯ ಕಟ್ಟೆ ಒಡೆಯಿತು, ಗುಂಡಣ್ಣ ಕೆಮ್ಮಿದ.

ಯಾವ ಸದ್ದಿಗೂ ಗಂಗಿಯಿಂದ ಉತ್ತರವಿಲ್ಲದ್ದನ್ನು ನೋಡಿ ಗುಂಡಣ್ಣ ಗಂಟಲನ್ನು ಸರಿಪಡಿಸಿಕೊಂಡು ತಾನಾಗಿಯೆ ಮಾತಿಗೆ ಪ್ರಾರಂಭಿಸಿದ

"ರೊಕ್ಕ ಕೊಡೋದೇ ಖರೇ; ಸರಕು ಆದರೂ ಹ್ಯಾಂಗದ

ನೋಡೋಣ ಅಂದೆ."

ಗಂಗಿಯ ದೃಷ್ಟಿ ಮಿಂಚಿನಂತೆ ಒಂದು ಕ್ಷಣ ಅವನ ಕಡೆ ಸುಳಿಯಿತು. ಅಬ್ಬ! ಎಷ್ಟೊಂದು ಸಿಟ್ಟಿನ ಮೋಹಕ ಸೆಳೆತ ಆ ದೃಷ್ಟಿಯಲ್ಲಿ? ಆದರೆ ಗಂಗಿ ಮಾತನಾಡಲಿಲ್ಲ. ತುಸು ಸರಿದು ಗುಂಡಣ್ಣನ ಕಡೆ ಬೆನ್ನನ್ನು ತಿರುಗಿಸಿ ಕುಳಿತಳು.

"ನೋಡಬೇಕು ಅಂದ್ರ ನೋಡಗೊಡೋದಿಲ್ಲಲ! ರೊಕ್ಕ ಕೊಟ್ಟು ಸಿಕ್ಕದ್ದನ್ನ ಕೊಳ್ಳೋದು ನಂ ಪಾಲಿಗೆ ಬಂತೊ ಏನೊ?" ಎಂದು ಗುಂಡಣ್ಣ ತತ್ತ್ವಜ್ಞಾನಿಯಂತೆ ನುಡಿದ.

"ಊರಿಗೆ ಧಣೀರು ಅಂತ ಸಿಕ್ಕವರಿಗೆ ಸಿಕ್ಕ ಹಾಂಗ ಮಾತಾಡಿದರ—" ಅಂತೂ ಗಂಗಿ ಮಾತಾಡಿದಳು! ಗುಂಡಣ್ಣನ ಕಿಡಿಗೇಡಿತನಕ್ಕೆ ಪುಟು ದೊರೆತಂತಾಯಿತು.

"ಮಾತಾಡದೆಯೆ ವ್ಯಾಪಾರ ಮಾಡೋದು ಹ್ಯಾಂಗ? ಸರಕು ಯಾವುದು, ಎಂಥದು? ಅದಕ್ಕ ಕೊಡೋ ರೊಕ್ಕ ಹೆಚ್ಚೊ? ಕಡಮೆಯೊ? ಇವನ್ನೆಲ್ಲ ನೋಡಬೇಡೆ—"

"ಬಡವರು ಅಂತ ರೊಕ್ಕ ಕೊಟ್ಟು ಕೊಂಡುಗೊಳ್ಳೋ ವಸ್ತುನೇ ಆದುವೇನು?"

"ಬಡವರಂದ್ರ? ಮಾರೋದಿಲ್ಲೇನು?"

"ನನ್ನ ನಾ ಮಾರಿಕೊಳ್ಳೋವಷ್ಟು ಬಡತನ ಬಂದಿಲ್ಲ, ನೀವು ರೊಕ್ಕ ಕೊಡಾಕ, ಸರಕು ನೋಡಾಕ!"

"ಆಂ!" ಗುಂಡಣ್ಣ ಅತ್ಯಂತ ಬೆರಗಾದವನಂತೆ ನಟಿಸಿದ. "ಏನಂದಿ? ಹಹ! ನಿನ್ನ ಬಗ್ಗೆ ಯಾರು ಮಾತಾಡ್ತಾರ? ನೀನು ತೆಗೆಯೋ ನೂಲಿನ ಬಗ್ಗೆ ಮಾತಾಡಿದೆ. ಹ! ಹುಚ್ಚು! ತನ್ನ ಯೋಗ್ಯತಾ ಏನು? ಇನ್ನೊಬ್ಬರ ಯೋಗ್ಯತಾ ಏನು? ನಿಮ್ಮ ಆ ಶಾಮಣ್ಣ ಹೇಳಿಕೊಂಡ, ನೂಲುಕೊಂಡರ ಆ ಬಡರಂಡೇ ಮಗಳಿಗೆ ಸಹಾಯ ಮಾಡಿಧಾಂಗ ಆಗ್ತದ ಅಂತ, ಅದಕ್ಕ ಕೇಳಿದೆ. ಹಹ!

ಏನೇ ಯಾಕ ಇರವಲ್ಲದ್ಯಾಕ? ನೀನು ತೆಗೆಂಡೋ ಹೂಲನ್ನೆಲ್ಲಾ ತಂದ್ಕೊಟ್ಟುಬಿಡು, ರೊಕ್ಕ ಒಯ್ಯು ಅಂತ."

ಗುಂಡಣ್ಣ ಬಿರಬಿರನೆ ಅಲ್ಲಿಂದ ನಡೆದೇ ಬಿಟ್ಟ.

ಗಂಗಿ ಗಾಬರಿಗೊಂಡಳು, ಬೆಚ್ಚಿಬೆದರಿದಳು. ಏನಾಯಿತಿದು? ಹೀಗೇಕೆ ಮಾಡಿದೆ ನಾನು?—ಎಂದು ದಿಗಿಲು. ಗುಂಡಣ್ಣ ಬಂದುದು ಅಷ್ಟು ಅಕಸ್ಮಾತ್ತಾಗಿ ಆದುದರಿಂದ ಹೀಗಾಗಿರಬಹುದೆ? ಇಂದಿಲ್ಲ ನಾಳೆ ಬಂದೇ ಬರುವ—ಎಂಬ ಭರವಸೆ ಇದ್ದಿತ್ತ. ಆಕೆಗೆ ಗುಂಡಣ್ಣನಿಗೆ ಮದುವೆಯಾದುದಕ್ಕೆ ತನ್ನ ದೃಷ್ಟಿಯಿಂದ ಗಂಗಿ ಮಹತ್ವವನ್ನೆ ಕೊಟ್ಟಿರಲಿಲ್ಲ 'ಧಣಿಯರ ಸ್ವಭಾವ ನನಗೆ ಗೊತ್ತಿಲ್ಲೆ?' ಎಂದು ನಗೆಯಿಂದ ತನ್ನನ್ನು ತಾನೇ ಕೇಳಿಕೊಳ್ಳುತ್ತಿದ್ದಳು. ಆದ್ದರಿಂದಲೆ ಆಕೆ ತುಸು ಅಧೀರಳಾಗಿದ್ದಳು. ಆದರೂ ಭರವಸೆ ಇದ್ದಿತು. ಅದರಂತೆ ಇಂದು ಬಂದನಾದರೂ ತಾನೇನು ಹೀಗೆ ಹುಚ್ಚಿಯಂತೆ ನಡೆದುಕೊಂಡಳು? ಹೂಲನ್ನು ಕೊಂಡುಕೊಳ್ಳುವ ನಾಟಕ ನಡೆದುದಲ್ಲ? ನನಗೊತ್ತು ಹಾಂಗ ಬರಾಕ ಮಾತಾಗಿದೆ ಅಂತ! ಅಯ್ಯ! ಶಾಮಣ್ಣೋರ ಹೆಸರ್ಹೇಳಿ ಇಲ್ಲಿ ತನಕ ಬಂದನ ಧಣಿ! ಗಂಗಿಗೆ ಗುಂಡಣ್ಣನ ಸ್ವಭಾವಕ್ಕಾಗಿ ಮೋಜು ಎನ್ನಿಸಿತು. ಶಾಮಣ್ಣನ ವಿಚಾರ ಬಂದೊಡನೆ ಗಂಗಿ ಆಲೋಚನೆಗೆ ತೊಡಗಿದಳು. ಶಾಮಣ್ಣೋರು ತನಗ ಎಷ್ಟು ಅನುಕೂಲ ಆದರಲ್ಲ—ಎಂದು ಗಂಗಿಗೆ ಸೋಜಿಗ. ಒಮ್ಮೊಮ್ಮೆ ಕೂಡಿ ಬರೋದಾದರ ಹೆಂಗತ್ತು ಹೀಂಗೇ ಕೂಡಿ ಬರತದೇನೋ—ಎಂದುಕೊಂಡಳು. ಗುಂಡಣ್ಣ ತನ್ನ ಕಡೆ ಬಂದದ್ದು ಶಾಮಣ್ಣೋರಸು ಮಾತಿಗಾಗಿಯೆ; ಮಸ್ಯಾಗ ಕಾಳ್ಯಾ ತನ್ನಿಂದ ದೂರ ಇದ್ದೇದು ಶಾಮಣ್ಣೋರ ಮಾತಿಗಾಗಿಯೆ! ಅಂತೂ ತನ್ನ ಪಾಲಿಗ ಶಾಮಣ್ಣೋರು ಭಾಗ್ಯದ ದೇವರು ಬಂಧಾಂಗ ಬಂದರು ಅನ್ನಬಹುದಲ್ಲ?

* *

ಶಾಮಣ್ಣ ಬಂದಂದಿನಿಂದ ಕಾಳ್ಯಾನ ನಡತೆ ಬದಲಾಗಿತ್ತು.

ಗುಂಡಣ್ಣನ ಮದುವೆಯಾದಂದಿನಿಂದ ಬಿಟ್ಟೂರನ್ನು ಬಿಡಬೇಕೆಂದು ಕಾಳ್ಯಾ ನಿರ್ಧರಿಸಿದ್ದರೂ ಒಂದಿಲ್ಲೊಂದು ನೆವದಿಂದ ಅಲ್ಲಿಯೆ ಉಳಿದನು. ಗಂಗಿಯಲ್ಲಿ ತನಗೆ ಗಂಡಸುಮಗ ಹುಟ್ಟುವನೆಂಬ ಆಸೆ ಅವನಿಗಿದ್ದಿತು. ಹೆಂಡತಿಯಾಗಲಿ, ಮಗಳಾಗಲಿ ಹೆಣ್ಣು ವಿಶ್ವಾಸಕ್ಕೆ ಅಯೋಗ್ಯವಾದದ್ದು ಎಂದು ನಿರ್ಧರಿಸಿ ಕಾಳ್ಯಾ ಮಗನನ್ನು ಬಯಸುತ್ತಿದ್ದ. ಗಂಗಿಯ ದೇಹಕ್ಕಾಗಿ ಅವನು ಹಸಿದವನಂತಿದ್ದರೂ ಕ್ರಮೇಣ ಮಗನ ವಿಚಾರ ಅವನ ಮನಸ್ಸನ್ನು ಹೆಚ್ಚಾಗಿ ಸೆಳೆಯಿತು. ಹೆರಿಗೆಯ ದಿನ ಸಮೀಪಿಸಿದಂತೆ ಅವನಿಗೆ ಮತ್ತೊಂದು ಯೋಚನೆ ಕಾಡತೊಡಗಿತು. ತನ್ನ ಮಗನಿಗೂ ತನ್ನಂತೆ ಸ್ಥಾನವಿಲ್ಲದೆ ಹೋಗುವುದಲ್ಲ? ಇನ್ನೊಬ್ಬರ ಸೇವೆಯಲ್ಲಿ ಜನ್ಮ ಸವೆಸುವುದು, ಸ್ವಂತದ ಹಕ್ಕನ್ನಾಗಲಿ ವ್ಯಕ್ತಿತ್ವವನ್ನಾಗಲಿ ದೊರಕಿಸುವಂತಲೇ ಇಲ್ಲ, ಜನ್ಮಜನ್ಮಾಂತರಗಳ ಎಂಜಲು ಜೀವನ ಎನ್ನುವಂತೆ ಚರಿತಾರ್ಥವನ್ನು ತನ್ನ ಮಗ ನಡೆಸಕೂಡದು—ಎಂದು ಕಾಳ್ಯಾ ಮನಸ್ಸಿನಲ್ಲಿ ಹಟ ತೊಟ್ಟ.

ಮಗ ಹುಟ್ಟಿದ. ಕಾಳ್ಯಾನ ಆನಂದಕ್ಕೆ ಪಾರವೇ ಉಳಿಯಲಿಲ್ಲ. ಮಗ ಬೆಳೆದಂತೆ ಕಾಳ್ಯಾನು ಅವನನ್ನು ಹೆಚ್ಚಾಗಿ ತನ್ನ ಹತ್ತಿರ ಇಟ್ಟುಕೊಳ್ಳುತ್ತಿದ್ದ. 'ನನ್ನ ಅನುಭವವನ್ನು ಅವನಿಗೆ ತಿಳಿಸುವೆ, ನನ್ನಂತೆ ಅವನ ಬಾಳು ಬೇಡ ಎಂದು ಹೇಳುವೆ' ಎಂದುಕೊಂಡಂತೆ ಆ ಹುಡುಗನನ್ನು ತನ್ನ ಜೊತೆಯಲ್ಲಿರಿಸಿಕೊಂಡೇ ತಿರುಗಾಡುತ್ತಿದ್ದ. ಗಂಗಿ? ಹೌದು—ಆಕೆ ತನಗೆ ಮಗನನ್ನು ಕೊಟ್ಟ ಹೆಂಗಸು ಎಂದಿಷ್ಟೆ ಈಗ ಅವನ ವಿಚಾರ. ಗಂಗಿಯ ಬಗ್ಗೆ ಹೆಚ್ಚಿನ ಆಸಕ್ತಿ ಉಳಿದಿರಲಿಲ್ಲ. ಒಂದು ಕಡೆ ಮಗನ ವಿಚಾರ. ಇನ್ನೊಂದು ಕಡೆ ಅವನ ಸ್ಥಾನಮಾನಗಳ ವಿಚಾರ.

ಈ ಸಂದರ್ಭದಲ್ಲಿ ಶಾಮಣ್ಣ ಬಿಟ್ಟೂರಿಗೆ ಬಂದದ್ದು, ಊರಿಗೆ ಅಪರಿಚಿತನಾದ್ದರಿಂದ ಮಿಕ್ಕವರಂತೆ ಕಾಳ್ಯಾನೂ ಅವನನ್ನು ನಂಬಿರಲಿಲ್ಲ. ಕ್ರಮೇಣ ಶಾಮಣ್ಣನ ರಾಟಿವ್ಯಾಸಂಗ ಮತ್ತು ಅಸ್ಪೃಶ್ಯತೆ

ಾಗಿದ್ದ ವಿರೋಧ—ಇವೆರಡರಿಂದ ಕಾಳ್ಯಾನ ಲಕ್ಷ್ಯ ಶಾಮಣ್ಣನ ಡೆ ಎಳೆಯಲ್ಪಟ್ಟಿತು. ಈಗಂತೂ ಶಾಮಣ್ಣನ ಬಗ್ಗೆ ಕಾಳ್ಯಾನಲ್ಲಿ ವಿಶ್ವಾಸ ಹೆಚ್ಚಿತು. 'ಇದರಾಗ ಏನೊ ಗಮ್ಮತ್ತಿರಬೇಕು' ಎಂದು ಕೊಂಡ ಕಾಳ್ಯಾ.

ಗುಂಡಣ್ಣನಂತಹನು ಗಂಗಿಯಂತಹ ಅಸ್ಪೃಶ್ಯಳನ್ನು ಮುಟ್ಟಿದ್ದನ್ನು ಕಾಳ್ಯಾ ಮರೆಯುವಂತಿರಲಿಲ್ಲ 'ಅಂಥಾದ್ದೇ ಏನಾದರೂ ಕತಾಪತಿ ಇರಬೇಕು' ಎಂದು ಶಾಮಣ್ಣನ ನಡತೆಯ ಬಗ್ಗೆ ಅವನ ಅನುಮಾನ. ಬುದ್ಧಿ ಇದ್ದವರು, ದುಡ್ಡು ಇದ್ದವರು ತಾವಾಗಿಯೆ ಮುಂದಾಗಿ ಸಹಾಯ ಮಾಡಲಿಕ್ಕೆ ಬಂದರೆ ಅದರ ಜೊತೆಗೆ ಒಂದು ಉರುಲುಸುತ್ತು ಇರಲೇಬೇಕು ಎಂದು ಕಾಳ್ಯಾನ ತತ್ತ್ವಜ್ಞಾನ.

ಶಾಮಣ್ಣನ ಸಂದರ್ಭದಲ್ಲಿ ಮಾತ್ರ ಕಾಳ್ಯಾನ ಜ್ಞಾನವು ತತ್ತ್ವದಿಂದ ಬಹಳ ದೂರದಲ್ಲಿ ಉಳಿಯಿತು. ಎಷ್ಟೊಂದು ಸಂದೇಹ ಪಟ್ಟರೂ ಶಾಮಣ್ಣನ ಪ್ರಾಮಾಣಿಕತೆಯ ಬಗ್ಗೆ ಎಲ್ಲಿಯೂ ಗತ್ತು ಗಾರಿಕೆ ಕಾಣಲಿಲ್ಲ. 'ಆಯ್ತು. ಕೆಲವು ಹುಚ್ಚಗೋಳು ಇರ್ತಾವ ಅಂಥಾಂಗಾಯ್ತು ಜಗತ್ತಿನಾಗ' ಎಂದು ಕಾಳ್ಯಾ ಸಮಾಧಾನವನ್ನು ತಂದುಕೊಂಡಿದ್ದ.

ಆದರ ಕೆಲವರಿಗೆ ಈ ಹುಚ್ಚನ್ನು ಹಿಡಿಸುವ ಮಾಂತ್ರಿಕ ಪುರುಷ ನಮ್ಮಲ್ಲಿ ತಲೆ ಎತ್ತಿದ್ದಾನೆ ಎಂಬುದು ಕಾಳ್ಯಾನಿಗೆ ಆಮೇಲೆ ತಿಳಿದು ಬಂತು, ಅದೂ ಶಾಮಣ್ಣನಿಂದಲೆ. ಅಷ್ಟರಲ್ಲಿ ಕಾಳ್ಯಾನಿಗೆ ಶಾಮಣ್ಣ ನಲ್ಲಿ ಪೂರ್ತಿವಿಶ್ವಾಸ ನೆಲಸಿತ್ತಲ್ಲದೆ, ದಾಸಾನುದಾಸನಂತೆ ಅವನ ಸಹವಾಸದಲ್ಲಿಯೆ ಇರುತ್ತಿದ್ದ, ತನ್ನ ಎಳೆಯ ಮಗನನ್ನು ಕಟ್ಟಿಕೊಂಡು. ಅಂತಹ ಒಂದು ಸಮಯದಲ್ಲಿ ಶಾಮಣ್ಣ ಅವನಿಗೆ ಹೇಳಿದ್ದ :

"ನೋಡು, ಕಾಳಪ್ಪಾ, ಅವರ ಕಡೆ ನಿನ್ನ ಭರಮನಂಥಾ ಹುಡುಗರು ಅವ. ಹುಡುಗರು ಅಂದ್ರ ಬಹಾಳ ಪ್ರೀತಿ."

"ಯಾರದ್ರಿ, ಯಪ್ಪಾ, ಆ ಮಾತ್ಮಾ—ಇವರು—ಅದೇನೊ

ಅಂದಿರಲ್ಲ ?—ಯಾರವರು ?—"

"ಗಾಂಧಿಜಿಯವರು" ಶಾನುಣ್ಣ ನಗೆಯಿಂದ ನೆನಪು ಕೊಟ್ಟ.

"ಹಾಂ-ಆ ಮಹಾತ್ಮ ಗಾಂಧಿಜಿಯವರ ಮಾತು ಹೇಳ್ತೀರೇನ್ರಿ ? ಈ ನಂ ಭಗವಂತನಂಥಾ ಹುಡುಗರು ಅಂದ್ರ — ಖುದ್ದ ನಂ ಜಾತಿ ಪೈಕೀನೇ ಇದ್ದಾರ್ರಿ ?"

"ಜಾತಿ-ಅನ್ನವೇ ನಿನಗ ಹೇಳಲಿಕ್ಕೆ ಬರೋದಿಲ್ಲ"

"ಹುಟ್ಟಿದ್ದೇ ಖರೇ ಆ ಜಾತ್ಯಾಗ—"

"ಹುಟ್ಟಿದ್ದು ಜಾತ್ಯಾಗ ಏನು? ಕೇಳು ನಿನ್ನ ಹುಡುಗಗ? ಅವನಿಗೆ ತಿಳೀತನೇನು ಜಾತಿ? ಹುಟ್ಟಿದಾಗ ಜಾತಿ-ಇರೋದಿಲ್ಲ, ಕಾಳಪ್ಪ."

'ಇದೆಲ್ಲಾ ಮಾತಿನಾಗ ಛಂದರಿ ಆಡಾಕ" ಕಾಳ್ಯಾ ನಗುತ್ತ ಹೇಳಿದ.

"ಹುಟ್ಟಿದಾಗ ಇರಲಿ ಬಿಡಲಿ, ಸಾಯೋತನಕ ಉಳಿದ ಜನ ನಮ್ಮನ್ನ ನಡಿಸಿಕೊಳ್ತಾರೋ ಇಲ್ಲೋ ಹೇಳ್ರಿ, ಮೊರ ಇಟ್ಟು"

"ಹಂ, ಹಾಂಗ ಅನ್ನು, ಕಾಳಪ್ಪಾ ಉಳಿದ ಜನ ನಡೆಸಿಕೊಳ್ತಾರ ಅನ್ನು. ಅದಕ್ಕೇ ಗಾಂಧಿಜಿಯವರು ಹೇಳೋದು, ತಪ್ಪು ಉಳಿದ ಜನದ್ದು, ನಿಮ್ಮನ್ನ ಹಾಂಗ ನಡಿಸಿಕೊಳ್ಳುವಂಥಾ ನಮ್ಮದು—ಅಂತ"

ಕಾಳ್ಯಾ ಬೆರಗಾದ.

"ಅಂದ್ರ—ಇದು ಅಪ್ರೂಟಾ ತಪ್ಪೇ-ಅಂತಾರೇನ್ರಿ ?"

"ತಪ್ಪು—ನೀ ಹೇಳೋ ಹಾಂಗ-ಅಪ್ರೂಟಾ ತಪ್ಪು"

ಹಂ-ಎಂದು ಉಸಿರೆಳೆದ 'ಇದು ತಿಳಿದಿರಲಿಲ್ಲ ಬಿಡ್ರಿ ನನಗ—' ಎಂದು ಗೊಣಗು ದನಿಯಲ್ಲಿ ಪಟಗುಟ್ಟಿಕೊಂಡ ಅಂದ್ರ—? ಕಾಳ್ಯಾನಿಗೆ ಒಂದು ಯೋಚನೆ ಹೊಳೆಯಿತು

"ಶಾನುಣ್ಣೋರ, ನಿಮ್ಮದು ತಪ್ಪು ಅಂದಿರಲ್ಲ? ಹೀಂಗ

ಕುಂತು ವಿಚಾರ ಮಾಡಿದರ ಅನ್ನಿಸತದ, ನನ್ನ್ದು ಇದರಾಗ ತಪ್ಪು ಐತಿ-ಅಂತ. ಯಾಕಂದ್ರ, ಚಪ್ಪಾಳೀಗ ಯಾರ್ದು ಕೈ, ಹೌದಲ್ಲ?"

"ಇಲ್ಲಿ ನೋಡು ಕಾಳಪ್ಪಾ, ನಾವು ತಪ್ಪು ಮಾಡೀವಿ ಅಂತ ಅನ್ನಿಸೋವಾಗ ಅದನ್ನ ತಿದ್ದಿಕೊಳ್ಳೋದನ್ನ ಬಿಟ್ಟು 'ನೀವೂ ತಪ್ಪು ಮಾಡೀರಿ' ಅಂತ ಹೇಳಲಿಕ್ಕೆ ನಮಗ ಹಕ್ಕಿಲ್ಲ, ಹೇಳಿದರ ಅದರಿಂದ ಸ್ಥಿತಿ-ಸುಧಾರಿಸಿಧಾಂಗ ಅಲ್ಲ"

"ಅದಲ್ರಿ, ಶಾಮಣ್ಣೋರ ನಿಮ್ಮ ಮಾತು ನಿಮ್ಗ ಹೇಳಿಗಿಲ್ಲ? ನಮ್ಮಂಥವರು ಮಾತು ಹೇಳ್ತೀನಿ ನಾವು ಹೊಲಸ ಇರ್ತೀವಿ, ಬೈದಾಡ್ತೀವಿ, ಕುಡಿದು ಜಗಳಾಡ್ತೀವಿ, ಗಂಡಸ ರಸ್ತೆ ಹೆಂಗಸು-ಹೆಂಗಸು ಕೆಲಸರನ್ನಿರಿ-ಕೆಟ್ಟ ಚಾಳೀ ಜನ-ಇವೆಲ್ಲಾ ನಮ್ದು ತಪ್ಪು ಹೌದೊ ಅಲ್ಲರಿ? ಅದಕ್ಕ ಹೇಳಿದ್ನಿರಿ ನಗರದ ಸಭ್ಯ ಸುಳ್ಳಾಡಿ ಬರೋದು, ಯಾರೂ ನಮ್ಮನ್ನ ಅಪ್ಪಕೊಳ್ಳೋದಿಲ್ಲ ಅಂತ ತಕರಾರು ಮಾಡೋದು! ಹೌದಾ ತಿರೋ ಇಲ್ಲೊ, ಶಾಮಣ್ಣೋರ? ಇಲ್ಲಿಲ್ಲ-ನಂ ತಪ್ಪು ಅಂತ ನಾನೇ ಒಪ್ಪಿಕೊಳ್ಳಬೇಕು ಅಂತೀನಿ"

"ನನ್ಮುಂದೇ ಒಪ್ಪಿಕೋಬೇಕೇನು? ಹಂ?" ಶಾಮಣ್ಣ ನಕ್ಕ

ಕಾಳ್ಯಾ ಒಂದು ನಿಮಿಷ ಶಾಮಣ್ಣನನ್ನ ದಿಟ್ಟಿಸಿದ ಒಮ್ಮೆಲೆ ಕೈ ಬೆರಳುಗಳಿಂದ ಚುಟಕೆಯನ್ನು ಹೊಡೆದು "ತಿಳೀತರಿ ನೀವೇನಂತೀರಿ ಅನ್ನೋದು" ಎಂದ

ಶಾಮಣ್ಣನಿಗೆ ಆಶ್ಚರ್ಯವಾಯಿತು ತಾನು ಅಂತಹದೇನನ್ನೂ ಅಂದಿರಲಿಲ್ಲವಲ್ಲ? ಇವನು ಯಾವ ಅರ್ಥವನ್ನು ಮಾಡಿಕೊಂಡಿರ ಬಹುದು?

"ಏನೋ? ನಾಯೇನಂದೀನಿ?" ಅಪರಾಧಿಯಂತೆ ಕೇಳಿದ ಶಾಮಣ್ಣ.

"ನಂ ತಪ್ಪನ್ನ ನಿಮ್ಮುಂದ ಒಪ್ಪಿಕೊಳ್ಳೋದು ಹುಚ್ಚುತನ ಅಂದಿರಿ. ಬರಾಬ್ಬರ ಮಾತು ಹೇಳಿದಿರಿ ನೋಡಿರಿ ನನಗೂ

ಹೊಳೆದಿದ್ದಿಲ್ಲ."

"ಏನೋ? ಅಂತೀಯಾದ್ರೂ ಏನು ನೀನು?" ಶಾಮಣ್ಣ ಬೆರಗಾಗಿ ನುಡಿದ.

"ಅನ್ನೋದೇನ್ರೀ? ನಿಮ್ಮ ತಪ್ಪ ನೀವು ನಿಮ್ಮ ಮಂದೀಯ ಮುಂದ ಹೇಳಿಧಾಂಗ, ನಮ್ಮ ತಪ್ಪನ್ನ ನಾನೂ ನಮ್ಮಂದೀ ಮುಂದ ಹೇಳ್ಬೇಕು. ಅಂದ್ರ ಆ ತಪ್ಪ ಒಪ್ಪಿಕೊಂಡೋದಕ ಸಾರ್ತಕ. ಹೌದಂತೀರೋ ಇಲ್ಲೊ?"

ಶಾಮಣ್ಣ ಮಾತನಾಡಲಿಲ್ಲ. ಬುದ್ಧಿವಂತಿಕೆಗೆ ಜಾತಿ ಬೇಕಾಗಿಲ್ಲ ಅನ್ನೋ ಮಾತು ನಿಜ ಎಂದು ನೆನೆದು ತಲೆ ತೂಗಿದ.

ಕಾಳ್ಯಾನಿಗೂ ಸಮಾಧಾನವಾಯಿತು, ಶಾಮಣ್ಣ ತನ್ನ ಮಾತಿಗೆ ತಲೆದೂಗಿದ ಎಂದು.

೮

ನಡೆಯುವುದನ್ನೆಲ್ಲ ನೋಡುತ್ತ ಕೂಡ್ರುವುದು ಮುಪ್ಪಿನ ಲಕ್ಷಣವಾಗಿದ್ದರೆ ತಮಗೆ ಮುಪ್ಪು ಬಂದಿರಲೇಬೇಕು-ಎಂದು ರಾಯರ ಎಣಿಕೆ. ಅನೇಕ ಸಲ ಹೇಳಿಕೊಂಡಿರಲಿಲ್ಲವೆ, "ಬದಲಾಗುವವ ನಾನು, ಕಾಲ ಅಲ್ಲ" ಎಂದು ? ಆದರೆ ತಾವು ಈ ಪರಿ ಬದಲಾಯಿಸಿರುವುದು ಶಕ್ಯವಿಲ್ಲ ಎಂದೇ ರಾಯರ ಅಭಿಪ್ರಾಯ. "ಅಲ್ಲ, ನಡೆದದ್ದೇನು ? ಅದನ್ನು ನಾನು ಬರೀ ನೋಡುತ್ತ ಕುಳಿತದ್ದೇನು ? ಇದು ಬದಲಾವಣೆ ಅಲ್ಲ ; ಬುದ್ಧಿಭ್ರಂಶವಿರಬೇಕು, ಇಲ್ಲವೆ ಮುಪ್ಪು ಇರಬೇಕು" ಎಂದು ಮಗಳ ಬಗ್ಗೆ ವಿಚಾರ ಮಾಡುವಾಗೊಮ್ಮೆ ರಾಯರು ಗೊಂದಲದಲ್ಲಿ ಸಿಕ್ಕಿಕೊಳ್ಳುತ್ತಿದ್ದರು.

ಮಗಳು ವಿಧವೆಯಾಗಿ ಎಷ್ಟೋ ದಿನ ಕಳೆದಿವೆ, ಆದರೂ ಆಕೆಯನ್ನು ಇದ್ದಂತೆಯೆ ಇರಗೊಟ್ಟಿದ್ದಾರೆ ! ಅದೂ ಹೋಗಲಿ, ಇತ್ತಿತ್ತಲಾಗಿ ಆಕೆ ಓದಲು ಬರೆಯಲು ಕಲಿಯಬೇಕೆಂದು ವಿಚಾರ ಮಾಡಿದಳು ! ಎಂತಹ ಮಾತು ! ತಮ್ಮ ಮನೆತನದಲ್ಲಿ ಈ ಸಂಗತಿಗಳನ್ನು ನಡೆಯಗೊಡುವುದೆಂದರೆ ? ಎಂದರೇನು ? ತಾವೇ ಕೊನೆಗೆ ಆ ಮಾತಿಗೆ ಒಪ್ಪಿರಲಿಲ್ಲವೆ ? "ಏನಾದ್ರೂ ಮಾಡಿಕೊಳ್ಳಲಿ, ಹುಡುಗಿ ತನ್ನಷ್ಟಕ್ಕೆ ತಾ ಸುಮ್ಮ ಕೂತರೆ ಸಾಕು" ಎಂದು ತಾವು ಹತಾಶರಾಗಿ

ಹೊಂಗುಟ್ಟಿದ್ದಿಲ್ಲವೆ ?

"ನನಗ ಕೇಳಿದರೆ, ಅದು ಅತ್ಯಂತ ಒಳ್ಳೆಯದಾದ ವಿಚಾರ" ಎಂದಿದ್ದ ರಾಮಣ್ಣ.

ರಾಯರು ಚಕಿತರಾಗಿದ್ದರು. ಏನು ಕಾಲ, ಎಂತಹ ಹುಡುಗರು ! ಏನು ಮಾತಾಡುತ್ತಾರ !

"ಅಂ ? ಅಲ್ಲೊ, ರಾಮಣ್ಣಾ, ದೊಡ್ಡಾಕೆ ಆದಳು ಅಂತ ಮದುವೆಯ ಮುಂಚೆ ಆಕೆಗ ಕಲಿಸೋದನ್ನ ಬಿಡಿಸಿದೆ. ಈಗ ಏನು, ದುರ್ದೈವದಿಂದ ಹೀಂಗ ಆದದ್ದಕ್ಕೆ, ಸಣ್ಣಾಕೆ ಆದಳು ಅಂತೀಯಾ ?"

"ರಾಯರೆ, ವಿದ್ಯಾಭ್ಯಾಸ ಮಾಡೋದಕೆ ಸಣ್ಣವರು ದೊಡ್ಡವರು ಅನ್ನೋ ಭೇದನೆ ಇಲ್ಲ."

"ಎಂದ್ರೇನು ! ಮೊಮ್ಮಕ್ಕಳ ಜೋಡಿ ನಾವೂ ಕಲಿಯಬೇಕು ಅಂತೀ ಏನು ?"

"ನನ್ನ ಮಾತು ನೀವು ಕೇಳೋದು ಅಷ್ಟರಾಗೇ ಅದ, ರಾಯರ" ರಾಮಣ್ಣ ನಗಯಿಂದ ಹೇಳಿದ "ಸಣ್ಣವರೇ ಕಲಿಯಬೇಕು ಅನ್ನೋ ತಪ್ಪು ಕಲ್ಪನಾ ರೂಢಿ ಆಗಿ ಹೋಗೇದ ಜನಕ್ಕ. ನನಗನ್ನಿಸತದ, ಈಗ ಮೊದಲು ನಮ್ಮಲ್ಲಿ ದೊಡ್ಡವರೇ ಕಲಿಯಬೇಕು, ಅಂದ್ರ ಮುಂದ ಸಣ್ಣವರಿಗೆ ಅದರ ಉಪಯೋಗ ಆದೀತು ಅಂತ."

"ಕೂತಕೂತಲ್ಲಿಯೆ ನೀನೂ ಒಳ್ಳೇ ಮೋಜು ಮಾತಾಡ್ತೀಯೊ, ರಾಮಣ್ಣಾ ! ಅಂ ?"

"ಮೋಜು ಅಲ್ಲ, ರಾಯರ. ಈಗ ನೋಡಿರಲ್ಲ ? ನೀವು ಸಣ್ಣವರಿದ್ದಾಗ ಕನ್ನಡ ಕಲಿಯಲಿಲ್ಲ, ಅಕ್ಷರ ಸಹಿತ ಕಲಿಯಲಿಲ್ಲ—"

"ನಂ ಕಾಲಕ್ಕ ಸಾಲೀನೂ ಇರಲಿಲ್ಲ, ಕನ್ನಡನೂ ಇರಲಿಲ್ಲ."

"ಅದೇ ಹೇಳಿದೆನಲ್ಲ ? ನೀವು ಕಲಿಯಲಿಲ್ಲ ಅಂತ ಮುಂದೆ ಸಾಲೆ ಹುಟ್ಟಲಿಲ್ಲ, ಸಾಲೆ ಹುಟ್ಟಲಿಲ್ಲ ಅಂತ ನಿಮ್ಮಕ್ಕಳೂ ಕಲಿಯಲಿಲ್ಲ."

'ಗುಂಪ್ಯಾಕೆ ಕಲೀಬೇಕ್ಕು ಒಬ್ಬನ್ನ ತಿದಿಷ್ಟಿದ್ದಿನಿ, ಶಾಮಣ್ಣಾ. ಆದರೇನು?" ರಾಯರು ಒಂದು ನೋವಿನ ನಿಟ್ಟುಸಿರಿಂದ ಮಾತನಾಡಿದರು.

'ನಾವು ಇಷ್ಟಿತು ಅಂದರೆ, ಬೆಳೆದ ಹುಡುಗನಾಗಿದ್ದರು. ಎಂದ ಹೇಳುವ ಎಷ್ಟು ತಿಳಿಯುವುದಾಗಿತ್ತು."

"ಹೋಗಲಿ ಬಿಡು, ಶಾಮಣ್ಣಾ. ಎಷ್ಟಾದರೂ ಗಂಡು ಹುಡುಗ, ಒಬ್ಬನೇ ಇದ್ದಾನೆ, ಅವನಿಗೇನು ನೌಕರಿ ಮಾಡಿ ಮನೆತನದ ಹೆಸರು ಕೆಡಿಸಬೇಕಾಗಿಲ್ಲ. ಅವನೆ ಶಾಂತೀಗೂ ಕಲಿಸೋದಿಲ್ವ?" ರಾಯರು ವಿಚಾರಮಗ್ನ ದೃಷ್ಟಿಯಿಂದ ಪ್ರಶ್ನವನ್ನು ತಮ್ಮಷ್ಟಕ್ಕೆ ಎಂಬಂತೆ ಕೇಳಿಕೊಂಡರು.

ಶಾಮಣ್ಣ ಕೆಲಹೊತ್ತು ಸುಮ್ಮನಿದ್ದ. ರಾಯರ ಮನಸ್ಸಿನಲ್ಲಿ ಹೊಯ್ದಾಟ ನಡೆದಿದೆ ಎಂಬುದನ್ನು ಅವನು ಅರಿಯದೆ ಇರಲಿಲ್ಲ. ಈಗ ತಾನು ಯಾವ ಅಭಿಪ್ರಾಯವನ್ನು ನುಡಿದರೆ ತಟ್ಟನೆ ರಾಯರು ಅದನ್ನು ಒಪ್ಪುವರು ಎಂಬುದೂ ಅವನಿಗೆ ಹೊಳೆಯಿತು. ಆದರೂ ಅವನು ಮಾತನಾಡಲಿಲ್ಲ. ರಾಯರ ನಿರ್ಣಯ ರಾಯರ ಮನಸ್ಸಿನಿಂದಲೆ ರೂಪುಗೊಳ್ಳಲಿ. ಇನ್ನೊಬ್ಬರ ಆಧಾರ ಬೇಡ ಅದಕ್ಕೆ. ಹೀಗೆ ವಿಚಾರಿಸುತ್ತ ಶಾಮಣ್ಣ ರಾಯರನ್ನು ನೋಡುತ್ತ ಕುಳಿತ.

ಕೆಲ ನಿಮಿಷಗಳ ನಂತರ ರಾಯರು ಎಚ್ಚೆತ್ತವರಂತೆ ಶಾಮಣ್ಣನನ್ನು ನೋಡಿದರು, ತಮ್ಮ ಮನಸ್ಸಿನೊಳಗೆ ಇದುವರೆಗೆ ಒಳಗಿಂದೊಳಗೆಯೆ ನಡೆದ ವಿಚಾರಸರಣಿಯನ್ನು ಈಗ ಬಹಿರಂಗವಾಗಿ ಮುಂದರಿಸಿದರು; ಈ ಮುಂಚಿನ ಮಾತುಗಳನ್ನು ತಾವು ತಮ್ಮಷ್ಟಕ್ಕೆ ಮನಸಿನೊಳಗೆಯೆ ಹೇಳಿಕೊಂಡಿದ್ದರೆಂಬುದನ್ನು ಮರೆತೇ ಅವರು ಶಾಮಣ್ಣನೊಡನೆ ಚರ್ಚೆಯನ್ನು ಸಾಗಿಸಿದರು.

"ಆದರೂ—ಸಣ್ಣ ಹುಡುಗಿ—ಇಡೀ ಆಯುಷ್ಯ ಕಳೆಯಬೇಕು? ಅದೂ ಏನು ಸುಳ್ಳಲ್ಲ. ಏನಾದರೂ ಒಂದು ಒಳ್ಳೇ ವ್ಯಾಸಂಗ ಇದ್ದರೆ"

ತಟ್ಟನೆ ಮಾತನ್ನು ತಡೆದು ಶಾಮಣ್ಣನಿಗೆ ತಿಳಿಹಿಸುವವರಂತೆ ಹೇಳಿದರು. "ಹಿಂದಿನ ಕಾಲದೊಳಗ ಪುರಾಣ-ಪ್ರವಚನ ಇಂತಹ ಪ್ರಸಂಗದೊಳಗ ಎಷ್ಟು ಸದುಪಯೋಗಿ ಇದ್ದಿರಬೇಕು-ಅಂತೀಸಿ, ಶಾಮಣ್ಣ ? ಆಂ ?"

ರಾಯರ ಮಾತು ಮುಗಿದಿಲ್ಲ ಎಂಬುದನ್ನರಿತು ಶಾಮಣ್ಣ ಮೌನದಲ್ಲಿಯೆ ಮುಗುಳ್ನಗೆಯನ್ನು ಅರಳಿಸಿದ.

"ಹೌದಂತೀಯೊ ಇಲ್ಲೊ ? ಆಂ ?"

ಶಾಮಣ್ಣನ ಮುಖ ಇನ್ನಿಷ್ಟು ದೊಡ್ಡದಾಯಿತು, ನಗೆಯ ತೆರೆಗಳಿಂದ

ರಾಯರ ಮುಖಚರ್ಯೆಯಲ್ಲಿ ಒಮ್ಮೆಲೆ ಗಾಂಭೀರ್ಯದ ಕಳೆ ಮೂಡಿತು.

"ಆದರೂ, ಶಾಮಣ್ಣಾ, ನೀ ಹೇಳೋಹಾಂಗ ಶಾಂತಿ-ಸಣ್ಣಾಕೆ. ಪುರಾಣ-ಪ್ರವಚನ ಈಗಿನ ಹುಡುಗರ ಮನಸ್ಸಿಗೆ ಬರೋದೂ ಇಲ್ಲ. ಹುಂ...." ಎಂದು ಮತ್ತೆ ತಡೆದರು.

"ಏನಾದ್ರೂ ಮಾಡಿಕೊಳ್ಳಲಿ, ಹುಡುಗಿ ತನ್ನಷ್ಟಕ್ಕ ತಾ ಸುಮ್ಮ ಕೂತರ ಸಾಕು" ಎಂದು ಕೊನೆಗೆ, ಬೇಡಾದ ಔಷಧವನ್ನು ಕಣ್ಮುಚ್ಚಿ ಗುಟುಕರಿಸುವ ಹುಡುಗನಂತೆ, ರಾಯರು ಗಟ್ಟಿಯಾಗಿ ನುಡಿದರು.

"ಹೌದಂತೀಯೊ ಇಲ್ಲೋ, ಶಾಮಣ್ಣಾ ? ಹುಡುಗೀನ್ನ ಏನಾದ್ರೂ ಒಂದು ವ್ಯಾಪದೊಳಗ ತೊಡಗಿಸಿದರ—ಮತ್ತ ತಾನೇ ಅಂತಾಳ ಕಲೀತೀನಿ ಅಂತ-ಅದೇ ಹೇಳಿದೆನಲ್ಲ ಏನಾದ್ರೂ ಮಾಡಿ ಕೊಳ್ಳಲಿ ಹುಡುಗಿ ತನ್ನಷ್ಟಕ್ಕ ತಾ ಸುಮ್ಮ ಕೂತರ ಸಾಕು" ಎಂದು ನಿರ್ಧಾರದ ದನಿಯಲ್ಲಿ ನುಡಿದು, ಇನ್ನು ಈ ಚರ್ಚೆ ಸಾಕು ಎನ್ನುವವ ರಂತೆ ಮುಖ ತಿರುಗಿಸಿ ಕೈ ಜಾಡಿಸಿದರು.

ಶಾಮಣ್ಣ ಕಲಿಸುವುದು, ಶಾಂತಳು ದಿನಾಲು ಕಲಿಯುವುದು- ಇದನ್ನು ನೋಡಿದಾಗೊಮ್ಮೆ ರಾಯರಿಗೆ ವಿಚಾರಗೊಂವಲ, "ಇದೆಲ್ಲ

ಬುದ್ಧಿ ಭ್ರಂಶದ ಲಕ್ಷಣವೆ? ಇಲ್ಲಾ ಕಾಲ ಈ ಪರಿ ಬದಲಾಯಿಸಿತೆ?—" ಎಂದು.

* * *

"ಹುಡುಗಿ ತನ್ನಷ್ಟಕ ತಾ ಸುಮ್ಮ ಕೂತರೆ ಸಾಕು–" ಎಂಬ ರಾಯರ ಮಾತು ಆಡಲು ಮಾತ್ರ ಸುಲಭವಾಗಿತ್ತು, ಶಾಂತಳು, ಶಾಮಣ್ಣ—ದಿನಾಲು ಇವರನ್ನು ಒಬ್ಬರ ಸಹವಾಸದಲ್ಲಿ ಒಬ್ಬರು ಇರುವಂತೆ ಮಾಡಿ, ಇಬ್ಬರೂ ತಂತಮ್ಮಷ್ಟಕ್ಕೆ ಸುಮ್ಮನಿದ್ದರೆ ಸಾಕು ಎನ್ನುವುದು ನಗೆಯ ಮಾತಾಗುವುದು. ಶಾಂತಳಿಗೆ ಕಲಿಯಲು ಉತ್ಸಾಹ, ಶಾಮಣ್ಣನಿಗೆ ಕಲಿಸಲು ಉತ್ಸಾಹ, ಪರಸ್ಪರ ಪರಿಚಯು ಹೆಚ್ಚಿದಂತೆ ಇಬ್ಬರ ಉತ್ಸಾಹವೂ ಹೆಚ್ಚಿತು, ಉತ್ಸಾಹ ಹೆಚ್ಚಿದಂತೆ ಪ್ರಗತಿಯ ವೇಗವೂ ಹೆಚ್ಚಾಯಿತು. ಇಬ್ಬರೂ ತಮ್ಮಷ್ಟಕ್ಕೆ ತಾವು ಸುಮ್ಮನಿದ್ದರೆ ಉತ್ಸಾಹವಿರುತ್ತಿರಲಿಲ್ಲ, ಪ್ರಗತಿಯೂ ಕಂಡುಬರುತ್ತಿರಲಿಲ್ಲ.

ಓದಲು ಮೊದಲೇ ತುಸುಮಟ್ಟಿಗೆ ಬರುತ್ತಿತ್ತು ಶಾಂತಳಿಗೆ. ಆದುದರಿಂದ ಶಾಮಣ್ಣನ ಕೆಲಸ ಸುಲಭವಾಯಿತು. ಕೆಲವು ಪುಸ್ತಕಗಳನ್ನು ಪ್ರಾರಂಭದಲ್ಲಿ ತಾನು ಓದುತ್ತಿದ್ದ, ಕೆಲವು ವಾರಗಳ ತರುವಾಯ ಶಾಂತಳೇ ಓದುತ್ತಿದ್ದಳು; ಓದಿದ ಮೇಲೆ ಏನು ತಿಳಿದಿದೆ, ಏನು ತಿಳಿದಿಲ್ಲ ಎಂಬುದರ ಚರ್ಚೆ. ಮೊದಮೊದಲು ಶಾಂತಳು ನಾಚುತ್ತಿದ್ದಳು ಚರ್ಚೆಯನ್ನು ನಡೆಸಲು; ಆದರೆ ಶಾಮಣ್ಣನು ವಿಷಯದಲ್ಲಿ ಮಗ್ನನಾಗಿರುತ್ತಾನೆ ಎಂಬುದು ತಿಳಿದ ಮೇಲೆ ನಾಚಿಕೆ ಕಡಮೆಯಾಯಿತು. ಆಮೇಲೆಯಾದರೂ ಸುಗಮವಾಗಿ ಸಾಗಿತೆ ಚರ್ಚೆ? ಇಲ್ಲ. ನಿರ್ಭಯದಿಂದ ಶಾಂತಳು ಚರ್ಚಿಸುವ ರೀತಿ–ಶಾಮಣ್ಣನನ್ನು ಬೆರಗುಗೊಳಿಸುತ್ತಿತ್ತು; ಇದುವರೆಗೆ ತನ್ನಿಂದ ಪಾಠವನ್ನು ಕಲಿಯುವ ಅರಿಯದ ಹುಡುಗಿ ಎನ್ನಿಸಿದ ಶಾಂತಳು ಈಗ ಪ್ರೌಢ ಯುವತಿ ಎನ್ನಿಸಿದಳು, ಆಕೆಯ ವ್ಯಕ್ತಿತ್ವದ ಕಲ್ಪನೆ ಬರತೊಡಗಿತು, ಆದರ ಜೊತೆಗೆ ಆಕೆ ಹೆಂಗಸು ಎಂಬುದರ ಕಡೆಗೂ ಲಕ್ಷ್ಯ

ಸೆಳೆಯಲ್ಪಟ್ಟಿತು.

ಕೆಲವು ದಿನ ಇಬ್ಬರೂ ಹೆಚ್ಚುತ್ತಿರುವ ಅಧ್ಯೈರ್ಯದಿಂದಲೇ ಪಾಠವನ್ನು ಸಾಗಿಸಿದರು. ಒಬ್ಬರ ರಹಸ್ಯ ಇನ್ನೊಬ್ಬರಿಗೆ ತಿಳಿದಿದೆ ಏನೊ ಎಂದು ಹೆದರಿಕೆ, ತಿಳಿಯಬಾರದೆ? ಎಂದು ಆಗಾಗ ಒಳಗೊಳಗೆ ಆಸೆ, ಮುಂದೆ ತಿಳಿದೊಡನೆ ಇನ್ನಷ್ಟು ಹೆದರಿಕೆ. ಶಾಂತಳು ವಿಶೇಷ ವಾಗಿ ಹೆದರಿದಳು. ತನಗೆ ಕಲಿಯುವುದು ಸೇರುವುದೆ ಇಲ್ಲವೆ 'ಅವರ' ಸಹವಾಸ ಸೇರುವುದೆ? ಕಲಿಯುವುದು ಸೇರುವುದೆಂಬ ಸಮಾಧಾನ ದಿಂದ ರಾಮಣ್ಣನ ಸಹವಾಸವನ್ನು ಬಯಸುತ್ತಿದ್ದಳು. ರಾಮಣ್ಣನ ನಾತೂ ಹಾಗೆಯೆ, ಕಲಿಸುವುದು ತನ್ನ ಕರ್ತವ್ಯ, ಆ ಕರ್ತವ್ಯವನ್ನು ಶಕ್ತಿ ಮೀರಿ ನಿರ್ವಹಿಸಬೇಕು ಎಂಬ ದೃಢನಿರ್ಧಾರ. ಆದರೆ ಈ ದೃಢ ನಿರ್ಧಾರ "ಆಕೆ"ಯ ಸಂನಿಕರ್ಷದ ಬಯಕೆಯಿಂದ ಇರಬಹುದೆ-- ಎಂದು ಸಂಶಯ ಬಂದಾಗ ಅವನಿಗೆ ನಾಚಿದಂತ ಆಗುತ್ತಿತ್ತು.

ನೆಲದಲ್ಲಿ ಬಳ್ಳಿ ಬೆಳೆಯುವುದು. ಬೆಳೆದ ಬಳ್ಳಿಯ ಎಲೆಗಳು ಉದುರಿ ನೆಲದೊಡನೆ ಒಂದಾಗುವುವು, ನೆಲದ ಕಸುವು ಹೆಚ್ಚುವುದು- ಕಸು ವಿನ ನೆಲದಲ್ಲಿ ಬಳ್ಳಿ ಹೆಚ್ಚು ಸಂಪನ್ನವಾಗಿ ಬೆಳೆಯುವುದು, ಹೆಚ್ಚು ಎಲೆ ಗಳು ಉದುರುವುವು, ನೆಲದಲ್ಲಿ ಮೈಗೂಡಿಕೊಂಡು ಹೊಸ ಶಕ್ತಿಯಾಗು ವುವು. ನೆಲ, ಬಳ್ಳಿ, ಇವುಗಳ ಪರಸ್ಪರ ಪೋಷಕತೆ ಎಷ್ಟು ಕಾಲ ಉಳಿ ಯುವುದು? ಎಂದು ಪ್ರಾರಂಭವಾಗಿದೆ? ಎಂದಿಗೆ ಮುಗಿಯುವುದು?

ನೆಲ, ಬಳ್ಳಿ; ಬಳ್ಳಿ, ನೆಲ, ನೆಲ, ಬಳ್ಳಿ — ಅನಂತವಾಗಿದೆ ಸಂತಾನ.

ಗಂಡು, ಹೆಣ್ಣು, ಹೆಣ್ಣು, ಗಂಡು, ಗಂಡು, ಹೆಣ್ಣು — ಅನಂತವಾಗಿದೆ ಸಂಸಾರ.

ಪರಸ್ಪರ ಪೋಷಕತೆ ಸೃಷ್ಟಿಯ ಶಕ್ತಿಯಾಗಿದೆ.

ಪೋಷಣೆ — ಶೋಷಣೆ; ಶೋಷಣೆ, ಪೋಷಣೆ — ನಿಸರ್ಗವು ತನ್ನ ಗುರಿಯನ್ನು ಮುಟ್ಟುವ ಸೋಪಾನವಾಗಿದೆ.

ಗಂಡು, ಹೆಣ್ಣು ; ಶಾಮಣ್ಣ, ಶಾಂತಾ.

ಗಂಡು, ಹೆಣ್ಣು , ಗುಂಡಣ್ಣ, ಸುಬ್ಬಕ್ಕ.

ಗಂಡು, ಹೆಣ್ಣು , ಕಾಳ್ಯಾ, ಗಂಗಿ.

ಹೆಸರು ಬೇರೆ, ಆಟ ಒಂದೇ , ವೇಷ ಬೇರೆ, ನಾಟಕ ಒಂದೇ.

ಅದೇ ನಾಟಕವನ್ನು, ತಿಳಿದೊ ತಿಳಿಯದೆಯೊ, ಶಾಂತಾ-ಶಾಮಣ್ಣ ಆಡುತ್ತಿದ್ದರು

ಕ್ರಮೇಣ ಇಬ್ಬರಿಗೂ ಹೊಳೆಯಿತು, ಪರಸ್ಪರ ಸಂಗದ ಬಯಕೆ ಇಬ್ಬರಿಗೂ ಇದೆ ಎಂದು.

ಅದರ ಜೊತೆಗೆಯೆ ಇನ್ನೂ ಒಂದು ಹೊಳೆಯಿತು. ಯೌವನವು ದೇಹ-ಸಂಗವನ್ನು ಬಯಸುತ್ತಿದ್ದರೂ ಅದು ಅಶಕ್ಯ ಎಂದು.

ತನ್ನ ಮನಬಂದಂತೆ ಕಾಮನು ಕಿಡಿಗೇಡಿತನವನ್ನು ಮಾಡಲಾಗದು ಎಂಬ ಪಾಠವನ್ನು ಕಲಿಸುವುದಕ್ಕಾಗಿಯೆ ಅಲ್ಲವೆ, ಶಿವನು ಕಾಮನನ್ನು ಸುಟ್ಟು ಪಾರ್ವತಿಯನ್ನು ಮದುವೆಯಾದದ್ದು ?

ಶಾಮಣ್ಣನಿಗೂ ಶಾಂತಳಿಗೂ ದಿನದಿನಕ್ಕೆ ಹೆದರಿಕೆ ಹೆಚ್ಚಾಯಿತು. ಒಳಗಿನ ಕಾಮನನ್ನು ಸುಡುವಾಗ ಹೊರಗಿನ ದೇಹವೂ ಸುಟ್ಟು ಹೋಗಬಹುದಲ್ಲ ? ಹಾಗಾದರೆ ಹುಟ್ಟಿ ಲಾಭವೇನು ? ಕಾಮ ಭೋಗಕ್ಕಾಗಿಯೆ ದೇಹವಿದ್ದರೆ ಕಾಮದೊಡನೆ ದೇಹವನ್ನು ಸುಡಬಹುದು

ಈಗ ಇವರಿಬ್ಬರಿಗೂ ಹೆದರಿಕೆಯಲ್ಲಿಯೆ ಒಂದು ತರದ ಸುಖವೆನ್ನಿಸಿತು. ಆ ಹೆದರಿಕೆಗಾಗಿಯೆ ಅಲ್ಲವೆ, ತಾತ್ಕಾಲಿಕ ತೃಪ್ತಿಯ ಮಾರ್ಗವನ್ನು ಬಿಟ್ಟುಕೊಟ್ಟುದು ?

ಕಾಮ ಅನಂಗ ಎಂಬುದು ಸುಳ್ಳು. ಯಾರಾರು ಕಾಮನನ್ನು ಸುಡುವರೊ ಅವರೆಲ್ಲರೂ ಅನಂಗರಾಗುವರು-ಎಂಬ ಅನುಭವ ಶಾಂತಾ-ಶಾಮಣ್ಣ ಇಬ್ಬರಿಗೂ ಬಂದಿತು. ಈ ದೇಹ ತಮ್ಮದಲ್ಲ ಎಂದು ತಿಳಿದರೇನೊ ! ಕ್ರಮೇಣ - ಇಬ್ಬರ ಸ್ವಭಾವವೂ ಒಂದೇ

ಪರಿವರ್ತನೆಯನ್ನು ಹೊಂದಿತು. ಇಬ್ಬರ ವೃತ್ತಿಯಲ್ಲೂ ನಿಸ್ವಾರ್ಥ ಕಂಡಿತು.

ಇಬ್ಬರೂ ಒಬ್ಬರೊಬ್ಬರಿಗೆ ಇದಿರಾಗಿ ಚರ್ಚೆಯನ್ನು ನಡೆಸಿದ್ದಾಗ ಆಕಸ್ಮಾತ್ತಾಗಿ ರಾಯರು ಬಂದರೆ, ಅವರಿಬ್ಬರ ಮುಖದಲ್ಲಿದ್ದ ಒಂದು ತೇಜಸ್ಸನ್ನು ಕಂಡು ರಾಯರು ಉಸುರ್ಗರೆಯುತ್ತಿದ್ದರು.

*　　　*　　　*

ಶಾಮಣ್ಣ ಇನ್ನೊಂದು ವ್ಯಕ್ತಿಯ ಸಂದರ್ಭದಲ್ಲೂ ಯೋಗ್ಯ ಶಿಕ್ಷಕನಾದ-ಕಾಳ್ಯಾನ ಮೇಲೆ ಶಾಮಣ್ಣನ ಶಿಕ್ಷಣದ ಪರಿಣಾಮ ಚನ್ನಾಗಿ ಮೂಡಿತೆನ್ನಬಹುದು.

ತನ್ನ ತಪ್ಪನ್ನು ತಮ್ಮವರ ಎದುರು ಒಪ್ಪಬೇಕು, ಎಂದರೇನೇ ತಿದ್ದಿಕೊಳ್ಳಲು ಅನುಕೂಲ ಎಂಬ ತನ್ನ ವಿಚಾರವನ್ನು ಒರೆಗೆ ಹಚ್ಚಲು ಕಾಳ್ಯಾ ತಡಮಾಡಲಿಲ್ಲ; ವಿಶೇಷವಾಗಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ತಮ್ಮವರನ್ನು ಕಂಡ. ಇದುವರೆಗೆ ತನ್ನವರ ಬಗ್ಗೆ ಒಂದು ಅಭಿಮಾನ, ಒಂದು ಸಹಾನುಭೂತಿ, ಇತ್ತು; ತನ್ನ ಮತ್ತು ತನ್ನವರ ಮೇಲೆ ಮಿಕ್ಕವರ ಅನ್ಯಾಯವಾಗಿದೆ ಎಂಬ ದೂರೂ ಇದ್ದಿತು. ತನ್ನವರನ್ನು ಎಚ್ಚರಿಸುವಾಗ ತಾನೂ ಕೆಲ ವಿಷಯಗಳಲ್ಲಿ ಕಣ್ತೆರೆದುದನ್ನು ಕಾಳ್ಯಾ ಅನಿಚ್ಛೆಯಿಂದಲೆ ಒಪ್ಪಿಕೊಂಡ. ಮೊದಮೊದಲು ಅವನಲ್ಲಿ ಉತ್ಸಾಹ ಕುಗ್ಗುತ್ತ ನಡೆಯಿತು. ಶಾಮಣ್ಣನಿಗೂ ಹಾಗೆ ಸಂಶಯ ಬಂದಿತ್ತು.

"ಯಾಕೊ, ಕಾಳಪ್ಪಾ, ಒಳ್ಳೇ ದಣಿಧಾಂಗ ಕಾಣ್ತೀ?" ಎಂದಿದ್ದ ಶಾಮಣ್ಣ ಒಂದು ಸಂಜೆ.

"ದಣಿಕಿ-ಆಗಾಕ ನನಗೇನು ಧಾಡಿರಿ?" ಎಂದು ನಗೆಯಿಂದ ಮಾತನ್ನು ಹಾರಿಸಲು ಯತ್ನಿಸಿದ್ದ ಕಾಳ್ಯಾ.

"ಮುಖ ಸಪ್ಪಗ ಕಾಣ್ತದಲ್ಲೊ?" ತುಸು ಹಟದ ದನಿಯಲ್ಲಿಯೆ ಶಾಮಣ್ಣ ಕೇಳಿದ.

"ಒಂತುಸಾ ಫಜೀತಿ-ಆಧಾಂಗ ಆಗೇದನ್ರಿ" ಕಾಳ್ಯಾ ನಾಚಿ

ಗೊಂಡ ನಗೆಯೊಡನೆ ಹೇಳಿದ.

"ಏನಂದಿ ?"

"ನಾನೂ ಭಾಳ ಹಾರಾಡ್ತಿದ್ದಿನ್ರಿ, ತುಸಾ ಸೊಕ್ಕು ಮುರಿ ಧಾಂಗಾಯ್ತೇಳ್ರಿ."

"ಏನಂತೀಯಾ ?" ಶಾಮಣ್ಣನಿಗೆ ಸಂದರ್ಭವೆ ತಿಳಿದಿರಲಿಲ್ಲ.

"ಅದೇ ಹೇಳಿದೆನಲ್ಲರಿ, ತಂ ತಪ್ಪು ತಂ ಜನದ ಮುಂದ ಒಪ್ಪಿಗೋಬೇಕು ಅಂತ ?"

"ಹೌದು ಏನಾಯ್ತು ?"

"ಜನದ ಮುಂದ ಹೋದರ ಒಬ್ಬ ಕೇಳಾವ ಇಲ್ಲ. ಎಲ್ಲಾರೂ 'ಛೀ' ಹಾಕೋವ್ರೆ !"

"ಹೌದು ಮತ್ತೆ" ಶಾಮಣ್ಣ ಮುಗುಳ್ನಗೆಯಿಂದ ಹೇಳಿದ. "ಕನ್ನಡಿ ಮುಂದ ನಿಂತಾಗ ಒಳಗ ಕುರೂಪ ಮುಖ ಕಂಡರ ಯಾರಿಗೆ ಸಂತೋಷ ಆಗಬೇಕೊ ?"

"ಅಂದ್ರೇನು, ಕನ್ನಡಿ ಮುಂದ ನಿಲ್ಲಾಕಬೇಕು, ಸ್ವಂತದ ಕೆಟ್ಟ ಮೋತಿ-ನೋಡಾಕ ಬ್ಯಾಡಾಂದ್ರ—"

"ಬ್ಯಾಡ ಅಂತ ಯಾರು ಅಂತಾರ ? ಕನ್ನಡಿಯ ಮುಂದೂ ನಿಲ್ತಾರ, ಮುಖಾನೂ ನೋಡಿಕೋತಾರ ಆದರೆ, ಆಗ ಬದೀಗೆ ಇನ್ನೊಬ್ಬರು ಇರ್ಬಾರದು ಅಂತಾರ. ಅಷ್ಟೆ "

ಇಬ್ಬರೂ ಆ ಮಾತಿಗೆ ನಕ್ಕರು.

"ನಿನಗೇನಾಯ್ತು ?" ಕೆಲಹೊತ್ತಿನ ಮೇಲೆ ಶಾಮಣ್ಣ ಕೇಳಿದ.

"'ಏನಾಯ್ತು'ದಕಿಂತ 'ಏನಾಗಲಿಲ್ಲ' ಅಂತ ಕೇಳಿದ್ರ ಬರಾಬರಿ ಆಗ್ತೇತಿ 'ನೀ ಯಾರಪ ದೊಡ್ಡ ಮನಸ್ಯಾ !' ಅಂತ ಅಂದವರದು ಲೆಕ್ಕಾನೇ ಇಲ್ಲ. 'ಈಗೇನು ಕಡಿಮೆ ಮಂದಿ ಅಂದಿದ್ರು ಅಂತ ನೀನೂ ಅನ್ನಾಕ ಸುರು ಮಾಡಿದಿಯಪ ?' ಅಂತನೂ ಹಂಗಿಸಿದರು. 'ಹುಟ್ಟಿದ ಜಾತೀಗ ಇದಿರು ಮಾತಾಡಿ ಪಾಪ ಕಟಗೊಂತಾನ ಇವ'

ಅಂತ ಕೆಲವು ಜನ ಗೊಣಗಿದರು. ಅಂತೂ ನೋಡಿರಿ, ಶಾಮಣ್ಣ, 'ನಂ ಮಟ್ಟಿಗೆ ನಾವು ಸರಳ ಆಗಿ ಇರೋಣ' ಅಂದ್ರ 'ನಿನ್ಗೇನು ಈಗ ಡೊಂಕ ಕಂಡೇತೊ, ಮೆಳ್ಳಾ' ಅಂತ ನಕ್ಕು ಬಿಡ್ತಾರಿ !"

"ತಮ್ಮಷ್ಟಕ ತಾವು ನಕ್ಕು ನಿನ್ನ ಬಿಡ್ತಾರ, ಅದು ನಿನ್ನ ಸುದೈವ."

"ಇಂತಾ ಸುದೈವ ಯಾರಿಗೆ ಬೇಕಾಗೇತರಿ. ಶಾಮಣ್ಣಾ ? ಇನ್ನೂ ವಾದಿಸ್ಯಾಡಲಾಕ, ಹಾಕ್ಯಾಡಲಾಕ ಸಹಿತ ಬಂದರ ಅಡ್ಡಿ ಇಲ್ರಿ. ಅವನ ಕೈಗೆ ನಂ ಕೈ, ಅವನ ಬಾಯಿಗೆ ನಂ ಬಾಯಿ— ಸಮಾಧಾನ ಆಗ್ತೇತಿ ಆದರ ಈ ನಕ್ಕು ಬಿಡೋದಂದ್ರ ನಡು ಬೆನ್ನು ತುರಿಸಿಧಾಂಗ ನೋಡ್ರಿ : ಕೆಟ್ಕ್ಮೇತಿ-ಮಾಡಿ ತಡಕೋಬೇಕು, ಇಲ್ಲಾ ಮುಂಗ್ಯಾನ್ಹಾಂಗ ನಾಲ್ಕು ಮಂದಿ ಇದ್ದಲ್ಲೂ ಗ್ವಾಡಿಗೆ ಧುಸು ಮುಸು ತಿಕ್ಕಬೇಕು !"

ಇನ್ನೊಂದು ಸಲ ಿರಿಯೂರಿನಿಂದ ತಿರುಗಿ ಬರುವ ಒಂದು ಸಂಜೆ ಹಿಂದಿನಿಂದ ಯಾರೆ ಬಂದು ಹೊಡೆದಿದ್ದರು.

ಆದರೂ ಕಾಳ್ಯಾ ಮನಸ್ಸು ಗಟ್ಟಿ ಇದ್ದಿತು. ಯಾರು ಹೊಡೆದಿರಬಹುದೆಂಬ ಅಂದಾಜೂ ಅವನಿಗಿದ್ದಿತು. ಹೊಡೆದದ್ದಲ್ಲ, ಹೊಡೆಸಿದ್ದು — ಎಂದು ನೆನೆದುಕೊಂಡ. ತಮ್ಮಲ್ಲಿ ದುಡಿಯುವ ಹೊಲೆಯರ ತಲೆಯನ್ನು ಇವನು ಕೆಡಿಸುವ ಎಂದು ಅಲ್ಲಿಯ ಸಾವ್ಕಾರರು ಹೊಡೆಸಿರಬಹುದು, ಹೊಡೆದವ ಮಾತ್ರ ತಮ್ಮೂರಿನವ ಎಂದು ಕಾಳ್ಯಾನಿಗೆ ಬಲವಾದ ಸಂಶಯವಿದ್ದಿತು

"ಒಟ್ಟು ಘಟಿಂಗರು ಭಾಳ ಜನ ಅದಾರ ನೋಡ್ರಿ ಈ ಜಗತ್ತಿನಾಗ" ಎಂದು ಇನ್ನೊಂದು ಸಂದರ್ಭದಲ್ಲಿ ತತ್ತ್ವಜ್ಞಾನಿಯಂತೆ ನಿರ್ಣಯವನ್ನು ಕೊಟ್ಟಿದ್ದ.

ಈ ಮಾತಿನ ಹಿನ್ನೆಲೆಯಲ್ಲಿ ಒಂದು ವಿಶಿಷ್ಟವಾದ ನೋವು ಇದ್ದಿತು. ಜನರು—ಅದೂ ತನ್ನವರು—ಮನಬಂದಂತೆ ಆಡಿಕೊಳ್ಳು

ವುದು ಅವನಿಗೆ ಈಗ ರೂಢಿಯಾಗಿದ್ದಿತು. ಆದರೆ ಇತ್ತಿತ್ತಲಾಗಿ ಒಂದು ಹೊಸ ಪ್ರಕಾರ ಕಾಳ್ಯಾನಿಗೆ ಗೋಚರವಾಯಿತು. ತನ್ನನ್ನು ನೋಡಿ ಜನರು ಏನನ್ನೊ ಮಾತನಾಡುತ್ತಿದ್ದರು, ತನ್ನ ಸಲುವಾಗಿಯೆ ಮಾತನಾಡುತ್ತಿದ್ದರೆಂಬುದು ಅವನಿಗೆ ಸುಲಭವಾಗಿಯೆ ತಿಳಿಯಿತು. ತಾನು ಹತ್ತಿರ ಬಂದೊಡನೆ ತಟ್ಟನೆ ಮಾತನ್ನು ನಿಲ್ಲಿಸುತ್ತಿದ್ದರು, ಇಲ್ಲವೆ ಸುಮ್ಮಸುಮ್ಮನೆ ಹಲ್ಲುಕಿರಿದು ಬಾಯಿಗೆ ಬಂದುದನ್ನು—ಆಡುತ್ತಿದ್ದರು ದಿನದಿನಕ್ಕೆ ಕಾಳ್ಯಾನಿಗೆ ಖಾತ್ರಿಯಾಯಿತು, ಜನರಲ್ಲಿ ತನ್ನ ಸಲುವಾಗಿಯೆ ಗುಜುಗುಜು ನಡೆದಿದೆ ಎಂದು.

ಎಷ್ಟೋ ದಿನಗಳವರೆಗೆ ಅವನ ಕುತೂಹಲಕ್ಕೆ ತೃಪ್ತಿ ದೊರೆತಿರಲಿಲ್ಲ. ಒಂದು ದಿನ ಅಕಸ್ಮಾತ್ತಾಗಿ ತಿಳಿದು ಬಂತು ಮಧ್ಯಾಹ್ನದ ಬಿಸಿಲಿಗಾಗಿ ತಾನು ಗಿಡದ ನೆರಳಿನಲ್ಲಿ ರುಮಾಲಿನ ಅಂಚಿನಿಂದ ಮುಖವನ್ನು ಮುಚ್ಚಿಕೊಂಡು ಮಲಗಿದ್ದ, ಇಬ್ಬರು ಯಾರೊ ನಡೆದು ಬಂದು ಅಲ್ಲಿಯೆ ಕುಳಿತರು. ಕಾಳ್ಯಾ ಮುಖ ಹೊರತೆಗೆದು ಮಾತನಾಡಬೇಕೆನ್ನುವಷ್ಟರಲ್ಲಿ ಅವರ ಮಾತಿನಲ್ಲಿ ತನ್ನ ಹೆಸರೇ ಕೇಳಬಂದಿತು, ತಟ್ಟನೆ ವಿಚಾರವನ್ನು ಬದಲಾಯಿಸಿ ನಿದ್ರೆಹತ್ತಿದವನಂತೆ ನಟಿಸಿದ. ಆಗಂತುಕರಿಬ್ಬರೂ ತುಸು ದೂರದಲ್ಲಿ, ಅದೂ ಇವನ ಕಡೆ ಬೆನ್ನುಮಾಡಿ ಕುಳಿತದ್ದರಿಂದ ಅವರಿಗೆ ಈ ಮಲಗಿದ ವ್ಯಕ್ತಿಯ ಕಡೆ ಲಕ್ಷ್ಯವೆ ಇದ್ದಿರಲಿಲ್ಲ. ಕಣ್ಣು ಮುಚ್ಚಿದ ಕಾಳ್ಯಾನಿಗೆ ಇದು ಕಾಣಿಸಿರಲಿಲ್ಲ, ಇದನ್ನು ಅವನು ನೋಡುವಂತೆಯೂ ಇರಲಿಲ್ಲ, ಆದುದರಿಂದ ಅಧೈರ್ಯದಿಂದಲೆ ನಿದ್ದೆಯ ಸೋಗನ್ನು ನಟಿಸಿದ್ದ

"ನಿಮ್ಮೂರಿಗೂ ಬಂದಿದ್ದನ ?" ಒಂದು ದನಿ

"ಬಂದಿದ್ದನಪ! ಅವಗೂ ದೊಡ್ಡ ಮನಸ್ಸ್ಯಾ ಆಗಬೇಕಾಗೇತ್ಯೋ ಏನೊ ?" ಎರಡನೆಯ ದನಿ.

"ಯಾತರ ದೊಡ್ಡ ಮನಸ್ಸ್ಯಾ ? ಅದೇನೊ ಅಂತಾರಲ್ಲ, ಸಾವಿರ ಕುದುರೀ ಸರದಾರ ಮನೀ ಹೆಂಡತೀಗ—ಏನೊ ಅಂತ" ತಿರಸ್ಕಾರ

ದಿಂದ ಬಂದ ಮಾತು.

"ಅಂದ್ರ ಖರೇವೇನು ಅದು ?" ಇಳಿದನಿಯು ಪ್ರಶ್ನೆ.

"ಯಾವುದು ?"

"ಸಾವ್ಕಾರ್‍ರ ಮಗ ಏನೊ ಅವನ ಹೆಂಡ್ತೀನ್ನ ಇಟ್ಕೊಗೊಂಡಾನಂತ ?" ಕಳ್ಳದನಿಯಲ್ಲಿ ನುಡಿದ ರಹಸ್ಯದ ಮಾತು.

"ಅದೇ ಹೇಳಿದೆನಲ್ಲ ? ಹುಚ್ಚುಗೊಟ್ಟಿ ಐತಿ, ಸುದ್ದಮುದ್ದ ಹುಚ್ಚುಗೊಟ್ಟಿ ! ಹಾಂಗ ಇರ್ಬೇಕು ಹೀಂಗ ಇರ್ಬೇಕು ಅಂತ ಊರೂರು ಹೇಳಿಕೊಂತ ಹೋಗ್ತದ ಮಳ್ಳ, ಮನ್ಯಾಗ ಹೆಂಡ್ತಿನ್ನ ಹಾದಿಗೆ ತರಾಕ ಆಗೋದಿಲ್ಲ !"

"ಅವನಿಗೆ ಗೊತ್ತಿರಲಾಕಿಲ್ಲ."

"ಏನ್ ಗೊತ್ತಿರಲಾಕಿಲ್ಲ? ಡೊಳ್ಳ ಬಾರಿಸಿ ಡಂಗುರ ಸಾರೋವರ ಹಾಂಗ ಆ ರಂಡಿ ಹೊಟ್ಟಿಬಿಟುಕೊಂಡು ತಿರುಗಾಡಿದಳು ಊರ್‍ತುಂಬ–"

"ಹಹ ! ಕಾಳ್ಯಾಗ ಅ್ಯಟೂ ಹಕ್ಕಿಲ್ಲೇನು ?"

"ಎಲೆ ನಿನ ಹಕ್ಕು ! ಹೆಂಡ್ತಿ ಅಂದ್ರ ಹೊಲಾನ, ಮಸೀನ ಪರದೇಸದಾಗ ಇದ್ದು ಹಕ್ಕು ನಡಿಸಾಕ ?"

"ಆಂ ?"

"ಮತ್ತ ? ಅದಕ್ಕ ಹೇಳ್ತೀನಿ. ಅವನಿಗೆ ಗೊತ್ತೈತಿ. ಬಂದ ಮ್ಯಾಲೆ ಮಾಟಾ ಮಾಡಿಸಿ ಅದನ್ನ ಕೆಡವಿಸ್ಯಾನ."

"ಥೂ ! ನಿನ ! ಭಾರೀ ಐತಿ ಹಾಂಗಾದ್ರ ಈ ಪ್ರಕರಣ !"

"ಅದಕೇ ಹೇಳ್ತೀನಿ ಮನ್ಯಾಗ ಹೆಂಡತಿ ತನ್ನ ಮಾತು ಕೇಳೋದಿಲ್ಲ ಅಂತ ಮಂದಿಗೆ ಹೇಳಿಕೋತ ನಡೆದಾನ ಈ ಮಗ !"

ಎರಡೂ ದನಿಗಳು ಗಹಗಹಿಸಿ ನಕ್ಕಿದ್ದುವು.

ಕೆಲಹೊತ್ತು ತಂಬಾಕದ ಹೊಗೆಯವಾಸನೆ, ಜೊತೆಗೆ ಶಾಂತತೆ.

ಕಾಳ್ಯಾನಿಗೆ ತಡೆಯದಾಗಿತ್ತು, ಆದರೂ ಏಳುವಂತಿಲ್ಲ, ಮುಖವನ್ನಾದರೂ ತೋರಿಸುವಂತಿಲ್ಲ.

ಕೊನೆಗೆ ತಂಬಾಕದ ಹೊಗೆಯ ವಾಸನೆ ಇಲ್ಲದಾಯಿತು, ಶಾಂತತೆ ಉಳಿಯಿತು

ಕಾಳ್ಯಾ ಮೆಲ್ಲನೆ ಮುಖ ತೆರೆದಿದ್ದ. ಯಾರೂ ಇದ್ದಿರಲಿಲ್ಲ.

"ಭೋಸಡಿಮಕ್ಕಳು! ತಂ ಹೆಂಡಂದಿರು ಜಗದಿ ಸತಿ-ಗರತೇರು ಇದ್ಧಾಂಗ ಮಾತಾಡ್ತಾರ! ಯಾರಿಂದ ಎಂದೂ ತಪ್ಪು ಆಗೇಬಾರ ದೇನೊ!" ಎಂದು ವಟಗುಟ್ಟುತ್ತ ಎದ್ದ. ಆ ದಿನವೆಲ್ಲ ಅಡವಿ-ಅಡವಿ ಅಡ್ಡಾಡಿ ಕತ್ತಲಾದ ಮೇಲೆ ಮನೆಗೆ ಹೋಗಿದ್ದ.

* * *

ಶಾಮಣ್ಣನ ಸಹವಾಸದಿಂದ ಕಾಳ್ಯಾನ ದೃಷ್ಟಿಯಲ್ಲಿಯೆ ಬದಲಾ ವಣೆಯಾಗಿತ್ತೆಂದು ಹೇಳಬಹುದು. ಸಾಮಾನ್ಯವಾಗಿ ಜನರು ಒಳ್ಳೆಯವರಿರಬಹುದು ಎಂಬುದು ಆ ದೃಷ್ಟಿಗೆ ತಳಹದಿಯಾಗಿತ್ತು. ಆಗಾಗ ವಿರುದ್ಧ ಅಭಿಪ್ರಾಯಕ್ಕೆ ಪುಟು ಕೊಡುವ ಸಂನಿವೇಶಗಳು ಒದಗುತ್ತಿದ್ದುವಾದರೂ ಕಾಳ್ಯಾ ಉತ್ಸಾಹದಿಂದಲೆ ಇರುತ್ತಿದ್ದ. ಒಮ್ಮೊಮ್ಮೆ ತನ್ನ ಊರು ಆ ಮಾತಿಗೆ ಅಪವಾದವಾಗಿದೆಯೆ ಎಂದೂ ಸಂಶಯಬರುತ್ತಿತ್ತು. ಎಂತಹ ಮೋಜು! ಯಾವ ಯಾವ ಹಳ್ಳಿ ಗಳಿಗೋ ಹೋಗಿ ತಾನು ಯಾರಾರನ್ನೊ ಭೆಟ್ಟಿಯಾಗಿ ಬರುತ್ತಾನೆ, ಆದರ ತನ್ನ ಬಟ್ಟೂರಿನಲ್ಲಿಯೆ ತನಗೆ ತನ್ನವರೊಡನೆ ಈ ಬಗ್ಗೆ ಮಾತಾ ಡುವುದಾಗಿಲ್ಲ! ಚಿಕ್ಕಂದಿನಿಂದ-ಎಷ್ಟೊ ತಲೆಮಾರುಗಳಿಂದ-ಎಲ್ಲರಿಗೂ ಬಾಗಿ ನಡೆದ ಜಾಗೆ ಇದು ಎಂದು ಹಾಗೆ ಆಗುತ್ತಿರಬಹುದೆ? ಇದೊಂದು ಒಡೆಯದ ಒಗಟಾಗಿತ್ತು. ತಾನು ಜಗತ್ತಿನಲ್ಲಿ ಎದೆ ಸೆಟೆಯಿಸಿ ನಡೆಯುವುದಾದರೆ ಈ ಊರನ್ನೆ ಒಡಬೇಕು—ಎಂದು ಒಮ್ಮೊಮ್ಮೆ ಎಂದುಕೊಳ್ಳುತ್ತಿದ್ದ. ಮತ್ತೊಮ್ಮೆ-"ಶಾಮಣ್ಣೋರು ಖುದ್ದ ಆದಾರ ಇಲ್ಲಿ, ನನಗೇನ್ಮಾಡಬೇಕಾಗೇತಿ - ?" ಎಂದು ಸಮಾಧಾನವನ್ನು ತಂದುಕೊಳ್ಳುತ್ತಿದ್ದ. ಒಟ್ಟು ಜಗತ್ತಿನಲ್ಲಿ ಜನರು ಒಳ್ಳೆಯವರೆನ್ನಿಸಿದರೂ ತನ್ನ ಊರಿನ ಮಟ್ಟಿಗೆ ಮಾತ್ರ ತಾನು ಎದೆ

ಸೆಟೆಯಿಸಿ ಅಡ್ಡಾಡಲು ಶಕ್ತನಾಗಿರಲಿಲ್ಲ.

ಕಾಳ್ಯಾನ ಈ ಬದಲಾವಣೆಯಿಂದ ಅವನ ಸಂಸಾರದ ಮಾರ್ಗದಲ್ಲೂ ಅನೇಕ ಬದಲಾವಣೆಗಳುಂಟಾದುವು. ಎಲ್ಲರು ಒಳ್ಳೆಯವರು ಎಂಬ ನಂಬುಗೆಯ ಉಬ್ಬಿನಲ್ಲಿ ಅವನು ಗಂಗಿ, ತನ್ನ ಹೆಂಡತಿ, ಆಕೆಯೂ ಒಳ್ಳೆಯವಳೆ ಎಂದು ಭರವಸೆಯಿಂದಿದ್ದನು. ಮೊದಮೊದಲು ದಿನದಿನಕ್ಕೆ ಆ ಭರವಸೆ ದೃಢವಾಗುತ್ತಿತ್ತು; ರಾಮಣ್ಣನ ಪ್ರಭಾವಕ್ಕೊಳಗಾದಂತೆ ಕಾಳ್ಯಾ "ತನ್ನವರ" ಬಳಗವನ್ನು ದೊಡ್ಡದಾಗಿಸಿಕೊಂಡ. ಇದಕ್ಕಾಗಿ ಅವನು ಮನೆಯನ್ನು ಬಿಟ್ಟು ಹೊರಗೆ ಸಂಚರಿಸುವುದು ಹೆಚ್ಚಾಯಿತು. ಜೊತೆಗೆ—ಮಗನಿಗಾಗಿ ಅವನಿಗಿದ್ದ ವಿಚಾರ-ಅಭಿಮಾನಗಳಿಗಾಗಿ ಮಗನನ್ನು ಹೆಚ್ಚಿಚ್ಚಾಗಿ ಕೂಡಿಕೊಂಡು ಇರುತ್ತಿದ್ದ. "ತನ್ನವರ ಸುಧಾರಣೆ" ಮತ್ತು ಮಗನಿಗಾಗಿ ಮಮತೆ- ಇವೆರಡು ಕಾರಣಗಳಿಗಾಗಿ ಕಾಳ್ಯಾ ಗಂಗಿಯಿಂದ ದಿನದಿನಕ್ಕೆ ದೂರವಾದ. ಗಂಡನ ನೆರಳಿನಲ್ಲಿಯೆ ಬೆಳೆಯುವ ವಿಶಿಷ್ಟ ಜಾತಿಯ ಹೆಣ್ಣಾದ ಗಂಗಿಗೆ ಈ ಅಲಕ್ಷ್ಯವು ಬಿಸಿಲಿನಂತಾಯಿತು. ಅದರ ದಾಹದಲ್ಲಿ ಆಕೆಯ ಅಭಿರುಚಿ-ಬಾಡಿತು ಗಂಡನಿಗಾಗಿ. ಅದಕ್ಕೂ ಹೆಚ್ಚಾಗಿ ಯಾವನಿಗಾಗಿ ತನ್ನನ್ನು ಗಂಡ ಅಲಕ್ಷಿಸಿದನೆಂದು ತಿಳಿದಿದ್ದಳೊ ಆ ಮಗನಿಗಾಗಿ, ಆಕೆಯಲ್ಲಿ ಒಂದು ತಿರಸ್ಕಾರಭಾವ ಹುಟ್ಟಿತು. ಜೊತೆಗೆ ಆಗಾಗ ಕಾಳ್ಯಾ ತನ್ನ ಪ್ರಯತ್ನಗಳ ಬಗ್ಗೆ ಮಾತನಾಡುತ್ತಿದ್ದ; ತಮ್ಮವರು ಹೇಗೆ ದಡ್ಡರು, ಹೊಲಸು ಚಟದವರು ಎಂಬುದನು ಹೇಳುತ್ತಿದ್ದ. ಇದನ್ನು ಕೇಳಿದ ಗಂಗಿಗೆ ಒಂದೇ ಒಂದು ವಿಚಾರ ಬರುತ್ತಿತ್ತು: ತನ್ನ ಗಂಡನೂ ಅಂತಹರ ಪೈಕಿಯವನೆ ಅಲ್ಲವೆ? ಅವನಾದರೂ ದಡ್ಡನಿರಬೇಕು, ಹೊಲಸು ಚಟದವನಿರಲೇಬೇಕು! ಹೀಗಾಗಿ ತಿರಸ್ಕಾರದೊಡನೆ ಗಂಡನ ಬಗ್ಗೆ ಅಸಹ್ಯಭಾವನೆಯೂ ಮೂಡಿತು. ಅದಕ್ಕೆ ಪ್ರತಿಯಾಗಿ ಗುಂಡಣ್ಣನ ಚಿತ್ರವನ್ನು ಆಕೆಯ ಮನಸ್ಸು ತನಗೆ ಒಪ್ಪಿನ್ನಿಸುವಂತೆ ಬರೆಯತೊಡಗಿತು. ತಾನು

ಹೊಲತಿ, ತನ್ನ ಗಂಡನ ಜಾತಿಗೆಯೆ ಸೇರಿದಾಕೆ ಎಂದು ಯಾರಾದರೂ ಹೇಳಿದ್ದರೆ ಆಕೆ ನಂಬುವುದೆ ಶಕ್ಯವಿದ್ದಿರಲಿಲ್ಲ. ತಾನು ಅಂತಹಳಾಗಿದ್ದರೆ ಗುಂಡಣ್ಣನಂತಹರು ತನ್ನನ್ನು ಮೆಚ್ಚುತ್ತಿದ್ದರೆ? ಗುಂಡಣ್ಣ ಮೆಚ್ಚಿರುವ, ತನ್ನ ಬಗ್ಗೆ ಹುಚ್ಚಾಗಿರುವ ಎಂಬುದರ ಬಗ್ಗೆ ಆಕೆಗೆ ಸಂಶಯವೆ ಇದ್ದಿರಲಿಲ್ಲ. ಸಂಶಯವಂತೆ! ಗುಂಡಣ್ಣನ ವಿಚಾರ ಬಂದಾಗೊಮ್ಮೆ ಗಂಗಿ ನಕ್ಕು ನಕ್ಕು ಹಣ್ಣಾಗುತ್ತಿದ್ದಳು ಆ ದೃಶ್ಯವನ್ನು ಆಕೆ ಎಂದಿಗೂ ಮರೆಯುವುದು ಸಾಧ್ಯವಿರಲಿಲ್ಲ.

ಹ್ಯಾಗ ನಿಂತದ್ದ ಆವೊತ್ತು? ಒಳ್ಳೇ ನೆಟಗೊಂಡು! ಎಂಥಾ ಪರಿ ಬಿಗಿದುಕೊಂಡು! ಏನಂದ? "ನಿನ್ನ ಬಗ್ಗೆ ಯಾರು ಮಾತಾಡಿದರು?" ಅಂತ! ಹಹಹ! "ನೀನು ತೆಗೆಯೋ ನೂಲಿನ ಬಗ್ಗೆ" ಅಂತ! ಮಾತಾಡಿದವನೆ ಬಿರಿಬಿರಿ ಹೋಗಿಬಿಟ್ಟಿದ್ದನಲ್ಲ? ಅಯ್ಯ-ಇವನ ಹಸೆ ಬರಾನ! ನಾಲ್ಕ ಹೆಜ್ಜೆ ಆದರೂ ಹೋಗಿದ್ದನೊ ಇಲ್ಲೊ-ಗಬಕ್ಕನೆ ನಿಂತಿತು ಮಿಕಿ-ಮಿಕಿ-ನನ್ನ ನೋಡತಾ! ಆಂ? ಹಹ! "ನನ್ನ ನೂಲು ನೋಡಾಕ ಬಂದೋರು ನನ್ನ ಯಾಕ ನೋಡತಾರೊ!" ಅಂದಿನಿ—ಧಣೇರು ನಾಲಗೆ ಕಚ್ಚಿ-ಹುಚ್ಚಾಪಚ್ಚಾ ಆಗಿ ಓಡಿ ಬಂದು ನನ್ನ—ಅಯ್ಯ! ಉಸಿರುಗಟ್ಟಿ ನಾಯ್ತಿದ್ದಿನಿ ಆ ದಿನ ನಾ ಇಂಥಾಪರಿ ಧಣಿಯು ನನ್ನ ಮೆಚ್ಚತಾರ ಅಂದ್ರ—?

ಗಂಗಿಗೆ ಅದೊಂದೇ ಸಂದೇಹ, ಗುಂಡಣ್ಣ ತನ್ನನ್ನು ಮೆಚ್ಚುವನೆ? ಅವನು ಹಾಗೆ ಮೆಚ್ಚುವುದಾದರೆ ತನ್ನ ಯೋಗ್ಯತೆ ಹೆಚ್ಚಿದಂತಾಯಿತಲ್ಲ?

ಗುಂಡಣ್ಣ ಮೆಚ್ಚುತ್ತಿದ್ದ, ಮೆಚ್ಚಲೇಬೇಕಾಯಿತು ಗಂಗಿಯನ್ನು

ಗುಂಡಣ್ಣನ ಆಸಕ್ತಿಗೆ ಈಗ ಗಂಗಿಯೊಬ್ಬಳೇ ಆಸರ

ಚೆನ್ನಿಯ ಸಂಗ ಗುಂಡಣ್ಣನಿಗೆ ಪೂರ್ತಿಯಾಗಿ ತಪ್ಪಿದೆ ಚೆನ್ನಿಯು ಬಿಟ್ಟೂರಿನಲ್ಲಿ ಹೊಸ ರಾಜಕೀಯವನ್ನೆ ಹುಟ್ಟಿಸಿದ ಕಾಲಬೀಜವಾಗಿದ್ದಾಳೆ

# ೯

ಶಾಮಣ್ಣನ ಸವಾರಿ ಬಿಟ್ಟೂರಿನಲ್ಲಿ ಕಾಲಿಡುವವರೆಗೆ ಬಿಟ್ಟೂರಿಗೆ 'ರಾಜಕೀಯ'ವೆಂಬುದೆ ಇರಲಿಲ್ಲ. ಸಾವಿರಾರು ವರ್ಷಗಳಿಂದ ನಡೆದಿದೆ, ಇಷ್ಟು ದೀರ್ಘ ಅವಧಿಯವರೆಗೆ ನಡೆದಿದೆ ಎಂಬುದಕ್ಕಾಗಿಯೆ ಆ ಸಂಪ್ರದಾಯಕ್ಕೆ ಜನರು ಕಣ್ಣುಮುಚ್ಚಿ ಶರಣು ಹೋಗಿದ್ದಾರೆ. ರಘುನಾಥರಾಯರ ಮನೆತನದ "ಧಣಿತನ", ಧಣಿತನಕ್ಕೆ ಹೊಂದಿಕೊಂಡು ಬೆಳೆದ ಸಾಹುಕಾರಿಕೆ, ದುಡಿಯುವ ಒಕ್ಕಲಿಗರು, ಅವರಿಗೆ ಅಗತ್ಯವಾಗಿ ಬೇಕಿದ್ದ ಕಮ್ಮಾರ, ಊರಿಗಾಗಿ ನೇಕಾರರ ಒಂದೆರಡು ಮನೆಗಳು, ಗೌಡ, ಕುಲಕರ್ಣಿ, ತಳವಾರರು, ಓಲೆಕಾರರು, ಊರ ಹೊರಗೆ ತುಸು ದೂರದಲ್ಲಿ ಒಂದು ದಿಕ್ಕಿಗೆ ಮಾರುತಿಯ ಗುಡಿ, ಇನ್ನೊಂದು ದಿಕ್ಕಿಗೆ ಬೀರ(ಭದ್ರ)ನ ಗುಡಿ, ಕೊನೆಗೆ ಹೊಲಗೇರಿ ಈ ಜಗತ್ತಿನಲ್ಲಿ ಹೊಸಬರ ಪ್ರವೇಶವಿದ್ದಿರಲಿಲ್ಲ, ಹೊಸಬರ ಅಗತ್ಯವೂ ಇದ್ದಿರಲಿಲ್ಲ, ಇದ್ದವರೆಲ್ಲ ಎಲ್ಲರೂ ಎಲ್ಲರಿಗಾಗಿ ದುಡಿಯುವರು; 'ಧಣಿ'ಯರ ಧಣಿತನ ಕೂಡ ಮಿಕ್ಕವರಿಗಾಗಿಯೆ. ಈ ಜಗತ್ತಿನಲ್ಲಿ ಪರಕೀಯವಾದ ಒಂದೇ ಒಂದು ಮನೆ ಕ್ರಮೇಣ ತಳ ಊರಿತ್ತು; ಅದೆಂದರೆ ನೇಮಚಂದ ಸೇಠಜಿಯ ಮನೆ. ಸೇಠಜಿ ಯಾವಾಗ ಬಂದ, ಹೇಗೆ ಬಂದ ಯಾರಿಗೂ ನೆನಪಿರಲಿಲ್ಲ. ಆದರೆ ಹೆಚ್ಚು

ಸಾಮಾನುಗಳನ್ನು ಇಟ್ಟುಕೊಂಡು ನಡೆಸಿದ ಸೇಡಜಿಯ ಅಂಗಡಿಯು ಊರಿಗೆ ಹನುಮಪ್ಪನೆಂಬಂತೆ ಊರಿನ ಸಡಕಿಗೆ ಸೇಡಜಿ ಎಂದು ಸಾರುತ್ತಿತ್ತು. ಸ್ವಭಾವದಿಂದ ಒಳ್ಳೆಯವ, ಎಲ್ಲರಿಗೂ ಬೇಕಾದವ, ಇದುವರೆಗೂ ಹೆಚ್ಚಾಗಿ ರೂಢಿ ಇಲ್ಲದ ಒಳ್ಳೆಯ ವಸ್ತ್ರಗಳನ್ನೂ ಬಟ್ಟೆಗಳನ್ನೂ ಅಂಗಡಿಯಲ್ಲಿಟ್ಟು ಜನರಿಗೆ ಅನುಕೂಲವಾಗುವಂತೆ ಮಾರುತ್ತಿದ್ದ; ಬರಬರುತ್ತ ಸಂಜೆಗೆ ಸೇಡಜಿಯ ಅಂಗಡಿಯ ಮುಂದೆ ಕುಳಿತು ಹರಟೆ ಹೊಡೆಯುವುದು ದಿನನಿತ್ಯದ ರೂಢಿಯಾಯಿತು, ಇದರಿಂದ ಹೊಸಹೊಸ ಪದಾರ್ಥಗಳನ್ನು ಮೇಲಿಂದ ಮೇಲೆ ತರಿಸಲು ಸೇಡಜಿಗೆ ಶಕ್ಯವಾಯಿತು. ಎಲ್ಲಕ್ಕೂ ಮುಖ್ಯವೆಂದರೆ ಎಲ್ಲರೂ ಒಂದೆಡೆ ಸೇರಬಹುದಾದ ಜಾಗೆ ಇದೊಂದೆ ಆಗಿಬಿಟ್ಟಿತು ಸೇಡಜಿಗೆ ಎಲ್ಲರೂ ಗಿರಾಕಿಗಳೆ. ಕಾಳ್ಯಾನಿಗೆ ಬೇಡ ಎನ್ನುವಂತಿಲ್ಲ, ರಾಮಪ್ಪನಿಗೆ ತಡೆ ಎನ್ನುವಂತಿಲ್ಲ; ಇಷ್ಟೆ, ರಾಯರು ಬಂದರೆ ಸೇಡಜಿ ಎದ್ದು, ನಮಸ್ಕರಿಸಿ ಅವರನ್ನು ಅಂಗಡಿಯೊಳಗೆ ತನ್ನ ಜಾಗೆಯಲ್ಲಿ ಕೂಡಿ ಸುತ್ತಿದ್ದ, ರೈತಜನ ಬಂದಲ್ಲಿ ಅವರು ಅಂಗಡಿಯ ಕಟ್ಟೆಯ ಮೇಲೆ ಬಂದು ನಿಲ್ಲುವರು, ಕಾಳ್ಯಾನಂತಹರು ಬೀದಿಯ ಆಚೆ ನಿಲ್ಲುವರು (ರಾಯರು ಅಂಗಡಿಯಲ್ಲಿದ್ದರೆ ಬೀದಿಯ ಆಚೆಗೆ ಮರೆಯಾಗಿ ನಿಲ್ಲುವರು)

ಸೇಡಜಿಯ ಸ್ನೇಹದ ಪ್ರಭಾವ ಬೆಳೆಯುತ್ತ ನಡೆಯಿತು, ಜನರು ಕೊಳ್ಳುವುದೂ ಹೆಚ್ಚಾಯಿತು. ವರ್ಷಕ್ಕೊಮ್ಮೆ ಜನರ ಕೈಯಲ್ಲಿ ಧನ-ಧಾನ್ಯ ಇರುವಾಗ "ರೋಖ ವ್ಯಾಪಾರ" ಎಂಬುದು ಇದ್ದಿರಲಿಲ್ಲ; ಸೇಡಜಿಯಾದರೂ ಹಟ ತೊಟ್ಟು ಬೇಡುತ್ತಿರಲಿಲ್ಲ. ಜನರಲ್ಲಿ ಅವನ ವಿಶ್ವಾಸ, ಅವನಲ್ಲಿ ಜನರ ವಿಶ್ವಾಸ. ಅದಕಾಗಿ ವರ್ಷಕ್ಕೊಮ್ಮೆ ಸೇಡಜಿ ತನ್ನ ವಸೂಲಿಯನ್ನು ಮಾಡುತ್ತಿದ್ದ ಹೆಚ್ಚಾಗಿ ಧಾನ್ಯ ವನ್ನಾಗಲಿ ಹತ್ತಿಯನ್ನಾಗಲಿ ಹಣದ ಬದಲು ಜನ ಕೊಡುತ್ತಿತ್ತು. ಇದರಿಂದ ಇನ್ನೂ ಒಂದು ಅನುಕೂಲವಾಯಿತು. ರಾಶಿಯಾದ ಮೇಲೆ

ಪಟ್ಟಣವನ್ನು ಮಾರಲು ಪರವೂರಿಗೆ ಹೋಗುವುದೂ ಕ್ರಮೇಣ ತಪ್ಪಿತು. ಸೇಡಜಿಯು ಕೊಂಡುಬಿಡುತ್ತಿದ್ದ, ಮೋಟಿ ಗಾಡಿಗಳಿಗೆ ಬಾಡಿಗೆಯನ್ನು ಕೊಟ್ಟು ಅದನ್ನು "ಶಾರೀ" (ಶಹರ) ಊರಿಗೆ ಸಾಗಿಸುತ್ತಿದ್ದ.

ಹೀಗೆ ತಮ್ಮ ಸಾಂಪ್ರದಾಯಿಕ ಜೀವನದಲ್ಲಿ ಸೇಡಜಿಯು ಕ್ರಾಂತಿಯನ್ನು ಮಾಡಿದ್ದನೆಂಬುದು ಜನರ ಲಕ್ಷ್ಯಕ್ಕೆ ಬಂದಿರಲಿಲ್ಲ. ಅಷ್ಟು ತಾದಾತ್ಮ್ಯದಿಂದ ನೇಮುಚಂದ ಸೇಡಜಿಯು ಊರ ಜನರೊಡನೆ ಹೊಂದಿಕೊಂಡಿದ್ದ. ಎಲ್ಲದಕ್ಕೂ ಅವನು ತಮ್ಮವನೆ ಎಂದು ಜನರು ನಂಬಿಕೊಂಡಿದ್ದರು. ಸೇಡಜಿಯಾದರೂ ಹಾಗೆಯೆ ನಡೆದುಕೊಳ್ಳುತ್ತಿದ್ದ. ಯಾರ ಮನೆಯಲ್ಲಿ ಮದುವೆ, ಯಾರಲ್ಲಿ ಹಬ್ಬದ ಸಂಭ್ರಮ, ಯಾವನ ಮನೆಗೆ ಬೀಗರು ಬಂದಿದ್ದಾರೆ—ಹೀಗೆ ಯಾವ ಕಾರಣದಿಂದಾದರೂ ಖರ್ಚಿಗೆ ಅಡಚಣೆಯಾದಲ್ಲಿ ಸೇಡಜಿ ಮರುಮಾತಿಲ್ಲದೆ ಕೈಗಡ ಕೊಡುತ್ತಿದ್ದ. ಕೈಗಡದ ಮಾತಂತೂ ಹೋಗಲಿ, ಅವಶ್ಯ ಬಿದ್ದರ ಐದಿಪ್ಪತ್ತು ಆರಿಪ್ಪತ್ತರಷ್ಟು ಹಣ ಸಾಲ ಎಂದು ಕೂಡ ಕೊಡುತ್ತಿದ್ದ! ಇನ್ನೆಷ್ಟು ಒಳ್ಳೆತನ ಬೇಕು?

ಒಳ್ಳೆತನಕ್ಕೆ ದೇವನು ಮೆಚ್ಚುವನೆಂಬ ಮಾತು ಸೇಡಜಿಯ ಸಂದರ್ಭದಲ್ಲಿ ಸತ್ಯವಾಯಿತು. ಕ್ರಮೇಣ ಅವನ ಸಂಪತ್ತು ಬೆಳೆಯಿತು. ಅವನಿಂದ ಸಹಾಯ ಪಡೆದುದಕ್ಕಾಗಿ ಅನೇಕ ಜನರು ಅವನಿಗೆ ಅಧೀನರಾಗಲು ಸಿದ್ಧರಿದ್ದರು. ಆದರೂ ಸೇಡಜಿ ಒಳ್ಳೆತನವನ್ನು ಬಿಟ್ಟಿರಲಿಲ್ಲ. ಊರಿಗೆ ರಘುನಾಥರಾಯರೆ ಹಿರಿಯರೆಂದು ಯಾವಾಗಲೂ ಒಪ್ಪುವನು, ಅದರಂತೆಯೆ ನಡೆದುಕೊಳ್ಳುವನು. ರಾಯರು ಆ ಬೀದಿಗೆ ಹಾಯ್ದರೆ ಸಾಕು ಓಡಿಬಂದು ವಿನಯದಿಂದ ಕೈಮುಗಿಯುವನು, ಅವರ ಸಮಕ್ಷಮದಲ್ಲಿ ಯಾವಾಗಲೂ ನಿಂತುಕೊಂಡೇ ಇರುವನು. ರಾಯರ ಹೆಸರನ್ನು ಯಾರು ಹೇಳಿದರೂ ಸಾಕು, ಬೇಕಾದ ವಸ್ತುವನ್ನು ಕೊಡುತ್ತಿದ್ದ, ಎಷ್ಟೋ ಸಲ

ರಾಯರಿಗೆಯೆ ಸಂಕೋಚವಾಗುತ್ತಿತ್ತು. ಕೊನೆಗೆ ಒಂದು ದಿನ ಇಂತಹ ಸಂಕೋಚ ಬೇಡ—ಇಬ್ಬರಿಗೂ ಬೇಡ—ಎಂದು ರಾಯರು ಸೇಡಜಿಗೆ ಹೊಲವನ್ನು ಬರೆದುಕೊಟ್ಟು ಸಾಲ ಪಡೆದು ಅವನ ಲೆಕ್ಕ ವನ್ನು ಮುಟ್ಟಿಸಿದರು. ಮುಂದೆ ಇದೇ ವ್ಯವಸ್ಥೆ ನಡೆಯಲು ಅನು ಕೂಲವಾಯಿತು.

ಗುಂಡಣ್ಣ ರಾಯರ ಪರಂಪರೆಯನ್ನು ಚನ್ನಾಗಿ ನಡೆಸಿಕೊಂಡು ಬಂದ. ಅವನ ವ್ಯೆಯುಕ್ತಿಕ ಹುಚ್ಚು-ಮೆಚ್ಚುಗಳಿಗಾಗಿ ಸೇಡಜಿ ಯಿಂದ ತೆರಪಿಲ್ಲದೆ ಸಾಲವನ್ನು ಕೊಂಡ. ಎಷ್ಟಾದರೂ ಒಳ್ಳೆಯವ ನಲ್ಲವೆ ಸೇಡಜಿ ? ಮಗನ ನಡತೆಗಾಗಿ ರಾಯರಿಗೆ ದುಃಖವಾದೀತೆಂದು ಅವರ ಕಿವಿಯ ಮೇಲೆ ಇದನ್ನು ಹಾಕಿರಲಿಲ್ಲ. ಒಂದೆರಡು ವರ್ಷ ಗಳಲ್ಲಿ ಗುಂಡಣ್ಣ ವಯಸ್ಸಿಗೆ ಬಂದ ಮೇಲೆ ಅವನೂ ಒಂದೆರಡು ಕಾಗದ ಪತ್ರಗಳಿಗೆ ಸಹಿ ಹಾಕಿದ. ಹೊಲಗಳಿದ್ದುದೆ ಸಂಪತ್ತನ್ನು ಪಡೆಯುವುದಕ್ಕೆ. ಎಂದಮೇಲೆ ಬೆಳೆದು ಗಳಿಸಿದರೇನು, ಬರೆದು ಕೊಟ್ಟು ಗಳಿಸಿದರೇನು ಎಂದು ಗುಂಡಣ್ಣನ ಯುಕ್ತಿವಾದ. ಹಾಗೆ ನೋಡಿದರೆ ಸಾಗುವಳಿ ಮಾಡುವುದಾಗಲಿ ಮಾಡಿಸುವುದಾಗಲಿ ತೊಂದರೆಯ ಕೆಲಸ; ಬರೆದುಕೊಡುವುದು ಎಲ್ಲ ದೃಷ್ಟಿಯಿಂದಲೂ ಅನುಕೂಲ. ಬರೆದುಕೊಟ್ಟ.

ರಾಮಣ್ಣ ಭಟ್ಟ್ರರಿಗೆ ಬಂದ ಸಮಯಕ್ಕೆ ಮನೆಯೊಳಗೆ ಮದುವೆ ಮೊದಲಾದ ಕಾರಣಗಳಿಗಾಗಿ ರಾಯರು ಸೇಡಜಿಗೆ ಇನ್ನಿಷ್ಟು ಋಣಬದ್ಧರಾಗಿದ್ದರು.

ಆದರೂ ಸೇಡಜಿಗೆ ರಾಯರೆ ಹಿರಿಯರು.

ಊರಿಗೆ ಮಾತ್ರ ಈಗ ಸೇಡಜಿ ಹಿರಿಯ.

* * *

ಮನೆತನದ ಪರಿಸ್ಥಿತಿ ಬದಲಾಯಿಸುತ್ತಿರುವುದನ್ನು ಮೊದಲು ಅರಿತುಕೊಂಡು ಮರುಗುತ್ತಿದ್ದ ವ್ಯಕ್ತಿ ಎಂದರೆ ಸುಬ್ಬಕ್ಕ ಒಬ್ಬಳೆ.

ಆದರೆ ಆಕೆಯಾದರೂ ಯಾರ ಮುಂದೆ ದೂರಿಕೊಳ್ಳುವುದು ? ಮನೆಗೆ ಯಜಮಾನಿತಿ ತಾನು, ತಾನಾಗಿಯೆ ಯಾರ ವಿರುದ್ಧವಾಗಿ ದೂರಿಕೊಳ್ಳಬೇಕು ? ಅದರೂ ಒಮ್ಮೊಮ್ಮೆ ತಡೆಯುತ್ತಿರಲಿಲ್ಲ. ಅಂತಹದೊಂದು ಸಂದರ್ಭ ಸುಬ್ಬಕ್ಕಳ ಮೈಮೇಲೆ ಬಂದಿತು. ಒಂದು ದಿನ ಮಾವನಿಗಾಗಿ ಖರ್ಜೂರಿಯನ್ನು ತರಿಸಬೇಕಾಗಿತ್ತು, ಸೇಡಜಿಯ ಅಂಗಡಿಗೆ ಹೇಳಿ ಕಳುಹಿಸಿದ್ದಳು. ಆದರೆ ಖರ್ಜೂರಿ ಬರಲಿಲ್ಲ, ಈಗ ಸೇಡಜಿಯ ಅಂಗಡಿಯಲ್ಲಿ ದುಡಿಯುತ್ತಿದ್ದ ರಾಮುಪ್ಪ "ಇಂದಿನ ಲೆಕ್ಕಾ ತಂದ್ಕೊಟ್ಟು ಒಯ್ಯಲ್ಹೇಳು" ಎಂದು ಹೆದರಿಸಿ ಕಳಿಸಿದ್ದ !

ಅಂದು ಸುಬ್ಬಕ್ಕನಿಗೆ ಕೆಟ್ಟಕನಸಿನಿಂದ ಒಮ್ಮೆಲೆ ಎಚ್ಚತ್ತಂತಾಯಿತು. ಏನಿದು ? ಯಾರಿಗೆ ಇಂಥ ಮಾತು ? ಇಂಥ ಮಾತನ್ನು ಆಡುವವ ಯಾವ ? ಹೀಗೇಕೆ ತಲೆಕೆಳಗಾಗಿದೆ ಪ್ರಪಂಚ-ಎಂದು ಕೆಲಹೊತ್ತು ತಲೆ ಹಿಡಿದುಕೊಂಡು ಕುಳಿತಿದ್ದಳು.

"ಇದೆಲ್ಲಾ ನೀವು ಮಾಡಿದ್ದೇ !" ಎಂದಳು ಸುಬ್ಬಕ್ಕ ಆ ರಾತ್ರಿ.

ಗುಂಡಣ್ಣ ಹುಬ್ಬುಗಂಟಿಕ್ಕಿದ ಮಾತ್ರ ; ತಟ್ಟನೆ ಉತ್ತರವನ್ನು ಕೊಡಲಾರ. ಆದರೂ ಹೆಂಡತಿಯ ಮೇಲೆ ಸಿಟ್ಟು ಹಣಿಕಿಕ್ಕಿತ್ತು ಅವನ ಹೃದಯದಲ್ಲಿ.

ಗುಂಡಣ್ಣನ ಸಿಟ್ಟು ಹೆಂಡತಿಯ ಮಾತಿಗಾಗಿ ಇರಲಿಲ್ಲ, ಹೆಂಡತಿಗಾಗಿಯೆ ಇದ್ದಿತು. ಅದೊಂದು ದಿನ, ತಾನು ಬಲವಾಗಿ ಆಕೆಯ ಕೆನ್ನೆಗೆ ಏಟನ್ನು ಕೊಟ್ಟಿದ್ದನಲ್ಲ ? ಆ ಏಟು ಕೊಡುವುದಕ್ಕಾಗಿ ಇದ್ದ ಬಿದ್ದ ಎಲ್ಲ ಬಲವನ್ನು ಉಪಯೋಗಿಸಿದಂತಾಗಿತ್ತು ಗುಂಡಣ್ಣನಿಗೆ. ಅಂದಿನಿಂದ ಸುಬ್ಬಕ್ಕನನ್ನು ಎದುರಿಸಲು ಅವನು ಆದಷ್ಟು ತಪ್ಪಿಸುತ್ತಿದ್ದನು. ಯಾಕೆ ಹೀಗಾಗಬೇಕು ? ತಿಳಿಯದು. ಅದಕಾಗಿ ಹೆಂಡತಿಯ ಮೇಲೆ ಸಿಟ್ಟು.

ಗುಂಡಣ್ಣನ ಸಿಟ್ಟು ಈಗ ಮಳೆಗಾಲದ ಮೇಘದ ಅಬ್ಬರದಂತೆ. ಅದು ಸಹಜವೆನ್ನಿಸಿತ್ತು ; ಸುಬ್ಬಕ್ಕ ಅದಕ್ಕಾಗಿ ಹೆದರುತ್ತಿರಲಿಲ್ಲ.

ಹಾಗೆ ಕೇಳಿದರೆ ದಿನದಿನಕ್ಕೆ ಹೆಂಡತಿ ಹೆಚ್ಚೆಚ್ಚು ಧೈರ್ಯದಿಂದ ಮುಖವನ್ನೆತ್ತಿ ತನ್ನೊಡನೆ ವಾದಿಸುತ್ತಿರುವುದು ಗುಂಡಣ್ಣನ ಲಕ್ಷ್ಯಕ್ಕೆ ಬಂದಿತ್ತು. ಕೆಲವು ಸಲವಂತೂ ಆವೇಶದಿಂದ ವಾದಿಸುವಾಗ ಮಗು ವನ್ನು ಗಟ್ಟಿಯಾಗಿ ಅಪ್ಪಿಕೊಂಡಿರುತ್ತಿದ್ದಳು, ಮಗುವು ತನಗೆ ಆಧಾರ ವಾಗಿದೆ ಎಂಬಂತೆ. ತನ್ನ ನಡತೆಯ ಬಗ್ಗೆ ಈಗ ಆಕೆ ಹೆಚ್ಚು ಮಾತ ನಾಡುತ್ತಿರಲಿಲ್ಲ, ನಿಜ. ಆದರೆ ತನ್ನ ಸಮಕ್ಷದಲ್ಲಿ ಆಕೆ ಮಗುವಿ ನೊಡನೆ ಮಾತನಾಡುವುದನ್ನಾಗಲಿ ನಡೆದುಕೊಳ್ಳುವುದನ್ನಾಗಲಿ ನೋಡಿದಾಗ ಈಗ ಆಕೆಯ ದೃಷ್ಟಿಯಲ್ಲಿ ತನಗೆ ಮಹತ್ತ್ವವೆ ಇಲ್ಲ ಎಂಬುದು ಗುಂಡಣ್ಣನಿಗೆ ಸ್ಪಷ್ಟವಾಗುತ್ತಿತ್ತು. ಅದಕಾಗಿಯೂ ಹೆಂಡತಿಯನ್ನು ಕಂಡರೆ ಮುಖವನ್ನು ಬಿಗಿದುಕೊಂಡೇ ಕೂಡ್ರುವನು. ಒಮ್ಮೊಮ್ಮೆ ಹೆಂಡತಿಯಲ್ಲಾದ ಈ ಬದಲಾವಣೆಯನ್ನು ಕಂಡು ಬೆಪ್ಪ ನಾದವನಂತ ಬಿಗಿದ ಮುಖದಿಂದಲೆ ಆಕೆಯನ್ನು ದಿಟ್ಟಿಸುತ್ತ ಕೂಡ್ರುವನು.

"ಇದೆಲ್ಲಾ ನೀವು ಮಾಡಿದ್ದೇ–ಅಂದೆ! ಪಿಳಿಪಿಳಿ ಕಣ್ಬಿಟ್ಟು ನನ್ನ ನೋಡಿದರ ಏನು ಬಂಧಾಂಗಾಯ್ತು?" ಎಂದು ಈ ಸಲ ತಿವಿದು ಮಾತನಾಡಿದಳು.

"ನಾ ಮಾಡಿದ್ದು!" ತಿರಸ್ಕಾರದ ದನಿಯಿಂದ ಗುಂಡಣ್ಣ ಮಾತನ್ನು ಹಾರಿಸಲು ಯತ್ನಿಸಿದ; "ನಾಳೆ ಸೂರ್ಯ ಮೂಡಲಿಲ್ಲ ಅಂದ್ರ ಅದನ್ನು 'ನಾನೇ ಮಾಡಿದ್ದು ಅನ್ನೋವಾಕೆ ನೀನು! ಹಃ!"

"ಏನಾದ್ರೊಂದು ಮಾತಾಡಬ್ಯಾಡಿರಿ!"

"ಏನಾದ್ರೊಂದು ಅಂದ್ರ? ಜಗತ್ತಿನೊಳಗ ನಡೆಯೋದೆಲ್ಲಾ ನನ್ನಿಂದೇ ಅನ್ನೋ ಹಾಂಗ ನೀ ಮಾತಾಡ್ತೀಯಲ್ಲ?"

"ಜಗತ್ತು ತಗೊಂಡು ನಮಗೇನು ಮಾಡೋದದ? ನಮ್ಮೂ ರೊಳಗ ನಮಗ ನಾಲ್ಕು ಜನರ ಎದರು ತಲಿ ಎತ್ತಿ ಹಿಡಿದು ನಡೆಯೋ ಹಾಂಗಿದ್ದರ ಸಾಕು ಅಂತೀನಿ."

"ಹಹ! ಹಹಹ! ಅದರಾಗೇನು? ಭುಜ ಗಟ್ಟಿ ಇದ್ದರ ತಲೆ ಎತ್ತಿ ಹಿಡೀಲಿಕ್ಕೆ—"

"ಅಯ್ಯ! ಗಂಡಸಾದ ಮಾತಿಗೆ ನಿಮಗ ನಾಚಿಕೆ ಆದರೂ ಆದನೊ ಇಲ್ಲೊ?"

ಸುಬ್ಬಕ್ಕನ ದನಿಯಲ್ಲಿಯ ಬಿರುಸನ್ನು ಕಂಡು ಗುಂಡಣ್ಣ ಮೇಲಧಿಕಾರಿಯ ಮುಂದೆ ಸೆಟೆದು ನಿಲ್ಲುವ ಸೈನಿಕನಂತೆ ತಟಸ್ಥನಾಗಿ ಸಜ್ಜುಗೊಂಡ. ಒಂದು ನಿಮಿಷ ಅವಾಕ್ಕಾದ.

"ಈಗ ನೀ ಏನಾದ್ರೂ ಮಾತಾಡಬ್ಯಾಡ. ಅದಕೂ ಅದಕೂ ಸಂಬಂಧ ಏನು?" ಮುಖದ ಮೇಲೆ ಪೆಚ್ಚು ಕಳೆ, ದನಿಯಲ್ಲಿ ಅಧಿಕಾರದ ಪ್ರಯತ್ನ—ಹೀಗೆ ಗುಂಡಣ್ಣ ಕೇಳಿದ.

"ಸಂಬಂಧ ಏನು ಅಂದ್ರ? ಆ ಹುಚ್ಮುಂಡೇಗಂಡ ಆಡಿದ ಮಾತಿಗೆ ಮನೆಯ ಗಂಡಸರಿಗೆ ನಾಚಿಕೆ ಆಗಬೇಕು" ಎಂದು ಅಳು ಸಮೀಪಿಸಿದ ದನಿಯಲ್ಲಿ ಸುಬ್ಬಕ್ಕ ಮಾತನಾಡಿದಳು.

ಗುಂಡಣ್ಣ ಹೆಂಡತಿಯ ಮಾತುಗಳನ್ನು ಕೇಳಿಕೊಂಡ, ಕೇಳಿಕೊಳ್ಳಲೇ ಬೇಕಾಯಿತು. ಕೇಳಿದಂತೆ ಒಳಗಿಂದೊಳಗೆಯೆ ನಾಲಗೆಯನ್ನು ಕಡಿದುಕೊಳ್ಳಬೇಕಾಯಿತು. ರಾಮಿ, ತನ್ನ ಕೈಯಿಂದ ಸಹಾಯವನ್ನು ಪಡೆದು ಕೊಬ್ಬಿದ ರಾಮ್ಯಾ—ಇವನೂ ಹೀಗೆ ಮಾತನಾಡಿದನೆ? ಇವನೂ–ಗುಂಡಣ್ಣ ಸಿಟ್ಟನ್ನು ನುಂಗಿಕೊಳ್ಳಲು ಯತ್ನಿಸಿದ. ಸಿಟ್ಟಿಗೆ ಬಂದು ಪ್ರಯೋಜನವೇನು? ತಾನು ಏನನ್ನು ಮಾಡಲು ಬಲ್ಲ? ಎದೆ ಸೆಟೆಯಿಸುವಂತಿಲ್ಲ, ಸೊಂಟ ಮುರಿದಂತಾಗಿದೆ. 'ಮುರಿದಂತೆ'–ಯಾಕೆ? ಮುರಿದಿದೆ, ಮುದ್ದೆಯಾಗಿ ಸೇನುಚಂದೆ ಸೇಡಜಿಯ ಕೈಯಲ್ಲಿ ಸಿಕ್ಕಿದೆ. ಜಾತ್ರೆಯಲ್ಲಿಯ ಗೊಂಬೆಯಂತೆ ತಾನು, ಸೇಡಜಿ ಜೋರಾಗಿ ಹಿಸುಕಿದರೆ ಗೊಂಬೆಯ ತಲೆ ತಾನೆ ತಾನಾಗಿಯೆ ಬಾಗುವುದು. ಅಹುದು–ನಿರ್ಜೀವ ಗೊಂಬೆ ತಾನು. ಸೇಡಜಿಯಷ್ಟೆ ಅಲ್ಲ, ಬೇಕಾದವರು ತನ್ನನ್ನು ಮಣಿಸಬಹುದು. ಅಂತೆಯೆ ಈಗ

ರಾಮ್ಯಾ ಹೀಗೆ ಮಾಡಿದ್ದಾನೆ. ಗುಂಡಣ್ಣ ಅತ್ಯಂತವಾದ ವಿಷಣ್ಣ ಮುದ್ರೆಯಿಂದ ಹೆಂಡತಿಯ ಮುಖವನ್ನು ದಿಟ್ಟಿಸುತ್ತ ಕುಳಿತ. ಆಕೆಯ ಬಾಯಿಯಿಂದ ಹೊರಬೀಳುತ್ತಿರುವ ಶಬ್ದಗಳ ಅರ್ಥ ಅವನಿಗೆ ಆಗುತ್ತಿದ್ದಿತೆ ಇಲ್ಲವೆ ಎಂಬುದನ್ನು ಹೇಳಲು ಶಕ್ಯವಿರಲಿಲ್ಲ. ಸುಬ್ಬಕ್ಕನಿಗೆ ಲಕ್ಷ್ಯಕ್ಕೆ ಬಂದಿತೇನೊ! ಮಾತಿನ ಓಘಕ್ಕೆ ತಡೆ ಹಾಕಿದಳು. ಗಂಡನ ಅಸಹಾಯತೆಯ ಬಗ್ಗೆ ಸಂದೇಹ ಉಳಿಯಲಿಲ್ಲ, ಕನಿಕರವೂ ಉಂಟಾಯಿತು. ಇಷ್ಟು ನಿರ್ಬಲನಾದವನ ಮುಂದೆ ತನ್ನ ದೂರನ್ನು ತೋಡಿಕೊಳ್ಳುವುದು ಬುದ್ಧಿವಂತಿಕೆಯೆ ಅಲ್ಲ ಎಂಬ ವಿಚಾರದಿಂದಲೆ ಏನೊ ಎನ್ನುವಂತೆ ಈಗ ತನ್ನಷ್ಟಕ್ಕೆ ತಾನು ಮಾತಾಡಿಕೊಳ್ಳುವಂತೆ ಗೊಣಗು ದನಿಯಲ್ಲಿ ನುಡಿದಳು, "ಹೀಂಗಾದರ ಏನು ಗತಿ?" ಅಂತ.

"ಏನಾಗೇದ, ನೀನುಮ್ಮನೆ ಮ್ಯಾಲಿಂದ ಮ್ಯಾಲೆ 'ಗತಿ-ಏನು' ಅಂತ ಅನ್ನಲಿಕ್ಕೆ?"

"ಅಲ್ಲ-ಏನಾಗೇದ ಅಂತ ಕೇಳ್ತೀರಿ! ನಮ್ಮ ಮಟ್ಟಿಗಂತೂ ಆಗೋದೇನೂ ಉಳಿದಿಲ್ಲ. ನಾಳೆ ನಂ ಹುಡುಗರಾದರೂ ಮಾನ ಕಾಯ್ದುಕೊಂಡು ಇದ್ದರ ನಾಕು ಅಂತೀನಿ. ಬಿಟ್ರಿ, ನಗ್ತೀರೇನು? ಆ ಟೊಣಪ, ಈ ಹೊಲತಿ-ಅಂತ ಯಾರ‍್ಯಾರನ್ನೊ ಕಟ್ಟಿಕೊಂಡು ಏರಿಸಿ ಕೂಡ್ರಿಸಿದಿರಿ-ಈಗ ಅವರೆಲ್ಲಾ ತಲೇ ಮ್ಯಾಲ ಮೆಣಸು ಅರೀತಾರ! ನೋಡಿರಲ್ಲ, ಆವತ್ತು ಮುಂಜಾನೆ? ಅಂಗಡಿ ಏನು ತನ್ನದೇ ಅನ್ನೋ ಹಾಂಗ ಪಟಪಟ ಹೋದವರ ಮೈಮ್ಯಾಲೆ ಒದರಾಡಿದ. ಇಷ್ಟ್ರಾಗ ಈ ಅವಸ್ಥೆ ಆದದ—".

"ಇದೇನು ಕಡೆತನಕ ಹೀಂಗೇ ಉಳೀತದೇನು? ಈ ಸಲದ ಉತ್ಪನ್ನ ಕೈಗೆ ಹತ್ತಲಿ—"

"ಅಯ್ಯ! ಸಾಕು, ನಿಮ್ಮ ದೊಡ್ಡೊಡ್ಡ ಮಾತು! ನನಗ ಏನೂ ಗೊತ್ತೇ ಇಲ್ಲ ಅಂತ ತಿಳಿದೀರ‍್ಯೋ ಏನು, ಮೂರಿಯ ಮ್ಯಾಲೆ ಕೈ ಎಳೀಲಿಕ್ಕೆ? ನಮ್ಮದಂತೂ ಮುಗೀತು, ಕಂಡಷ್ಟು ಸುಖ

ಸಾಕಾಯ್ತು–"ಸುಬ್ಬಕ್ಕ ಈಗ ಮಾತ್ರ ಸೆರಗಿನಿಂದ ಮುಖವನ್ನು ಮುಚ್ಚಿಕೊಂಡಳು– "ಕಡೇಕ ಹುಡುಗನಿಗೆ ಇಷ್ಟು ಛಲೋತ್ತನಾಗಿ ಕಲಿಸಿದರ ಅವನಾದರೂ ಮುಪ್ಪಿನೊಳಗ ನಮಗೇನಾದ್ರೂ ಆಸರ ಆದಾನು ಅಂತ—"

ಗುಂಡಣ್ಣ ಹಿರಿತನದ ನಗೆಯನ್ನು ನಕ್ಕ. "ಎಂತಹ ಹುಚ್ಚಿ ನೀನು! ಮಗ ದೊಡ್ಮನಸ್ಯಾ ಆಗಲಿ ಅಂತ ಅವನಿಗೆ ೩-೪ ವರ್ಷದವ ಇರುವಾಗೇ ಸಾಲೆಗೆ ಹಾಕ್ಬೇಕು ಅಂತೀ ಏನು?"

ಸುಬ್ಬಕ್ಕ ಮುಖವನ್ನೊರೆಸಿಕೊಂಡು ಮೆಲ್ಲನೆ ಸೆರಗಿನ ಮುಸು ಕನ್ನು ತೆಗೆದಳು.

"ಇನ್ನಾದರೂ ಒಂದಿಷ್ಟು ಜವಾಬ್ದಾರೀಲೆ ನಡೆದರ—"

ಸುಬ್ಬಕ್ಕ ಅಷ್ಟಕ್ಕೆ ತಡೆದಳು. ಗುಂಡಣ್ಣ ಕೈಜಾಡಿಸಿ ಎದ್ದಿದ್ದ. ಈ ಮಾತು ಬಂದದ್ದು ಇದೇ ಮೊದಲ ಸಲ ಇರಲಿಲ್ಲ, ಆದುದರಿಂದ ಈ ಮಾತಿನ ಸಂದರ್ಭ ಗುಂಡಣ್ಣನಿಗೆ ಗೊತ್ತಿತ್ತು. ಆದರೆ ಸುಬ್ಬಕ್ಕ ಮಾತ್ರ ಈಸಲ ಮಾತನ್ನು ಅರ್ಧಕ್ಕೆ ನಿಲ್ಲಿಸಲಿಲ್ಲ.

"ನನ್ನ ಮಾತನಾದರೂ ಪೂರ್ತಿ ಕೇಳಿಕೊಳ್ಳಿರಲ್ಲ?"

"ಏನು ಕೇಳೋದು? ಏನಾದ್ರೂ ಹುಚ್ಚನ್ಹಾಂಗ ಬಡಬಡಿಸಿದ ರಾಯ್ತೇನು? ಮುಂದಿಯು ಮಾತು ಕೇಳಿ, ಏನಾದ್ರೂ ತಿಳಿದು ಕೊಂಡು—"

"ಅಯ್ಯೆ! ಸುಟ್ಟೇತು ಮುಂದಿಯು ಮಾತು! ನಿಂ ಸುಟ್ಟ ಚಾಳಿಯ ಸಲುವಾಗಿ ಮಾತಾಡಲಿಕ್ಕೆ ನನ್ಗೇನು ಹುಚ್ಚು ಹಿಡಿದಿದೆ ಏನು? ನಾಯಿಯ ಬಾಲ ಡೊಂಕ ಇದ್ದರ ಯಾರಿಗೇನು ಮಾಡಲಿಕ್ಕೆ ಬರ್ತದ?"

"ಸಾಕು ನಿನ್ನ ಜಾಣತನ! ಏನು ಹೇಳೋದದ ಅದನ್ನ ಬೊಗಳು ಮೊದಲು!" ಅಪಮಾನಕ್ಕಾಗಿ ಸಿಟ್ಟಿಗೆದ್ದ ಗುಂಡಣ್ಣ ಗದ್ದರಿಸಿದ.

"ಒಂದಿಷ್ಟು ಜವಾಬ್ದಾರಿ ಇರಲಿ ಅಂತೀನಿ! 'ಜವಾಬ್ದಾರಿ'

ಅನ್ನೋದು ಸಹಿತ ತಿಳಿಯಧಾಂಗ ಆಯ್ತೊ ಏನೊ ಇವರಿಗೆ!"

"ಏನು? ಯಾತರ ಸಲುವಾಗಿ? ಯಾರ ಜವಾಬ್ದಾರಿ?"

"ಹಿಂಗ್ಯಾಕ ಗಚ್ಚಿನ ಗುಡಿಯು ಹಾಂಗ ಅಂದದ್ದನ್ನ ಅಂತೀರಿ?"

"ಹೌದು, ಮತ್ತೆ! ಪ್ರತಿಯೊಂದು ಮಾತಿಗೆ ಜವಾಬ್ದಾರಿ ಅಂದ್ರ?"

"ಇಲ್ಲ, ಬಿಡಿರಿ ಹಾಂಗಾದರ. ಮನಸಿಗೆ ಬಂಧಾಂಗ ಮಾಡ್ರಿ. ನೀವು, ನಿಮ್ಮ ಚಲ್ಲಾಟ ಒಂದು ಕಡೆ, ನಿಮ್ಮ ತಂಗಿ–ಆಕೆಯು ಚಲ್ಲಾಟ ಒಂದು ಕಡೆ—"

"ಏ–ನಂ–ದಿ?" ಗುಂಡಣ್ಣ ಗದ್ದರಿಸಿದ

"ನಾ ಯಾಕ ಅನ್ನಲಿಕ್ಕೆ ಹೋಗಲಿ? ಮಂದಿ ಅನ್ನೋದನ್ನ ಹೇಳಿದೆ. ನಮ್ಮ ಮನೆಯು ಮಾನ–ಮರ್ಯಾದೆ ಉಳಿಸಬೇಕು ಅನ್ನೋದು ನನಗೂ ತಿಳಿಯೋದಿಲ್ಲ ಅಂತೀರೇನು? ಆದರೂ ಶಾಂತಕ್ಕ ಒಂದಿಷ್ಟು ಶಾಮಣ್ಣನಿಂದ ದೂರ ಇರ್ಬೇಕು–ಮಂದಿಯು ಮಾತಿಗೆ ಯಾಕ—"

"ಸುಟ್ಟಿತು ಮಂದಿಯು ಮಾತು!"

"ಸುಳ್ಳೇ ಹಾಂಗ ಒದರಿಕೊಂಡರ ಏನು ಆಧಾಂಗ ಆಯ್ತು. ನಾಳೆ ಗಂಡು-ಹೆಣ್ಣು ಮಕ್ಕಳು ಬೆಳಿಯೋ ಮನೆ ಇದು; ಮದುವೆ ಆಗೋದು, ಮುಂಜವೆ ಆಗೋದು. ಮನೆತನದ ಮರ್ಯಾದೀನೇ ಹೋದರ ನಾಲ್ಕು ಮಂದಿ ಆದ್ರೂ ಬಂದಾರು ಹ್ಯಾಂಗ ಅಂತಹ ಸಮಾರಂಭಕ್ಕ?"

"ಅಂದ್ರ—ನಾಯೇನು ಮಾಡಬೇಕು ಆದಕ್ಕ?"

"ಯಾರೇನು ಮಾಡೋದು? ಏನೊ ಮನೆತನದ ಮರ್ಯಾದೀ ಮಾತು ಹೊಂಟಿತ್ತು ಅಂತ ಹೇಳಿದೆ"

ಗುಂಡಣ್ಣ ಒಮ್ಮೆಲೆ ನಕ್ಕ.

"ಯಾಕ? ನಗ್ಲಿಕ್ಕೆ ಏನಾಯ್ತು ನಿಮಗ?"

"ಹಹ! 'ಗಂಡು-ಹೆಣ್ಣು ಮಕ್ಕಳು ಬೆಳೆಯೋ ಮನೆ' ಅಂತ! ಹಹ! ಆಂ? ಸದ್ಯಕ್ಕ ಇದ್ದದ್ದು ಒಂದು ಗಂಡು! ಎಷ್ಟಾದರೂ ಆಶಾ ಇಟ್ಕೊಂಡೀದಿ ಅಂತೀನಿ."

ಗುಂಡಣ್ಣನ ಮಾತಿನ ಸುಳಿವನ್ನರಿತು ಸುಬ್ಬಕ್ಕ ತಟ್ಟನೆ ಎದ್ದಳು, "ಅಯ್ಯ! ಎಷ್ಟು ರಾತ್ರಿ ಆಯಿತೊ ಏನೊ, ಮಾತಾಡತಾ! ಮುಂಜಾನೆ ಸುತ್ತ ಲಗೂ ಏಳಬೇಕು" ಎಂದುಕೊಂಡಳು

"ಹುಡುಗರು ನಾಲೆಗೆ ಹೋಗಲಿಕ್ಕೆ ಸುರುವು ಮಾಡಿದ ಮ್ಯಾಲೆ ಎದ್ದೀಯಂತ ಲಗೂ, ಈಗ್ಯಾಕ ಅವಸರ? ಆಂ?" ಗುಂಡಣ್ಣ ಆಕೆಯ ಕೈಯನ್ನು ಹಿಡಿಯಲು ಹೋದ, ಅಷ್ಟರಲ್ಲಿ ಆಕೆ ಏಳುತ್ತಿದ್ದಳು. ಕೈ 'ಎಲ್ಲಿ'ಯೊ ತಾಕಿತು. "ಹುಡುಗನಿಗ ಇನ್ನೂ ನಿದ್ದೆ ಹತ್ತಿದೆಯೊ ಇಲ್ಲವೊ!" ಎನ್ನುತ್ತ ಸುಬ್ಬಕ್ಕ ಒಳಕೋಣೆಗೆ ನಡೆದಳು.

"ಆಯ್ತು, ನಾನೂ ಮಲಗಿಕೋತೀನಿ" ಎನ್ನುತ್ತ ಗುಂಡಣ್ಣನೂ ಪಡಸಾಲೆಗೆ ಬಂದ. ಗುಂಡಣ್ಣ ಅವಸರದಿಂದಲೆ ಬಂದ, ಅಷ್ಟರಲ್ಲಿ ಅವನ ಹಣೆಗೆ ಬೆವರು ಮಿಂಚುತ್ತಿತ್ತು, ಗಾಬರಿ, ನಿರಾಶೆ, ನಿರ್ವಿಣ್ಣತೆ—ಮೋಡಗಳಂತೆ ಈ ಭಾವನೆಗಳ ನೆರಳು ಅವನ ಮುಖದ ಮೇಲೆ ಓಡಾಡಿ ಮುಖವು ಕಪ್ಪಿಟ್ಟಿತ್ತು. ಇರಬಹುದೆ?—ಎಂದುಕೊಂಡ. ನಾಚಿಕೆಯಿಂದ ಎದೆ ಝಲ್ಲೆಂದಿತು ಅದೊಂದು ಕ್ಷಣದಲ್ಲಿ ಅವನ ಸಂಸಾರದ ನೌಕೆ ಬಂಡೆಗೆ ಅಪ್ಪಳಿಸಿ ನುಚ್ಚು ನೂರಾಗಿತ್ತು. ಹೆಂಡತಿ ತನ್ನ ಬಗ್ಗೆ ಈ ಭಾವನೆಯನ್ನಿಟ್ಟುಕೊಂಡಿದ್ದಾಳೆ! ಇನ್ನೇನಿದೆ ಸಂಸಾರದಲ್ಲಿ? ಎಂದುಕೊಂಡ. ತಾನು ಬಯಸಿದ್ದೇನು? ಅದು ಆದದ್ದೇನು? ಹಣ್ಣು ಸವಿ ಎಂದು ತಿಳಿದಾಗ ಹುಪ್ಪಿನಲ್ಲಿಯೆ ವಿಷ ಹೊರಡಬೇಕೆ?

ಗುಂಡಣ್ಣನಿಗೆ ಆಸಕ್ತಿ-ಎಂಬುದೆ ಹಾರಿಹೋಯಿತು.

ಸುಬ್ಬಕ್ಕನ ಮುಗ್ಧತೆ ತನ್ನನ್ನು ಬಲವಾಗಿ ನೂಕಿದಂತಾಗಿತ್ತು.

ಆಕೆಯ ಮೈಗೆ ತನ್ನ ಕೈತಾಕಿದಾಗ, ಆ ಮೈ ಆ ಕ್ಷಣದಲ್ಲಿ

ಕಲ್ಲಿನಂತೆ ಬಿರುಸಾಗಿತ್ತಲ್ಲ ?

ಗಂಡಸಿಗೆ ಧಿಕ್ಕಾರದ ಇನ್ನೆಂತಹ ಲಕ್ಷಣಬೇಕು ?

ಮನೆತನದ ಮಾರ್ಯಾದೆಯಂತೆ ?

ಇಂದು ತನ್ನ ಸಂಸಾರದ ಮರ್ಯಾದೆಯೆ ಕಳಚಿದಂತಾಯಿತು. ಗುಂಡಣ್ಣನಿಗೆ ಎಲ್ಲಿಂದ ಪ್ರಾರಂಭವಾಗಿತ್ತು ಈ ಪ್ರಸಂಗ ?... ಹಾಂ— "ಆ ಕಳ್ಳನೂಳೇಪುಗ ರಾಮ್ಯಾನ ಮಾತು ಹೊರಟು !" ಕರಕರನೆ ಹಲ್ಲು ತಿಂದ ಗುಂಡಣ್ಣ, ಕಾಲ್ಪನಿಕ ರಾಮಪ್ಪ ಎಂಬ ವಸ್ತುವನ್ನು ಪುಡಿಪುಡಿ ಮಾಡುವನಂತೆ.

* * *

ರಾಮಪ್ಪ ಈಗ ಗುಂಡಣ್ಣನಿಗೆ ಮೀರಿದ ತುತ್ತಾಗಿದ್ದ. ಗುಂಡಣ್ಣ ಹಲ್ಲು ತಿಂದರೂ ಅಷ್ಟೆ, ಗಂಟಲನ್ನು ಹರಿದುಕೊಂಡರೂ ಅಷ್ಟೆ— ರಾಮಪ್ಪನಿಗೆ ಅದರ ಪರಿವೆ ಇದ್ದಿರಲಿಲ್ಲ. ಈಗ ರಾಮಪ್ಪ ಸೇಡಜಿಯ ಆಳಾಗಿದ್ದ. ದಿನದಿನಕ್ಕೆ ಸೇಡಜಿಯ ಸಂಪತ್ತು ಬೆಳೆಯುತ್ತಿತ್ತು, ಸೇಡಜಿಯ ಉದ್ರಿಯ ಗಿರಾಕಿಗಳ ಸಂಖ್ಯೆಯೂ ಬೆಳೆಯುತ್ತಿತ್ತು. ಸಂಪತ್ತನ್ನು ರಕ್ಷಿಸಬೇಕು, ಉದ್ದರಿಯನ್ನು ವಸೂಲು ಮಾಡಬೇಕು ; ಕುಸ್ತಿಯ ಕಣದಲ್ಲಿ ಎದುರಾಳಿಗಳನ್ನು ನೆಲಕ್ಕೆ ಉರುಳಿಸಲು ತಯಾರಾದ ರಾಮಪ್ಪನ ಶಕ್ತಿ, ಹಣ ಇಲ್ಲದ್ದಕ್ಕೆ ಕಂಗೆಟ್ಟ ಗಿರಾಗೇಡಿಗಳನ್ನು ಹೆದರಿಸಲು ಮಾತ್ರ ಸಾಧನವಾಗಿ ಉಳಿಯಿತು.

ರಾಮಪ್ಪನ ಜೀವನದ ಧ್ಯೇಯ ಈಗ ಬೇರೆಯಾಗಿತ್ತು. ಚೆನ್ನಿ ಅವನನ್ನು ಬಿಟ್ಟು ಹೋಗಿದ್ದಳು. ಬರೀ ಬಿಟ್ಟು ಹೋಗಿದ್ದರೆ ಅಷ್ಟೊಂದು ಚಿಂತೆ ಇರುತ್ತಿರಲಿಲ್ಲ ; ಸುತ್ತಲಿನ ಹತ್ತು ಹಳ್ಳಿಗಳಲ್ಲಿ ಎಲ್ಲರನ್ನೂ ಜಯಿಸಿದ ತನ್ನಂತಹ ಜಟ್ಟಿಯ ಚುಂಗಕ್ಕೆ ಇರುವೆಗಳಂತೆ ಹೆಣ್ಣುಗಳು ಮುತ್ತಬಹುದಾಗಿತ್ತು. ಆದರೆ ಆಕೆ ತನ್ನ ಹೆಸರನ್ನು ಕೆಡಿಸಿ ಹೋಗಿದ್ದಳು. "ಅದ್ಯಾತರ ಗಂಡಸು, ಹೆಂಡ್ತೀನ್ನ ಕಂಡರ ಬೆವರ ಸುರಿಸಿ ಗಡ ಗಡ ನಡುಗೋದು !" ಎಂದಿದ್ದಳು. ನಿಜ,

ತಾನು ಹೆಂಡತಿಯಿಂದ ದೂರದಲ್ಲಿದ್ದ ಕಾರಣ ಬೇರೆಯಾಗಿತ್ತು, ಚೆನ್ನಿ ಬೇರೊಂದನ್ನೆ ಸುದ್ದಿ ಹರಡಿದ್ದಳು; ಕೊನೆಗೆ ಬಿಟ್ಟೂರಿನಿಂದ ಒಂದು ರಾತ್ರಿ ಎಲ್ಲಿಯೊ ಮಾಯವಾಗಿದ್ದಳು.

ರಾಮಪ್ಪನು ಈ ಅವಮಾನವನ್ನು ಮರೆಯುವಂತಿರಲಿಲ್ಲ. ಗುಂಡಣ್ಣನೆ ಇದಕ್ಕೆಲ್ಲ ಮೂಲಕಾರಣ ಎಂಬ ಸಂಶಯ ರಾಮಪ್ಪನ ತಲೆಯಲ್ಲಿ ಹೊಕ್ಕಿದೆ. ತನ್ನನ್ನು ಚೆನ್ನಿಯಿಂದ ದೂರದಲ್ಲಿರಿಸಿದವ ಗುಂಡಣ್ಣ, ಚೆನ್ನಿಯನ್ನು ಹೆದರಿಸಿ ಹಾದಿಯನ್ನು ಬಿಡಿಸಿದವ ಗುಂಡಣ್ಣ, ತನ್ನ ಹೆಸರನ್ನು ಕೇಳಿದರೆ ಜನ ನಗುವಂತೆ, ತನಗೆ ಇನ್ನೊಂದು ಹೆಣ್ಣು ಒಲಿಯದಂತೆ ಮಾಡಿದವ ಗುಂಡಣ್ಣ—ಎಂಬ ದ್ವೇಷ ರಾಮಪ್ಪನಲ್ಲಿ ಉಳಿಯಿತು. ಹೇಗಾದರೂ ಮಾಡಿ ಸೇಡನ್ನು ತೀರಿಸಿಕೊಳ್ಳಬೇಕು, ಗುಂಡಣ್ಣನ ಮುಯ್ಯಿಗೆ ಮುಯ್ಯಿ ಮುಟ್ಟಿಸಬೇಕು! ಹೇಗೆ?

ರಾಮಪ್ಪನ ವಿಚಾರಕ್ಕೆ ಸಮಾಧಾನವನ್ನು ಒದಗಿಸುವಂತೆ ಒಂದು ಸಂಜೆ ಅವನು ಅಂಗಡಿಯಲ್ಲಿದ್ದಾಗ ಗಂಗಿ ಬಂದಳು ಕೈಯಲ್ಲಿ ಏನೊ ಇದ್ದಂತೆ ಕಂಡಿತು, ದೂರದಿಂದ. ರಾಮಪ್ಪ ಅತ್ತಿತ್ತ ನೋಡಿದ, ನೇಡಚಿ ಇದ್ದಿರಲಿಲ್ಲ, ಸೇಡಚಿ ಇಲ್ಲದ ವೇಳೆಯಲ್ಲಿ ಅಂಗಡಿ ಯನ್ನು ಬಿಟ್ಟು ಹೋಗುವುದು ಹೇಗೆ? ಅಂಗಡಿಯಲ್ಲಿ ಉಳಿದರೆ ಆ ಹೊಲತಿ ಏನನ್ನಾದರೂ ಬಿಚ್ಚಿ ಮಾತನಾಡಿದರೆ ಹೇಗೆ? ರಾಮಪ್ಪನು ಗೊಂದಲದಲ್ಲಿ ಸಿಕ್ಕ. ಅಂಗಡಿಯ ಎದುರಿನ ಬೀದಿಯ ಆಚೆಗೆ ನಿಂತ ಗಂಗಿ ಎತ್ತಿದ ಅವನ ಮುಖದ ಇದಿರೇ ನಿಂತಿದ್ದಳು ಈಗ. ರಾಮಪ್ಪ ನನ್ನು ನೋಡಿದೊಡನೆಯೆ–ಅತ್ತಿತ್ತ ನೋಡಿ–ಆಕೆಯೂ ನಾಚಿದಳು–ಮುಖವನ್ನು ಹಿಂತಿರುಗಿಸಿ ಹಾಗೆಯೆ ಒಂದೆರಡು ನಿಮಿಷ ನಿಂತಳು.

ಗಂಗಿ! ಹೊಲತಿ!

ಆದರೇನು? ಆಕೆ ಹಾಗೆ ಮುಖ ತಿರುಗಿಸಿ ನಿಂತ ಆ ಕ್ಷಣದಲ್ಲಿ, ಮುಖ ಕಾಣಲಿಲ್ಲವೆಂಬ ಸಂದರ್ಭಕ್ಕಾಗಿಯೊ ಏನೊ, ಆಕೆ ಹೊಲತಿ ಎಂಬ ವಿಚಾರವೆ ರಾಮಪ್ಪನ ಇದಿರು ನುಳಿಯಲಿಲ್ಲ. ಬಳುಕಿ ನಿಂತ

ಮೂರ್ತಿ, ತುಂಬಿದ ಸ್ತ್ರೀಕಟ್ಟು, ಮುಖವನ್ನಷ್ಟೆ ತಿರುಗಿಸಿದ್ದರಿಂದ ತುಸ ಹೆಚ್ಚು ಮುಂದಾಗಿ ಕಾಣುವ ವಕ್ಷಸ್ಥಳ, ಮುಖ ತಿರುಗಿದ್ದರಿಂದ ನಿದಾರ್ಕ್ಷಿಣ್ಯ ದೃಷ್ಟಿಯಿಂದ ದಿಟ್ಟಿಸಿ ನೋಡುವಾಗ ಪೂರ್ತಿಯಾಗಿ ಮನಸ್ಸನ್ನು ಸೆಳೆದ ಆ ಹೆಣ್ಣುಗಾರಿಕೆ—ಇವುಗಳಿಗಾಗಿ ರಾಮಪ್ಪ ಒಂದು ನಿಮಿಷ ನೆಲಕ್ಕೆ ಕಾಲೂರಿದವನಂತೆ ನಿಂತುಕೊಂಡ ಮರು ಗಳಿಗೆಯಲ್ಲಿ ಅವನಿಗೆ ವಿಚಾರ ಹೊಳೆಯಿತು

ಒಂದು ಬಾಣ, ಎರಡು ಗುರಿ!

ತನ್ನದೂ ಕೆಲಸವಾಯಿತು, ಗುಂಡಣ್ಣನ ನೇಮವನ್ನು ತೀರಿಸಿದಂತಾಯಿತು. ಸರಿ—ಎಂದುಕೊಂಡ ಎಲ್ಲ ಸಜ್ಜನಿಕೆಯನ್ನು ಮಾಡಿಕೊಂಡವನಂತೆ ಗಂಟಲನ್ನು ಸರಿಪಡಿಸಿಕೊಂಡು [illegible]

ಇದುವರೆಗೂ ಗಂಗಿ ಮುಖವನ್ನು ತಿರುಗಿಸಿಯೇ ನಿಂತಿದ್ದಳು. ರಾಮಪ್ಪನು ಮಾತನಾಡದ್ದಕ್ಕೆ ಆಕೆಗೆ ಒಂದು ನಿಮಿಷ ಹೆದರಿಕೆಯಾಯಿತು. ಆದರೆ ಮುಂದೆ ರಾಮಪ್ಪ ಗಂಟಲನ್ನು ಸರಿಪಡಿಸಿಕೊಂಡ ರೀತಿ ಕೇಳಿಸಿದೊಡನೆ ಆಕೆಗೆ ಸಮಾಧಾನವಾಯಿತು. ಜ್ಯೋತಿಷಿಯಂತೆ ಈಗ ರಾಮಪ್ಪನ ಭವಿಷ್ಯವನ್ನು ಆಕೆ ಪೂರ್ತಿಯಾಗಿ ಅರಿತುಕೊಂಡಳು. ತನ್ನದೂ ಉದ್ದೇಶ ಸಾಧಿಸುವಂತೆ ಎಚ್ಚರವನ್ನು ವಹಿಸಿ ರಾಮಪ್ಪನ ಮಾತಿಗಾಗಿ ಸರ್ವಾಂತರಂಗವನ್ನಾಹದಿಂದ ಸಿದ್ಧಳಾಗಿ ನಿಂತಳು

ರಾಮಪ್ಪ ಮತ್ತೊಮ್ಮೆ ಗಂಟಲನ್ನು ಸರಿಪಡಿಸಿಕೊಂಡ, ಈ ಸಲ ಬಾಯಿಯ ಮೇಲೆ ಕೈಯಾಡಿಸಿ ಒಮ್ಮೆ ಮೀಸೆಯನ್ನೂ ತಿದ್ದಿಕೊಂಡ.

"ಏನ್ ಬೇಕಾಗಿತ್ತೇನು ?"

ಮಾತನಾಡದೆ, ಮುಖ ತಿರುಗಿಸಿದಾಗಲೂ ಗಂಗಿ ಸೆರಗನ್ನು ತಲೆ ತುಂಬ ಎಳೆದುಕೊಂಡಳು.

"ಸೇಡಜಿಯವರು ಅಂಗಡ್ಯಾಗ ಇಲ್ಲ, ಅದಕ್ಕ ಕೇಳ್ತೇನಿ"

"ಎಣ್ಣೆ – ಬೇಕಾಗಿತ್ತರಿ–" ಎನ್ನುತ್ತ ಗಂಗಿ ಹೊರದುವವರಂತೆ ಹೆಜ್ಜೆಯನ್ನೆತ್ತಿದಳು.

"ನಾ ಅಳೆದು ಹಾಕ್ತೀನಿ – ತಗೊಂಡ್ಹೋಗು – ಗಾಣದೆಣ್ಣೆ ಹೌದಲ್ಲೊ ?"

"ಅಲ್ರಿ, ಗಾಸಲೇಟ್ (ಸೀಮೆ ಎಣ್ಣೆ) ಎಣ್ಣಿರಿ–"

"ಇಲ್ಲಿ ತಂದಿಡು ಅದೇನು – ಕಯ್ಯಾಗ – ಚಿ-ಚಿ-ಚಿಮಣಿ ಐತೇನು ?" ಕೊನೆಯ ಎರಡು ಶಬ್ದಗಳನ್ನುಚ್ಚರಿಸುವಾಗ ರಾಮಪ್ಪ ತತ್ತರಿಸಲೇಬೇಕಾಯ್ತು. ಅಷ್ಟರಲ್ಲಿ ಗಂಗಿ ಮುಖ ತಿರುಗಿಸಿ ನಿಂತಿದ್ದಳು – ಈಗ ರಾಮಪ್ಪನ ಕಡೆ. ಸಂಜೆಯ ಹೊಂಬಣ್ಣದಿಂದ ಆಕೆಯ ತುಟಿಗಳ ಮೇಲೆ ಮಿನುಗುತ್ತಿದ್ದ ಮುಗುಳ್ನಗೆ ರಾಮಪ್ಪನ ಪಾಲಿಗೆ ಸಹಿಸ್ಲಾರದಂತಾಯಿತು, ಅದಕಾಗಿಯೆ ಅವನ ನಾಲಿಗೆ ತತ್ತರಿಸಿತು

ಕೊನೆಗೆ ರಾಮಪ್ಪನು ಗಂಗಿಗೆ ಭರವಸೆಯನ್ನು ತಂದುಕೊಡಬೇಕಾಯಿತು. ನೋಡಜಿ ಇಲ್ಲದಾಗ ಉದ್ರಿ ಒಯ್ಯುವುದು ಹೇಗೆ— ಎಂದು ಗಂಗಿ ಹಾಗೆಯೆ ಹೊರಡಲು ನಿಶ್ಚಯಿಸಿದ್ದಳು.

"ಅಹಹ ! ಅಷ್ಟು ನನಗ ತಿಳಿಯೋದಿಲ್ಲಂತೇ ಏನು ? ನೋಡಜಿ ಹ್ಯಾಂಗ ಅದಾನ ಅಂತೀ ? ಉದ್ರಿ ಆಗಲಿ, ರೋಖ ಆಗಲೀ ಗಿರಾಕೀನ್ನ ತಿರುಗಿ ಕಳಿಸಬಾರದು ಅಂತ ನನಗ ಹೇಳಿಕೊಟ್ಟಾನ. ಅಷ್ಟು ಯಿಶ್ವಾಸ ಇಲ್ಲೇನು ನನ್ನ ಮ್ಯಾಗ ನೋಡಜೀದು ?" ಎಂದ.

ಗಂಗಿ ಸೆರಗನ್ನು ತಲೆಯ ಮೇಲೆ ನಾವರಿಸಿಕೊಳ್ಳುತ್ತ 'ಚಿಮಣಿ'ಯನ್ನು ಕೆಳಗಿಟ್ಟಳು. ರಾಮಪ್ಪನು ತನ್ನನ್ನು ದಿಟ್ಟಿಸಿ ನೋಡುವ ಸಮಯವನ್ನು ನಿರೀಕ್ಷಿಸಿ, ಅದೇ ಕ್ಷಣಕ್ಕೆ 'ಚಿಮಣಿ'ಯನ್ನಿಡಲು ಬಾಗಿದಳು. ಸಾವಿರಾರು ವರ್ಷಗಳಾಚೆ ಹಿಂದೆ ಸರಿಯಿತು ಇತಿಹಾಸ ; ಕತೆ ಒಂದೇ, ಕತೆ ಅದೇ ; ಹೆಣ್ಣು, ಗಂಡು. ಆದರೂ ಸಾವಿರಾರು ವರ್ಷಗಳಾಚೆಯ ಕತೆಯಾಯಿತು ; ಯಾಕೆಂದರೆ ಇಲ್ಲಿ

ಯಾವ ನಿರ್ಬಂಧವಿದ್ದಿರಲಿಲ್ಲ. ಗಂಡು-ಹೆಣ್ಣು; ಇಡಿಯ ಜನ್ಮವನ್ನೆ ಒಂದು ವಿಶಿಷ್ಟ ಗಳಿಗೆಗಾಗಿ ಕಾಯುವುದರಲ್ಲಿ ಕಳೆಯುತ್ತಿರಬಹುದೆ? ಬಾಗಿದ ಹೆಣ್ಣಿನ ಮೈಯ ಮುಚ್ಚಿದ ಅಂಗಾಂಗಗಳು ಕಂಡೊಡನೆ ಎದುರಿದ್ದ ಗಂಡು ಸೃಷ್ಟಿಶಕ್ತಿಗೆ ಸಿಲುಕಿ-ಪರವಶವಾಗುವುದು; ಅದೊಂದು ಕ್ಷಣ ಆದರೆ ಆ ಒಂದು ಕ್ಷಣಕ್ಕಾಗಿ ಪ್ರಕೃತಿ-ಪುರುಷರ ಕಣ್ಣು ಮುಚ್ಚಾಲೆ ನಡೆದಂತಿದೆ.

"ಅಯ್ಯ! ಸೇಡಜಿಯವರು ಬಂದಗಿಂದಾರು—" ಗಂಗಿ ತಡವರಿಸಿದಳು.

"ಇನ್ನ ಬಂದೇನು ಮಾಡ್ತಾನ? ಆಂ? ಹಹ; ಇಕ — ನೀ ಬಂದಿಲ್ಲ, ಉದ್ದರಿ ಒಯ್ಯದಿಲ್ಲ. ಆಂ? ಏನ್ಮಾಡ್ತಾನ ಮಾಡ್ಲಿ ಸೇಡಜಿ?"

"ಹಾಂಗ್ಯಾಂಗ್ರಿ—?"

'ಅಂದ್ರ? ಈಮಗ ಸೇಡಜಿಯ ಯಾಪಾರ ಇಂಥಾವರ ಬೆಳೆದದ್ದು ಹ್ಯಾಂಗ? ನಾ ಇಲ್ಲಿ ಅದೀನಿ ಅಂತ? ನಾ ಇದ್ದಿರಲಿಲ್ಲ ಅಂದ್ರ—ಇವ ಉದ್ದರಿಯ ಬೂದಿ ಬಡಕೊಂಡು ಓಡಿ ಹೋಗತಿದ್ದ....ಇಕ—ಇದು ನೋಡು — ಯಾಳೀ ನೋಡಿಕೊಂಡು ಬರತ ಬಾ — ನಾಮಾನ ಒಯ್ಯಾಕ" ಎಂದ.

ಗಂಗಿ ಅವನನ್ನು ನೋಡುತ್ತ ತಲತೂಗಿದಳು, ಆಮೇಲೆ ಹೊರಟಳು

"ಸೇಡಜಿ ಬಂದ ಕಾಣ್ತದ—ಆ ಗಿಡದ ಮರೆಗೆ ತಡೀ, ಅವನ ಅಂಗಡ್ಯಾಗ ಕುಕ್ಕರಿಸಿ ಬರ್ತೀನಿ ನಾ" ಎಂದು ರಾಮಪ್ಪ ಗಂಗಿಗೆ ಸೂಚಿಸಿದ.

"ನಾ ತುಸಾ ದೂರೇ ಇರ್ತೀನ್ರಿ. ಇಬ್ರೂ ಒಂದೇ ಹಾದಿ ಅಂದ್ರ—"

"ಎಲೆ ಇವಳ! ಒಂದೇ ಹಾದಿ ಅಂದ್ರ? ಹೊಂಡಕ ಹೋಗಿ

ಜಳಕ ಮಾಡಬೇಕಾಗೇತಿ—ಅದಕ್ಕ ಆ ಹಾದೀ ಹಿಡೀತೀನಿ. ಅದಕೂ ಸಂಶಯಾನ ?" ಎಂದ.

ಗಂಗಿ ಅಷ್ಟರಲ್ಲಿ ಜಾರಿದಳು.

ಅಹುದು — ಅಂದಿನಿಂದ ಗಂಗಿ ಪೂರ್ತಿಯಾಗಿ ಜಾರಿದಳೆನ್ನಬಹುದು. ರಾಮಪ್ಪನು ಕೊಡುವ ವಸ್ತುಗಳ ಆಸೆಗಾಗಿ ಅವನ ಹೆಣ್ಣಾದಳು ಆಕ, ತನ್ನ ಮೈಯ ಮುಡಿಪನ್ನು ಮಾಡಿದರೆ ವಿನಿಮಯದಿಂದ ಬೇಕಾದ ವಸ್ತುಗಳನ್ನು ದೊರಕಿಸಿಕೊಳ್ಳಬಹುದೆಂದು ಆಕೆ ಅರಿತುಕೊಂಡಳು.

ರಾಮಪ್ಪನ ವಿಚಾರ ಬೇರೆ. ಗುಂಡಣ್ಣನ ಹೆಣ್ಣಾಗಿದ್ದಳಲ್ಲವೆ ಈಕೆ? ಈಗ? ಆ ಗುಂಡಣ್ಣನ ಸೇಡನ್ನು ತೀರಿಸಿದಂತಾಯಿತಲ್ಲವೆ? ಹಹ! ರಾಮಪ್ಪನಿಗೆ ಒಳ್ಳೆಯ ಮೋಜೆನ್ನಿಸುವುದು. ಇಂದಿಲ್ಲ ನಾಳೆ ಸೇಡಜಿ ಅಂಗಡಿಯ ಲೆಕ್ಕವನ್ನು ಹುಡುಕಿ ತೆಗೆದರೆ? ಒಂದು ವೇಳೆ ಎರಡೂ ಕೈಗಳಿಂದ ಗಂಗಿಗೆ ತಾನು ಕೊಡುತ್ತಿರುವುದು ತಿಳಿದು ಬಂದರೆ? ರಾಮಪ್ಪನಿಗೆ ಆ ಬಗ್ಗೆ ಹೆಚ್ಚು ಕಾಳಜಿಯೆ ಇದ್ದಿರಲಿಲ್ಲ. ಸೇಡಜಿಯದಾದರೂ ಸ್ವಂತದ ದುಡ್ಡಿನಿಂದ ಗಳಿಸಿದ್ದಲ್ಲ, ಊರವರನ್ನು ಹಿಂಡಿ ಹಿಸುಕಿ-ತೆಗೆದ ದುಡ್ಡು. ಸರಿ — ತಾನೂ ಆ ಕೆಲಸದಲ್ಲಿ ಸಹಾಯ ಮಾಡಿರುವ. ಆದ್ದರಿಂದ ತನ್ನದೂ ಅದರಲ್ಲಿ ಪಾಲು ಇದ್ದೇ ಇರಬೇಕಲ್ಲವೆ ?

ಈ ವಿಚಾರದಿಂದ ರಾಮಪ್ಪನ ನಡವಳಿಕೆಯಲ್ಲಿಯೆ ಬದಲಾವಣೆಯಾಯಿತು. ತಾನು ಮಾಡುವುದು ಕಳವು ಅಲ್ಲ, ಹಕ್ಕನ್ನು ನಡೆಸುವುದು ಎಂದು ತಿಳಿದುಕೊಂಡ. ಈಗ ಉದ್ದರಿಯನ್ನು ವಸೂಲು ಮಾಡುವಾಗ ತನ್ನ ಹಕ್ಕಿನ ದುಡ್ಡನ್ನು ಬೇಡುವವನಂತೆ ಒಂದು ತರದ ಅಧಿಕಾರದಿಂದ ಬೇಡುತ್ತಿದ್ದ. ಗುಂಡಣ್ಣನ ಮನೆಯಿಂದ ಆಳು ಬಂದಾಗ ಆ ಅಧಿಕಾರದ ದನಿಯಲ್ಲಿಯೆ ಅವನು ಬೈದು ಕಳಿಸಿದ್ದ. ಹಹ! ಈಗ ಬೇಕಾದರೆ—ಗುಂಡಣ್ಣ ಬಂದು ತನ್ನನ್ನು ಬೇಡಿಕೊಳ್ಳಲಿ.

ತಾನು ವಸೂಲಿಯನ್ನು ಸಡಿಲು ಮಾಡುವನು! ಹಾಹಾ! ಹಿಂದಕ್ಕೆ ಗುಂಡಣ್ಣನ ಕೈಯಿಂದ ತಾನು ಸಹಾಯವನ್ನು ಪಡೆಯುತ್ತಿದ್ದ, ಈಗ ತನ್ನ ಕೈಯಿಂದ ಗುಂಡಣ್ಣನಿಗೆ ಸಹಾಯ ಕೊಡಬಲ್ಲ! ಬಂದು ಹೇಳಿ ಕೊಳ್ಳಲಿ ಗುಂಡಣ್ಣ—ಎಂದುಕೊಂಡ. ಆದರೆ ಗುಂಡಣ್ಣ ಬರಲಿಲ್ಲ, ಹೇಳಿಕೊಳ್ಳಲಿಲ್ಲ, ಹೆಂಡತಿ-ಕೆಣಕಿದರೂ ಕೂಡ — "ಆ ಕಳ್ಳನೂಳೇ ಮಗ ರಾಮ್ಯಾ!" ಎಂದು ಹಲ್ಲು ತಿಂದು ನೀರು ಕುಡಿದು ಮಲಗಿದ್ದ.

ಆದರೆ ಗುಂಡಣ್ಣನ ಬದಲು ಆ ಸಂಜೆ ರಘುನಾಥರಾಯರೆ ಸೇಡಜಿಯನ್ನು ಕಂಡಿದ್ದರು. ರಾಯರ ಸಮಕ್ಷದಲ್ಲಿ ಸೇಡಜಿ ರಾಮಪ್ಪ ನಿಗೆ ಛೀ ಹಾಕಿದ್ದ. ರಾಯರು ಹೋದ ಮೇಲೆ "ರಾಮಣ್ಣಾ, ಊರಿಗೆ ಧಣೇರಪಾ ಅವರು. ನೋಡಿ ಮಾತಾಡಬೇಕು" ಎಂದು ಕಣ್ಣು ಮಿಟುಕಿಸಿದ್ದ. ರಾಮಪ್ಪನೂ ನಕ್ಕ. ನಗುವಾಗ ಅವನಿಗೆ ತಾನು ಗಂಗಿಗೆ ಕೊಡುತ್ತಿರುವ ಸಂಗತಿ ನೆನಪಿಗೆ ಬಂದು—ಸೇಡಜಿಯನ್ನು ಮತ್ತೊಮ್ಮೆ ನೋಡಿ—ಗಪಗಹಿಸಿ ನಕ್ಕಿದ್ದ.

ತನ್ನ ಮಾತಿನಲ್ಲಿ ಇಷ್ಟೊಂದು ಹಾಸ್ಯವಿದೆ ಎಂಬ ಉಬ್ಬಿನಿಂದ ಸೇಡಜಿ—"ಊರಿಗೆ ಧಣೇರು-ಅಂದೆ. ಆಂ?" ಎಂದು ತಾನೂ ದನಿಗೂಡಿಸಿದ.

*    *    *

ಸೇಡಜಿ ಕಣ್ಣು ಮಿಟುಕಿಸಿದ್ದು ಅರ್ಥಗರ್ಭಿತವಾಗಿತ್ತು. "ಊರಿಗೆ ಧಣೇರು" ಎಂಬ ಶಬ್ದಗಳೇನೊ ರಾಯರ ಸಂದರ್ಭದಲ್ಲಿ ಗಾದೆಯ ಮಾತಿನಂತಾಗಿದ್ದುವು. ಊರ ಜನರೂ ರಾಯರಲ್ಲಿ ಮುಂಚಿನಿಂದಲೂ ಭಕ್ತಿ ವಿಶ್ವಾಸಗಳನ್ನಿಟ್ಟಿದ್ದರು. ದಿನದಿನಕ್ಕೆ ಮನೆತನದ ಸಂಪತ್ತು ಕರಗುತ್ತ ನಡೆದಿದ್ದನ್ನು ಅರಿತಾಗಲೂ ಜನರಿಗೆ ರಾಯರು ಆದರಣೀಯ ಹಿರಿಯರಾಗಿದ್ದರು. ಸಂಪತ್ತು ಕರಗು ತ್ತಿರುವುದಕ್ಕೆ ರಾಯರ ಚಿರಂಜೀವನೆ ಕಾರಣ, ರಾಯರ ತರುವಾಯ ಊರಿನ ಧಣಿತನ ಆ ಮನೆಯಲ್ಲಿ ಉಳಿಯುವುದಿಲ್ಲ, ಗುಂಡಣ್ಣನನ್ನು

ಕಂಡರೆ ಗೌರವಿಸಬೇಕೆಂಬ ಭಾವನೆಯೆ ಹುಟ್ಟುವುದಿಲ್ಲವಲ್ಲ—ಎಂದು ಜನರು ತಂತಮ್ಮೊಳಗೆ ಆಡಿಕೊಳ್ಳುತ್ತಿದ್ದರು ಆದರೆ ಜನರ ಸದ್ಭಾವನೆಯನ್ನೂ ಹೊಡೆದು ಹಾಕುವಷ್ಟು ರಭಸದಿಂದ ಧಣಿತನ ರಾಯರ ಮನೆಯಿಂದ ಜಾರುತ್ತಿತ್ತು. ಇದಕ್ಕೆ ರಾಯರ ಪ್ರಕೃತಿಯೂ ಪ್ರೇರಕವಾಯಿತು ಮಗನ ನಡೆವಳಿಕೆ, ತಂಗಿಯ ಮರಣ, ಮಗಳ ವೈಧವ್ಯ—ಇವು ಒಂದೊಂದಾಗಿ ರಾಯರಿಗೆ ಮುಪ್ಪಿನ ಒಂದು ಹಂತಕ್ಕೆ ಮುಟ್ಟಿಸಿದ್ದವು. ಈಗಂತೂ ರಾಯರು ಜಗತ್ತಿನಲ್ಲಿ ಇದ್ದೂ ಇಲ್ಲದಂತೆಯೆ ವ್ಯವಹರಿಸುತ್ತಿದ್ದರು. ಮನೆಯಲ್ಲಿ ಯಾರೊಡನೆಯೂ ಮಾತುಕತೆಗಳಿಲ್ಲ, ಮಾತನ್ನಾಡುವುದಾದರೆ ಯಾವಾಗಲಾದರೊಮ್ಮೆ ರಾಮಣ್ಣನ ಕೂಡ ಮಾತ್ರ ಸರಿಯುವ ಆಯುಷ್ಯವನ್ನು ಎಣಿಸುತ್ತ ದಾರಿ ಕಾಯುತ್ತಿರವರೇನೊ ಎನ್ನುವಂತೆ—ಸದಾ ಕೈ ಬೆರಳುಗಳಿಂದ ಎಣಿಕೆ ಹಾಕುತ್ತಿರುವರು, ಗೊಣಗುತ್ತಿರುವರು. ಜಪ ಇಲ್ಲವೆ ಧ್ಯಾನದಲ್ಲಿಯೆ ಸದಾ ಆಸಕ್ತರಾಗಿರುವರೆಂದು ಭಾವಿಸಿ ಮಿಕ್ಕವರೂ ಅವರನ್ನು ಮಾತನಾಡಿಸುತ್ತಿರಲಿಲ್ಲ. ಮಧ್ಯಾಹ್ನದ ಊಟವಾಗಿ ಮಲಗಿ ಎದ್ದರೆಂದರೆ ಹೊರಗೆ ಕಟ್ಟೆಗೆ ಬಂದು ಕುಳಿತುಕೊಳ್ಳುವರು, ದೂರ ಒಂದು ಗಿಡದ ಕೆಳಗೆ ವರನ್ಯಾ ಕುಳಿತಿರುವ. ಅವನು ರಾಯರನ್ನೆ ದಿಟ್ಟಿಸುತ್ತ ಕುಳಿತಿರುವ. ರಾಯರ ದೃಷ್ಟಿ ಮಾತ್ರ ಯಾವಾಗಲೂ ದೂರದಲ್ಲಿಯೆ ಇದ್ದಂತೆ ಹತ್ತಿರದವರಿಗೆ ಶೂನ್ಯವಾಗಿ ಕಾಣುವುದು. ಒಮ್ಮೊಮ್ಮೆ ಎಚ್ಚರಿಕೆ ಬಂದಂತಾಗಿ ವಿಚಾರಕ್ಕೆ ಸಿಲುಕಿ—ಏಳುವರು ಏನೇನೊ ಆಲೋಚನೆಗಳು ತಲೆ ಎತ್ತುವವು .. ಗುಂಡ್ಯಾನಿಗೆ ಕಲಿಸಿದ್ದರ ಫಲ ಆಗ್ತಿತ್ತೊ ಏನೋ ? .. ಹುಡುಗ ಕೆಟ್ಟವರ ಸಹವಾಸಕ್ಕ ಬಿದ್ದ . . ಮಗನ ವಿಚಾರವೆ ಬೇಡ ಎನ್ನುವಂತೆ ಉಸಿರಿಡುವರು, ಆಗ ಮೊಮ್ಮಗನ ವಿಚಾರ ಬರುವುದು.. .ರಾಗ್ಯಾಗ ಮಾತ್ರ ಕಲಿಸಬೇಕು ಸುಮ್ಮ ದೊಡ್ಡೂರಿಗೇ ಕಳಿಸಿಕೊಡ್ಬೇಕು....ಅಲ್ಲಿ—ಶಹರದಾಗ ಒಂದು ಮನೆ

ಮಾಡಿ ಸುಬ್ಬೀನ್ನೂ ರಾಗ್ಯಾನ್ನೂ ಅಲ್ಲಿಯೆ ಇಟ್ಟುಬಿಡಬೇಕು... ಅಹುದು—ಸುಬ್ಬೀದು ಇದೊಂದು ಬಾಣಂತಿತನ ಮುಗಿಯಲಿ—ಆ ಮ್ಯಾಲೆ ಹಾಂಗೇ ಮಾಡಿದ್ರಾಯಿತು.. ಗುಂಡ್ಯಾಗೇನು ಹೆಂಡತಿ ಮಕ್ಕಳು ಬೇಕಾಗಿರೋದು ಅಷ್ಟರಾಗೇ ಇದೆ.. ರಾಯರು ಮೈಲಿಗೆಯಾದಂತೆ ಮೈಯನ್ನು ನಡುಗಿಸುವರು....ಎಂಥಾ ಅಪಲಕ್ಷಣ ಹೊರಟ ಈ ಗುಂಡಾ! ಶೂದ್ರರ ಸಮಮಾನಕ್ಕೂ ಹೇಸಿಕಿ ಇಲ್ಲಲ್ಲ? ಶೂದ್ರಯಾಕ?. ರಾಯರ ದೃಷ್ಟಿ ಪರಸ್ಯಾನತ್ತ ಹೊರಳುವುದು, ರಾಯರು ತನ್ನನ್ನು ನೋಡಿದರೆಂಬುದಕ್ಕೆ ಅವನು ಕೃತಕೃತ್ಯನಾದವನಂತೆ ಮುಖವನ್ನರಳಿಸುವನು . ರಂಡೇಗಂಡ! ಎಷ್ಟು ಹಚ್ಚಿಕೊಂಡು ಇದ್ದಾನ ನಮ್ಮನ್ನ!.. ಈ ಅಪಲಕ್ಷಣ ಗುಂಡ್ಯಾ ಅವನ ಮನೀನ್ನೂ ಹಾಳುಮಾಡಿದ... ಮತ್ತೆ ರಾಯರು ಉಸಿರಿಡುವರು.. ಅಂತೂ ತಮ್ಮನ್ನ ಹಚ್ಚಿಕೊಂಡು ಇದ್ದವ ಅಂದ್ರ ಈ ಪರಸ್ಯಾ ಒಬ್ಬ.... ಅದ್ಯಾಕ?..ರಾಯರ ಮುಖದಲ್ಲಿ ಸಮಾಧಾನದ ಕಳೆ ಮೂಡುವುದು.. ಅದ್ಯಾಕ? ಆ ಹುಡುಗ ಶಾಮಣ್ಣ ಒಬ್ಬ ನನ್ನ ಹಚ್ಚಿಕೊಂಡಿದ್ದಾನ... ಶಾಮಣ್ಣನ ವಿಚಾರ ಬಂದೊಡನೆ ರಾಯರ ಮುಖದಲ್ಲಿ ಒಂದು ತರದ ಹೆದರಿಕೆಯು, ಒಂದು ತರದ ಆಸಕ್ತತೆಯು ಕಳೆ ಮೂಡುವುದು... ಹುಡುಗ ಒಳ್ಳೆಯವ—ಆದರೂ ಹೇಳಲಿಕ್ಕೆ ಬರೋದಿಲ್ಲ ಸಣ್ಣವ ಇದ್ದಾನ, ಶಾಂತಿಯದೂ ಅವನ್ನೂ ಸಮಮಾನ ಬೆಳೀತಾ ನಡೆದದ... ಆಗ ಮಗಳಿಗಾಗಿ ರಾಯರ ಮುಖದಲ್ಲಿ ಸಿಟ್ಟು ಮೋಡದಂತೆ ಒಂದು ಕ್ಷಣ ಕಪ್ಪುಗಡೆದು ಸುಳಿಯುವುದು. ಮಗಳು ವಿಧವೆಯಾದದ್ದು ಆಕೆಯ ತಪ್ಪು ಎಂದು ಮೊದಲು ತಿಳಿದ ರಾಯರು ಬರಬರುತ್ತ ತಮಗೆ ತೊಂದರೆಯನ್ನು ಹೆಚ್ಚಿಸಬೇಕೆಂದು ಬುದ್ಧಿಪೂರ್ವಕವಾಗಿ ಮಗಳು ವಿಧವೆಯಾದಳು ಎನ್ನುವಂತೆ ಆಕೆಯನ್ನು ನೆನೆದಾಗ ಸಂತಪಿಸುತ್ತಿದ್ದರು....ಆ ಸಂತಪ್ತ ಹೃದಯದಿಂದ ಅವರು ಮಗಳ ಬಗ್ಗೆಯೆ ಹೆಚ್ಚು ಅವಿಶ್ವಾಸವನ್ನು ತಳೆಯುತ್ತಿದ್ದರು .... ಶಾಮಣ್ಣ ಭಲೋ

ಹುಡುಗ, ಖರೆ ಆದರೇನು? ಹೆಂಗಸರ ಹೆಸವಾಸ ಕೆಟ್ಟದು ಅನ್ನೋದು ತಿಳಿದಿಲ್ಲ ಆ ಹುಡುಗನಿಗೆ. ಈ ಶಾಂತಿ ಯಾವಾಗಲೂ ಅವನ ಸುತ್ತಮುತ್ತಲ ಸುಳಿದಾಡತಾಳ. ಏನಾಗ್ತದೊ ಏನ್ಕಣ್ಣೊ ? ....ಕೆಟ್ಟ ವಿಚಾರವನ್ನು ಹೊರದೂಡುವವರಂತೆ ಬಲವಾಗಿ ಉಸಿರನ್ನು ಬಿಡುತ್ತಿದ್ದರು. ಆದರೇನು ? ವಿಚಾರ ಅವರನ್ನು ಬಿಡುತ್ತಿರಲಿಲ್ಲ.... ಏನಾಗ್ತದೊ ಏನ್ಕಣ್ಣೊ ? ಏನೇ ಆಗಲಿ, ಅಷ್ಟರಾಗ ನನ್ನ ಕಣ್ಣು ಮುಚ್ಚಿದರ ಸಾಕು—ಎಂದುಕೊಳ್ಳುವರು. ರಾಮಣ್ಣನನ್ನ ನೆನೆವಾಗ ಒಮ್ಮೊಮ್ಮೆ ಅವನು ತಮ್ಮ ಮಗಳನ್ನು ಮದುವೆಯಾದರೂ ಒಳ್ಳೆಯದೆ ಎಂದೆನ್ನಿಸುವುದು, ಆಗ ತಟ್ಟನೆ ಹಳಹಳಿಸುವರು—ಛೆ! ಎಂತಹ ಕಾಲ ಬಂದಿತು, ಅಂತೀನಿ ನನ್ನ ಮಗಳು ವಿಧವಾ. ಆಕೆಯ ಮದುವೆಯ ವಿಚಾರ ತಡೆದುಕೋತೀನಿ ಅಲ್ಲ ನಾನು ? ಥೂ ! ಬುದ್ಧಿ ಭ್ರಂಶ ಆಯಿತು ನನಗ. ಲಗೂನೆ ಕಣ್ಣುಮುಚ್ಚುವಷ್ಟಾದರೂ ಪುಣ್ಯದ ಶಿಲ್ಕು ಉಳಿದಿವೆಯೊ ಇಲ್ಲೊ !

ಅದೇ ಅದೇ ವಿಚಾರದಿಂದ ರಾಯರಿಗೆ ತಾವು ಇನ್ನು ಬಹು ದಿವಸ ಬದುಕಲಾರರು ಎಂಬ ಭಾವನೆ ತಲೆಯನ್ನು ಹಿಡಿಯಿತು. ಆಗ ನಿಜವಾಗಿಯೂ ಗಾಬರಿಗೊಳ್ಳುವರು. ಮುಂದೆ ಗತಿ ? ತಮ್ಮ ತರುವಾಯ ಮನೆಯ ವ್ಯವಸ್ಥೆ ಏನು ? ಸೊಸೆ-ಮೊಮ್ಮಕ್ಕಳು—ಸುಬ್ಬಕ್ಕನಿಗೆ ಎರಡನೆಯದು ಹೆಣ್ಣು ಆಗಿತ್ತು—ಇವರಿಗೆ ಆಧಾರ ಎಲ್ಲಿದೆ ? .... ಗುಂಡ್ಯಾನ ಮ್ಯಾಲೆ ವಿಶ್ವಾಸಿಟ್ಟು ಉಪಯೋಗಿಲ್ಲ. ಏನಾದ್ರೂ ಮನೆಯ ಬಗ್ಗೆ, ಸಾಲದ ಬಗ್ಗೆ ವ್ಯವಸ್ಥೆ ಮಾಡಲೇಬೇಕು. ಕೂತ ಕೂತಲ್ಲೆ ನನ್ನ ಜೀವ ಹೋದರ—ರಾಯರು ವಿಚಾರವನ್ನು ತಡೆದು ಎದುರಿಗಿದ್ದ ಪರಸ್ಯಾನನ್ನು ನೋಡುವರು....ಪಾಪ! ನಾ ಹೋದ ಮ್ಯಾಲೆ ಪರಸ್ಯಾನ ಗತಿ ಏನು ?—ಎಂಬ ವಿಚಾರವೂ ಸುಳಿಯುವುದು....ಅಂತಹ ದಿನಗಳಲ್ಲಿ ಸಂಜೆಗೆ ಪರಸ್ಯಾನಿಗೆ ತಮ್ಮೆದುರಿನಲ್ಲಿಯೆ ಗಿಡದ ಕೆಳಗೆ ಹೊಟ್ಟೆ ತುಂಬ ಊಟವನ್ನು ಬಡಿಸ ಹೇಳು

ತ್ತಿದ್ದರು. ಮೊದಮೊದಲು ಪರಸ್ಯಾನಿಗೆ ಗಂಟಲಲ್ಲಿ ತುತ್ತು ಇಳಿಯು ತ್ತಿರಲಿಲ್ಲ. ಧಣೇರು ರಾತ್ರಿಯೂಟವನ್ನು ಮಾಡುತ್ತಿರಲಿಲ್ಲ ಎಂಬು ದನ್ನು ಅವನು ಅರಿತಿದ್ದ. ಆದರೂ ತಾನು ಉಣ್ಣುವುದನ್ನು ನೋಡಿ ದರೆ ಧಣಿಯರಿಗೆ ಸಂತೋಷ ಎಂಬುದನ್ನು ಅರಿತ ಅವನು ಒಂದು ತರದ ನಿರ್ಮಮಬುದ್ಧಿಯಿಂದ ಉಣ್ಣುತ್ತಿದ್ದ....ಅದನ್ನು ನೋಡಿ ರಾಯರಿಗೆ ಸಂತೋಷ. ಆ ಕ್ಷಣದ ಮಟ್ಟಿಗೆ ತಮ್ಮ ಜೀವ ಹೋದರೆ ತಾವು ಎಲ್ಲವನ್ನೂ ಮಾಡಿ ಕೃತಕೃತ್ಯರಾದವರು ಎಂಬ ಸಮಾಧಾನದ ಕಳೆ ಅವರ ಮುಖವನ್ನು ಬೆಳಗುತ್ತಿತ್ತು.

ತಮ್ಮ ಕಾಲ ಸಮೀಪಿಸಿದೆ ಎಂಬ ವಿಚಾರ ಮಾತ್ರ ದಿನಗಳೆದಂತೆ ರಾಯರನ್ನು ಗಾಬರಿಗೊಳಿಸುತ್ತಲಿತ್ತು. ಯಾರನ್ನು ನೋಡಿದರೂ ಅದೇ ವಿಚಾರ, ನಾನು ಹೋದರೆ ಇವರ ಗತಿ-ಏನು ?—ಎಂದು. ಕೇವಲ ರಾಮಣ್ಣನನ್ನು ನೋಡಿದಾಗೊಮ್ಮೆ ತುಸು ಸಮಾಧಾನ. ಆದರೇನು ? ದಿನನಿತ್ಯ, ತಾನು-ತಾನುಗಟ್ಟಲೆ ರಾಮಣ್ಣ ತಮ್ಮ ಮನೆಯಲ್ಲಿ ವೇಳೆಯನ್ನು ಕಳೆದರೂ—ಅವನು ಮನೆಯವನಲ್ಲವಲ್ಲ ? ಹೀಗೆನ್ನಿಸಿದೊಡನೆ ತಲೆ ಎತ್ತಬೇಕೆನ್ನುವ ಸಮಾಧಾನವೂ ಮರೆ ಯಾಗುವುದು ಒಮ್ಮೊಮ್ಮೆ ರಾಮಣ್ಣನನ್ನು ಮಾತನಾಡಿಸಬೇಕೆಂದು ಎನ್ನಿಸುವುದು. ಕೆಲವು ಸಲ ಮಾತನ್ನು ಪ್ರಾರಂಭಿಸಿದರೂ ಮನಸ್ಸಿ ನಲ್ಲಿದ್ದ ವಿಚಾರವನ್ನು ಹೇಗೆ ಹೇಳಬೇಕೆಂಬುದು ಹೊಳೆಯದೆ ಅವಸರ ಅವಸರವಾಗಿ ಹೋಗಿ ಬಿಡುತ್ತಿದ್ದರು.

ಆದರ ಇತ್ತಿತ್ತಲಾಗಿ ಪರಿಸ್ಥಿತಿ ಬಹಳೇ ಹದಗೆಟ್ಟಿತ್ತು. ಸುಬ್ಬಕ್ಕನ ಎರಡನಯ ಕೂಸು ಇನ್ನೂ ಕೈ ಬಿಟ್ಟಿರಲಿಲ್ಲ. ಆಕೆಗೆ ಮನೆಗೆಲಸ ನೀಗುತ್ತಿರಲಿಲ್ಲ. ಮಗಳ ಅಡಿಗೆ ತಮಗೆ ನಡೆಯು ತ್ತಿರಲಿಲ್ಲ. ಮೊಮ್ಮಗನಿಗೆ ೫ ವರ್ಷಗಳಾಗಿವೆ. ಅವನ ಸಾಲೆಯ ಬಗ್ಗೆ ವ್ಯವಸ್ಥೆಯಾಗಬೇಕು. ತಾವು ಮಾಡದಿದ್ದರೆ ಆಗುವಂತಿಲ್ಲ. ಯಾಕೆಂದರೆ ಗುಂಡಣ್ಣ ಇತ್ತೀಚೆಗೆ ತೀರ ಅಂದಾದುಂದಿಗೆ ಇಳಿದಿದ್ದಾನೆ.

ಜಿಲ್ಲಾ ಲೋಕಲ್ ಬೋರ್ಡಿನ ಚುನಾವಣೆಯಲ್ಲಿ ಹುರಿಯಾಳಾಗುವನಂತೆ! ಅಂದರೇನು? ಯಾರಿಗೆಬೇಕು? ಅದರ ಪ್ರಯೋಜನವೇನು? ಅವನಿಗಿದಿರಾಗಿ ನೆರೆಯೂರಿನ ಸೆಟ್ಟಿಯೊಬ್ಬ. ಒಟ್ಟು ವೈರತ್ವವನ್ನು ಕಟ್ಟಿಕೊಳ್ಳುವ ದುರ್ಬುದ್ಧಿ, ಕೆಟ್ಟ ಕಾಲ .... ರಾಯರು ಹತಾಶರಾದಂತಾದರು. ಒಂದು ದಿನ ಸಾಯಂಕಾಲ ಗುಡಿಗೆ ಹೋಗಿದ್ದವರು ಅಲ್ಲಿಯೆ ಕುಳಿತುಬಿಟ್ಟರು. ಸಂಸಾರ ಸಾಕಾದಂತಾಯಿತು. ವಿರಕ್ತಿಗಿಂತ ಔದಾಸೀನ್ಯ ಹೆಚ್ಚಿತ್ತು. ಕಾಲ್ಗಳಲ್ಲಿ ಅಲ್ಲಿಂದ ಏಳಲಾರದ ದುರ್ಬಲತೆ ಬಂದಿತ್ತು. ಹೊದ್ದುಕೊಂಡ ಧೋತರವನ್ನು ಸೊಂಟಕ್ಕೂ ಮೊಳಕಾಲ್ಗಳಿಗೂ ಸುತ್ತಿ, ಅಂಗೈಗಳನ್ನು ಮುಚ್ಚಿ ಗಂಡಸ್ಥಲಕ್ಕೆ ಒತ್ತಿ ಹಿಡಿದುಕೊಂಡು ಶೂನ್ಯದೃಷ್ಟಿಯಿಂದ ಗುಡಿಯ ಹೊರಗಿನ ಕಟ್ಟೆಯ ಮೇಲೆ ಕುಳಿತಿದ್ದರು. ಹೊಂಡದಲ್ಲಿ ಕೈಕಾಲ್ಗಳನ್ನು ತೊಳೆದುಕೊಂಡು ಮನೆಗೆ ಹೊರಟ ಶಾಮಣ್ಣ ಅವರನ್ನು ನೋಡಿದ, ಗುಡಿಗೆ ಬಂದ; ರಾಯರಿಗೆ ಅವನು ಬಂದುದರ ಎಚ್ಚರವೆ ಇದ್ದಂತಿರಲಿಲ್ಲ, ಶಾಮಣ್ಣ ದೇವರಿಗೆ ಕೈಮುಗಿದು, ಪ್ರದಕ್ಷಿಣೆ ಹಾಕಿ, ಸದ್ದಿಲ್ಲದೆ ಬಂದು ಅವರ ಇದಿರಾಗಿ ಕುಳಿತ. ಒಮ್ಮೆಲೆ ರಾಯರಿಗೆ ಎಚ್ಚರವಾದಂತಾಯಿತು. ಎದುರಿಗಿದ್ದವರು ಯಾರು ಎಂಬವರಂತೆ ಒಂದು ಕ್ಷಣ ನೋಡುವಷ್ಟರಲ್ಲಿ ಶಾಮಣ್ಣನ ಅರಿವಾಯಿತು. ಇಂದಿನವರೆಗೆ ಅವರನ್ನು ತಡೆದಿದ್ದ ನಿರ್ಬಂಧಗಳೆಲ್ಲ ಒಮ್ಮೆಲೆ ಕಳಚಿ ಬಿದ್ದುವೆಂಬಂತೆ ಸುತ್ತಿದ ಧೋತರವನ್ನು ಬಿಚ್ಚಿ ಮೈ ಸಡಿಲಿಸಿ ಕುಳಿತರು. ಇದು ಯೋಗಾಯೋಗ, ತಾನಾಗಿಯೆ ಬಂದಿದೆ — ಎಂಬ ವಿಚಾರದಿಂದ ಧೈರ್ಯವನ್ನು ತಂದುಕೊಂಡರು.

"ಯಾಕೊ, ಶಾಮಣ್ಣಾ! ಗುಡಿಯ ಕಡೆ ಬಂದಿ?"

"ಯಾವ ಯಾವಾಗಲಾದರೂ ಬರ್‍ತಿರ್‍ತೀನಿ, ರಾಯರ" ರಾಯರ ಮಾತಿನ ಸುಳಿವನ್ನು ತಿಳಿದು ಶಾಮಣ್ಣ ನಗುತ್ತಲೆ ಹೇಳಿದ.

"ನಿನಗೂ ಬೇಡಿಕೊಳ್ಳೋದದ ಅನ್ನು, ಅಂ? ಹಹ!"

"ನನಗೆಂತಹ ಬೇಡಿಕೊಳ್ಳೋದು, ರಾಯರ? ಇದ್ದದ್ದು ಕಳೆದಿಲ್ಲ, ಇಲ್ಲದ್ದು ತಿಳಿದಿಲ್ಲ" ಒಂದು ಕ್ಷಣ ರಾಯರ ಬಾಯಿ ತೆರೆದದ್ದು ಹಾಗೇ ಉಳಿಯಿತು ; ಕೂಡಲೆ ಸುಧಾರಿಸಿಕೊಂಡರು.

"ಶಾಮಣ್ಣಾ, ಒಮ್ಮೊಮ್ಮೆ ನಿನ್ನ ಮಾತೇ ತಿಳಿಯೋದಿಲ್ಲ ನೋಡು."

"ತಿಳೀಲಾರಧಾಂಗ ಮಾತಾಡಿದ್ದರೆ ತಪ್ಪು ನನ್ನದು, ರಾಯರ. ಏನೊ, ಹೀಂಗೇ ಹೊರಟಿದ್ದೆ, ನಿಮ್ಮನ್ನು ನೋಡಿದೆ, ಬಂದೆ. ನೀವು ಯಾವುದೊ ವಿಚಾರದಾಗಿದ್ದಿರಿ ಕಾಣಸ್ತದ, ನಾನು ಬಂದು ತ್ರಾಸ ಕೊಟ್ಟೆ ಹಾಂಗ ಆಯ್ತೇನೊ"

"ಶಾಮಣ್ಣಾ, ಬಂದಿ, ಬಹಳ ಛಲೋ ಆಯ್ತು. ನಾನು ವಿಚಾರಮಾಡತಿದ್ದೆ, ಬಹಳ ದಿವಸದಿಂದ ಅದೇ ವಿಚಾರದೊಳಗ ಇದ್ದೆ ; ನಿನಗ ಹೇಳ್ಬೇಕು ಹೇಳ್ಬೇಕು ಅಂದ್ರ ಧೈರ್ಯ ಆಗಿದ್ದಿಲ್ಲ. ಈಗ ಬಂದಿ, ಬಹಳ ಛಲೋ ಆಯ್ತು"

"ನನ್ನಿಂದ ಏನು ಸಹಾಯ ಆಗತಿದ್ದರೂ—"

"ನೀ ಹೇಳೋ ಕಾರಣಾನೇ ಇಲ್ಲೊ, ಶಾಮಣ್ಣಾ. ಯಾವ ದಿನ ನಿನ್ನ ನೋಡಿದೆ, ಆಹೊತ್ತೇ ಗೊತ್ತು ಮಾಡಿಬಿಟ್ಟೆ, ಈ ಹುಡುಗ ನಮ್ಮವನೆ ಅಂತ—"

"ಅಷ್ಟು ಯೋಗ್ಯತಾ ನನ್ನಲ್ಲಿ—"

"ಇಲ್ಲಿ ನೋಡು ಶಾಮಣ್ಣಾ, ನಡನಡುವೆ ಮಾತಾಡಬೇಡ. ಮುದುಕರಿಗೆ ತಮ್ಮ ಮಾತು ಹೇಳೋ ಅವಸರ ಹೆಚ್ಚು. ಯಾಕ, ಗೊತ್ತಿದೆ ಏನು? ಮ್ಯಾಲೆ ಕರೆಯೋದರಾಗ ಮಾತನ್ನು ಮುಗಿಸಬೇಕು ಅಂತ. ತಿಳೀತೇನು? ಈಗ ನಡನಡುವೆ ಮಾತಾಡಬ್ಯಾಡ. ಇಷ್ಟರಾಗೇ ಏನು ಹೇಳಬೇಕಂಬೋದು ಮಸಮುಸುಕೆ ಆಗಲಿಕ್ಕೆ ಹತ್ತೇದ, ನೀ ಕೇಳು, ಬಿಡು. ನನಗ ಹೇಳೋದನ್ನ ಹೇಳತೀನಿ, ನಡುವೆ ಕಂಯ್ ಅನ್ನಬ್ಯಾಡ. ನನ್ನ ಮಾತು ಮುಗಿದ ಮ್ಯಾಲೆ

ಸಹಿತ ಕಂಯ್ ಅನ್ನದೆ ಎದ್ದು ಹೋಗು. ನಿನ್ನ ಉತ್ತರ ನನಗ ಬೇಕಾಗಿಲ್ಲ. ಹೇಳಬೇಕು ನಿನಗ ಅಂತ ಬಹಾಳ ದಿವಸ ಇತ್ತು ಮನಸಿನಾಗ, ಈಗ ಹೇಳ್ತೀನಿ, ಮನಸ್ಸು ಹಗುರಾಗ್ತದ, ಮುಂದೆ ಯಾವಾಗ ಸತ್ತರೂ ಅಡ್ಡಿ ಇಲ್ಲ."

ಶಾಮಣ್ಣ ಕೇಳಿದ. ರಾಯರು ಬಯಸಿದಂತೆ ಶಾಂತನಾಗಿಯೆ ಕುಳಿತು ಕೇಳಿದ. ಆದರೆ ಮೊದಮೊದಲು ಹೊರಗೆ ಶಾಂತನಿದ್ದರೂ ಒಳಗೆ ಕೋಲಾಹಲ ನಡೆದಿತ್ತು. ಇಷ್ಟೊಂದು ಹಟದಿಂದ ಯಾವ ಮಾತನ್ನು ಹೇಳುತ್ತಿರಬಹುದು ರಾಯರು? ಈ ರೀತಿ ಗಾಂಭೀರ್ಯದ ಮುಖಮುದ್ರೆ ಇದೆ, ಏನಾದರೂ ರಹಸ್ಯದ, ಮಹತ್ತ್ವದ ಮಾತು ಇರಬಹುದೆ? ಅಥವಾ–ರಾಯರಿಗೆ ಹೊಸತು ಏನಾದರೂ ಆಪತ್ತು ಒದಗಿದೆಯೆ? ಇಲ್ಲವೆ–ಶಾಮಣ್ಣನಿಗೆ ಗೊತ್ತಿದ್ದಿತು–ಸಾಲದ ಭಾರದಿಂದ ಪೂರ್ತಿಯಾಗಿ ಹಣ್ಣಾಗಿರುವರೆ? ಇಲ್ಲವೆ—ಇದೂ ಗೊತ್ತಿದ್ದಿತು ಶಾಮಣ್ಣನಿಗೆ—ಗುಂಡಣ್ಣ ಯಾವದಾದರೊಂದು ಹೊಸ ಪೇಚಿನಲ್ಲಿ ಎಲ್ಲರನ್ನೂ ಸಿಕ್ಕಿಸಿರುವನೆ? ಶಾಮಣ್ಣನು ಮುಖ್ಯ ಸಂಶಯವನ್ನು ಕೊನೆಯವರೆಗೂ ತಡೆದಿಟ್ಟಿದ್ದನು. ಆ ಬಗ್ಗೆ ಇರಲಿಲ್ಲ ರಾಯರ ಮಾತು, ಎಂದು ಅವನ ನಿರೀಕ್ಷೆ ಯಾರಿಗೆ ಗೊತ್ತು? ಪ್ರಾರಂಭದ ವಾಕ್ಯಗಳಿಂದ ಶಾಮಣ್ಣನಿಗೆ ಯಾವ ಸುಳಿವೂ ಹತ್ತಲಿಲ್ಲ ಅದಕ್ಕಾಗಿ ಕೊನೆಗೆ ಮುಖ್ಯ ಸಂಶಯವನ್ನೂ ಕೇಳಿಕೊಳ್ಳಬೇಕಾಯಿತು ಇರಬಹುದೆ? ತನ್ನ ಮತ್ತು ಶಾಂತಳ ಸಹವಾಸದ ಬಗ್ಗೆ ಏನಾದರೂ ಲೋಕಾಪವಾದ ಎದ್ದಿರಬಹುದೆ? ಅಥವಾ–ಶಾಮಣ್ಣ ಒಳಗಿಂದೊಳಗೆಯೆ ಉಸಿರಿಟ್ಟ. "ನಾಯೇನು ಇನ್ನು ಭಾಳ ದಿನ ಬದುಕೋದಿಲ್ಲ" ಎಂಬ ರಾಯರ ಮಾತು ಅವನ ಲಕ್ಷ್ಯಕ್ಕೆ ಬಂದಿತು. ಪಾಪ! ಹಣ್ಣಾಗಿರುವರು! ಒಟ್ಟು ಮನಸ್ಸಿನಲ್ಲಿದ್ದುದನ್ನೆಲ್ಲ ಒಬ್ಬರ ಎದುರು ತೋಡಿಕೊಳ್ಳಬೇಕಾಗಿದೆ, ಸುಮ್ಮಸುಮ್ಮನೆ ನಾನು ಹೆದರಿದ್ದೆ, ಎಂದುಕೊಂಡ ಒಳಗಿಂದೊಳಗೆ.

ರಾಯರ ವಾಗ್ಝರಿ ಹಾಗೇ ಸಾಗಿತು. ಮಗನ ದುರ್ಗುಣ,

ಸೊಸೆ-ಮೊಮ್ಮಕ್ಕಳ ಪರಿಸ್ಥಿತಿ ಸಾಲದ ಭಾರ, ಮನೆತನದ ಗೌರವದ ರಕ್ಷಣ, ತಮ್ಮ ಪೂರ್ವಜರು ಎಂತಹ ಮಹಾಪುರುಷರಿದ್ದರೆಂಬ ಕತೆ-ಸಾಗಿತು, ಹಾಗೇ ಸಾಗಿತು ರಾಯರ ವಾಕ್‌ಪ್ರವಾಹ ಮನುಷ್ಯನ ಆಸೆ-ಆಕಾಂಕ್ಷೆ, ಸಂಪ್ರದಾಯ-ಸಂಪತ್ತು, ಶಕ್ತಿ-ಸುಖೋಪಭೋಗ-ಇವುಗಳ ಮಹಾಭಾರತದಂತೆ ಸಾಗಿತು ರಾಯರಕತೆ.

"ಎಂಥೆಂಥಾ ಪಾಪ ಮಾಡಿದ್ದೆನೊ! ಪ್ಯಾಲಿ ಮಗಳ ದೈಥಪ್ಯ ದ್ದೊಂದು ದುರ್ದೈವ ಗಂಡನ ಮನೆಗೆ ಹೋಗೋಹಾಂಗಿಲ್ಲ, ಈ ಮನೀ ವಳಗ ಯಾರು ನೋಡಬೇಕು ಅವಳನ್ನ ?"

ಶಾಮಣ್ಣನ ಬಾಯಿಗೆ ಉತ್ತರ ಬಂದಿತ್ತು. ಆದರೆ ಒಂದು ಶಬ್ದವನ್ನೂ ತಾನು ಆಡಬಾರದೆಂದು ರಾಯರು ಹಟದಿಂದ ಹೇಳಿರಲಿಲ್ಲವೆ? ಅದಕಾಗಿ ತಡೆದ ಬಹಳೊತ್ತು ತಾವು ಸುಮ್ಮನಿದ್ದರೆ ಶಾಮಣ್ಣ ಏನಾದರೂ ಮಾತಾಡಬಹುದೆಂಬ ಹೆದರಿಕೆಯಿಂದಲೊ ಏನೊ ಎನ್ನುವಂತೆ ತಟ್ಟನೆ ರಾಯರು ಮಾತನ್ನು ಮುಂದರಿಸಿದರು

"ಯಾರು ನೋಡಬೇಕು ಅವಳನ್ನ-ಅಂತೀನಿ. ಹಂ-ಮುದುಕ ಆದೆ. ಬೇಕಾದರೆ ನನಗ ಹುಚ್ಚೀ ಹಿಡೀತನ್ನು, ಬೇಕಾದರೆ ನಾ ಸುಧಾರಿಸಿದವ ಅನ್ನು, ಒಂದು ಮಾತು ಹೇಳ್ತೀನಿ ನಿನಗ ಆಕೀನ್ನ ನಿನಗ ಒಪ್ಪಿಸ್ತೀನಿ. ಕುಡುಗೋಲು, ಕುಂಬಳಕಾಯಿ—ಎರಡನ್ನೂ ನಿನ್ನ ಕೈಯಾಗ ಇಟ್ಟೀನಿ-ಬೇಕಾದ ಹಾದಿ ನೀನು ಹಿಡಿಯಬಹುದು. ಆದರೆ-ನನ್ನ ಸೊಸೆ-ಮಕ್ಕಳು ಗತಿಗೇಡಾಗಲಾರಧಾಂಗ ನೋಡಿದಿ ಅಂದ್ರ-ಮುಂದಿನ ಜನ್ಮದಾಗ-ಹಂ-ಹೇಳಿದ್ದೇನಲ್ಲ ಏನೂ ಮಾತಾಡ ಬ್ಯಾಡ ಅಂತ" — ಎಂದು ಶಾಮಣ್ಣ ತಲೆ ಅಲ್ಲಾಡಿಸುವುದನ್ನು ಕಂಡು ನುಡಿದರು— "ಕರಾರು ಮುರೀತು, ಮಾತು ಮುಗೀತು" ಎಂದವರೆ ರಭಸದಿಂದ ಕೈಬೆರಳಗಳನ್ನು ಎಣಿಸುತ್ತ ಏನನ್ನೊ ಗೊಣಗುತ್ತ ಅಲ್ಲಿಂದ ಹೊರಟುಹೋದರು.

* * *

ಶಾಮಣ್ಣ ವಿಚಾರ ಮಾಡುತ್ತಿದ್ದ. ಶಾಂತಳ ನಡೆವಳಿಕೆಯಲ್ಲಿ ಬದಲಾವಣೆ ಏಕಾಗಿದೆ? ಕೆಲದಿನ ಮುಂಚೆ ರಾಯರು, ಶಾಂತಳನ್ನು ತನಗೆ ಒಪ್ಪಿಸಿದ ಬಗ್ಗೆ ಹೇಳಿದ ಮಾತಿನಿಂದ ಶಾಮಣ್ಣ ಶಾಂತಳನ್ನು ಬೇರೊಂದು ದೃಷ್ಟಿಯಿಂದಲೆ ನೋಡತೊಡಗಿದ್ದ. "ಬೇಕಾದರ ನಾ ಸುಧಾರಿಸಿದವ ಅನ್ನು" ಅಂದಿದ್ದರು ರಾಯರು. ಆ ಮಾತಿನ ಅರ್ಥ ವೇನು? ಶಾಮಣ್ಣ ಅಷ್ಟಕ್ಕೆ ಬಿಟ್ಟುಕೊಡುತ್ತಿದ್ದ. ಆ ಮಾತಿನ ಅರ್ಥದ ಬಗ್ಗೆ ಖಾತ್ರಿಯಾಗುವುದೂ ಅವನಿಗೆ ಬೇಡಾಗಿತ್ತು. ಶಾಮಣ್ಣ ನಿಗೆ ಧರ್ಮದ ಹೆದರಿಕೆ ಇರಲಿಲ್ಲ; ಅವನು ಒಪ್ಪಿಕೊಂಡ ಮಹಾತ್ಮರ ಅಭಿಪ್ರಾಯದಲ್ಲಿ ನ್ಯಾಯವಲ್ಲದ್ದು ಧರ್ಮವಾಗುತ್ತಿರಲಿಲ್ಲ. ಎಳೆ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡು ಮನಸ್ಸಿನ ವಿರುದ್ಧ ಇಡಿಯ ಜನ್ಮವನ್ನು ಪರಾವಲಂಬಿಯಾಗಿ ಕಳೆಯಬೇಕೆಂಬುವುದರಲ್ಲಿ ಯಾವ ನ್ಯಾಯವಿದೆ? ಆದರೂ ಶಾಮಣ್ಣನಿಗೆ ಅಂತರಾತ್ಮನ ಶಾಂತಿ–ಇಲ್ಲ. ಆಕೆಗೆ ನ್ಯಾಯ ದೊರಕುವುದಾದರೆ ತಾನು ಮಾಡಬೇಕಾದದ್ದೇನು? ಅಥವಾ, ತನಗೂ ಅದರಿಂದ ಹಿತವಿದೆ ಎಂದೇ ಅದು ಆಕೆಗೆ ದೊರೆಯ ಬೇಕಾದ ನ್ಯಾಯ ಎಂದು ತಾನು ಹಟಹಿಡಿದಿರುವನೆ? ಇದೂ ಹೋಗಲಿ— ತನ್ನ ತಪಸ್ಸು ಹೋದುದೆಲ್ಲಿ? ೪-೫ ವರ್ಷ ಮುಂಚಿತ ಪ್ರತಿಜ್ಞೆಯನ್ನು ಮಾಡಿರಲಿಲ್ಲವೆ? ತನಗೆ ಮದುವೆ ಬೇಡ, ಸಂಸಾರ ಬೇಡ, ತಾನು ನಿಸ್ವಾರ್ಥ ಸಮಾಜ ಸೇವಕನಾಗತಕ್ಕದ್ದು ಎಂದು? ಈಗ? ಆ ಸಾಮಾಜಿಕ ಬ್ರಹ್ಮಚರ್ಯಕ್ಕೆ ಭಂಗವನ್ನು ತರಬೇಕೆ? ಶಾಮಣ್ಣನು ವಿಚಾರದ ಗೊಂದಲದಲ್ಲಿ ಸಿಕ್ಕಿ ಬೀಳುವನು. "ಬ್ರಹ್ಮ ಚರ್ಯ" ಎಂಬ ಶಬ್ದ ಮನಸ್ಸಿನಲ್ಲಿ ಬಂದೊಡನೆ ಅವನ ವಿಚಾರ ದಾರಿಗಾಣದೆ ತಡೆಯುವುದು. ಬ್ರಹ್ಮಚರ್ಯ ಎಂದರೆ ಸ್ತ್ರೀಸಂಗವನ್ನು ಬಿಡಲೇಬೇಕು ಎಂಬರ್ಥವಲ್ಲ—ಎಂದು ತನ್ನ ಮಹಾತ್ಮರು ಹೇಳಿಲ್ಲವೆ? ಹಾಗಾದರೆ? ಶಾಮಣ್ಣನಿಗೆ ಏನೂ ತಿಳಿಯದಂತಾಗಿ ಕೊನೆಗೊಮ್ಮೆ "ನೀನೆ ಗತಿ" ಎನ್ನುವ ದೃಷ್ಟಿಯಿಂದ ಶಾಂತಳನ್ನು ನೋಡುವನು. ಆಗ

ಅವನ ಮನಸ್ಸು ಸ್ತಿಮಿತಕ್ಕೆ ಬರುವುದು.

ಆ ದೃಷ್ಟಿಯೆ ಶಾಂತಳನ್ನು ಹೆದರಿಸಿತ್ತು. ಇತ್ತೀಚೆಗಲಾಗಿ ಶಾಮಣ್ಣನು ತನ್ನನ್ನು ನೋಡುವಾಗ ತನ್ನ ಮನಸ್ಸು ಚಲವಿಚಲವಾಗುತ್ತಿದೆ ಎಂಬುದನ್ನು ಆಕೆ ಅನುಭವದಿಂದ ಅರಿತುಕೊಂಡಿದ್ದಳು. ಅಂತಹ ಕೆಲವು ಸಂದರ್ಭಗಳಲ್ಲಿ ತಾನು ಶಾಮಣ್ಣನ ಮುಖವನ್ನು ನೋಡಲು ಕೂಡ ಹೆದರುತ್ತಿದ್ದಳು; ನೋಡಿದರೆ ತನ್ನನ್ನು ಬಲವಾಗಿ ಕೈಹಿಡಿದು ಎಳೆಯುತ್ತಿರುವಂತೆ ಭಾಸವಾಗುವುದು; ಒಮ್ಮೊಮ್ಮೆಯಂತೂ ಹೆಜ್ಜೆಯನ್ನು ಮುಂದಿಡಬೇಕೆನ್ನುವಾಗ ತಟ್ಟನೆ ಹೊಳೆದು ಮುಖವನ್ನು ಕೆಳಗೆ ಮಾಡುವಳು.

ಶಾಂತಳಿಗೆ ಗೊತ್ತಿತ್ತು; ಶಾಮಣ್ಣನ ಅಂತಹ ದೃಷ್ಟಿಯ ಹಿನ್ನೆಲೆಯಲ್ಲಿನ ಭಾವನೆಯ ಅರ್ಥ ಆಕೆಗೆ ಪೂರ್ತಿಯಾಗಿ ತಿಳಿದಿತ್ತು. ಅದಕ್ಕೆಂದೇ ಆಕೆ ಹೆದರಿದ್ದಳು. ಶಾಮಣ್ಣನ ವಯಸ್ಸು, ರೂಪ, ಸ್ವಭಾವ ಇವೆಲ್ಲವೂ ತನಗೆ ಎಂದೂ ಒಪ್ಪಿಗೆಯಾಗಿದ್ದುವು, ಈಗ ಅವನ ದೃಷ್ಟಿಯಲ್ಲಿಯ 'ನೀನೇ ಶರಣು' ಎಂಬ ಕರೆಯನ್ನು ತಾನು ಬಹು ಕಾಲ ನಿರಾಕರಿಸಲು ಸಮರ್ಥಳಾಗಲಾರಳು—ಎಂಬುದನ್ನು ಆಕೆ ತಿಳಿದಿದ್ದಳು. ತಪ್ಪೋ? ಒಪ್ಪೋ? ಆಕೆಗೆ ಗೊತ್ತಿರಲಿಲ್ಲ. ಆದರೆ ಅದು ಪಾಪ ಎಂದು ಎಲ್ಲರೂ ತಿಳಿಯುತ್ತಾರೆ ಎಂಬುದು ಆಕೆಗೆ ಗೊತ್ತಿತ್ತು ಇಲ್ಲ—ಶಾಮಣ್ಣ ಗೌರವಸ್ಥ, ಇನ್ನೊಬ್ಬರ ಗೌರವವನ್ನೂ ರಕ್ಷಿಸುವವ, ನಿಜ, ಒಂದು ವೇಳೆ ತನ್ನನ್ನು ಮದುವೆಯಾದರೂ —ಮನೆಯಲ್ಲಿ ತಂದೆ, ಹೊರಗೆ ಸಮಾಜ ಒಪ್ಪಬೇಕಲ್ಲ? ಇವೆರಡನ್ನು ಬಿಟ್ಟರೆ ಬೇರೆ ಜಾಗ ಎಲ್ಲಿದೆ ಇದ್ದುಕೊಳ್ಳಲು?

ಶಾಂತಳು ಮನಸ್ಸನ್ನು ಗಟ್ಟಿ ಮಾಡಿದ್ದರೂ ಆ ಮನಸ್ಸಿನ ಮೇಲೆ ವಿಶ್ವಾಸವನ್ನಿಟ್ಟಿರಲಿಲ್ಲ. ಯಾರಿಗೆ ಗೊತ್ತು, ಯಾವ ಕ್ಷಣದಲ್ಲಿ ಮನಸ್ಸು ತನ್ನನ್ನೆ ಪರವಶ ಮಾಡೀತು? ಅದಕಾಗಿ, ಇತ್ತೀಚೆಗಲಾಗಿ ಆಕೆ ಶಾಮಣ್ಣನ ಸಹವಾಸದ ಸಂದರ್ಭಗಳನ್ನು ತಪ್ಪಿಸತೊಡಗಿದಳು.

ಅದೆಂತಹ ಯಾತನೆ! ಅದೆಂತಹ ಶೂನ್ಯತೆಯ ಭಾವನೆ! ಶಾಮಣ್ಣನ ಸಹವಾಸ ತಪ್ಪಿದರೆ ಕುರಡಾದಂತೆನ್ನಿಸುವುದು, ಒಮ್ಮೊಮ್ಮೆ ಉಸಿರಾಡಿಸಲು ಮರೆತಂತೆ ಗಂಟಲಲ್ಲಿ ಉಸಿರು ಸಿಕ್ಕಂತಾಗುವುದು, ಮತ್ತೊಮ್ಮೆ ಜಗತ್ತು ನೋಡಿ ನೋಡಿದಲ್ಲಿ ಭಣಭಣವಾಗಿ ಕಂಡುಬರುವುದು, ವಿಚಾರಕ್ಕಾಗಲಿ ಮಾತಿಗಾಗಲಿ ಸ್ಪಷ್ಟತೆ ಕೂಡ ಇಲ್ಲದಂತಾಗುವುದು.

ಹೆಂಗಸಿನ ಜನ್ಮ ಯಾತನೆಯ ಜನ್ಮ—ಎಂದುಕೊಳ್ಳುವಳು ಒಮ್ಮೊಮ್ಮೆ ಹೆಂಗಸಿಗೆ ಬಾಳು ಇಷ್ಟು ಪರಾವಲಂಬಿಯಾಗಿದೆಯೆ? ಅಥವಾ ತನ್ನೊಬ್ಬಳ ಸ್ಥಿತಿಯೆ ಹೀಗಿದೆಯೆ? ದಿನದಿನಕ್ಕೆ ತಾನು ಸಹಿಸಬೇಕಾದ ಮಾನಸಿಕ ಯಾತನೆಗಳಿಗಾಗಿ ಶಾಂತಳ ಮನಸ್ಸು ಮೆತ್ತಗಾಯಿತು, ಹೆಣ್ಣಿನ ಜನ್ಮದ ಬಗ್ಗೆ ವಿಚಾರ ಮಾಡ ಮಾಡುತ್ತ ಆಕೆಯ ದೃಷ್ಟಿ ವಿಶಾಲವಾಗಿ ಮಿಕ್ಕ ಹೆಂಗಸರನ್ನು ನೋಡತೊಡಗಿದಳು ಆಗ ಆಕೆಗೆ ಕಣ್ಣು ತೆರೆದಂತಾಯಿತು! ಅವ್ವಯ್ಯ—ಎಂತಹ ಘೋರ ಆಪತ್ತಿನಲ್ಲಿ ಈ ಪರಾವಲಂಬಿತ್ವವು ಹೆಣ್ಣನ್ನು ನೂಕಬಹುದು? ಇದೇ ಅವಸ್ಥೆಯೆ ಹೆಣ್ಣಿಗೆ?—ಎಂದು ತನ್ನ ಕಣ್ಣಮುಂದಿದ್ದ ಒಂದು ದೃಷ್ಟಾಂತವನ್ನು ದಿಟ್ಟಿಸಿ ನೋಡುವಂತೆ ನೆನೆದುಕೊಂಡಳು.

ಗಂಗಿಯ ದೃಷ್ಟಾಂತವದು, ಎಂದಿನಿಂದಲೂ ಗೊತ್ತಿದ್ದ ಕತೆ ಇದು. ತಾನು ಚಿಕ್ಕವಳು ಎಂಬ ನೆವದಿಂದ ಇದುವರೆಗೆ ಯಾವ ಮಾತನ್ನೂ ಆಡಿರಲಿಲ್ಲ, ಆದರೆ ತನಗೆ ಗೊತ್ತಿಲ್ಲದ ಮಾತು ಯಾವುದೂ ಇದ್ದಿರಲಿಲ್ಲ. ಜನರು ಆಡಿಕೊಳ್ಳುತ್ತಿದ್ದರು, ತನ್ನ ಅಣ್ಣನ ಬಗ್ಗೆ. ಕೆಲವು ವರ್ಷ ಮುಂಚಿತ ಆ ಚೆನ್ನಿ ಎಂಬಾಕೆಯದೂ ಒಂದು ಕತೆ ನಡೆದುಹೋದದ್ದು ಶಾಂತಳಿಗೆ ಗೊತ್ತು. ಚೆನ್ನಿ, ಗಂಗಿ—ಇಂತಹವರೆಲ್ಲಾ ಕೆಳಜಾತಿಯವರು, ಕೆಟ್ಟವರು ಎಂದು ಎಲ್ಲರೊಡನೆ ತಾನು ಹೇಳುತ್ತಿದ್ದಳು, ಎಲ್ಲರಂತೆ ತಾನೂ ತಿಳಿದಿದ್ದಳು. ಕೆಟ್ಟವರು? ಯಾಕೆ? ತನಗೆ ಯಾವುದೂ ತಿಳಿದಿರಲಿಲ್ಲ; ಈಗ ತಿಳಿಯತೊಡಗಿದೆ.

ತನ್ನ ಮನಸ್ಸು, ತನ್ನ ವಿಚಾರ—ಇವೂ ತನ್ನನ್ನು ಅಡ್ಡಹಾದಿಗೆ ಎಳೆದೊಯ್ಯಬೇಕೆನ್ನುತ್ತಿವೆಯಲ್ಲ? ಎಂದರೆ—ತನಗೂ ಅಂತಹ ಅವಸ್ಥೆ ಬಿಟ್ಟಿಲ್ಲವೆ? ಹೆಣ್ಣೆಂದ ಮಾತ್ರಕ್ಕೆ ಚೆನ್ನಿಯ ಹಾಗೆ ನಾಚಿಕೆ ಇಟ್ಟು ಕೊಂಡು ಊರನ್ನು ಬಿಡಬೇಕು, ಇಲ್ಲವೆ ಗಂಗಿಯ ಹಾಗೆ ನಾಚಿಕೆ ಯನ್ನು ಬಿಟ್ಟುಕೊಟ್ಟು ಊರಲ್ಲಿ ಉಳಿಯಬೇಕು! ಬೇರೆ ದಾರಿಯೆ ಇಲ್ಲವೆ? ಶಾಂತಳಿಗೆ ಕೆಲದಿನ ಹಗಲಿರುಳು ಚಿಂತೆಯಾಯಿತು, ತನ್ನ ವಿಚಾರಗಳಿಗಾಗಿ ಹೆದರಿಕೆಯಾಯಿತು . ಬೇರೆ ದಾರಿಯೆ ಇಲ್ಲವೆ?.... ಇದೆ!. ಒಂದು ದಿನ ಹೊಳೆಯಿತು ಶಾಂತಳಿಗೆ, ಬೇರೆ ದಾರಿ ಇದೆ-ಎಂದು....ಹೆಂಗಸು ಹೆಂಗಸಿನ ಸಹಾಯಕ್ಕೆ ಹೋಗಬೇಕು—ಇದೇ ದಾರಿ ಎನ್ನಿಸಿತು. ಶಾಂತಳು ನಿಶ್ಚಯಿಸಿದಳು, ತಾನೂ ಆ ದಾರಿ ಯನ್ನು ಹಿಡಿಯಬೇಕು ಗಂಗಿಯಂತಹವರನ್ನು ತಿಳಿಸಿ ಹಾದಿಗೆ ತರ ಬೇಕು. ತನ್ನದೂ ಅವಸ್ಥೆ ಅದೇ ಆಗಬಹುದಿತ್ತಲ್ಲವೆ? ತಾನು ಗಂಗಿ ಗಿಂತ ಹೆಚ್ಚಿನವಳಲ್ಲಿನಲ್ಲ? ಶಾಂತಳು ನಿರ್ಣಯವನ್ನು ಕೈಕೊಂಡಳು.

ಒಂದು ದಿನ ಶಾಮಣ್ಣನಿಗೆ ತನ್ನ ವಿಚಾರವನ್ನು ಹೇಳಿದಳು. ಅವನೂ ಸುಮ್ಮನಿದ್ದು ಕೇಳಿಕೊಂಡ ಎಲ್ಲವನ್ನೂ ಮುಗಿಸಿದ ಮೇಲೆ, ಶಾಮಣ್ಣ ಏನಾದರೂ ಟೀಕೆ ಮಾಡಬಹುದೆಂಬ ಅವಸರದಿಂದ "ನೀವು ಯಾರು ಏನೇ ಅಂದರೂ, ಇಂಥಾ ಕೆಲಸದೊಳಗೇ ತೊಡಗಬೇಕು ಅಂತ ನನ್ನ ಮನಸ್ಸು ಗಟ್ಟಿ ಮಾಡಿಕೊಂಡಿದೆ, ಅಣ್ಣಾ" ಎಂದಳು.

ಶಾಮಣ್ಣನ ಮೈಯಿಂದ ಜುಮ್ಮೆಂದು ಇಳಿಯಿತು ಒಂದು ಭಾರ.

'ಅಣ್ಣಾ ಎಂದಳಲ್ಲ? ಇಂದಿನಿಂದ ನಿಶ್ಚಿಂತವಾಯಿತು ನನ್ನ ಜೀವನ, ಸುಗಮವಾಯಿತು ನಮ್ಮ ಸಹವಾಸ' ಎಂದುಕೊಂಡ.

ಹೃದಯ ಹಗುರಾದುದಕ್ಕೆ ಮುಖದಲ್ಲಿ ಮುಗುಳ್ನಗೆ ಮೂಡಿತು.

ಶಾಂತಳನ್ನು ನೋಡಿದ. ಆಕೆಯ ಮುಖದಲ್ಲೂ ಮುಗುಳ್ನಗೆ.

ನಿರಭ್ರವಾದ ಆಕಾಶದಲ್ಲಿ ಪಸರಿಸಿದ ಬೆಳುದಿಂಗಳಿನಂತೆ ನಿಷ್ಕಲ್ಮಷವಾಗಿತ್ತು—ಅವರಿಬ್ಬರ ಮುಗುಳ್ನಗೆ.

೧೦

“ಕಾಳಪ್ಪಾ, ನನ್ನ ಮಾತಿಗೆ ಒಪ್ಪಿಗೆ ಅಹುದಲ್ಲೊ ?”

“ಹೇಳಿದೆನಲ್ಲರಿ, ಧಣೀರ ? ನಿಮ್ಮ ಮಾತಿಗೆ ಒಪ್ಪಿಗೆ. ಆದರೆ ನೀವು ಮಾಡೋದಕ ಒಪ್ಪಿಗಿ ಇಲ್ಲ”

“ಹಾಗಂದ್ರೇನೊ ?”

“ನೋಡ್ರಿ, ಶಾಮಣ್ಣೋರ, ನನಗ ಬುದ್ಧಿ ಕಲಿಸಿ ಕೊಟ್ಟೋರು ನೀವು. ಅಂದ್ನಿಂದ ಒಂದು ಮಾತು ನಾ ಹೇಳತಾ ಬಂದೀನಿ. ಯಾವದು ನಂ ಕೆಲಸ ಅದನ್ನ ನಾವೇ ಮಾಡಬೇಕು. ಹೌದಂತೀರೊ ಇಲ್ಲೊ ?”

“ನಿನ್ನ ಕೆಲಸ ಅಂದ್ರ ?” ಶಾಮಣ್ಣ ಮುಗುಳ್ನಗೆಯಿಂದ ಕೇಳಿದ; “ನಮಗ ಕೈ ಹಚ್ಚಗೊಡದಷ್ಟು ಅಧಿಕಾರ ಇದೆ ಏನು ನಿನ್ದು ? ಅಂ ?”

“ಹಾದಿ ತೋರಿಸೋದು ನಿಂ ಕೆಲಸ, ತೋರಿಸಿದಿರಿ. ನಡೆಯೋ ಕೆಲಸ ನಮ್ಮದರಿ.”

“ಅಹುದೊ. ಆದರೆ ಇಷ್ಟು ದಿವಸ ನಿಮ್ಮನ್ನ ಬ್ಯಾರೆ ಹಾದಿಗೆ ಹಚ್ಚಿ-ಗೋಳಿಡಿಸಿದ್ದಿವಿ. ಈಗ ಕಲ್ಲುಮುಳ್ಳು ದಾಟಿಸಿ ಸರಿಯಾದ ಹಾದಿ ಬರೋತನಕ ಆದರೂ ನಾವು ಮುಂದಾಗಬೇಕಲ್ಲ ?”

"ಇಂಥಾ ಮಾತು ನನಗ ತಿಳಿಯೋದಿಲ್ರಿ, ಧಣೀರ" ಕಾಳ್ಯಾನೂ ನಕ್ಕು ಹೇಳಿದ.

"ತಿಳಿಯೋದೇನು ? ಗಾಂಧಿಜಿಯವರು ಹೇಳಿಲ್ಲವೇನೊ ? ನಿಂ ಬಗ್ಗೆ ನಾವು ಮಾಡಿದ ಎಲ್ಲ ಕೆಟ್ಟ ಕೆಲಸಕ್ಕ ಪ್ರಾಯಶ್ಚಿತ್ತ ಭೋಗಿಸ ಲಿಕ್ಕೇಬೇಕು—ನಾವು."

"ತಪ್ಪು ಒಪ್ಪಿಕೊಳ್ಳೋ ದೊಡ್ಡ ಮನಸ್ಯಾಗ ಇನ್ನೆಂಥಾ-ಪ್-ಪರಾ—"

"ಪ್ರಾಯಶ್ಚಿತ್ತ. ಕಾಳಪ್ಪಾ, ನಂ ತಪ್ಪಿಗೆ ಇನ್ನೊಬ್ಬರು ದಂಡಿ ಸಿದರೆ ಶಿಕ್ಷಾ ಅದು ; ಸ್ವಸಂತೋಷದಿಂದ ನಾವಾಗಿಯೆ ಕಷ್ಟ ಭೋಗಿ ಸೋದು ಪ್ರಾಯಶ್ಚಿತ್ತ. ಈಗ ನಾನು ಹಿಂದೆ ಸರಿದರೆ ಹ್ಯಾಂಗ ? ನನಗನ್ನಿಸೋದು, ಈ ಸಂದರ್ಭದೊಳಗ ಪ್ರಾಯಶ್ಚಿತ್ತ ಅಂತ ಸ್ವತಃ ಗಾಂಧಿಜಿಯವರೆ ಆಮರಣ ಉಪವಾಸವನ್ನು ಕೈಕೊಳ್ಳೋ ಲಕ್ಷಣ ಇದೆ. ಹೀಗಿರುವಾಗ ನಾವು ಸುಮ್ಮನಿದ್ದರೆ ಅವರ ನ್ಯಾಲೆ ವಿಶ್ವಾಸ ಇಟ್ಟದ್ದರ ಉಪಯೋಗ ಏನು ? ಅದಕೇ ಹೇಳ್ತೀನಿ, ಒಂದು ದಿವಸ ಗೊತ್ತು ಮಾಡು, ನಾ ಮುಂದಾಗ್ತೀನಿ—"

"ಧಣೀರ, ನಿಂ ಮುಂದ ನಾ ಧಡ್ಡ. ಆದ್ರೂ ಕೈಮುಗಿದು ಒಂದು ಹೇಳ್ತೀನಿ. ನಡೀಲಿಕ್ಕೆ ಕಲಿಯೋ ಕೂಸಿಗೆ ಕೈಹಿಡಿದು ನಡಿಸಿದ್ರ ಆ ಕೂಸಿನ ಕಾಲು ಗಟ್ಟಿ ಆಗಾಕಿಲ್ಲ. ತಾನೇ ಏಳಬೇಕು, ತಾನೇ ಬೀಳಬೇಕು-ಅಂದ್ರೇ ನಡೀಲಾಕ ಧೈರಿಯಾ ಬರತೈತಿ."

"ಅಬ್ಬ ! ಇಷ್ಟು ಮಾತಾಡುವವ ನನಗಿಂತ ಧಡ್ಡನೆ ನೀನು ?" ಶಾಮಣ್ಣ ಕೆಣಕುವ ನಗೆಯಿಂದ ಕೇಳಿದ.

"ನಂ ದಶಿಂದ ಛಲೋ ಮಾಡ್ಬೇಕು ಅಂತೀರಿ, ಅದಕ್ಕ ಈ ಕೆಲಸ ನಮಗೇ ಬಿಟ್ಟರ—" ಕಾಳ್ಯಾ ಅಲ್ಲಿಗೆ ತಡೆದ. ಶಾಮಣ್ಣ ವಿಚಾರಮಗ್ನನಾಗಿ ಮಾತಿಲ್ಲದೆ ಕುಳಿತ. ಒಂದೆಡೆ ಕಾಳ್ಯಾನ ಮಾತಿ ನಲ್ಲಿ ಸತ್ಯ ಅಡಕವಾಗಿದೆ ಎಂದೆನ್ನಿಸಿದರೆ ಇನ್ನೊಂದೆಡೆ ಈ ಕೆಲಸದಲ್ಲಿ

ತಾನು ಮುಂದಾಗದಿದ್ದರೆ ಇಷ್ಟು ವರ್ಷಗಳ ತನ್ನ ತತ್ತ್ವೋಪದೇಶ ಹುರುಳಿಲ್ಲದ್ದು ಎಂದ ಹಾಗಾಗುವುದಲ್ಲ-ಎಂಬ ನಿರಾಶೆ. ಈ ಕೆಲಸ ಸುಲಭವಲ್ಲ, ಒಂದು ವೇಳೆ ಇದರಿಂದ ಅನೇಕರ ಕ್ಷೇಮಕ್ಕೂ ಚ್ಯುತಿ-ಬರಬಹುದು ಎಂಬುದು ಶಾಮಣ್ಣನಿಗೆ ತಿಳಿದಿದ್ದಿತು. ಸಾವಿರಾರು ವರ್ಷಗಳ ಸಂಪ್ರದಾಯವನ್ನು ಒಂದು ಕ್ಷಣದಲ್ಲಿ ಹೊಡೆದುಹಾಕುವುದು ಸುಲಭವಾಗುವುದು ಹೇಗೆ? ಮಾತಿನಿಂದ ಹೇಳುವುದು ಬೇರೆ; ಆದರೆ ಸಾಕ್ಷಾತ್ತಾಗಿ ಅಸ್ಪೃಶ್ಯರನ್ನು ಗುಡಿಯ ಒಳಕ್ಕೆ ಕರೆದೊಯ್ಯುವುದು ಬೇರೆ. ತಮ್ಮ ಹಕ್ಕಿಗಾಗಿ ತಾವೇ ಹೋರಾಡಬೇಕು ಎಂಬ ಕಾಳ್ಯಾನ ಮಾತು ತೀರ ಯೋಗ್ಯವಾಗಿದೆ, ಆದರೆ ಅವರ ಹಕ್ಕನ್ನು ನಾವೂ ಸ್ವಸಂತೋಷದಿಂದ ಮನ್ನಿಸುತ್ತೇವೆ ಎಂದು ತೋರಿಸುವುದೂ ಅಗತ್ಯ ವಲ್ಲವೆ? ಅದಕಾಗಿ ಅಸ್ಪೃಶ್ಯರನ್ನು ಗುಡಿಯೊಳಕ್ಕೆ ಒಯ್ಯುವ ಸಮಾರಂಭದಲ್ಲಿ ತಾನು ಮುಂದಾಗಬೇಕು ಎಂದು ಶಾಮಣ್ಣನಿಗೆ ಬಲವಾದ ಆಸೆ ಇದ್ದಿತು ಇದಲ್ಲದೆ, ಇನ್ನೂ ಒಂದು ವಿಚಾರವೂ ಇದ್ದಿತು. ಊರ ಜನರಿಗೆ ಈ ವಿಷಯ ಒಪ್ಪಿಗೆಯಾಗುವುದು ಶಕ್ಯವೆ ಇದ್ದಿರಲಿಲ್ಲ. ಬೇಕಾದ್ದನ್ನು ಮಾಡಿ ಇದನ್ನು ತಡೆಯಲು ಅವರು ಸಿದ್ಧರಾಗಬಹುದು. ಕೇವಲ ಕಾಳ್ಯಾನ ಮುಂದಾಳುತನದಲ್ಲಿಯೆ ಅಸ್ಪೃಶ್ಯರ ತಂಡ ಗುಡಿಯನ್ನು ಪ್ರವೇಶಿಸುವುದಾದರೆ ಜನರು ಹಿಂಸಾಕೃತ್ಯದಿಂದಾದರೂ ಅದನ್ನು ತಡೆಯಲು ಸಿದ್ಧರಾಗಬಹುದು. ಆ ಸಮಯದಲ್ಲಿ ತಾನು ಹಿಂದುಳಿದು ಈ ನಂಬಿದ ಪ್ರಾಣಿಗಳ ಆಹುತಿ ಯಾಗುವುದನ್ನು ನೋಡಬೇಕೆ?....ಶಾಮಣ್ಣ ತಲೆಯಲ್ಲಿ ವಿಚಾರಗಳು ನೂಕನುಗ್ಗಲಾಟವನ್ನು ನಡೆಸಿದ್ದುವೆಂದೇ ಅವನು ಕ್ಷಣ ಮಾತ್ರ ಸುಮ್ಮನೆ ಕುಳಿತ.

ಕಾಳ್ಯಾನಿಗೂ ಈ ವಿಷಯ ಚನ್ನಾಗಿ ಗೊತ್ತಿತ್ತು. ತಾನು ಹೂಡಿದ ಚಳವಳದಿಂದ ಕ್ಷೇಮವಿಲ್ಲ, ಅನೇಕರಿಗೆ ಅಪಾಯವೆ ಆಗ ಬಹುದು ಎಂದು ಅವನಿಗೂ ಹೆದರಿಕೆ ಇದ್ದಿತು. ಅದಕಾಗಿಯೆ

ಅವನು ಶಾಮಣ್ಣನನ್ನು ಮುಂದಾಗಗೊಡಲಿಲ್ಲ. 'ಆಕಳಂತಹ ಮನಸ್ಯಾ! ಅವನ್ನ ಯಾಕ ನಂ ಪಾಪದ ಹೊಡೆದಾಟದಾಗ ಸಿಕ್ಕಿಸ ಬೇಕು? ಅಂಥವರು ಇನ್ನೂ ಒಂದು ನಾಲ್ಕೊಪ್ಪತ್ತು ಇದ್ದರ ಎಷ್ಟೊ ಮಂದಿಗೆ ಹಿತ. ಪ್ರಸಂಗ ಬಂದರ ಇದು ಭಾರೀ ಹ॰ಡೆದಾಟ ಆದೀತು. ಒಂದೆರಡು ಜೀವ ಹೋದರೂ ಹೋದಾವು. ಶಾಮ॰ಣ್ಣೋರು ಉಳೀಲಿ. ನಮ್ಮಂಥೋರು ಇಂಥಾ ಪರಿಯಿಂದ ಇದ್ದರೇನು ಸತ್ತ ರೇನು?" ಎಂದು ಕಾಳ್ಯಾನ ವಿಚಾರ ಸರಣಿ

ಕಾಳ್ಯಾ ಈಗ ಜೀವವನ್ನು ಕೊಡಲು ಸಿದ್ಧನಾಗಿದ್ದ ತನ್ನವರಿಗೆ ಒಳ್ಳೆಯದಾಗಲಿ ಎಂಬ ವಿಚಾರ ಇದ್ದಿತಾದರೂ ಜೀವವನ್ನು ಕೊಡಲು ಕಾಳ್ಯಾನ ಮನಃಪ್ರಪಂಚದಲ್ಲಿ ಬೇರೊಂದು ಕಾರಣವಿದ್ದಿತು. ನಿಜ ವಾಗಿಯೂ ಅವನು ಜೀವದಿಂದಿದ್ದು ಇನ್ನೂ ಬಾಳಬೇಕು ಎಂಬ ವಿಚಾರದವ. ತನ್ನ ಮಗನ ಸಲುವಾಗಿಯೂ ತಾನು ಬಾಳಬೇಕು ಎಂದು ಹಟವಿದ್ದಿತು ಆದರೂ ಈ ಸಂದರ್ಭದಲ್ಲಿ ಅವನು ಜೀವವನ್ನು ಕೊಡಲು ಸಿದ್ಧನಾದ, ಜೀವ ಹೋಗುವವರೆಗೆ ಹೊಡೆದಾಟವಾಗು ವುದು ಖಂಡಿತ ಎಂದು ಅರಿತುಕೊಂಡೇ ಅವನು ಮುಂದಾಗಲು ಸಿದ್ಧನಾಗಿದ್ದ. ಅವನಿಗೆ ಈ ಪ್ರಸಂಗದಲ್ಲಿ ಜೀವನದ ಬಗ್ಗೆ ಆಸಕ್ತಿ ಉಳಿದಿರಲಿಲ್ಲ. ಆದಕಾಗಿ ಉಳಿದರೆ ಗೆದ್ದಂತೆ, ಸತ್ತರೆ ಪಾರಾದಂತೆ– ಎಂಬ ನಿರ್ಣಯಕ್ಕೆ ಬಂದಿದ್ದ. "ಇಂಥಾಪರಿ ಇರೋದಕಿಂತ" ಎಂದು ಈಗ ಮೇಲಿಂದ ಮೇಲೆ ಹೇಳುತ್ತಿದ್ದ. ಅವನ ಮನಸ್ಸು ಅಷ್ಟು ನೊಂದಿತ್ತು, ಅವನ ಜೀವನದ ಆಸಕ್ತಿ ಅಷ್ಟು ಹುಣ್ಣಾಗಿತ್ತು— ಹೆಂಡತಿಯಾದ ಗಂಗಿಯ ನಿಮಿತ್ತದಿಂದ. ತಾನು ಯಾವ ಕೆಲಸಕ್ಕೆ ಮುಂದಾದರೂ ಜನರು ಅವನನ್ನು ಮನ್ನಿಸುವುದು ಒಂದೇ ರೀತಿ ಯಾಗಿತ್ತು. "ಯಾರು? ಕಾಳ್ಯಾನ? ಅಂದ್ರ — ಆ ಗಂಗಿಯ ಗಂಡನ?" ಎಂದೇ ಜನರು ತನ್ನನ್ನು ಗುರುತಿಸುತ್ತಿದ್ದರು. ಗಂಗಿಯ ಹೆಸರು ಅಜೀರ್ಣವಾದಾಗಿನ ತೇಗಿನಂತೆ ಬಾಯಿಗೆ ಹೊಲಸು ರುಚಿ

ಯನ್ನು ಕೊಡುತ್ತಿತ್ತು ಕಾಳ್ಯಾನಿಗೆ.

ಗಂಗಿ ಈಗ ಊರಿಗೇ ಸೂಳೆಯಾಗಿದ್ದಳು. ಗಂಡ ಎಷ್ಟೆಷ್ಟು ಆತ್ಮೀಯತೆಯಿಂದ ಚಳವಳದ ಕೆಲಸದಲ್ಲಿ ತೊಡಗುತ್ತಿದ್ದನೊ ಅಷ್ಟಷ್ಟು ಹಟದಿಂದ ಗಂಗಿ ಸೂಳೆಗಾರಿಕೆಗೆ ಇಳಿದಳು. ಕಾಳ್ಯಾನ ಉಪದೇಶದ ಪರಿಣಾಮ ವಿಪರೀತವಾಗಿಯೆ ಫಲಿಸಿತು. ಕಾಳ್ಯಾ ಬಾಯಿ ತೆರೆದರೆ ಸಾಕು ಥಟ್ಟನೆ ಇದಿರುವಾದಿಸುತ್ತಿದ್ದಳು. "ನೀ ಗಳಿಸೋ ಗಂಡಸಾಗಿದ್ದರ ಇದೆಲ್ಲಾ ಹೇಳಾಕ ಛಂದ!" ಎಂದು ಹಂಗಿಸುತ್ತಿದ್ದಳು.

"ಏ, ಗಂಗೀ, ನೀ ನನ್ನ ಮಾತು ಕೇಳು. ಬೇಕಾದರ, ನೀ ಹೇಳಿದರ, ಈ ಊರ ಬಿಡಲಾಕ ತಯಾರಿದ್ದೀನಿ. ಎಲ್ಲಿ ಹೋದರೇನು? ತೊಗಲ ಹದ ಮಾಡಿದರ—ದೊಡ್ಡ ಊರಾಗ—ನಾಕಾಗೋವಟು ಸಿಗತೈತಿ—"

"ತೊಗಲ ಹದ ಮಾಡೋದು ಯಾಕ? ಇದ್ದೂರಾಗ ಓಣಿಯ ಕಸ ಬಳಿದರ ಸಿಗತೈತಿ–ಕೂಳು! ಅಂಥಾ ಪರಿಯಿಂದ ತಿನ್ನೋದ ಕಿಂತ—"

"ಇದು ಎಂಥಾ ಪರಿ! ನೋಡಲ? ನಾಲ್ಕಮಂದಿ ಉಗಳ್ತಾರ ನಿನ್ನ ಮಾರಿಯ ಮ್ಯಾಗ! ರಸ್ತೇಕ್ಕ ಹೊಂಟರ ಹಲಕಟ ಮಾತಾಡ್ತಾರ—"

"ಮಾತಾಡಿದರ ಮೈಗೆ ಏನು ತೂತು ಬೀಳೋದಿಲ್ಲಲ! ಈಗ ಮತ್ತ ನನ್ನ ಗಳಿಕಿ ಅದ ಅಂತೇ ನಿನ್ದು ಖುಶೀಲೆ ನಡೆವಿಲ್ಲೇನು ನಿನ್ನ ಚಳವಳದ ಕೆಲಸ!" ಎಂದು ತಿರಸ್ಕಾರದ ನಗೆಯಿಂದ ಮೂದಲಿಸುವಳು.

"ನಾಳೆ ನಿನ್ನ ಮಗ ಓಣ್ಯಾಗ ಹೊಂಟರ ಉಳಿದ ಹುಡುಗ್ರು ಏನಂತಾರ ನೋಡು, ಗಂಗೀ, ಯಿಚಾರಾ ಮಾಡು."

"ಯಾರಿಗೇನು ತಂ ಖಾತ್ರಿ ಇರ್ತದ ಅಂತ ಮುಂದಿಗೆ ಅಂತಾರೇನು?"

ಕಾಳ್ಯಾ ಅವಾಕ್ಕಾಗಿ ನಿಲ್ಲುವ. ಎಷ್ಟು ಮಾತನಾಡಿದರೂ ಉಪಯೋಗವಿಲ್ಲ. ಹೊಡೆದು ಆಕೆಯನ್ನು ಹಾದಿಗೆ ತರಬೇಕೆ? ಮರುದಿವಸವೆ ಆಕೆ ಓಡಿ ಹೋಗುವಳೆಂಬುದನ್ನು ಬಲ್ಲ, ಒಮ್ಮೊಮ್ಮೆ 'ಇವಳನ್ನು ಕೊಂದು ಹಾಕಬೇಕು' ಎನ್ನುವಷ್ಟು ಅವನ ಸಿಟ್ಟು ಕುದಿಯುವುದು. ಮರುಗಳಿಗೆಯಲ್ಲಿ ಹುಚ್ಚನಂತೆ ಹತಾಶನಾಗುವ. ಸೂಳೆಯನ್ನು ಕೊಂದ ಎಂದು ಯಾರೂ ಬೆನ್ನು ಚಪ್ಪರಿಸುವುದಿಲ್ಲ, ಹೆಂಡತಿಯ ಕೊಲೆಯನ್ನು ಮಾಡಿದ ಅಪರಾಧಿ ಎಂದು ಗಲ್ಲಿಗೇರಿಸುವರು! ಏನು ಮಾಡಿದಂತಾಯ್ತು? ಮನಸಿನೊಳಗಿಟ್ಟುಕೊಂಡ ಕೆಲಸಗಳು ಹಾಗೆ ಉಳಿಯುವುವಲ್ಲದೆ ಮಗನನ್ನು ಅನಾಥನನ್ನಾಗಿ ಬಿಟ್ಟಂತಾಗುವುದು. ಹೊಲೆಯ, ಮೇಲೆ ತಾಯ್ತಂದೆಯಿಲ್ಲದ ಬೀದಿಯ ಭಿಕಾರಿ! ತನ್ನ ಮಗನ ಅವಸ್ಥೆ ಏನು? ಕಾಳ್ಯಾ ಹತಾಶನಾಗುವ. ದಿನಗಳೆದಂತೆ, ಹೆಂಡತಿಯ ನಡೆವಳಿಕೆಯನ್ನು ನೋಡಿದಂತೆ ಅವನ ಜೀವನ ಆಸಕ್ತಿಯೆ ಕುಗ್ಗುವುದು.

ದುರ್ದೈವವಾದರೂ ಎಂತಹದು! ಇಂತಹ ಹೆಂಡತಿಯಿಂದ ಕಾಳ್ಯಾನಿಗೆ ಮನೆಯೊಳಗಷ್ಟೆ ಅಲ್ಲ, ಹೊರಗೆ ಕೂಡ ಸುಖವಾಗಲಿ ಸುರಕ್ಷಿತತೆಯಾಗಲಿ ದೊರೆಯಲಿಲ್ಲ, ಜನರು ತನ್ನ ಹೆಂಡತಿಯ ಬಗ್ಗೆ ಮನಬಂದಂತೆ ಮಾತನಾಡುತ್ತಿದ್ದರೆಂಬುದು ಅವನಿಗೆ ಗೊತ್ತಿತ್ತು. ಆ ಬಗ್ಗೆ ಅವನು ಏನನ್ನೂ ಮಾಡಲು ಶಕ್ಯವಿರಲಿಲ್ಲ, ಜನರು ಕೊಡುವ ಕೆಟ್ಟ ಹೆಸರನ್ನು ಗಂಗಿ ಗಳಿಸಿದ್ದಳು. ಹೀಗಿರುವಾಗ ಅವನು ಏನು ಮಾತಾಡಬಲ್ಲ? ಕಾಲ ಸರಿದಂತೆ ಜನರ ನಾಲಗೆಯು ರೂಢಿಯಾಯಿತು ಅವನಿಗೆ, ಆ ಬಗ್ಗೆ ಹೆದರಿಕೆಯೂ ಇರಲಿಲ್ಲ. ಆದರೆ ಊರಲ್ಲಿ ಮಾತಿನ ಮಟ್ಟಿಗೆ ಕೆಟ್ಟವರಿದ್ದಂತೆ ಕೃತಿಯಿಂದಲೂ ಕೆಟ್ಟವರಿದ್ದ ಪುಂಡರಿದ್ದರಲ್ಲ? ಅವರು ಯಾವ ಕಾಲಕ್ಕೆ ಏನು ಮಾಡುವರೆಂಬುದನ್ನು ಊಹಿಸಲು ಕೂಡ ಶಕ್ಯವಿರಲಿಲ್ಲ. ಇಂತಹರ ಪುಂಡಾಟಿಕೆಯ ಹೆದರಿಕೆ ಇತ್ತಿತ್ತಲಾಗಿ ಅವನನ್ನು ಹೆಚ್ಚಾಗಿ ಕಾಡುತ್ತಿತ್ತು.

ಅದಕ್ಕೆ ತಕ್ಕ ಕಾರಣವೂ ಇದ್ದಿತು. ಊರೊಳಗಿನ ಅಂತಹ ಕೃತಿ-ಪುಂಡರಲ್ಲಿ ಇಬ್ಬರಿದ್ದರು, ಅವರಿಗಾಗಿ ಕಾಳ್ಯಾನಿಗೆ ಹೆದರಿಕೆ. ಒಬ್ಬ ಗುಂಡಣ್ಣ, ಇನ್ನೊಬ್ಬ ರಾಮಪ್ಪ.

ಗುಂಡಣ್ಣನಂತೂ ಕಾಳ್ಯಾನನ್ನು ಕಡಿದು ಹಾಕಿದರೂ ತೃಪ್ತಿಯಾಗದಷ್ಟು ಸಂತಪ್ತನಾಗಿದ್ದ, ತಾನು ಚುನಾವಣೆಗೆ ನಿಲ್ಲಬೇಕೆಂದಾಗ ಕಾಳ್ಯಾನ ಸಹಾಯ ತನಗೆ ದೊರೆಯದು ಎಂಬುದು ಗುಂಡಣ್ಣನನ್ನು ಚಕಿತಗೊಳಿಸಿತ್ತು. ಕಾಳ್ಯಾನಲ್ಲಿ ಆದ ಬದಲಾವಣೆಯ ಕಲ್ಪನೆಯೆ ಅವನಿಗಿದ್ದಿರಲಿಲ್ಲ ಆದರೆ ಅದಕ್ಕೂ ಹೆಚ್ಚಾಗಿ ಸಿಟ್ಟನ್ನು ಹುಟ್ಟಿಸಿದ ಕಾರಣ ಬೇರೊಂದಾಗಿತ್ತು. ಗುಂಡಣ್ಣನ ಸಾಂಸಾರಿಕ ಜೀವನವೆ ಈಗ ನಿಂತುಹೋಗಿತ್ತು. ಸರಸು (ಸರಸ್ವತಿ)—ಮಗಳು—ಹುಟ್ಟಿದ ತರುವಾಯ ಸುಬ್ಬಕ್ಕ ಗಂಡನಿಂದ ಇನ್ನಿಷ್ಟು ದೂರವಾದಳು. ಗಂಡನ ಹಕ್ಕನ್ನು ಪ್ರಸ್ಥಾಪಿಸಲು ಗುಂಡಣ್ಣ ಮಾಡಿದ ಪ್ರಯತ್ನಗಳೆಲ್ಲ ವ್ಯರ್ಥವಾದುವು ತನ್ನ ಬಗ್ಗೆ ಹೆಂಡತಿಗೆ ಅಸಹ್ಯವಿದ್ದಿತೆಂಬುದು ಮುಂಚೆಯೊಮ್ಮೆ ಹೊಳೆದಿತ್ತಾದರೂ ಅನಿವಾರ್ಯವೆನ್ನಿಸಿದಾಗ ಗಂಡನ ಅಧಿಕಾರಕ್ಕೆ ಆಕೆ ಮನ್ನಣೆ ಕೊಡುವಳೆಂದು ನಂಬಿದ್ದ, ಆದರೆ ಇಬ್ಬರು ಮಕ್ಕಳಾದ ಮೇಲೆ ಆಕೆಯ ಆಧಾರದ ಬಲವೂ ಇಮ್ಮಡಿಯಾಯಿತೇನೊ! ಗಂಡನನ್ನು ಪೂರ್ತಿಯಾಗಿ ತಿರಸ್ಕರಿಸಿದಳು, "ಸಂಸಾರ"ದ ವಿಷಯದಲ್ಲಿ. ಇದರಿಂದ ಮೊದಲು ಅಪಮಾನವೆನ್ನಿಸಿತು, ಆಮೇಲೆ ಅನನುಕೂಲವೆನ್ನಿಸಿತು, ಕೊನೆಗೆ ಅಸಹ್ಯವಾಯಿತು ಗುಂಡಣ್ಣನಿಗೆ. ಈಗ ಅವನ 'ಹೊ ರ ಚಾ ಳಿ' ಗೂ ಅನುಕೂಲವಿರಲಿಲ್ಲ. ರಾಮಪ್ಪ ಅವನ ಶತ್ರು, ಪ್ರಸಂಗ ಬಂದರೆ ಸೇಡನ್ನು ತೀರಿಸಲೂ ಸಿದ್ಧನಿದ್ದ; ಅದನ್ನರಿತ ಗುಂಡಣ್ಣ ಯಾರ ಗೊಡವೆಗೂ ಸಹಸಾ ಹೋಗುತ್ತಿರಲಿಲ್ಲ. ಇತ್ತ ಗಂಗಿಯ ಅಧೋಗತಿ ಸಾರ್ವಜನಿಕ ಸುದ್ದಿಯಾಯಿತು. ಅಂಥಾಕೆಯೊಡನೆ ಬಳಕೆಯನ್ನಿಟ್ಟುಕೊಂಡರೆ ತನ್ನ ಗೌರವ ಉಳಿದೀತೆ? ಗುಂಡಣ್ಣನಿಗೆ ಕೆಂಡದಂತಹ ಕೋಪ—

ಕಾಳ್ಯಾನ ಮೇಲೆ. ಅವನೇ ಹೆಂಡತಿಯನ್ನು ದುರ್ಮಾರ್ಗಕ್ಕೆ ಹಚ್ಚಿದ್ದಾನೆ ಎಂದು ಗುಂಡಣ್ಣನ ನಂಬುಗೆ. ತಾನು ಸುಖದಿಂದಿದ್ದು ಇಲ್ಲದ ಕಿಡಿಗೇಡಿತನವನ್ನು ಮಾಡಲು ಅನುಕೂಲವಾಗುವುದು—ಹೆಂಡತಿ ಗಳಿಸಿದರೆ ಎಂದು ಕಾಳ್ಯಾನೇ ಬುದ್ಧಿಪೂರ್ವಕವಾಗಿ 'ತನ್ನ' ಗಂಗಿಯನ್ನು ಕೆಡಿಸಿದ್ದಾನೆ ಎಂದು ಗುಂಡಣ್ಣನ ಕಳವಳ. ಈಗ ಈ ಹೋಲಿಯು ಗುಡಿಯೊಳಗೆ ಹೋಗುವನಂತೆ! ಹೋಗಲಿ, ನೋಡೋಣ. ಅದೇ ಸಂದರ್ಭದ ಲಾಭವನ್ನು ಪಡೆದುಕೊಂಡು ಅವನ ತಲೆಯನ್ನೆ ಒಡೆದುಹಾಕೋಣ ಎಂದು ಗುಂಡಣ್ಣನ ಎಣಿಕೆ.

ರಾಮುಪ್ಪನದೂ ಅದೇ ಯೋಚನೆ; ಅವನಿಗೂ ಅವೇ ಕಾರಣ. ಒಮ್ಮೊಮ್ಮೆ ಜನ ತನ್ನನ್ನು ಕಾಳ್ಯಾನೊಡನೆ ಹೋಲಿಸುತ್ತಿದ್ದರೆಂಬುದನ್ನೂ ಅವನು ಬಲ್ಲ. ತನ್ನ ಹೆಂಡತಿಯಾವ ಚೆನ್ನಿಯೂ ಇನ್ನೊಬ್ಬರ ಹೆಣ್ಣಾಗಿ ತನ್ನನ್ನು ಬಿಟ್ಟಿರಲಿಲ್ಲವೆ? ಅದಕಾಗಿ ಕಾಳ್ಯಾನನ್ನು ನೋಡಿದಾಗೊಮ್ಮೆ ರಾಮುಪ್ಪನ ಪಿತ್ತ ತಲೆಗೆ ಏರಿದಂತಾಗುತ್ತಿತ್ತು ಈಗ ರಾಮುಪ್ಪ ಪಿಂಚಣಿ ಪೈಲವಾನ, ಆದ್ದರಿಂದ ಊರೊಳಗಿನ ಹೆಂಗಸರು ತನ್ನನ್ನು ಒಲಿಯುಬೇಕೆಂಬ ಮಹತ್ವಾಕಾಂಕ್ಷೆ ಅವನದು. ಆದರೇನು? ಮೀಸೆಗೆ ಹುರಿ ಹಾಕಿದಷ್ಟೂ ಹೆಂಗಸರು ಒಳಗಿಂದೊಳಗೆ ನಗುತ್ತಿದ್ದರು. 'ಅವನಿಂದ ಮಕ್ಕಳು ಆಗೋ ಹಾಂಗೇ ಇಲ್ಲ ಅಂತ ಚೆನ್ನಿ ಅವನ್ನ ಬಿಟ್ಟಳಂತ!', 'ಹಾಂಗ ಅದಾನಂತ', 'ಅಂಥಾವ!' ಎಂದು ಸೂಚ್ಯವಾಗಿ ಏನೇನೊ ತನ್ನ ಬಗ್ಗೆ ಹೆಂಗಸರಲ್ಲಿದ್ದ ಕಲ್ಪನೆಗಳ ಅರಿವೂ ಅವನಿಗಿದ್ದಿತು. ಅದನ್ನು ಹೊಡೆದುಹಾಕುವ ಹವ್ಯಾಸದಲ್ಲಿ ಯಾವುದಾದರೊಂದು ಶೌರ್ಯದ ಕೆಲಸವನ್ನು ಮಾಡಬೇಕೆಂದು ನಿರ್ಧರಿಸಿಕೊಂಡನು. ಮೊದಮೊದಲು ಗಂಗಿ ತನ್ನ ವಶವಾದದ್ದು ಅಂತಹ ಶೌರ್ಯದ ಕೆಲಸ ಎಂದೇ ತಿಳಿದಿದ್ದ. ಆದರೆ ಗಂಗಿ ದಿನಗಳೆದಂತೆ ಸಾರ್ವಜನಿಕ ಸೊತ್ತಾದಳು; ಬೀದಿಯಲ್ಲಿ ಬಿದ್ದುದನ್ನು ಯಾರೂ ಇಲ್ಲದಾಗ ಎತ್ತಿ ಕಿಸೆಯಲ್ಲಿಟ್ಟುಕೊಂಡರೆ ಅದು ಶೌರ್ಯದ ಕೆಲಸ

ವಾದೀತೆ? ರಾಮಪ್ಪನಿಗೆ ಸಮಾಧಾನವಾಗಲಿಲ್ಲ. ತನ್ನ ಜೀವನದಲ್ಲಿ ತನಗೆ ಈ ಪೇಚಿನಲ್ಲಿ ಹಾಕಿದವರು ಇಬ್ಬರು, ಗುಂಡಣ್ಣ ಮತ್ತು ಕಾಳ್ಯಾ. ಗುಂಡಣ್ಣನನ್ನು ಹೊಡೆದುಹಾಕಿದರೆ? ಅಥವಾ ಕಾಳ್ಯಾನನ್ನೆ ಕೊಂದರೆ? ಜನರಿಗೆ ತಿಳಿದಿರಬೇಕು, ಪೋಲಿಸರಿಗೆ ಸಿಕ್ಕಿರಬಾರದು; ಕಾಳ್ಯಾನನ್ನು ಕೊಂದರೇನೆ ಇದು ಶಕ್ಯ, ಎಂಬ ನಿರ್ಧಾರಕ್ಕೆ ಬಂದಿದ್ದ. ಆಗಿನಿಂದ ಕಾಳ್ಯಾನನ್ನು ಕಂಡಲ್ಲಿ ಕೆಣಕುತ್ತಿದ್ದ, ಕಾರಣವಿಲ್ಲದೇನೇ ಕೆಣಕುತ್ತಿದ್ದ.

ಇದೆಲ್ಲವನ್ನೂ ತಿಳಿದುಕೊಂಡ ಕಾಳ್ಯಾನಿಗೆ ಜೀವನದಲ್ಲಿ ಆಸಕ್ತಿ ಇಲ್ಲದಂತಾಗುತ್ತಿತ್ತು. ಅದಕ್ಕಾಗಿಯೆ ಅವನು ಅಸ್ಪೃಶ್ಯರ ತಂಡಿಗೆ ಮುಂದಾಗಿ ಗುಡಿಯನ್ನು ಪ್ರವೇಶಿಸಲು ನಿರ್ಧರಿಸಿದ್ದ. ಒಂದೇ ಒಂದು ವಿಚಾರ ಅವನನ್ನು ಹೊಯ್ದಾಡಿಸುತ್ತಿತ್ತು; ತಾನೇನೋ ಸಾಯಲು ಸಿದ್ಧ. ಒಂದು ವೇಳೆ ಸತ್ತರೆ ತನ್ನ ಭರಮನ ಗತಿ! ಅಪ್ಪ-ಪರಸ್ಯಾ-ವಯಸ್ಸಾಗುತ್ತ ನಡೆದರ, ಇದಲ್ಲದೆ, ಅಪ್ಪನ ವಿಚಾರಗಳಂತೆ ಮಗನನ್ನು ಬೆಳೆಯಿಸುವ ಅಪೇಕ್ಷೆ ಕಾಳ್ಯಾನಿಗೆ ಇದ್ದಿರಲಿಲ್ಲ. ಈಗಾಗಲೆ ಭರಮನಿಗೆ ವಯಸ್ಸು ಹತ್ತು ಆಗಿಹೋಗಿದೆ; ಅವನನ್ನು ಸಾಲೆಗೆ ಹಾಕಬೇಕು, ಕಲಿಸಬೇಕು, ದೊಡ್ಡವನಾದ ಮೇಲೆ ಅವನು ಎದೆ ಸೆಟೆಯಿಸಿ ತಿರುಗಾಡಬೇಕು, ನಾಲ್ಕು ಜನರು ಅವನಿಗೆ ನಮಸ್ಕಾರವನ್ನು ಮಾಡಬೇಕು—ಎಂದು ಏನೇನೊ ಬಯಕೆ. ಏನಾದರೂ ಒಂದು ನೆವವಾಗಿ ತಾನು ಸತ್ತುಹೋದರೆ ಈ ಕನಸು ಕನಸಾಗಿಯೆ ಉಳಿಯುವುದಲ್ಲ? ಛೆ! ಏನಾದರೂ ಮಾಡಲೇಬೇಕು; ಮಗನ ಬಗ್ಗೆ ವ್ಯವಸ್ಥೆಯನ್ನು ಮಾಡಲೇಬೇಕು. ಒಂದು ವೇಳೆ ತನಗೆ ಏನೂ ಅಪಾಯವಾಗದಿದ್ದರೆ—ಇದೊಂದು ಗುಡಿಯ ಪ್ರವೇಶದ ಕಾರ್ಯಕ್ರಮ ಮುಗಿದ ಮೇಲೆ—ತಾನು ಊರನ್ನೆ ಬಿಡಬೇಕು. ಒಂದು ವೇಳೆ ಅಪಾಯವಾದರೆ, ತನಗೆ ಏನಾದರೂ ಸಂಭವಿಸಿದರೆ—?

"ನಿಮ್ಮ ಉಡೀವಳಗ ಇಟ್ಟಬಿಟ್ಟೇನ್ರಿ, ಅವ್ವಾ ಅವರ" ಎಂದು

ಕಾಳ್ಯಾ ಶಾಂತಳಿಗೆ ಕೈಮುಗಿದು ಬಿನ್ನವಿಸಿಕೊಂಡ.

ಅನೇಕ ಪರಿಯಿಂದ ವಿಚಾರ ಮಾಡಿ ಕಾಳ್ಯಾ 'ಶಾಂತವ್ವಾವರ' ಕಡೆ ಬಂದಿದ್ದ. ಅವನಿಗೆ ಒಂದು ಸಂಶಯ, ಒಮ್ಮೊಮ್ಮೆ ಅದು ಆನೆಯಾಗಿಯೂ ಎದ್ದು ನಿಲ್ಲುತ್ತಿತ್ತು, ಶಾಮಣ್ಣೋರು 'ಶಾಂತವ್ವಾವರ'ನ್ನ ಮದುವೆ ಯಾಕೆ ಆಗಬಾರದು-ಎಂದು. ಇನ್ನೆಷ್ಟೊ ಸಲ ಅವನಿಗೆ ಆಶ್ಚರ್ಯ; ಇಷ್ಟು ಕಲಿತ ಜಾತಿ, ಸುಧಾರಿಸಿದ ಜಾತಿ ಎಂದು ಹೇಳಿಕೊಳ್ಳುವಂಥಾ ಹಾರೋರಲ್ಲಿ ಗಂಡ ಸತ್ತ ಹೆಣ್ಮಕ್ಕಳಿಗೆ ಮದುವೆ ಆಗಗೊಡುತ್ತಿದ್ದಿಲ್ಲ-ಎಂದು. ಮದುವೆ ಆಗಲಿ ಬಿಡಲಿ, ಶಾಮಣ್ಣ-ಶಾಂತಾ ಇವರ ಜೋಡಿ ಕಾಳ್ಯಾನಿಗೆ ಆದರ್ಶ ಜೋಡಿಯಾಗಿತ್ತು. ಶಾಮಣ್ಣನಲ್ಲಿಟ್ಟಷ್ಟೆ ವಿಶ್ವಾಸವನ್ನು ಅವನು ಶಾಂತಳಲ್ಲಿ ಇಡಲು ಯಾವಾಗಲೂ ಸಿದ್ಧನಿದ್ದ. ಅವನ ಆ ಶ್ರದ್ಧಾಳು ಮುಖವನ್ನು ನೋಡಿ ಶಾಂತಳಿಗೆ ಒಂದು ತರದ ನೋವೆನ್ನಿಸಿತು 'ಇವನ ವಿಶ್ವಾಸಕ್ಕೆ ಪಾತ್ರಳಾಗುವ ಯೋಗ್ಯತೆ ನನ್ನಲ್ಲಿದೆಯೆ ?' ಎಂದು ವಿಷಾದದಿಂದ ಕೇಳಿಕೊಂಡಳು.

"ಯಾಕೊ ? ಅಂಥಾದ್ದೇನಾಗೇದೋ ನಿನಗ ?" ಎಂದು ಸಂತಯಿಸುವ ನಗೆಮೊಗದಿಂದಲೆ ಕೇಳಿದಳು.

ಕಾಳ್ಯಾನಿಗೆ ಒಮ್ಮೆಲೆ ಒಳಗಿನಿಂದ ಬಿರುಗಾಳಿ ಹೊರಧುಮ್ಮಿಕ್ಕಿ ಹೃದಯದ ಬಾಗಿಲು ತೆರೆದಂತಾಯಿತು. ತನಗಾಗುತ್ತಿರುವ ವ್ಯಥೆಯನ್ನು, ಸಂಸಾರದ ಅವಮಾನಕಾರಕ ಅನುಭವಗಳನ್ನು ಒಂದೇ ಸವನೆ ಶಾಂತಳ ಮುಂದೆ ತೋಡಿಕೊಂಡ, ಕಣ್ಣೀರು ಧಾರೆಯಾಗಿ ಸುರಿಯುತ್ತಿತ್ತು ; ಶಾಂತಳ ಮುಖವು ಕಣ್ಣೀರಿನಿಂದ ಕಂಗೊಳಿಸುತ್ತಿತ್ತು.

"ಹುಚ್ಚ ಇದ್ದೀ, ಕಾಳಪ್ಪ" ಎಂದಳು; ಯಾವ ಸಮಾಧಾನವನ್ನು ಹೇಳಬೇಕು ? "ಹುಚ್ಚ ಇದ್ದೀ ನೀನು, ಅಂದೆ. ಗಂಗವ್ವನಿಗೆ ಇದೆಲ್ಲಾ ತಿಳಿಯೋದಿಲ್ಲ ಅಂತೀ ಏನು ? ಆದರೆ ಯಾರಿಗ ಹೆಚ್ಚು ತಿಳೀಬೇಕು

ಅವರೇ ಅಡ್ಡ ದಾರಿ ಹಿಡಿಸಿದರ—ಆಕೆಯದೇನು ತಪ್ಪು ? ನಾಯೆಲ್ಲಾ ಹೇಳ್ತೀನಿ ಆಕೆಗೆ. ನೀ ಇಲ್ಲದ ವಿಚಾರ್ನೆ ಮಾಡಬ್ಯಾಡ. ಗುಡೀಗೆ ಹೋಗು, ಗುಂಡಾರಕ್ಕ ಹೋಗು." ಈಗ ಮನಸ್ಸು ಸ್ತಿಮಿತಕ್ಕೆ ಬಂದಂತಾಗಿ ಆಕೆಯ ಮುಖದಲ್ಲಿ ಮುಗುಳ್ನಗೆ ಮೂಡಿತು. "ತಿಳೀತೇನು ? ಗಂಡಸರೆಲ್ಲಾ ಒಂದೇ ; ಬ್ಯಾಡಾದ ಕಾರಭಾರ ಮಾಡೋದು ! ಬೇಕಾದಲ್ಲಿ ಹೋಗು—ನಿನ್ನ ಹೆಂಡತಿನ್ನ ಹುಡುಗನ್ನ ನಾವು ಯಾರು ಬೇಕಾದವರು ನೋಡಿಕೋತೀವಿ—" ಎಂದು ಅವನಿಗೆ ಸಮಾಧಾನವನ್ನು ಹೇಳಿದಳು.

"ಯಾಕೊ ? ವಿಶ್ವಾಸ ಇಲ್ಲೇನು ?" ಕಾಳ್ಯಾ ಅಲ್ಲಿಯೆ ನಿಂತು ದನ್ನು ನೋಡಿ ಕೇಳಿದಳು

"ಯಿಸ್ವಾಸದ ಮಾತಲ್ರಿ, ಯಿಚಾರಕ್ಕ ಬಿದ್ದಿತು."

"ಏನಪಾ–ಅದು–ಅಂಥಾ ವಿಚಾರ !"

"ಏನಾರೆ ಆದ್ರ ಅಪ್ಪಾ ಅವರಿಗೆ ಬಂದು ಹೇಳಿಕೋತಿದ್ದಿವಿ. ನನ್ನ ಜೀವಮಾನದಾಗ ಮೊದಲನೇ ಸಲ ನೋಡಿರಿ, ನಾವು ಅವ್ವಾ ಅವರ ಹತ್ತಿರ ಬಂದದ್ದು."

"ಅಂದ್ರ ? ಅಂಥಾದ್ದೇನು ಅದರೊಳಗ ವಿಚಾರ ಮಾಡು ವಂಥಾದ್ದು ? ಆಂ ?"

"ದಿವಸ್ಗಾಲ ಬದಲಾದುವು—ಕೆಟ್ಟದಕ್ಕೊ ? ಛಲೋದಕ್ಕೊ?" ತಲೆ ತರಿಸುತ್ತ ತನ್ನನ್ನು ತಾನೇ ಕೇಳಿಕೊಳ್ಳುವಂತೆ ಗೊಣಗಿದ.

* * *

ಒಳ್ಳೆಯದಕ್ಕೊ ಕೆಟ್ಟದಕ್ಕೊ ಎಂಬುದರ ನಿರ್ಣಯ ಕಾಳ್ಯಾನು ತಿಳಿದುಕೊಂಡುದರ ಮುಂಚಿತವಾಗಿ, ತೀರ ಅನಪೇಕ್ಷಿತವಾಗಿ ಸ್ಪಷ್ಟ ವಾಯಿತು. ಶಾಂತಳನ್ನು ಕಂಡು ಬಂದ ಮೇಲೆ ಕಾಳ್ಯಾನು ಸಮಾಧಾನದಿಂದಿದ್ದನು ; ಹುಡುಗನ ಚಿಂತೆಯಂತೂ ಇಲ್ಲವೇ ಇಲ್ಲ, ಹೆಂಡತಿಯೂ ಸುಧಾರಿಸಬಹುದೆಂಬ ಆಸೆ ಹುಟ್ಟಿತು ಅವನಲ್ಲಿ ;

ಶಾಂತಳಲ್ಲಿ ಅಷ್ಟು ಭರವಸೆ ಅವನಿಗೆ. ಈ ಸಮಾಧಾನದಲ್ಲಿ ಅವನು ತನ್ನ "ಚಳವಳ"ದ ದಿನವನ್ನು ತುಸು ಮುಂದೂಡಿದನು; ಅಡ್ಡಾಡು ವುದನ್ನೂ ಕಡಿಮೆ ಮಾಡಿದನು; ಮಗ ಮತ್ತು ಹೆಂಡತಿ ಇವರಿಬ್ಬರ ಸಹವಾಸದಲ್ಲಿಯೆ ಹೆಚ್ಚಾಗಿ ವೇಳೆಯನ್ನು ಕಳೆದನು. ಹೃದಯ ಅತ್ಯಂತ ಹಗುರೆನ್ನಿಸಿತು, ಜೀವನದಲ್ಲಿ ಸುಖಪಡಲು ಶಕ್ಯವಿದೆ ಎಂದು ತೋಚಿತು, ಇದೇ ವಾತಾವರಣದಲ್ಲಿ ಎಲ್ಲವೂ ಇದ್ದಕ್ಕಿದ್ದಂತೆ ನಿಂತು ಬಿಟ್ಟರೆ ಶಾಶ್ವತವಾದ ಸುಖ ದೊರೆತಂತಾಗುವುದು ಎನ್ನಿಸಿತು. ಅಸ್ಪೃಶ್ಯತೆ, ಹಕ್ಕು, ಹೆಣ್ಣು-ಗಂಡು ಸಂಬಂಧ — ಇವೆಲ್ಲ ಚಿಲ್ಲರೆ, ಕ್ಷಣಿಕ ಹುಚ್ಚಾಟಗಳು ಎಂದು ನಾಚಿಕೆಯಿಂದ ತನಗೆ ತಾನೇ ಹೇಳಿಕೊಂಡ. ಹಗಲು-ರಾತ್ರಿಗಳಲ್ಲಿ ವ್ಯತ್ಯಾಸ ಕೂಡ ತೋರಲಿಲ್ಲ.

ಈ ಸಮಾಧಾನ ಪರವಶತೆಯಲ್ಲಿ ಕಾಳ್ಯಾನಿಗೆ ಸುತ್ತಲಿನ ಜಗತ್ತಿನ ಅರಿವೇ ಮರೆತಂತಾಗಿತ್ತು, ಅದಕಾಗಿಯೆ ಆ ರಾತ್ರಿ ನಡೆದುದರಿಂದ ದೇಹದ ನೋವಿಗಿಂತ ಮನಸ್ಸಿಗಾದ ಆಘಾತದ ಪೆಟ್ಟು ಹೆಚ್ಚು ಅಸಹನೀಯವಾಗಿತ್ತು.

ಅಂದಿನ ರಾತ್ರಿ ಎಂದಿನಂತೆ ಎಲ್ಲವೂ ನಿಶ್ಶಬ್ದ. ಗುಡಿಸಲ ದೊಳಗೆ ಭರಮು, ಗಂಗಿ ಮಲಗಿದ್ದಾರೆ. ತಾಯಿ-ಮಕ್ಕಳು ತನಗಾಗಿ ಸುರಕ್ಷಿತತೆಯನ್ನು ಪಡೆದು ನಿಶ್ಚಿಂತರಾಗಿ ಮಲಗಿದ್ದುದನ್ನು ಕಾಳ್ಯಾ ಹೊರಗೆ ಮಲಗಿದಲ್ಲಿಯೆ ಅಭಿಮಾನದಿಂದ ನೆನೆದುಕೊಂಡ.

ಹಾಗೇ ಮಲಗಿದಲ್ಲಿಯೆ ಏನೇನೊ ಕನಸನ್ನು ಕಂಡ. ತಾನು ತನ್ನವರನ್ನೆಲ್ಲ ಕೂಡಿಸಿಕೊಂಡು ಗುಡಿಯೊಳಗೆ ಪ್ರವೇಶಿಸಲು ಹೊರ ಟಿದ್ದ ಕನಸಿನಲ್ಲಿ; ಹಿಂದೆ ನೂರಾರು ಅಸ್ಪೃಶ್ಯರು ತನ್ನ ಜಯ ಘೋಷವನ್ನು ಮಾಡುತ್ತಿದ್ದರು; ಗುಡಿಯ ಮಹಾದ್ವಾರದ ಎರಡೂ ಬದಿಗೆ ಊರ ಜನರು ನಿಂತಿದ್ದಾರೆ; ಅವರ ಮುಖದಲ್ಲಿ ಆಶ್ಚರ್ಯದ ಕಳೆ ಇದೆ, ಕೆಲವು ಮುಖಗಳ ಮೇಲೆ ಹೆದರಿಕೆಯ ಕಳೆ ಇದೆ, ಇನ್ನು ಕೆಲವು ಮುಖಗಳು ಸಿಟ್ಟಿನಿಂದ ಕೆಂಪಾಗಿವೆ. ತಾನು—

ಕಾಳ್ಯಾನು — ಮಾತ್ರ ಯಾವುದರ ಪರಿವೆ ಇಲ್ಲದೆ ಗಂಭೀರವಾಗಿ ಹೆಜ್ಜೆಗಳನ್ನಿಡುತ್ತ ಮುಂದೆ ನಡೆದಿದ್ದಾನೆ. ಗಂಟೆ ಬಾರಿಸಿದಂತಾಯಿತು, ಮುಖವನ್ನು ಮೇಲೆತ್ತಿದ. ಏನಿದು ? ಆಕಾಶದಿಂದ ಹೂಮಾಲೆಗಳು ಬೀಳುತ್ತಿವೆಯೆ ? ಅಬ್ಬ ! ಒಂದರ ಮೇಲೊಂದು — ಎಷ್ಟೊಂದು ಬೀಳುತ್ತಿವೆ — ಉಸಿರುಗಟ್ಟಿದಂತಾಗುವುದಲ್ಲ ! — ಚಡಪಡಿಸಿದ — ಹೊಯ್ದಾಡ್—ಇದೇನು ? ಹೊಯ್ದಾಡಲು ಶಕ್ಯವಾಗದಷ್ಟು ಹೂಮಾಲೆಗಳು ಬಿದ್ದಿವೆಯೆ ? ಎಷ್ಟೊಂದು ಎತ್ತರದಿಂದ ಬೀಳುತ್ತಿವೆ ! ಅಬ್ಬ ! ಮೈಗೆ ಪೆಟ್ಟು ತಾಗುವಂತೆ—?

ಕಾಳ್ಯಾ ಒಮ್ಮೆಲೆ ಕಣ್ದೆರೆದಿದ್ದ. ಆದರೂ ಕತ್ತಲೆ, ಕಣ್ಮುಂದೆ ಕತ್ತಲೆಯೆ ನಿಂತಿತ್ತು. ಅತ್ತಿತ್ತ ನೋಡಬೇಕೆಂದ—ಆಗ ತಿಳಿಯಿತು ! ಕನಸು ಅಲ್ಲ ಇದು—ಯಾರೋ ತನ್ನನ್ನು ಕಂಬಳಿಯಿಂದ ಮುಸುಕು ಹಾಕಿ-ಬಿಗಿದು ಹಿಡಿದಿದ್ದಾರೆ. ಜೊತೆಗೆ ಮುಚ್ಚಿದ ಮುಷ್ಟಿಗಳಿಂದ ಬಲವಾಗಿ ಗುದ್ದುತ್ತಿದ್ದಾರೆ. ಕೂಗಿದರೆ—? ಶಕ್ಯವಿಲ್ಲ–ಬಾಯಿಗೆ ತುಂಬಿ ಚೆಂಡನ್ನು ತುರುಕಲಾಗಿದೆ. ಇಬ್ಬರು ಮೂವ್ವರಾದರೂ ಇರಬೇಕೆಂದು ಕಾಳ್ಯಾ ಲೆಕ್ಕ ಹಾಕಿದ ; ಅಷ್ಟೊಂದು ಬಲವಾಗಿ ಬಿಗಿದು ಹಿಡಿದು ಅದೇ ಹೊತ್ತಿಗೆ ಒಂದೇ ಸನನೆ ಗುದ್ದನ್ನು ಕೊಡಬೇಕಾದರೆ ಹೆಚ್ಚು ಜನರಿರಲೇಬೇಕು. ಇದಲ್ಲದೆ ಕೂಗಿದರೆ ಯಾರು ಬರುವರು ? ಅಪ್ಪ ಮನೆಯಲ್ಲಿ ಮಲಗಿರುವುದೆ ಇಲ್ಲ ; ಉಳಿದವರು ಮಗ ಮತ್ತು ಹೆಂಡತಿ .... ಅವರಿಬ್ಬರ ನೆನಪಾದೊಡನೆ ಕಾಳ್ಯಾ ಹೌಹಾರಿದವನಂತೆ ಏಳಲು ಪ್ರಯತ್ನಿಸಿದ. ಆದರೆ ಅದಕ್ಕೆ ಪ್ರತಿಯಾಗಿ ಬಲವಾದ ಏಟುಗಳು ದೊರೆತುವು. ಹೆಂಡತಿಗೆ ಮಗನಿಗೆ ಏನಾದರೂ ಅಪಾಯ ಆಗಬಹುದಲ್ಲ ಎಂಬ ವಿಚಾರದಂತೆ ಮೈಯಲ್ಲಿ ಭೂತ ಹೊಕ್ಕವನಂತೆ ಕಾಳ್ಯಾ ಏಳಲು ಯತ್ನಿಸಿದ ; ಆ ಯತ್ನದ ಫಲವಾಗಿ —ಒಳ್ಳೇ ಕಸುವಿನ ಪೆಟ್ಟನ್ನು ತಿಂದು—ಎಚ್ಚರದಪ್ಪಿ ಬಿದ್ದ.

ಮರುದಿವಸ ಕಾಳ್ಯಾ ಪೂರ್ತಿಯಾಗಿ ಬದಲಾಯಿಸಿದ್ದ. ಹೊಡೆದ

ರೀತಿಗಾಗಿ ಮೈಮೇಲೆ ಯಾವ ತರದ ಗಾಯಗಳಾಗಲಿ ಚಿಹ್ನಗಳಾಗಲಿ ಇದ್ದಿರಲಿಲ್ಲ, ಅದು ಒಳ್ಳೆಯದೇ ಆಯಿತು ಎಂದುಕೊಂಡ. ಆದರೂ ಮುಂದೆ ಬರಲಿರುವ ಗಂಡಾಂತರದ ಪೂರ್ವಚಿಹ್ನ ಇದು ಎಂದು ಕಾಳ್ಯಾನಿಗೆ ಅನುಭವದಿಂದ ಹೊಳೆಯಿತು. ಮರುದಿನವೆ ಅವನು ಒಂದು ಹಂಚಿಕೆಯನ್ನು ಮಾಡಿದ. ಕುಂಟನೆವವನ್ನು ಹೇಳಿ ಗಂಗಿಯನ್ನೂ ಭರಮುನನ್ನೂ ರಾಯರ ಮನೆಯ ದನದ ಕೊಟ್ಟಿಗೆಯ ಮಗ್ಗುಲಲ್ಲಿ ಮಲಗಿಸಿದ; ತಾನು ತಂದೆಗೆ ಜೊತೆಯಾಗಿ ರಾಯರ ಮನೆಯ ಮುಂದಿನ ಗಿಡದ ಕೆಳಗೆ ಮಲಗಿದ.

ಕಾಳ್ಯಾನ ಹಂಚಿಕೆ ಅತ್ಯಂತ ಯೋಗ್ಯ ಕಾಲಕ್ಕೆ ಬಂದಿತು ಎನ್ನಬಹುದು.

ಅಂದೇ ರಾತ್ರಿ ಕಾಳ್ಯಾನ ಗುಡಿಸಲು ಪೂರ್ತಿಯಾಗಿ ಸುಟ್ಟು ಹೋಯಿತು.

ಯಾರೋ ಗುಡಿಸಲಕ್ಕೆ ಕೊಳ್ಳಿ ಇಟ್ಟಿದ್ದರೆಂಬುದರಲ್ಲಿ ಸಂದೇಹವೆ ಇದ್ದಿರಲಿಲ್ಲ.

ಅಂದು ಮಾತ್ರ ಒಮ್ಮೆಲೆ ಕಾಳ್ಯಾನ ಸತ್ವ ಕುಸಿಯಿತು. ಈ ಪರಿಯಿಂದ ಯಾರು ತನ್ನನ್ನು ಪೀಡಿಸತೊಡಗಿದ್ದಾರೆ, ಯಾಕೆ— ಎಂಬುದರ ಕಲ್ಪನೆ ಅವನ ಬುದ್ಧಿಗೆ ನಿಲುಕದಾಯಿತು. ಆ ರಾತ್ರಿ ಗಂಗಿ ಮತ್ತು ಭರಮು ಗುಡಿಸಲಲ್ಲಿ ಮಲಗಿದ್ದರೆ? ಕಾಳ್ಯಾನ ಮೈ ಗದಗದ ನಡುಗಿತು ಆ ವಿಚಾರದಿಂದ. ಇಂದು ಗುಡಿಸಲಿಗೆ ಬೆಂಕಿ ಹಚ್ಚಿದವರು ನಾಳೆ ಜೀವನವನ್ನೆ ಹೊಡೆಯಬಹುದಲ್ಲ? ಯಾರು ಎಂಬುದರ ಕಲ್ಪನೆ ಇಲ್ಲ, ಯಾವ ಗಳಿಗೆಗೆ ಕೈ ಎತ್ತಬಹುದು–ಅದೂ ತಿಳಿಯದು, ಹೀಗಾಗಿ ಕಾಳ್ಯಾ ಒಮ್ಮೆಲೆ ಹೆದರಿದ. ಮರುದಿನ ರಾತ್ರಿ ಮಗನನ್ನು ತನ್ನ ಹತ್ತಿರದಲ್ಲಿಯೆ ಮಲಗಿಸಿಕೊಂಡ. ಆ ರಾತ್ರಿ ಯಾವ ಕಿಡಿಗೇಡಿತನವೂ ಸಂಭವಿಸಲಿಲ್ಲ.

ಆದರೆ ಬೆಳಗಾದೊಡನೆ ಕಾಳ್ಯಾನಾಗಲಿ ಹುಡುಗ ಭರಮುನಾಗಲಿ

ಕಾಣಿಸಲೇ ಇಲ್ಲ. ಇವರಿಬ್ಬರೂ ಜೀವದಿಂದಿರುವರೆ?—ಇಲ್ಲವೆ ಗುಡಿಸಲಿಗೆ ಬೆಂಕಿ ಇಟ್ಟವರು ಇವರನ್ನು ಹೆಚ್ಚಿನ ಅನಾಹುತಕ್ಕೆ ಈಡು ಮಾಡಿದರೊ? ತಿಳಿಯದಂತಾಯಿತು.

ಪರಸ್ಯಾ ದುಃಖದಿಂದ ಹೌಹಾರಿ ಕುಳಿತ.

“ಇಂತಹ ಘಟಿಂಗತನ ಎಂದೂ ಆಗಿರಲಿಲ್ಲ. ಏನ್–ಏನಿದು?” ಎಂದು ರಾಯರು ಹತಾಶರಂತೆ ಗೊಣಗಿದರು.

* * *

ರಾಯರು ಸಿಟ್ಟಿನಿಂದ ಹಣ್ಣಾದರು. ಕಾಳ್ಯಾ ಒಮ್ಮೆಲೆ ಓಡಿ ಹೋದದ್ದರಿಂದ ಊರಲ್ಲಿ ನಾಲು ದಿನ ಬೊಬ್ಬಾಟವಾಯಿತಲ್ಲದೆ ಮತ್ತೇನೂ ಇಲ್ಲ. ನಾಲ್ಕು ಜನರ ಬೊಬ್ಬಾಟ! ತುದಿ ಇಲ್ಲ, ಮೊದಲಿಲ್ಲ. ‘ಗುಂಡಣ್ಣ ತನ್ನ ಹೆಂಡತಿಯನ್ನು ಹಾಳು ಮಾಡಿದ್ದಕ್ಕೆ ಬೇಸತ್ತು ಕಾಳ್ಯಾ ಓಡಿಹೋದನಂತೆ! ಜಾತಿಯ ಹಿರಿತನ ಇಷ್ಟು ದೂರ ಒಯ್ಯಬಾರದು’ ಎಂದು ಒಂದು ದನಿ ಗುಂಡಣ್ಣನನ್ನು ಹಿಂಬಾಲಿಸುವುದು; ‘ಗಂಡನ್ನ ಓಡಿಸಿ ಹೆಂಡ್ತೀನ್ನ ಇಟ್ಕೊಳ್ಳೋದು ಎಲ್ಲಿಯೂ ನೋಡಿಲ್ಲ ಬಿಡು’ ಎಂದು ಗಂಟಲು ಸರಿಪಡಿಸಿಕೊಂಡು ಮತ್ತೊಂದು ದನಿ ಗುಂಡಣ್ಣನ ಬೆನ್ನಿಗೆ ತಿವಿಯುವುದು. ಗುಂಡಣ್ಣ ಮನೆಯಿಂದ ಹೊರಬಿದ್ದರೆ ಸಾಕು, ಹಿಂದಿನಿಂದ ಜನರು ಆಡುವರು. ಗುಂಡಣ್ಣನಾದರೂ ಸಹಿಸುವನು ಹೇಗೆ? ಸಿಟ್ಟನ್ನು ಉಳಿದ ಪರಸ್ಯಾನೊಬ್ಬನ ಮೇಲೆ ತೀರಿಸಿಕೊಳ್ಳುವನು; ಎಷ್ಟೆಷ್ಟೊ ಭಾರದ ಕೆಲಸಗಳನ್ನು ಪರಸ್ಯಾನಿಗೆ ಒಪ್ಪಿಸುವನು. ಕೊನೆಗೆ ಪರಸ್ಯಾ ರಾಯರಿಗೆ ಮೊರೆಹೋದ.

ರಾಯರು ಪೂರ್ತಿಯಾಗಿ ಹತಾಶರಾಗಿದ್ದಾರೆ. ಎಂದಿನಿಂದ ನಡೆದು ಬಂದ ಒಂದು ಸಂಬಂಧ ಕಡಿದಿದೆ; ಪರಸ್ಯಾನ ಮಗ ತಮ್ಮ ಮಗನ ಕಾಲಕ್ಕೆ ದುಡಿಯುವುದಿಲ್ಲ! ಎಂತಹ ಕಾಲಬಂದಿದೆ! ನಮ್ಮನ್ನು ಆಶ್ರಯಿಸಿದವರಿಗೆ ಬಿಟ್ಟು ಹೋಗುವ ಪ್ರಸಂಗ ಬರಬೇಕೆ–ಎಂದು

ಕಳವಳಗೊಂಡರು ರಾಯರು. ಒಟ್ಟು ತಮ್ಮ ಸಂಸಾರ ಹದಗೆಟ್ಟಿತು ಎಂದೇ ಅವರ ತಿಳುವಳಿಕೆ; ಮನಸ್ಸನ್ನು ಗಟ್ಟಿ ಮಾಡಿ ಸೊಸೆಯನ್ನೂ ಮೊಮ್ಮಗನನ್ನೂ ಶಹರದೂರಿಗೆ ಕಳಿಸಿದರು. ಮನೆಯಲ್ಲಿ ಮಗನ ಉಪಯೋಗವಿಲ್ಲ; ಮಗಳೊಬ್ಬಳೇ ಉಳಿದಿದ್ದಾಳೆ. "ಶಾಮಣ್ಣಾ, ಒಂಟಿ ಆಗಿ ಯಾಕ ಬ್ಯಾರೆ ಜಾಗ ಹಿಡಿದುಕೊಂಡು ಇದ್ದೀ, ಬಂದು ಇದ್ಬಿಡು" ಎಂದು ಶಾಮಣ್ಣನನ್ನು ಆಮಂತ್ರಿಸಿದರು. ಶಾಮಣ್ಣ ತಪ್ಪಿಸಿಕೊಂಡ, ನೆವ ಹೇಳಿ ನಿಜವಾಗಿ ಗುಂಡಣ್ಣ ಅಡ್ಡ ಬಂದಿದ್ದ.

"ಯಾಕರೀ, ನಮ್ಮ ಮನೆತನದ ಹೆಸರೂ ಕೆಡಿಸಬೇಕಂತೀರೇನು ?" ಎಂದಿದ್ದ.

ಶಾಮಣ್ಣನಿಗೆ ಸಂದರ್ಭ ತಿಳಿಯದೆ, "ಏನು ? ಯಾವ ವಿಷಯ ?" ಎಂದು ಕೇಳಿದ.

"ಯಾವದೇನು ? ಸುಟ್ಟಿತು ನಿಮ್ಮ ಸಂಬಂಧ, ನಿಮ್ಮ ವಿಷಯ ! ಯಾವ ಕಾಲಿನಿಂದ ನಮ್ಮ ಊರೊಳಗ ಹೊಕ್ಕಿರೊ ? ಜಾತಿ–ಧರ್ಮ ಕೆಡಿಸಿದಿರಿ ; ನಮ್ಮಲ್ಲಿ ಕೆಲಸಕ್ಕಿದ್ದ ಹೊಲೆಯರನ್ನೆ ಏರಿಸಿ ಕೂಡಿಸಿದಿರಿ. ನಿಮ್ಮ ಹೆಸರು ಏನು ಯಾಕ ಆಗವಲ್ಲದು. ಈಗ ನಮ್ಮಲ್ಲಿಯೆ ವಸ್ತಿ ಹಾಕಿ–ನಮ್ಮ ಮನೆಯ ಹೆಸರನ್ನೂ ಕೆಡಿಸಿರಿ–" ಎಂದು ಹಂಗಿಸಿದ ಗುಂಡಣ್ಣ.

ಶಾಮಣ್ಣ ಮುಗುಳ್ನಗೆ ನಕ್ಕು, ಮಾತಾಡದೆ ಮುಂದೆ ಸಾಗಿದ್ದ.

"ಎಲ್ಲಿದ್ದರೇನು, ರಾಯರ ? ನಿಮ್ಮಿಂದ ದೂರ ಏನು ನಾನು ?" ಎಂದು ರಾಯರನ್ನು ಶಾಮಣ್ಣ ಸಮಾಧಾನಗೊಳಿಸಿದ್ದ.

ಆದರೆ ರಾಯರಿಗೆ ಬೇಜಾರೆನ್ನಿಸಿತು. ಜೀವನದಲ್ಲಿ ಏನು ಉಳಿದಿದೆ ? ಮಗ, ಮಗಳು, ಆಶ್ರಿತರು—ಎಲ್ಲರದೂ ದುರವಸ್ಥೆಯನ್ನು ಕಣ್ಣಾರೆ ನೋಡಿದ್ದಾಯಿತು.

"ಶಾಮಣ್ಣಾ, ಹುಡುಗನ ಸಾಲೆಯ ವ್ಯವಸ್ಥಾ ಮಾಡೀನಿ. ಇನ್ನು ನನ್ನ ಕೆಲಸ ಮುಗೀತು" ಎಂದಿದ್ದರು ಒಂದು ದಿನ

ಶಾಮಣ್ಣನಿಗೆ.

"ಮನೆಗೆ ಹಿರಿಯರು ನೀವು, ಇರೋತನಕ ನಿಮ್ಮ ಕೆಲಸ ಇದ್ದೇ ಇದೆ. ಮುಗೀತಂದ್ರೇನು?" ಎಂದು ಶಾಮಣ್ಣ ವಿನೋದದ ದನಿಯಲ್ಲಿ ಕೇಳಿದ್ದ.

" 'ಮುಗಿಯಿತು' ಅಂದ್ರ ಮುಗೀತು, ಶಾಮಣ್ಣಾ. ಇನ್ನು ನಾ ಮಾಡೋದು ಉಳಿದಿಲ್ಲ, ನಾ ಜೀವದಿಂದ ಇರೋದರೊಳಗೂ ಅರ್ಥ ಇಲ್ಲ."

"ಅಂಥಾ ಮಾತು ತಾವು ಆಡಬಾರದು, ರಾಯರ."

"ಮಾತಾಡಿದ್ದಕ್ಕ ಸಾಯೋ ಸುದ್ದೈವ ನನಗ ಅದ ಅಂತ ತಿಳಿದೀ ಏನು, ಶಾಮಣ್ಣಾ? ಇನ್ನೂ ಏನೇನು ನೋಡೋದದನೊ ಹಣೆ ಬರೆಹದೊಳಗ?"

"ಇನ್ನೇನು ನೋಡೋದು? ಮೊಮ್ಮಗ ಪ್ರಬಲ ಆಗೋದನ್ನ!" ಎಂದು ನಕ್ಕಿದ ಶಾಮಣ್ಣ. ಅಂತಹ ಮಾತುಗಳನ್ನು ಕೇಳಿ ರಾಯರು ಉಸಿರಿಟ್ಟು ಸುಮ್ಮನಾಗುವರು. ಅವರಿಗೆ ಭಯ.

ಮೊಮ್ಮಗ ಬೆಳೆದು ಮುಂದೆ ಬರಬಹುದೆ?

ಅವನಿಗೆ ಕಲಿಸಲು ಸಾಕಷ್ಟು ಹಣದ ತ್ರಾಣವೂ ಇಲ್ಲ. ಸಾಲ ತೆಗೆಯುವುದಾದರೂ ಎಷ್ಟು? ಇದಲ್ಲದೆ ತಮ್ಮ ತರುವಾಯ ಗುಂಡಣ್ಣನಿಗೆ ಸಾಲವನ್ನು ಕೂಡ ಯಾರೂ ಕೊಡುವಂತಿಲ್ಲ.

"ಮಗನಿಂದ ಕಂಡ ಸುಖ ನಾಕಾಗಲಿಲ್ಲ, ಇನ್ನು ಮೊಮ್ಮಗನಿಂದ ಆಶಿಸಬೇಕು!" ಎಂದು ಒಳಗಿನ ಬೇಗೆಯಲ್ಲಿ ಬೆಂದ ದನಿಯಿಂದ ನುಡಿಯುವರು.

"ಸುಮ್ಮನೆ ಮನಸ್ಸಿಗೆ ಹಚ್ಚಿಕೋತೀರಿ, ರಾಯರ. ನೀವೇ ಎಲ್ಲಾ ನೋಡಿಕೋತೀರಿ ಅಂತ ನಿಮ್ಮ ಗುಂಡಣ್ಣ ಅವರಿಗೆ ಜವಾಬ್ದಾರಿ ಕೊರಳೊಳಗ ಬಿದ್ದಿಲ್ಲ—"

"ಆಗಿ ಹೋಯ್ತು! ಮುಂದಿಯ ಕೊರಳಿಗೆ ಉರುಲು ಅವನ

ಜವಾಬ್ದಾರಿ ಅಂದ್ರ!" ಎಂದು ರಾಯರು ಉಸುರ್ಗರೆದು ದಣಿದವರಂತೆ ಕಣ್ಣುಮುಚ್ಚುವರು.

ಹಿಂದೊಮ್ಮೆ ಅವನಿಗೆ ಜವಾಬ್ದಾರಿ ವಹಿಸಿದ್ದಿಲ್ಲವೆ? ಆ ಸಮಯದಲ್ಲಿ ಅವನು ಆ ಹೊಲೆಯರ ಹುಡುಗಿ—

ರಾಯರು ಒಳಗಿಂದೊಳಗೆ ನಾಲಗೆಯನ್ನು ಕಚ್ಚಿಕೊಂಡರು. ಗೊತ್ತಿದ್ದರೂ ಈ ವಿಷಯವನ್ನು ತಮಗೆ ತಾವು ಹೇಳಿಕೊಂಡದ್ದು ಇದೇ ಮೊದಲ ಸಲ.

ಆ ನೆನಪೇ ಬೇಡ ಎಂದು ಕಣ್ದೆರೆಯುವರು.

"ತನ್ನಷ್ಟಕ್ಕ ಹಾಳಾಗವಲ್ಲನ್ಯಾಕ, ಶಾಮಣ್ಣಾ. ಆದರೆ ಆ ಹುಡುಗರಿಗೆ ಶಿಕ್ಷಣ ಕೊಟ್ಟು ಅವರ್ನ ಹಾದಿಗೆ ಹಚ್ಚಿದರ—? ಹೋಗಲಿ, ಕಡೆಗೆ ಶಾಂತಿ ಆದರೂ ನೋಡಿಕೊಂಡಾಳು, ನೀ ಆದರೂ ನೋಡಿಕೊಂಡೀ."

ಪಾಪ! ರಾಯರು ಎಷ್ಟು ಹಣ್ಣಾಗಿದ್ದಾರೆ! ಮಗಳ ಬಗ್ಗೆ ಇಂತಹ ಮಾತು, ಜೊತೆಗೆ ತನ್ನ ಹೆಸರನ್ನೂ ಹಾಗೆ ಸೇರಿಸುವುದು—ನಿಜವಾಗಿಯೂ ಸತ್ವವನ್ನು ಪೂರ್ತಿಯಾಗಿ ಕಳೆದುಕೊಂಡ ಚಿಹ್ನೆ—ಎಂದು ಶಾಮಣ್ಣ ಒಂದು ನಿಮಿಷ ಕನಿಕರದೃಷ್ಟಿಯಿಂದ ರಾಯರನ್ನು ನೋಡಿದ.

"ಹಾಂಗ ಕೇಳಿದರ—ನೀವೇನೂ ಕಾಳಜಿ ಮಾಡೋ ಕಾರಣಿಲ್ಲ, ರಾಯರ."

"ಏನಂದಿ?" ವಿಶ್ವಾಸವಾಗದ ದನಿಯಲ್ಲಿ ರಾಯರು ಕೇಳಿದರು.

"ಮೊಮ್ಮಗನ ಸಲುವಾಗಿ ನೀವೇನೂ ಕಾಳಜಿ ಮಾಡೋ ಕಾರಣಿಲ್ಲ, ಅಂದೆ."

"ಶಾಮಣ್ಣಾ—"

ರಾಯರಿಗೆ ಒಂದೆರಡು ನಿಮಿಷ ಮಾತು ಬಾರದಂತಾಯಿತು. ಗಂಟಲು ತುಂಬಿ ಬಂದಿತು. ಒಂದೆರಡು ಸಲ ಸುಂಯ್ಗೊಟ್ಟು—ಸಮಾ

ಧಾನದಿಂದ ನುಡಿದರು.

"ಶಾಮಣ್ಣಾ, ಏನ್ಮಾತಾಡಬೇಕು ಅಂತ ಮಾಡಿದ್ದೆನೊ ಏನೊ ! ಹೋಗಲಿ ಬಿಡು. ಹೊಟ್ಟೆಗೆ ಹುಟ್ಟಿದ ಮಗನಿಗಿಂತ ಹೆಚ್ಚು ಹಚ್ಚಿಗೊಂಡೀದಿ ನೀನು, ನಿನಗ ಇಂಥಾ ಬುದ್ಧಿ ಕೊಟ್ಟದ್ದಕ್ಕಾಗಿ ಆದರೂ ನನ್ಮಟ್ಟಿಗೆ ನಿನ್ನ ಗಾಂಧಿ ದೊಡ್ಡ ಮನುಷ್ಯ ನೋಡು." ಎಂದು ಹುಡುಗನಂತೆ ಹಿಗ್ಗಿದ ಮುಖದಿಂದ ಅವನನ್ನು ದಿಟ್ಟಿಸಿದರು. "ಇನ್ನು ಅಡ್ಡಿ ಇಲ್ಲ, ಶಾಮಣ್ಣಾ" ಎಂದರು.

"ಅಡ್ಡಿ ? ಅಡ್ಡಿ ಯಾವುದಕ್ಕ ಇಲ್ಲ, ರಾಯರ ?"

"ಸಾಯಲಿಕ್ಕೆ—ಸಾಯಲಿಕ್ಕೆ ಇನ್ನು ಅಡ್ಡಿ ಇಲ್ಲ, ಅಂದೆ."

## ೧೧

ರಾಯರು ಇಚ್ಛಾಮರಣಿಗಳಾಗಿದ್ದರೇನೊ ! "ಇನ್ನು ಸಾಯಲು ಅಡ್ಡಿ ಇಲ್ಲ" ಎಂದಿದ್ದರು, ಅದರಂತೆ ಶೀಘ್ರದಲ್ಲಿಯೆ ಸಾವು ಅವರನ್ನು ಕೊಂಡೊಯ್ಯಿತು. ರಾಯರ ಒಂದು ಎಣಿಕೆ ಮಾತ್ರ ತಪ್ಪಿತು. ಶಾಂತ ಮನಸ್ಸಿನಿಂದ, ಒಳಗೆ ಯಾವುದೂ ಕಿರಿಕಿರಿ ಇಲ್ಲದೆ ಸಾಯುವೆನೆಂದು ಅವರು ತಿಳಿದಿದ್ದರು, ಆ ಭವಿಷ್ಯ ಮಾತ್ರ ಸುಳ್ಳಾಯಿತು. ಒಂದೇ ಒಂದು ಸಮಾಧಾನವಿದ್ದಿತು, ಆದರ ಅವರಿಗೆ—ಮೃತರಾದವರಿಗೆ–ನಿಷ್ಪ್ರಯೋಜಕವಾಗಿತ್ತು. ಬೇನೆ ಇಲ್ಲದೆ, ಒಳಲಿಕೆ ಇಲ್ಲದೆ ಕುಳಿತಕುಳಿತಲ್ಲಿಯೆ ಅವರ ಜೀವಹಕ್ಕಿ ಹಾರಿಹೋಗಿತ್ತು. ಯಾರಿಗೆ ಸಮಾಧಾನ ?

ರಾಯರ ಸಾವು ಅನಿರೀಕ್ಷಿತವಾಗಿತ್ತು. ನಿರೀಕ್ಷಿಸುವುದಾದರೂ ಹೇಗೆ ? ದೇಶದ ಯಾವುದೊ ಭಾಗದಲ್ಲಿ ಯಾವುದೊ ಒಂದು ಘಟನೆ ನಡೆದು, ಅದಕಾಗಿ — ಅದರ ಬಗ್ಗೆ ಏನನ್ನೂ ಅರಿಯದ – ತಮ್ಮ ಜೀವ ಹೋಗಬಹುದೆಂದು ರಾಯರು ನಿರೀಕ್ಷಿಸುವುದಾದರೂ ಹೇಗೆ ?

ಮಗನಿಂದ ತಮಗೆ ಸುಖವಿಲ್ಲ ಎಂದು ರಾಯರು ಎಂದಿನಿಂದಲೂ ತಿಳಿದುಕೊಂಡಿದ್ದರು, ಆದರೆ ಯಾರಿಂದ ತಮಗೆ ಸುಖವಿದೆ ಎಂದು ತಿಳಿದಿದ್ದರೊ ಆ ಶಾಂತಾ ಶಾಮಣ್ಣರೆ ಅವರ ಮರಣಕ್ಕೆ ಕೊನೆಯ

ಕಾರಣರಾದರು !

ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಮಹೋದಧೌ—ಎಂದು ಹೇಳುವುದು ಮುಂಚೆ ರಾಯರ ವಾಡಿಕೆಯಾಗಿತ್ತು. "ತಿಳೀತ್ತೇನು, ಪರಸ್ಯಾ? ಎರಡು ಕಟ್ಟಿಗೆ ತುಂಡು. ದೇವನ ಸೃಷ್ಟಿಯೊಳಗ ನಾವು ಎರಡು ಕಟ್ಟಿಗೆ ತುಂಡು! ತೇಲತಾ ಬಂದು ಕೂಡತಾವ—ಮತ್ತೆ ತೇಲತಾ ಬ್ಯಾರೆ ಬ್ಯಾರೆ ಆಗ್ತಾವ. ನೀ ಒಂದು ತುಂಡು, ನಾ ಒಂದು ತುಂಡು—ಆಂ ?"

"ಘಷೇರ ಜೋಡಿ ಈ ಪರಸ್ಯಾ ಹ್ಯಾಂಗ ಬಂದಾನ್ರಿ, ಯುವ ?" ಎಂದು ಪರಸ್ಯಾ ಕೈಜೋಡಿಸಿ ಹೇಳುವ.

"ಥೂ! ರಂಡೇಗಂಡಾ! ಹೇಳಿದ್ದು ತಿಳಿಯೋದಿಲ್ಲ ನಹಿತ!" ಎಂದು ರಾಯರು ಬೇಸರದ ದನಿಯಲ್ಲಿ ನುಡಿಯುವರು.

ಪರಸ್ಯಾ ತಿಳಿದದ್ದು ತಪ್ಪಾಯಿತು. ರಾಯರು ಈಗ ಒಂದು ಕಟ್ಟಿಗೆಯ ತುಂಡಾದರು. ದೇಶದಲ್ಲಿ ಬೀಸಿದ ಗಾಳಿ ಆ ತುಂಡನ್ನು ತೇಲಿಸಿಕೊಂಡು ಹೋಯಿತು.

* * *

ಕಾಲವು ರಾಯರನ್ನು ಕೊಂಡೊಯ್ದಾಗ ರಾಯರೆ ಒಂದು ದೃಷ್ಟಿಯಿಂದ ಗೆದ್ದಿದ್ದರು. ಅದಕಾಗಿಯೆ ಅವರು ಕಾಲನ ಕರೆಗೆ ಹೆದರಿರಲಿಲ್ಲ. ಹೆದರಲು ಯಾವ ಕಾರಣ ಉಳಿದಿತ್ತು? ಸೊಸೆ-ಮೊಮ್ಮಕ್ಕಳ ವ್ಯವಸ್ಥೆಯಾಗಿದೆ; ಮುಖ್ಯ, ಮೊಮ್ಮಗನ ಶಿಕ್ಷಣದ ವ್ಯವಸ್ಥೆ ಆಗಿದೆ (ತಂಗಿ ದೊಡ್ಡವಳಾಗೋದರೊಳಗಾಗಿ ರಾಘ್ಯಾ ನೋಕರಿ ಹಿಡಿದರ ಛಲೋ ಆಗ್ತದ); ಏನೇ ಆಗಲಿ, ಆ ನಿಮಿತ್ತದಿಂದ "ಈ ಹಾಳು ಗುಂಡ್ಯಾನ ಕಾಟ ತಪ್ಪಿತು ಹೆಂಡತಿ-ಮಕ್ಕಳಿಗೆ!" ರಾಯರಿಗೆ ಆ ಬಗ್ಗೆ ಪೂರ್ತಿ ಸಮಾಧಾನವಿತ್ತು. "ಶಾಂತೀದೇನು ಕಾಳಜಿ ಇಲ್ಲ" ಎಂದುಕೊಳ್ಳುತ್ತಿದ್ದರು. ತಮ್ಮ ತರುವಾಯ ಆಕೆ-ಶಾಮಣ್ಣ ಇವರಿಬ್ಬರ ಮದುವೆ ಖಂಡಿತ ("ಅದನ್ನು ಈ ಕಣ್ಣಿಂದ

ನೋಡೋ ಪಾಪ ಬ್ಯಾಡ") ಎಂದೆನ್ನಿಸಿ ಆ ಬಗ್ಗೆ ವಿಚಾರವನ್ನು ತಡೆಯುತ್ತಿದ್ದರು. ಇದಲ್ಲದೆ – ತಮ್ಮ ತಂಗಿ (ಸರಸ್ವತಿ)ಯ ಪಾಲಿನ ಆಸ್ತಿ ಈಗ ಮೊಮ್ಮಗಳಿಗೇ ಮಾಡಿದ್ದರು—"ಗುಂಡ್ಯಾ ಅದನ್ನೂ ನುಂಗೋದು ಬ್ಯಾಡ" — ಶಾಮಣ್ಣ ಇದ್ದಾನ ನೋಡಿಕೊಳ್ಳಲಿಕ್ಕೆ, ನಡೀತದ ಅಂದುಕೊಂಡರು. ಆಗಾಗ ಪರನ್ಯಾನ ಬಗ್ಗೆಯೆ ಅವರ ಕಾಳಜಿಯಾಗುತ್ತಿತ್ತು. "ಆ ಅವಲಕ್ಷಣ ಹುಡುಗ ಓಡಿಹೋಗ ಬೇಕ ಇದೇ ವ್ಯಾಳ್ಯಾಕ್ಕ ?—'ಒಟ್ಟು, ಈಗಿನ ಕಾಲದ ಹುಡುಗರು ಕೆಟ್ಟರು ಅನ್ನಬೇಕು, ಗುಂಡ್ಯಾ ಹೀಂಗ, ಕಾಶ್ಯಾ ಹಾಂಗ!" ಎಲ್ಲ ವ್ಯವಸ್ಥೆ ಆಗಿದೆ ಎಂದೆನ್ನಿಸಿದರೂ ಗುಂಡಣ್ಣನನ್ನು ನೆನೆದು ರಾಯರು ಹೆದರುತ್ತಿದ್ದರು. ಯಾವ ವ್ಯಾಳ್ಯಾಕ್ಕ ಈ ಉಲಕೋಟಿ ಏನ್ಮಾಡೀತೊ ಹೇಳೋ ಹಾಂಗೇ ಇಲ್ಲ—ಎಂದು ಅವರ ತಕರಾರು ಮಗನ ಬಗ್ಗೆ.

ತಂದೆಯ ಸಂಶಯವನ್ನು ಗುಂಡಣ್ಣನು ಯಥಾವತ್ತಾಗಿ ಪೂರಯಿಸಿದನು. ಕಾಶ್ಯಾ ಓಡಿಹೋದದ್ದು ತನಗೆಯೆ ಅವಮಾನ ಎಂದು ಗುಂಡಣ್ಣನ ಕಲ್ಪನೆ. ಯಾಕೆ ಓಡಿಹೋದ? ತನ್ನಿಂದ (ಗುಂಡಣ್ಣನಿಂದ) ತೊಂದರೆ ಆಯಿತು ಎಂಬ ವಿಚಾರವನ್ನು ರಾಯರ ತಲೆಯಲ್ಲಿ ತುಂಬುವುದು. ಗೊತ್ತು—ಇದೆಲ್ಲ ಈ ಪರನ್ಯಾನ ತಂತ್ರ! ಮಗನನ್ನು ಓಡಿಸಿ, ಸೊಸೆಗೆ ಆಧಾರ ಇಲ್ಲ ಅಂತ ಹೇಳಿ, ರಾಯರಿಂದ ದುಡ್ಡು ಎತ್ತಿ ಹಾಕೋದು, ಆಮ್ಯಾಲೆ ಉಳಿದ ತಾವಿಬ್ಬರೂ ಓಡಿ ಹೋಗೋದು!

ಇವರ ಗುಣಾನೇ ಇಂಥದು!—ಎಂದುಕೊಂಡ ಗುಂಡಣ್ಣ.

ಎಷ್ಟಾದರೂ ಜಾತಿ ಎಲ್ಲಿ ಹೋದೀತು—ಎಂದು ಹಟದಿಂದ ಹೇಳಿಕೊಂಡ.

"ಯಾಕರೀ, ಶಾಮಣ್ಣಾ? ಉಂಡ ಮನೆಯ ಗಳ ಎಣಿಸೋ ಜಾತೀನ್ನ ನೋಡಿದಿರಿಲ್ಲೊ?" ಎಂದು ಒಂದು ದಿನ ದ್ವೇಷದ ದನಿ ಯಲ್ಲಿಯೆ ಶಾಮಣ್ಣನನ್ನು ಕೇಳಿದ.

"ಏನು, ಗುಂಡಣ್ಣಾ, ಏನು ಹೀಗ ಮಾತಾಡಿದರ? ಏನು, ಆಯ್ತೇನು ಈಗ?" ಶಾಮಣ್ಣನ ಮುಖದಲ್ಲಿ ಸಂಶಯ, ದನಿಯಲ್ಲಿ ಅನಿಶ್ಚಿತತೆ ಇದ್ದಿತು.

"ಆಯ್ತುಂದ್ರೇನು? ಇದೆಲ್ಲಾ ನಿಮ್ದೆ ಕಮಾಯಿ! ಮ್ಯಾಲೆ ಏನೂ ಗೊತ್ತಿಲ್ಲದವರ್ಹಾಂಗ—"

"ಅಲ್ಲ, ಗುಂಡಣ್ಣಾ, ಯಾವ ವಿಷಯ ಹೇಳಿರಿ. ನನ್ನ ತಪ್ಪಿದ್ದರ ನಾ ಒಪ್ಪಿಕೋತೀನಿ."

"ಅಬ್ಬಬ್ಬ! ದೊಡ್ಡ ಸಾಧುಮಹಾರಾಜರೆ ಆದರಲ್ಲಾ ನಂ ಶಾಮಣ್ಣಾ ಅವರು! ವಿಷಯ ಸುದ್ದಾ ಗೊತ್ತಿಲ್ಲ ಅವರಿಗೆ! ಆದರೂ ತಪ್ಪಿದ್ದರ ಒಪ್ಪಿಕೋತಾರ! ಹೂಂ–ಇಲ್ಲಿ ನೋಡ್ರಿ, ರಾಯರ, ನೀವು ಒಪ್ಪಿಕೊಂಡಷ್ಟಕ್ಕ ನಮಗ ಆಶೀರ್ವಾದ ಕೊಟ್ಹಾಂಗೇ ಆಯ್ತುನ್ನಿರಿ! ಹೂಂ!...ಯಾವ ವಿಷಯ ಅಂತ? ಇಷ್ಟು ದಿವಸ ಅವನಿಗೆ ಕಲಿಸಿ ಕೊಟ್ಟಿರಿ, ಅವನನ್ನ ತಲೆಯ ಮ್ಯಾಲೆ ಏರಿಸಿ ಕೂಡಿಸಿದಿರಿ; ಈಗ? ಓಡಿಹೋದನೊ ಇಲ್ಲೊ?"

"ಯಾರು–ಆ ಕಾಳಪ್ಪನ ಮಾತು ಅಂತೀರೇನು?"

"ಕಾಳಪ್ಪ ಯಾಕ? ಆ ಹೊಲೆಯ ಸೂಳೇಮಗ ಕಾಳ್ಯಾ! ವಂಶಾನುವಂಶ ನಮ್ಮನೆಯ ಕೂಳನ್ನು ತಿಂದು ಬೆಳೆದು ಕಡೆಗೆ ಏನೇನೊ ಕಟ್ಟಿಕೊಂಡು ಓಡಿಹೋಗೋ—"

"ರಾಯರ, ಯಾಕ ಸಂತಾಪ ಮಾಡಿಕೋತೀರಿ?" ಶಾಮಣ್ಣ ಸಮಾಧಾನದಿಂದಲೆ ಹೇಳಿದ "ಒಂದು ಕಾಲದೊಳಗ ಮಗ ತಂದೆಯ ಮಾತನ್ನು ಕೇಳತಿದ್ದ, ಅದು ಬದಲಾಯ್ತು; ಹೆಂಡತಿ–ಗಂಡನಿಗೆ ವಿಧೇಯ ಆಗಿ ಇರತಿದ್ದಳು, ಅದು ಬದಲಾಯ್ತು—"

"ನೀವು ಅಂತೀರಾದ್ರೂ ಏನು?"

"ಅದರಂತೆಯೆ ಕೆಳಗಿನ ಜಾತಿಯವರು ಅನ್ನಿಸಿಕೊಂಡವರು ಮ್ಯಾಲಿನವರ ಮಾತು ಕೇಳೋದನ್ನ ಬಿಟ್ಟರ—"

"ಅಬ್ಬ ! ನಿಂ ಲೆಕ್‌ಚರ ನ್ನನ್ನ ಮುಂದ ಬ್ಯಾಡ ! ಪುರಾಣದ ಬ್ರಾಹ್ಮಣಸ್ಥಾಂಗ ಅಲ್ಲಿ ಹೋಗಿ ಹೇಳತಾ ಕೂಡಿರಿ, ಶಾಂತಿ ಅಂಥವರು ಕೇಳತಾ ಕೂಡತಾರ !"

ಗುಂಡಣ್ಣ ಆ ಮಾತನ್ನು ನುಡಿದು ಹೋದ ಕ್ಷಣ ರಾಮಣ್ಣನಿಗೆ ಎಚ್ಚರ ಬಂದಂತಾಗಿತ್ತು. ಎಂತಹ ಕುಲಗೇಡಿ ! ಇವನನ್ನು ಹಾಗೆಯೆ ಬಿಟ್ಟು ಬಿಟ್ಟೆನಲ್ಲ ! ಇಂಥಾ ನಾಲಗೆಯನ್ನು ಸೀಳಿ ಊರ ಅಗಸೆಯ ಬಾಗಿಲ ಗುಟಿಯೊಳಗಿಟ್ಟು—ಛಿ ! ಇದೇನು ? ಅವನೊಡನೆ ಸಿಟ್ಟನ್ನು ತಳೆದರೆ ಅವನ ಮಾಲಿಕೆಗೇ ಸೇರಿದಂತಾಗುವುದು. ಹೋಗಲಿ–ಆದರೂ ಜಗತ್ತಿನಲ್ಲಿಯ ದುಷ್ಟರನ್ನು ತಡೆದುಕೊಳ್ಳಲು ಹಿಮಾಲಯದಂತಹ ಸಹನಶಕ್ತಿ ಬೇಕು–ಎಂದುಕೊಂಡ ರಾಮಣ್ಣ, ಆ ಹಿಮಾಲಯ ತನ್ನಲ್ಲಿ ಇರಲಿಲ್ಲ ಎಂಬುದನ್ನರಿತು ಅವನು ಗುಂಡಣ್ಣನ ಹಾದಿಗೆ ಹೋಗುವು ದನ್ನೆ ಬಿಟ್ಟುಕೊಟ್ಟ!

ದಿನದಿನಕ್ಕೆ ಗುಂಡಣ್ಣನಿಗೆ ಹುಚ್ಚು ಹಿಡಿದಂತಾಯಿತು. ಅಂಥದ ರಲ್ಲಿ ತಂದೆ ಸುಬ್ಬಕ್ಕನನ್ನು ಮಕ್ಕಳೊಡನೆ ಮತ್ತೊಂದೂರಿಗೆ ಕಳಿಸಿ ಕೊಟ್ಟರು ! ಯಾಕೆ ? ಹುಡುಗನಿಗೆ ಶಿಕ್ಷಣವಂತೆ ! ಅಬ್ಬ ! ತನಗೆ ತಿಳಿಯುವುದಿಲ್ಲವೆ ಈ ಮುದುಕನ ಠಕ್ಕತನ ! ಶಿಕ್ಷಣವೆಲ್ಲಿಂದ ಬಂತು ? ಅದೇ ಶಿಕ್ಷಣಕ್ಕಾಗಿ ತಾನು ಚಿಕ್ಕವನಿದ್ದಾಗ ಏನಾಗಿತ್ತು–ಎಂಬುದು ಗುಂಡಣ್ಣನ ನೆನಪಿಗೆ ಬಂದಿತು. ಶಿಕ್ಷಣ ಸುಳ್ಳು, ಸವಲತ್ತು ಸುಳ್ಳು. ಒಟ್ಟು ಈ ಮನೆಯಲ್ಲಿ ತನ್ನ ಮೇಲೆ ವಿಶ್ವಾಸವಿಲ್ಲ ! ಈ ಮನೆ ಯಜ ಮಾನ ತಾನು ಅಲ್ಲ. ನೋಡೋಣ ಇವರು ಆಟವನ್ನು ಹೇಗೆ ಸಾಧಿಸಿ ಕೊಳ್ಳುವರು !

ಗುಂಡಣ್ಣನಿಗೆ ಹೆಂಡತಿ–ಮಕ್ಕಳ ಮೋಹ ಇದ್ದಿರಲಿಲ್ಲ. ಅವರು ದೂರ ಇದ್ದಷ್ಟು ಅವನಿಗೆ ಪೀಡೆ ತಪ್ಪಿತೆಂದೇ ಸಮಾಧಾನ. ಆದರೆ– ಮನೆಯ ಹೊರಗೆ ಮಾತ್ರ ಎಲ್ಲಾ ಅನುಕೂಲಗಳು ಬೇಕೆಂಬ ಲಾಲಸೆ ಅವನನ್ನು ಬಿಟ್ಟಿರಲಿಲ್ಲ. ಈಗಂತೂ ಊರ ಜನರ ವಿಶ್ವಾಸವೂ ಅವನ

ಮೇಲೆ ಇದ್ದಿರಲಿಲ್ಲ; ಮನೆಯಲ್ಲಿ ಯಾರನ್ನು ಕಂಡರೂ ಅವನಿಗೆ ತಡೆಯುತ್ತಿರಲಿಲ್ಲ. ಇದರಿಂದಾಗಿ ಅವನ ಸ್ವಭಾವದಲ್ಲಿ ಸಿಡುಕು ಹೆಚ್ಚಿತು. ಸಿಡುಕಿನ ಭಾರ ತಡೆಯದಂತಾದಾಗ ಒಂದು ತಂಗಿ, ಇನ್ನೊಂದು ಪರಸ್ಯಾ ಇವೆರಡು ವ್ಯಕ್ತಿಗಳ ಮೇಲೆಯೆ ಅದನ್ನು ಚಲ್ಲಿ ಹಗುರು ಮಾಡಿಕೊಳ್ಳಬೇಕಾಗುತ್ತಿತ್ತು. ತಂದೆಯ ಹಾದಿಗೆ ಇವನು ಹೋಗುತ್ತಿರಲಿಲ್ಲ, ಇವನ ಹಾದಿಗೆ ಶಾಮಣ್ಣ ಹೋಗುತ್ತಿರಲಿಲ್ಲ. ಸುಬ್ಬಕ್ಕ ಮಕ್ಕಳನ್ನು ಕರೆದುಕೊಂಡು ಹೋದಂದಿನಿಂದ ಮನೆಯಲ್ಲಿ ಶಾಂತಳ ಜವಾಬದಾರಿ ಹೆಚ್ಚಿತ್ತು, ಆದ್ದರಿಂದ ಆಕೆಯೊಡನೆ ಕಾಲು ಕೆದರಿ ಜಗಳ ಹೂಡಲು ಗುಂಡಣ್ಣನಿಗೆ ಅನುಕೂಲವೂ ಆಗಿತ್ತು.

ತಂಗಿಯ ಮೇಲೆ ಗುಂಡಣ್ಣನ ಸಿಟ್ಟು ದಿನದಿನಕ್ಕೆ ಬೆಟ್ಟದಂತೆ ಕಟ್ಟಿಕೊಂಡು ನಿಂತಿತು. ಕಾಳ್ಯಾ ಮಗನನ್ನು ಕರೆದುಕೊಂಡು ಸುಳಿವಿಲ್ಲದೆ ಓಡಿಹೋದಮೇಲೆ, ಅವನ ಪತ್ತೆ ಆಗದು ಎಂದು ಖಾತ್ರಿಯಾದೊಡನೆ ಗಂಗಿ ನಿಜವಾಗಿ ನಿರ್ವಿಣ್ಣಳಾದಳು. ಏನೇ ಅವಸ್ಥೆ ಇದ್ದರೂ, ಇದ್ದಾಗ ಗಂಡನ ಆಧಾರ ಇದ್ದಿತು ಎಂಬುದು ಈಗ ತಿಳಿದು ಬಂದಿತು ಆಕೆಗೆ. ಈಗ—? ಗಂಡನ ಪತ್ತೆಇಲ್ಲ. ತನ್ನಂಥಾಕೆಯನ್ನು ಬೇಕಾದವನು ಬೇಕಾದಂತೆ ಪೀಡಿಸಬಹುದಲ್ಲ?— ಈ ವಿಚಾರದಿಂದ ಗಂಗಿ ಶಾಂತಳ ಆಧಾರವನ್ನು ಕಟ್ಟಿಕೊಂಡಿದ್ದಳು. ಶಾಂತಳಾದರೂ— ಕಾಳ್ಯಾನಿಗೆ ವಚನಬದ್ಧ ತಾನು ಎನ್ನುವವಳಂತೆ–ಆತ್ಮೀಯತೆಯಿಂದ ಗಂಗಿಯನ್ನು ಪೋಷಿಸಿದಳು. ಈಗ ಗಂಗಿ–ಗುಡಿಸಲಿಲ್ಲದ್ದಕ್ಕೆ–ರಾಯರ ಮನೆಯ ಹಿಂದೆ ದನದ ಕೊಟ್ಟಿಗೆಯ ಗೋಡೆಗೆ ಚಪ್ಪರವನ್ನು ಹಾಕಿಕೊಂಡು ವಾಸಮಾಡುತ್ತಿದಾಳೆ. ಹಿತ್ತಲಕ್ಕೆ ಹೋಗುವಾಗ ಒಂದೆರಡು ಸಲ ರಾಯರ ಕಣ್ಣಿಗೆ ಬಿದ್ದಿದ್ದಳು, ಶಾಂತಳೂ ಅದಕಾಗಿ ಹೆದರಿದ್ದಳು. "ಮನೀವಳಗ ಇನ್ನು ಎಲ್ಲಿ ತನಕ ಬರ್ತಾರ ಇವರು" ಎಂದುಕೊಂಡರು ರಾಯರು. ಆದರೆ–ಕ್ರಮೇಣ–ಇದು ಅನಿವಾರ್ಯ ಎಂದು ತಿಳಿದುಕೊಂಡು ತಾವೇ ಹಿತ್ತಲ ಬಾಗಿಲ ಉಪಯೋಗವನ್ನು

ಕಡಮೆ ಮಾಡಿದರು. ಗಂಗಿಗೆ ಪೂರ್ತಿಯಾಗಿ ಸುರಕ್ಷಿತತೆ ಸಿಕ್ಕಿತು. ಇದೇ ಗುಂಡಣ್ಣನ ಸಿಟ್ಟನ್ನು ಭುಗಿಲೆನ್ನಿಸಿತು.

ಮನೆಯಲ್ಲಿ ಯಾವುದಕ್ಕೂ ತನಗೆ ಹಕ್ಕಿರಬಾರದೆಂದರೆ ?— ಎಂದು ಗುಂಡಣ್ಣನ ಸಂತಾಪ. ಹೆಂಡತಿ–ಮಕ್ಕಳು ಹೋಗಲಿ, ಇಲ್ಲದ ಜವಾಬ್ದಾರಿ ತಪ್ಪಿತು. ಆದರೆ ಎಂದಿನಿಂದಲೂ ತನ್ನಿಂದ ಬೇಕಾದ್ದನ್ನು ಪಡೆದುಕೊಂಡ ಗಂಗಿ ಕೂಡ ಈಗ ಮುಡಿವಂತಳಂತೆ ತನ್ನನ್ನು ಕಂಡು ದೂರ ಹಾಯಬೇಕೆ ?

"ಆಕೇದು ತಲಿ ಬೋಳಿಸಿ ಗುಡಿಗೆ ಪುರಾಣಕ್ಕ ಯಾಕ ಕರೆದು ಕೊಂಡು ಹೋಗೋದಿಲ್ಲ ?" ಎಂದು ಒಂದು ದಿವಸ ತಂಗಿಯನ್ನು ಕೆಣಕಿದ. ಇದೆಲ್ಲ ತನ್ನ ತಂಗಿಯದೆ ಕಾರಭಾರ ಎಂಬುದು ಅವನಿಗೆ ಗೊತ್ತಿತ್ತು, ಅದಕಾಗಿ ಆಕೆಯನ್ನು ಎಷ್ಟು ಪೀಡಿಸಿದರೂ ಅವನಿಗೆ ಸಮಾಧಾನವಿದ್ದಿರಲಿಲ್ಲ.

"ಏನು ಆ ಕೆಲಸಕ್ಕ ಶಾಮಣ್ಣ ಪುರೋಹಿತ ಆಗಬೇಕೊ ?" ಎಂದ, ತಂಗಿ ಇನ್ನೂ ಮಾತನಾಡದ್ದನ್ನು ನೋಡಿ.

"ಅಣ್ಣಾ, ಜಗಳಾಡಿದರ ನಮ್ಮನಮ್ಮೊಳಗ ನಾವು ಜಗಳಾ ಡೋಣ. ಹೊರಗಿನವರನ್ನ ನೇರಿನೋದು ಬ್ಯಾಡ" ಎಂದಳು.

"ಅಬ್ಬ ! ಶಾಮಣ್ಣನ ಹೆಸರನ್ನ ಕೂಡಾ ಎತ್ತಬಾರದೇನು ನಾನು ? ಈಗ ಹೊರಗಿನವ ಆದ ಏನು ಶಾಮಣ್ಣ ?"

"ಹೊರಗಿನವರು ಅಂತ ಮಂದಿಯ ದೃಷ್ಟಿಯಿಂದ ಹೇಳಿದೆ. ನಮಗ ಅವರು ಒಳಗಿನವರೆ."

"ಹುಂ. ಉಂ ..'ನಮಗ ಅವರು ಒಳಗಿನವರು' !. .ಅದಕೇ ಮಂದಿ ಸಿಕ್ಕಸಿಕ್ಕದ್ದನ್ನ ಆಡಿಕೋತಾರ. ನನಗ ಗೊತ್ತಿರಲಿಲ್ಲ, ಶಾಮಣ್ಣ ನಿನಗ ಒಳಗಿನವ ಅಂತ "

"ಅಣ್ಣಾ–ಮಂದಿ ಆಡಿಕೊಳ್ಳೋದೇನು ಹೊಸತೇನು ? ಯಾರು ಏನು ಅಂದ್ಕೊಂಡರೂ ಹೆದರೋ ಹಾಂಗಿಲ್ಲ ಅನ್ನೋ ಗುಣ ನನ್ನ

ಲ್ಲಿದ್ದರ, ನಿನ್ನಿಂದಲೆ ಕಲಿತುಕೊಂಡದ್ದಲ್ಲ ಅದು ?”

ಆಗ ಗುಂಡಣ್ಣ ರೇಗುವ, ಕೂಗುವ, ಚೀರುವ.

“ನೀವೆಲ್ಲಾರೂ ನನ್ನಕಿಂತ ಶಾಣ್ಯಾರು ಅಂತ ತಿಳ್ಕೊಂಡಿರಿ. ನೀವೇ ಸಂಭಾವಿತರು, ನಾನು ಶುದ್ಧ ಲಫಂಗ ಅಂತ ತಿಳಿದೀರಿ. ನನಗ್ಗೊತ್ತು ನಿಮ್ಮ ಆಟ! ನನ್ನ ಹೆಂಡತಿ-ಮಕ್ಕಳನ್ನ ಹೊರಗ ಹಾಕಿದಿರಿ; ಇನ್ನ ಹೆಸರು ಕೆಡಿಸಿ ನನ್ನನ್ನೂ ಹೊರಗ ಹಾಕಿಸಿರಿ. ಆಮ್ಯಾಲೆ, ಮನೆಗೆ ಮಾಲಿಕ ಶಾಮಣ್ಣ! ಇಷ್ಟು ಮಾಡಿಯೂ ಅವ ನಿನ್ನನ್ನು ಮದುವೆ ಆಗ್ತಾನೊ ಇಲ್ಲೊ? ಏನು ನೀನೇ ಗಂಗಿಯಿಂದ ಪಾಠ ಕಲೀತೀಯೊ!” ಎಂದು ಏನೇನೊ ಹುಚ್ಚಿದ್ದು ಕೂಗಾಡುವ.

ಶಾಂತ—ಮಾಡುವಳೇನು?—ಅಳುವಳು. ಯಾರಿಗೆ ಹೇಳುವಳು?—ತನ್ನಷ್ಟಕ್ಕೆ ತಾನೇ ಅಳುವಳು... ಯಾರು ಸಮಾಧಾನವನ್ನು ಕೊಡಬೇಕು?.. ಹೇಗಾದರೂ ಈ ಜೀವನವನ್ನು ಮುಗಿಸಬೇಕು—ಎಂದು ತನ್ನಷ್ಟಕ್ಕೆ ಮುಂಯ್ಗುಡುತ್ತ ಹೇಳಿಕೊಳ್ಳುವಳು.

ಗುಂಡಣ್ಣನ ಸಿಟ್ಟು ಮಾತ್ರ ದಿನದಿನಕ್ಕೆ ಬೆಳೆಯುತ್ತಲಿದೆ. ಎಲ್ಲರೂ ಅವನನ್ನು ಆದಷ್ಟು ತಪ್ಪಿಸಲು ಯತ್ನಿಸುವರು, ಆದರೆ ಒಮ್ಮೊಮ್ಮೆ—ಅನಿವಾರ್ಯವಾಗಿ-ಪರಸ್ಯಾ ಅವನ ಕಣ್ಣಿಗೆ ಬಿದ್ದರೆ ಮೊದಲು “ಯಾರೊ ನೀನು?” ಎಂದೇ ಕೇಳುವನು, ಪರಿಚಯವಿಲ್ಲದವರಂತೆ ಕೇಳುವನು. ಧಣೀರ ಸಿಟ್ಟಿನ ಮಾತ್ಇದು—ಎಂದು ಪರಸ್ಯಾ ಸುಮ್ಮನಿದ್ದರೆ ಗುಂಡಣ್ಣ ಈ ಸಲ ಗದ್ದರಿಸಿ ಕೇಳುವನು: “ಯಾರೊ ನೀನು? ಎಲ್ಲಿಯವನೊ?” ಎಂದು. ಪಾಪ! ಪರಸ್ಯಾನಿಗೆ ನಾಚಿಕೆಯಾದಂತಾಗುವುದು

“ನಾನರಿ, ಧಣೀರ, ಪರಸ್ಯಾ, ಪಾದಕ್ಕ ಬೀಳ್ತೀನ್ರಿ.” ಎನ್ನಲೇಬೇಕಾಗುವುದು.

“ಯಾರು?” ಗುಂಡಣ್ಣ ಅತ್ಯಂತ ಆಶ್ಚರ್ಯವನ್ನು ನಟಿಸುವನು. ಯಾರು, “ಪರಸ್ಯಾ! ಅಂದ್ರ—ಆ-ನಮ್ಮ ಪರಸ್ಯಾ! ಎಲ!

ಇಲ್ಲಿ ಯ್ಯಾಂಗ ಇದ್ದೀಯೋ ನೀನು ?"

ಪರಸ್ಯಾನಿಗೆ ಕ್ರಮೇಣ ಈ ಚುಚ್ಚು ಮಾತುಗಳ ರೂಢಿಯಾಗಿ ಅವನು ಉತ್ತರವನ್ನೆ ಕೊಡುತ್ತಿರಲಿಲ್ಲ.

"ಇಲ್ಲಿ ಹ್ಯಾಂಗ ಬಂದಿ-ಅಂತೀನಿ. ಕಾಳ್ಯಾನ ಜೋಡಿ ಹೋಗಿಲ್ಲೇನು ನೀನು ? ಎಂಥಾ ಧಡ ಇದ್ದೀಯೊ ? ಹಂ-ಹಂ-ಮಗನಕಿಂತ ಶಾಣ್ಯಾ ಕಾಣ್ತಿ !.... ಬೆರಕಿ-ಇದ್ದೀಯೊ ! ಅಂ ? ಧಣೀರದು ಏನಾದ್ರೂ ಉಳಿದಿದ್ದರ ಅದನ್ನೂ ಬಳೆದುಕೊಂಡು ಹೋಗಬೇಕು ಅಂತ ಇಲ್ಲಿ ನಿಂತೀದಿ ! ಅಂ ?"

ಒಂದು ದಿನ ಹೀಗೆ ಮನಬಂದಂತೆ ಮಾತನಾಡುತ್ತ, ಪರಸ್ಯಾನಿಂದ ಉತ್ತರವೆಂಥದು ಬರಬೇಕು ? ಆದರೆ — ಪರಸ್ಯಾ ಸುಮ್ಮನಿದ್ದುದನ್ನು ಕಂಡು ಗುಂಡಣ್ಣನ ಸಿಟ್ಟು ಮಿತಿಮೀರಿ ಏರಿತು. "ಮಾತಾಡೊ ! ಇಡಿಯ ಜನ್ಮ ನಮ್ಮಲ್ಲಿಯ ಕೂಳು ತಿನ್ನಲಿಕ್ಕೆ ಇತ್ತು ನಿನ್ನ ಬಾಯಿ, ಈಗ ಮಾತಾಡ್ಲಿಕ್ಕೆ ಇಲ್ಲ ಅಲ್ಲಿ ?" ಎನ್ನುತ್ತ ಕೈಯೊಳಗಿದ್ದ ಪಾತ್ರೆಯನ್ನು ಪರಸ್ಯಾನ ಬಾಯಿಗೆ ಬೀಸಿದ. ಒಂದೆರಡು ಹಲ್ಲು ಉದುರಿದುವು, ರಕ್ತ ಬಂದಿತು. ಆ ರಾತ್ರಿ ಪರಸ್ಯಾ ಊಟ ಮಾಡಲಿಲ್ಲ

"ತಿನ್ನೋ, ಸೂಳೆಮಗನೆ ! ನಾ ಹೋದ ಮ್ಯಾಲೆ ನಿನ್ನ ದಿಕ್ಕಿಗೆ ಎಂಜಲೆಲೆ ಆದರೂ ಒಗೀತಾರೊ ಇಲ್ಲೊ !" ಎಂದರು ರಾಯರು.

"ಬಾಯಿಗೆ ರುಚಿ-ಇಲ್ರಿ, ಧಣೀರ" ಎಂದ ಪರಸ್ಯಾ

"ನಾಳೆ ಶಾಮಣ್ಣಾಗಾದರೂ ಕೇಳು, ಔಷಧ ಕೊಡ್ತಾನೇನು ?" ಪರಸ್ಯಾ ವಿಷಾದದಿಂದ ನಗಲು ಯತ್ನಿಸಿದ, ಗಾಯದ ನೋವು ಬಿಗಿಯಿತು. "ನೀವೇನೊ ಹೇಳ್ತಿದ್ದಿರಲ್ಲರಿ, ಧಣೀರ, ಹಾಂಗ ಇನ್ನು ,ಈ ಕಟ್ಟಿಗೆ ತುಂಡು ಕೊಳೆತು ಹೋಗೋದು, ಅಗಸುದ್ದೆ (ಔಷಧ) ಕೊಟ್ಟರ ಉಳಿದೀತರಿ ?" ಎಂದ.

"ಎಲ್ಲಾರೂ ನನ್ನಕಿಂತ ಬುದ್ಧಿವಂತರಾಗೀರವ !" ಎಂದು

ಗೊಣಗುತ್ತ ರಾಯರು ಹೋಗಿದ್ದರು.

ಗುಂಡಣ್ಣನ ಸಿಟ್ಟಿಗೆ ಮನೆಯಲ್ಲಿ ತೃಪ್ತಿ ದೊರೆಯಲಿಲ್ಲ. ಅವನಿಗೆ ಇದಿರಾಗಿ ನಿಂತು ಮಾತನಾಡುವವರು ಯಾರು ಮನೆಯಲ್ಲಿ ? ಸಿಟ್ಟಿಗೂ ಮನೆಯಲ್ಲಿ ಬೇಸರ ಬಂದಿತೇನೊ ! ಒಂದಿಲ್ಲೊಂದು ನೆವದಿಂದ ಗುಂಡಣ್ಣನ ಸಿಟ್ಟು ಹೊರಗೆ — ಮನೆಯ ಹೊರಗೆ, ಊರಿನ ಜನರ ಮುಂದೆ ಹಾರಾಡತೊಡಗಿತು. ಯಾವುದೊ ನೆವದಿಂದ ಒಬ್ಬ ರೈತನನ್ನು ಬೈಯುವ ; ಇನ್ನೊಂದು ಕಡೆ ಇನ್ನೊಬ್ಬ ನನ್ನು ಹೊಡೆಯುವ ಹಾದಿಯಲ್ಲಿ ಯಾರದಾದರೂ ಎತ್ತು, ದನ ಬಂದರೆ ಸಂತಪ್ತನಾಗಿ ಕಲ್ಲುಗಳನ್ನು ಆಯ್ದುಕೊಂಡು ಹೊಡೆಯುತ್ತಿದ್ದ.

ಜನ ಮೊದಮೊದಲು ಸುಮ್ಮನಿದ್ದಿತು. ಶಾಮಣ್ಣನಿಗಾಗಿ ಗೌರವವಿದ್ದುದಕ್ಕೆ ಜನ ಸುಮ್ಮನಿದ್ದುದನ್ನು ತನಗೆ ಹೆದರಿ ಸುಮ್ಮನಿದೆ ಎಂದು ಗುಂಡಣ್ಣ ತಿಳಿದ. ಇದರಿಂದ ಅವನನ್ನು ಹಿಡಿಯುವವರೆ ಇಲ್ಲದಂತಾದರು. ಸಂಜೆಗೆ ಹೊಂಡಕ್ಕೆ ಹೋಗುವ, ನೀರಿಗೆ ಬಂದ ಹೆಣ್ಣುಮಕ್ಕಳನ್ನು ಛೇಕಿಸುವ, ಸೂಚ್ಯ ಶಬ್ದಗಳನ್ನು ನುಡಿಯುವ, ಕೊನೆಗೆ ಅವಾಚ್ಯಕ್ಕೆ ಇಳಿದುಬಿಡುವ, ಇದ್ದಕ್ಕಿದ್ದಂತೆ ಒಂದು ದಿನ ಸಂಜೆ ಹೊಂಡದಿಂದ ಮನೆಗೆ ಬರುವಾಗ ಹಿಂದಿನಿಂದ ಯಾರೋ ಇಬ್ಬರು ಬಂದು, ಕಣ್ಣುಕಟ್ಟಿ, ಬಾಯಿಗೆ ಚಂಡನ್ನು ತುರುಕಿ, ಚನ್ನಾಗಿ ಥಳಿಸಿ, ಕೊನೆಗೆ ಉಟ್ಟ ಧೋತರವನ್ನು ಕಸಿದುಕೊಂಡು ಹೋಗಿದ್ದರು.

ಆ ಅವಮಾನದಿಂದ ಕಿಡಿಕಿಡಿಯಾದ ಗುಂಡಣ್ಣ.

"ನನಗ ಗೊತ್ತದ ಯಾರು ಇದನ್ನ ಮಾಡಿದವರು" ಎಂದು ಒಂದೆರಡು ದಿನ ಹೆದರಿಸಬೇಕೆಂದು ಮಾತಾಡಿದ

"ಈ ಊರಾಗ ಇಂಥ ಘಟಿಂಗ ಅಂದರ ಒಬ್ಬನೇ ಇದ್ದಾನ" ಎಂದು ಸೂಚ್ಯವಾಗಿ ನುಡಿಯತೊಡಗಿದ.

"ಷಂಢ ಸೂಳೇಮಕ್ಕಳು ! ಮುಂದಿನಿಂದ ಬರೋ ಧೈರ್ಯ

ಆಗಿಲ್ಲ! ಹಿಂದಿನಿಂದ ಬರುವಾಗಲೂ ಸಪ್ಪಳ ಆಗಬಾರದು ಅಂತ ಕೈಯೊಳಗಿನ ಬಳಿ ತೆಗೆದಿಟ್ಟು ಬಂದಾರ" ಎಂದು ಕೆಣಕಿ ಮಾತಾಡಿದ-

ಪ್ರಯೋಜನವಾಗಲಿಲ್ಲ.

ರಾಮಪ್ಪನೆ ಇದನ್ನು ಮಾಡಿದವ ಎಂದು ಕೆಲವರ ಮುಂದೆ ಹೇಳಿದ.

"ನನ್ನ ಅಂಗೈಯೊಳಗಿನ ಎಂಜಲು ನೆಕ್ಕಿ ಮುಂದ ಬಂದಾವ" ಎಂದು ಚುಚ್ಚಿ ಮಾತನಾಡಿದ.

"ಆ ರಾಮ್ಯಾನೇ ಮಾಡಿಸಿದವ. ಖಾತ್ರಿ ಅದ ನನಗ. ಹಿಂದಿನಿಂದ ಬಂದು ಹೊಡೆಯೋರು ಗಂಡಸರೆ ಅಲ್ಲ. ನಮಗ್ಗೊತ್ತಿಲ್ಲೇನು– ಈ ಊರಾಗ ತನ್ನ ಹೆಂಡತೀನ್ನ ತಾ ಉಳಿಸಿಕೊಳ್ಳಲಾರದವ ಯಾರು ಅಂತ" ಎಂದು ಸೇಡಜಿಯ ಅಂಗಡಿಯಲ್ಲಿ ಕುಳಿತಾಗ ಅಬ್ಬರಿಸಿದ.

ಆ ರಾತ್ರಿ ರಾಯರ ಮನೆಯ ಮೇಲೆ ದೊಡ್ಡ ದೊಡ್ಡ ಕಲ್ಲುಗಳು ಬಿದ್ದುವು. ಇದನ್ನೆಲ್ಲ ನೋಡಿ – ರಾಯರು ಕಕ್ಕಾವಿಕ್ಕಿಯಾದರು. "ದೇವರೆ, ಕೂತ ಕೂತಲ್ಲೆ ಸತ್ತುಹೋಗಬಾರದೆ ನಾನು" ಎಂದು ಹಂಬಲಿಸಿದರು.

ಮುಂದೆ ಎಂಟೇ ದಿನಗಳಲ್ಲಿ ಇಚ್ಛಾಮರಣಿಯಂತೆ ರಾಯರು ಕೂತ ಕೂತಲ್ಲಿಯೆ ಜೀವವನ್ನು ಬಿಟ್ಟರು. ಆದರೆ – ಅವರು ತಿಳಿದು ಕೊಂಡಂತೆ ಆ ಜೀವದ ಬಿಡುಗಡೆಯಾಗಲಿಲ್ಲ.

ರಾಯರಿಗೆ ಮೀರಿದ ಒಂದು ಘಟನೆ ನಡೆಯಿತು. ಶಾಮಣ್ಣ ನೊಡನೆ ಮಾತನಾಡಿ ಸಮಾಧಾನ ಹೊಂದಬೇಕೆಂಬ ರಾಯರಿಗೆ ಶಾಮಣ್ಣನಿಂದ ಆಗಾಗ ಕೆಲವು ಸಂಗತಿಗಳು ತಿಳಿಯುತ್ತಿದ್ದುವು. ಆದರೆ ಆ ಬಗ್ಗೆ ಅವರಿಗೆ ವಿಶೇಷ ಆಸಕ್ತಿ ಇದ್ದಿಲ್ಲವಾದ್ದರಿಂದ ಅವು ಅವರ ಲಕ್ಷ್ಯದಲ್ಲಿಯೂ ಉಳಿಯುತ್ತಿರಲಿಲ್ಲ, ಅವುಗಳಿಗೆ ಅವರು ಮಹತ್ವವನ್ನೂ ಕೊಟ್ಟಿರಲಿಲ್ಲ. ಆದುದರಿಂದ ಶಾಮಣ್ಣ ಒಂದು ದಿನ ರಾಯರಿಗೆ "ರಾಯರ, ಗಾಂಧಿಜಿಯುವರನ್ನು ಹಿಡಿದರು ಸರಕಾರ

ದವರು" ಎಂದಾಗ ರಾಯರು "ಹಿಡಿದರೇನು ?" ಎಂದಿಷ್ಟೆ ಅಂದಿದ್ದರು. ಅವರು ಆ ಬಗ್ಗೆ ಯಾವ ಪ್ರಶ್ನವನ್ನೂ ಕೇಳಲಿಲ್ಲ. ಶಾಮಣ್ಣನ ಹೃದಯುದಲ್ಲಿ ಮಾತ್ರ ದೊಡ್ಡ ಕ್ಷೋಭೆ ಎದ್ದಂತಿತ್ತು, ಮಾತನಾಡದೆ ಅವನಿಗೆ ಸಮಾಧಾನವಿರಲಿಲ್ಲ.

"ರಾಯರ, ಗಾಂಧಿಜಿಯವರನ್ನು ಹಿಡಿದರು ಅಂದೆ, ಸರಕಾರ ದವರು" ಎಂದ.

"ಅದ್ಯಾಕೊ, ಶಾಮಣ್ಣಾ, ಮತ್ತೆ ಮೊನ್ನೆ ಮೊನ್ನೆ ಅವರು ಹೇಳಿದರು ಅಂತ ಲಂಡನ ತನಕ ಹೋಗಿ ಬರಲಿಲ್ಲ ಗಾಂಧಿ ?" ಎಂದು ರಾಯರು ಕೇಳಿದರು

"ಈ ಸಲ ಇದು ದೊಡ್ಡ ಯುದ್ಧ ಆಗತಕ್ಕದ್ದಿದೆ" ತನ್ನಷ್ಟಕ್ಕೆ ಎಂಬಂತೆ ನುಡಿದ ಶಾಮಣ್ಣ

"ಯುದ್ಧ ? ಈಗ ಎಲ್ಲಿಯದೊ ? ಈ ಸಾರೆ ಯಾರ ಜೋಡಿ ? ಮತ್ತ ಜರ್ಮನರ ಜೋಡೀನೊ ಏನು ರಶಿಯಾದವರ ಜೋಡೀನೊ ?"

"ನಮ್ಮ ದೇಶದೊಳಗ, ರಾಯರ, ಯುದ್ಧ ಆಗೋದು ನಂ ದೇಶ ದೊಳಗ. ನಮಗೂ ಬ್ರಿಟಿಶರಿಗೂ."

"ಹಹ ! ಏನಂತಾನೊ ಅಂತ ಮಾಡಿದ್ದೆ. ನಾವೇನು ಮಣ್ಣು ಯುದ್ಧ ಮಾಡ್ತೇವಿ ! ಹಹ !"

"ರಾಯರ, ನಿಮಗ್ಗೊತ್ತಿಲ್ಲ. ಗಾಂಧಿಜಿಯವರು ಒಮ್ಮೆ ಸತ್ಯಾಗ್ರಹದ ಯುದ್ಧ ಹೂಡಿದರು ಅಂದರ—"

"ಶಾಮಣ್ಣಾ, ಸುಮ್ಮನುಮ್ಮನೆ ಇಲ್ಲದ್ದನ್ನ ಯಾಕ ತಲೀವಳಗ ಹಾಕಿಕೋತಿ ? ನಮ್ಮಷ್ಟಕ್ಕ ನಾವಿದ್ದರಾಯಿತು. ಎಷ್ಟು ದಿವಸ ಆಯ್ತು, ಈ ಗಾಂಧೀದು ನಡೆದೇ ನಡೆದಿದೆ. ಬರೇ ಮಾತು ! ಕಡೆಗೊಮ್ಮೆ ಉಪವಾಸ."

"ಈ ಸಾರೆ ಅವರ ಬೆನ್ನು ಹಿಂದೆ ಲಕ್ಷಾವಧಿ ಜನರು ಹೋಗ ಲಿಕ್ಕೆ ಸಿದ್ಧರಿದ್ದಾರ, ರಾಯರ."

"ಇದ್ದೀತು, ಬಿಡು. ಎಲ್ಲಾ ತರದ ಜನ ಇದ್ದೇ ಇರತಾರ, ಏನಪ."

"ಈ ಸಲ ಪ್ರತಿಯೊಂದು ಊರಿನಲ್ಲಿ ಸತ್ಯಾಗ್ರಹ ಮಾಡತಕ್ಕದ್ದು ಎಂದು ಗೊತ್ತಾಗಿದೆ. ಈ ಊರಲ್ಲಿಯೂ ಆಗಬೇಕಾಗಿದೆ" ಎಂದ ಶಾಮಣ್ಣ.

"ಯಾಕವ? ಈಗ ಈ ಗುಂಡ್ಯಾ ಒಬ್ಬ ಆ ಘಟಿಂಗ ರಾಮ್ಯಾನ ಮ್ಯಾಲೆ ಫಿರ್ಯಾದ ಹಾಕಿ ಊರಾಗ ಪೋಲೀಸರನ್ನ ತರಿಸ್ಯಾನ. ಇನ್ನ ಇದೊಂದು ಗದ್ದಲ ಎದ್ದರ—"

ರಾಯರಿಗೆ ಏನು ಮಾತನಾಡಬೇಕೆಂಬುದೆ ತಿಳಿಯದಾಯಿತು.

ರಾಯರೊಡನೆ ಹೆಚ್ಚಿಗೆ ಮಾತನಾಡುವ ಇಚ್ಛೆ ಶಾಮಣ್ಣನಿಗೂ ಇದ್ದಿರಲಿಲ್ಲ.

ಮುಂದೆ ಒಂದೆರಡು ದಿನಗಳಲ್ಲಿಯೆ ಒಂದು ಸಂಜೆ ರಾಯರು ಗುಡಿಗೆ ಹೊರಟು ನಿಂತಾಗ ಒಮ್ಮೆಲೆ ಶಾಮಣ್ಣ ಮತ್ತು ಶಾಂತಾ ಎದುರಿಗೆ ಬಂದರು. ರಾಯರು ಚಕಿತರಾದರು; ಸಿಟ್ಟೂ ಬಂದಿತು. ಏನಿದು ಅನಾಚಾರ? ಶಾಂತಿಯ ಹಣೆ ತುಂಬ ಕುಂಕುಮ! ದಿಟ್ಟಿಸಿ ನೋಡಿದರು, ಶಾಮಣ್ಣನ ಹಣೆಗೂ ಕುಂಕುಮ! ಇದೇನು? ಯಾವುದನ್ನು ಕಣ್ಣಾರೆ ನೋಡಬಾರದೆಂದು ಮಾಡಿದ್ದೆ ಅದೇ ನಡೆದು ಹೋಯಿತೆ?—ಎಂದು ರಾಯರು ಗಾಬರಿಯಾದರು. ಇದೆಂತಹ ನೀತಿ-? ಇದೆಂತಹ ಧರ್ಮ?

"ಏನ್-ಏನರೊ ಇದು?" ಎಂದು ಗದ್ದರಿಸಲು ಹೋಗಿ ಉಸಿರು ಸಾಲದ ದನಿಯಲ್ಲಿ ಕೇಳಿದರು.

"ಆಶೀರ್ವಾದ ಬೇಕು ಇಬ್ಬರಿಗೂ" ಎಂದು ಶಾಮಣ್ಣ ಬಾಗಿ ಕೈಮುಗಿದ.

"ಏನು ಧೂ! ಅಲ್ಲ-ಯಾರಿಗೆ ಹೇಳಿಲ್ಲ-ಕೇಳಿಲ್ಲ-ಧರ್ಮ-ನೀತಿ-ಯಾವುದೂ—"

"ರಾಯರ, ಇದೇ ಇಂದಿನ ಧರ್ಮ. ದೇಶಸೇವೆಯೆ ಇಂದಿನ ಧರ್ಮ."

"ಅಂದ್ರ ? ಈ ಶಾಂತಿ–ಯಾಕ ನಿನ್ನ ಜೋಡಿ ?"

"ನನಗೂ ಅದು ಧರ್ಮ" ಎಂದಳು ಮಗಳು.

"ಹುಟ್ಟಿಸಿದ ದೇಶಕ್ಕೆ ಹೆಣ್ಣು–ಗಂಡು ಎಂಬ ಭೇದ ಇಲ್ಲ" ಎಂದ ಶಾಮಣ್ಣ.

"ಏನೊ ? ಏನ್ಮಾಡಿಸೀರಿ ನೀವು ?" ರಾಯರು ಪೆಚ್ಚಾಗಿ ಕೇಳಿದರು.

"ಇಂದು ಸಾಯಂಕಾಲ ನಾವಿಬ್ಬರೂ ಸತ್ಯಾಗ್ರಹವನ್ನು—"

"ಆಂ ?" ನಿಂತಲ್ಲಿಯೆ ರಾಯರ ಕಾಲ್ಗಳು ನಡುಗಿದವು, ನಿಲ್ಲಲು ತ್ರಾಣವಿಲ್ಲದಂತಾಯ್ತು. ಇಷ್ಟರಲ್ಲಿ ಹತ್ತಿರದಿಂದ ಮಹಾತ್ಮಾ ಗಾಂಧೀಕೀ ಜೈ ಎಂಬ ಜಯಘೋಷ ಕೇಳಬಂತು.

"ಹೊತ್ತಾಯ್ತು–ಆಶೀರ್ವಾದವಿರಲಿ."

ಇಬ್ಬರೂ ರಾಯರ ಪಾದವನ್ನು ಮುಟ್ಟಿ ನಮಸ್ಕಾರ ಮಾಡಿದರು. ಮುಖವೆತ್ತಿ ನೋಡದೆ ಹೊರಟೇ ಹೋದರು.

ಬೆವರಿನಿಂದ ತಣ್ಣಗಾಗಿದ್ದ ಕಾಲ್ಗಳ ಮೇಲೆ ಒಂದು ಬಿಸಿ ಹನಿ ಉದುರಿತ್ತು.

ಶಾಮಣ್ಣನ ಕಣ್ಣೊಳಗಿಂದಲೊ ?

ಶಾಂತಿಯ ಕಣ್ಣೀರೊ ?

ಪ್ರಶ್ನೆ ಕೇಳಲು ಉಸಿರಿಲ್ಲ, ಉತ್ತರ ಕೊಡಲು ಶಬ್ದಗಳಿಲ್ಲ; ನಿಂತಲ್ಲಿಯೆ ಬಿದ್ದು ಬಿಟ್ಟರು ರಾಯರು.

ಆ ರಾತ್ರಿ ಪೋಲೀಸರು ಶಾಮಣ್ಣ-ಶಾಂತೆಯರನ್ನು ಕೈದು ಮಾಡಿಕೊಂಡು ಪರವೂರಿಗೆ ಸಾಗಿಸಿದರು.

ಮರುದಿನ ಬೆಳಿಗ್ಗೆ ಊರವರು ರಾಯರ ದೇಹವನ್ನು ಕೊನೆಯ ಯಾತ್ರೆಯಲ್ಲಿ ಸಾಗಿಸಿದರು.

೧೨

"ಎಲೆ ! ಇದನ್ನೋಡೆಲೆ !" ಎನ್ನುತ್ತ ಕಾಳ್ಯಾ ಕೈಯೊಳಗಿನ ಪತ್ರಿಕೆಯನ್ನು ಎತ್ತಿ ಹಿಡಿದ. ಅತ್ತಿತ್ತ ನೋಡಿದ, ಯಾರೂ ಇರಲಿಲ್ಲ. "ಥೂ ! ಈ ಹುಡುಗ ಮತ್ತೆಲ್ಲಿ ಹೋಯ್ತೋ ಏನೊ ?" ಎಂದು ಅತ್ತಿತ್ತ ನೋಡುವಷ್ಟರಲ್ಲಿ ಎದುರಿನಿಂದ ಹುಡುಗ ಬಂದ.

"ಎಲ್ಲಿ ಹೋಗಿದ್ದೆಯೊ, ಭರಮ್ಯಾ ?" ಕಾಳ್ಯಾ ಅಧಿಕಾರದಿಂದ ಕೇಳಿದ.

"ಅಲ್ಲಿ ಒಬ್ಬರ ಪೆಟ್ಟಿಗೆ ಹೊತ್ತುಕೊಂಡೊಯ್ದು ಮ್ಯಾಲಿಟ್ಟೆನಿ. ಯರಡಾಣೆ ಕೊಟ್ಟರು" ಎಂದು ಭರಮ ಉಬ್ಬಿನಿಂದ ನಾಣ್ಯವನ್ನು ತೋರಿಸಿದ.

"ಥೂ ! ನಿನ ! ಜಾತಿ ನಿನ್ನ ರಗತ–ರೋಮು–ರೋಮುದಾಗ ಅದ" ತನ್ನಷ್ಟಕ್ಕೆ ಎಂಬಂತೆ ಕಾಳ್ಯಾ ಗೊಣಗುದನಿಯಲ್ಲಿ ನುಡಿದ.

"ಅಂದ್ರೇನೋ, ಯಪ ?"

"ಏನ್ನಿನ್ನ ತಲೀ ! ನೀ ಸುಮ್ಮ ಕೂತು ಓದು–ಬರಾಕ ಕಲೀ ಬೇಕು ಅಂತ ನಾ ಖಟಗಟ ಮಾಡಿದರ ನೀ ಹೆಜ್ಜೆಜ್ಜೆಗೆ ಹಮಾಲೀ ಕೆಲಸಕ್ಕೇ ತಯಾರಾಗ್ತಿ !"

"ಮತ್ತ ! ನೀ ಕೆಲಸಾ ಮಾಡ್ತೀಯಲ್ಲ ?"

"ಹುಚ್ಚುಗೊಟ್ಟಿ! ನಿನಗ ಕಲೀಲಾಕ ವೈನ ಆಗಲಿ ಅಂತ ನಾ ಕೆಲಸ ಮಾಡ್ಡೋದು. ಇಕ! ನೋಡಿದ್ಯಾ? ನಿನಗ ಹೇಳಿದ್ದೆನಲ್ಲ, ಶಾಮಣ್ಣೋರು ನನಗ ಓದಾಕ ಬರೀಲಾಕ ಕಲಿಸಿದ್ದರು ಅಂತ—?"

"ಯಾವ ರಾಮಣ್ಣೋರು?" ಹುಡುಗ ಕುತೂಹಲದಿಂದ ಕೇಳಿದ.

"ಭಪ್ಪರೆ ಮಗನೆ! ಮುಂಬಯಿಗೆ ಬಂದು ನಾಲ್ಕು ದಿನಾ ಆತು, ಇಲ್ಲಿಯೆ ಹುಟ್ಟಿ ಬೆಳೆದವರ್ಹಾಂಗ ಕೇಳ್ತಾನ! ಶಾಮಣ್ಣ ಯಾರು, ಅಂದ್ರ? ನಮ್ಮ ಬಟ್ಟೋರಾಗಿದ್ದವರು. ನಾ ಹೇಳತಿದ್ದೆನಲ್ಲ ನಿನಗ-?"

"ಹಾಂ-ಅವರು! ಆ ಶಾಂತಕ್ಕ ಅನ್ನೋರ ಜೋಡಿ ಕೆಲಸಾ ಮಾಡತಿದ್ದರು ಅಂತ ಹೇಳಿದ್ದಿ—?"

"ಹೌದು, ನೋಡು. ಈಗ ಅವರಿಬ್ಬರೂ ಮತ್ತೊಂದು ದೊಡ್ಡ ಕೆಲಸ ಮಾಡ್ಯಾರ."

"ಏನು?"

"ಸತ್ಯಾಗ್ರಾ ಮಾಡಿ ಜೇಲಿಗೆ ಹೋಗ್ಯಾರ."

ಕಾಳ್ಯಾ ಮಗನಿಗೆ ಕೈಯಲ್ಲಿಯ ಪತ್ರಿಕೆಯನ್ನು ಅಭಿಮಾನದಿಂದ ತೋರಿಸಿದ.

ಕಾಳ್ಯನಿಗೆ ಬಿಟ್ಟೋರು ನೆನಪಿಗೆ ಬಂದರೆ ಅಭಿಮಾನದಿಂದ ಹಿಗ್ಗು ಉಕ್ಕುತ್ತಿತ್ತು. ಎಷ್ಟು ಸಮಾಧಾನವನ್ನು ಬಯಸಿ ಊರನ್ನು ಬಿಟ್ಟು ಬಂದಿದ್ದನೊ ಅಷ್ಟು ಅವನಿಗೆ ದಿನಾಲು ಹುರುಹುರು ಎನ್ನಿಸುತ್ತಿತ್ತು. ಹಾಗೂ ಹೀಗೂ ಬಂದು ಮುಂಬಯಿಯನ್ನು ಮುಟ್ಟಿದ್ದನು. ಅತ್ತಿತ್ತ ಅಲೆದಾಡಿ ಕೊನೆಗೆ ಚರ್ಮವನ್ನು ಹದಮಾಡುವ ಕೆಲಸವನ್ನು ದೊರಕಿಸಿಕೊಂಡನು; ಜೊತೆಗೆ ಆ ಚರ್ಮದಿಂದ ತಯಾರಿಸಿದ ಪಾದರಕ್ಷೆಗಳನ್ನು ಪ್ರತಿನಿತ್ಯ ಸಂಜೆಗೆ ಮಾರುವ 'ಏಜನ್ಸಿ'ಯನ್ನೂ ಪಡೆದುಕೊಂಡನು. ಆ ಕೆಲಸ ಭರಮನಿಗೆ ಸಿಗಬೇಕಾಗಿತ್ತು; ಮಾಲಕನು ಬಹಳ ಪ್ರಯತ್ನ ಮಾಡಿದ್ದನು, ಭರಮನಿಗೆ ಒಪ್ಪಿಸಿ ತುಸು 'ಕಮಿಶನ್'

ದಲ್ಲಿಯೆ ಸಾಗಿಸಬೇಕೆಂದು. ಆದರೆ ಕಾಳ್ಯಾ ಒಪ್ಪಲಿಲ್ಲ.

ಭರಮನಿಗೆ ಕೆಲಸ? ಹುಚ್ಚು ಹಿಡಿದೇತಿ ಇವನಿಗೆ! ಹೋಗೋ ಮಳ್ಳ! ಆ ಹುಡುಗನ ದೆಸಿಂದ್ಲೇ ಈಟೊಂದು ದೂರ ಓಡಿ ಬಂದದ್ದು—ಎಂದು ಕನ್ನಡದಲ್ಲಿ ಗೊಣಗಿಕೊಂಡ. ಭರಮನು ಯಾವ ಕೆಲಸವನ್ನೂ ಮಾಡುವಂತಿಲ್ಲ, ಮುಂಬಯಿಯಂತಹ ಊರಲ್ಲಿ ಅಸ್ಪೃಶ್ಯತೆಯ ಕಲ್ಪನೆಯೂ ಹೆಚ್ಚಾಗಿ ಬರುವಂತಿರಲಿಲ್ಲ. ಭರಮನನ್ನು ಸಾಲೆಗೆ ಹಾಕಬೇಕು—ಆದರೆ ಯಾವ ಸಾಲೆ? ಯಾವ ಭಾಷೆ? ತನಗೆ ಗೊತ್ತಿದ್ದರ ಮಟ್ಟಿಗೆ ಕನ್ನಡ ಅಕ್ಷರ ಜ್ಞಾನವನ್ನು ಕಲಿಸಿಕೊಡುತ್ತಿದ್ದ. ಕೊನೆಗ—ಒಂದು ದೊಡ್ಡ ಚಾಳದಲ್ಲಿ ಯಾರೊ ಒಬ್ಬರು ಹುಡುಗರಿಗೆ ಕಲಿಸುತ್ತಿದ್ದುದನ್ನು ನೋಡಿ ಮಗನನ್ನು ಅಲ್ಲಿ ಕೂಡ್ರಿಸತೊಡಗಿದ. ಭಾಷೆ ಬೇರೆ! ಇರವಲ್ಲದೇಕ? ಕಲಿಯುವುದು ಮುಖ್ಯ, ಭಾಷೆ ಸಾಧನ; ಗುರಿ ಸಾಧಿಸಿದರಾಯಿತು, ಯಾವ ಸಾಧನವಿದ್ದರೇನು—ಎಂಬುದೊಂದು ಮನೋವೃತ್ತಿ ಕಾಳ್ಯಾನಲ್ಲಿ ಮೂಡಿತು

ಅಷ್ಟರಲ್ಲಿ ಸತ್ಯಾಗ್ರಹಕ್ಕೆ ಪ್ರಾರಂಭವಾಯಿತು. ಮುಂಬಯಿಯಲ್ಲಿ ದಿನಾಲು ಮೆರವಣಿಗೆ, ದಿನಾಲು ಲಾಠೀಚಾರ್ಜ್, ಒಮ್ಮೊಮ್ಮೆ ಗುಂಡನ್ನು ಹಾರಿಸುವುದೂ ಅಗತ್ಯವೆನ್ನಿಸುವುದು ಪೋಲೀಸರಿಗೆ. ಹತ್ತಿರದಲ್ಲಿ ಗಲಾಟೆ ಎದ್ದರೆ ಅದನ್ನು ನೋಡಲು ಭರಮ ಓಡುವ; ಕಾಳ್ಯಾನಿಗೆ ಗಾಬರಿ. ಮಗನು ಈಗ ಕಾಳ್ಯಾನಿಗೆ ಜೀವದಂತಾಗಿದ್ದ, ಹತ್ತಿರದಲ್ಲಿಲ್ಲದಿದ್ದರೆ ಕಾಳ್ಯಾನು ಜೀವವಿಲ್ಲದವರಂತೆ ಪೆಚ್ಚು ಬಡೆದು ಕೂಡ್ರುತ್ತಿದ್ದ. ಮಗನು ಎದುರಿದ್ದಾಗೆಲ್ಲ ಬಿಟ್ಟೂರಿನ ಕತೆ ನೆನಪಿಗೆ ಬರುವುದು. ಮಗನೂ ಕುತೂಹಲದ ಪ್ರಶ್ನೆಗಳನ್ನು ಕೇಳುವನು; ಕಾಳ್ಯಾ ಆನಂದದಿಂದ ರುಚಿಕಟ್ಟಾಗಿ ಹೇಳುವನು.

"ಕೇಳಿದ್ಯಾ? ಸತ್ಯಾಗ್ರಾ ಮಾಡಿ ಇಬ್ಬರೂ ಜೇಲಿಗೆ ಹೋಗ್ಯಾರ" ಎಂದ—ಕೈಯೊಳಗಿನ ಕನ್ನಡ ಪತ್ರಿಕೆಯನ್ನು ಬೆರಳುಗಳಿಂದ ಬಡೆದು ತೋರಿಸುತ್ತ.

"ಅಂದ್ರ, ಯಪ, ಅಲ್ಲಿಯೂ ಪೋಲೀಸರು ಬಡಿಗಿಯಿಂದ ಹೊಡೆದಾರೇನು ಮಂದಿಗೆ?"

"ಅಲ್ಲೇನು ಹೊಡೀತಾರ? ಪೋಲೀಸರೆಲ್ಲಾ ದೊಡ್ಡ ಊರಾಗ ಗುಂಪುಗಟ್ಟ್ಯಾರ. ಅಂಥಾ ಸಣ್ಣ ಊರಿಗೆ ಒಬ್ಬರೊ ಇಬ್ಬರೊ ಪೋಲೀಸರು—ಅದೂ ಕೆಲಸಕ್ಕ ಅಂತ ಬಂದೋರು."

"ಹಾಂಗಿದ್ದರ ಮಂದಿ ಎಲ್ಲಾರೂ ಕೂಡಿ ಆ ಪೋಲೀಸರನ್ನೆ ಜಡೀಬೇಕಾಗಿತ್ತು?"

"ಬಹಾದ್ದರ ಭರಮ್ಯಾನೊ ನೀನು!" ಕಾಳ್ಯಾ ಉಕ್ಕಿಬರುವ ಹೃದಯದಿಂದ ನುಡಿದ. "ಜಡೀ ಬೇಕಾಗಿತ್ತಂತ ಮಗನ, ಸತ್ಯಾಗ್ರಾ ಮಾಡೋದಂದ್ರ ಏನಂತ ತಿಳಿದೀದಿ?"

"ಸುಮ್ಮಾಕ ನಿಂತು ಹೊಡೆಸಿಕೊಳ್ಳೋದು" ತುಸು ತಿರಸ್ಕಾರ ವಿತ್ತು ಹುಡುಗನ ದನಿಯಲ್ಲಿ.

"ಅಂದ್ರ? ಅದೇನು ಹೇಡಿತನ ಅಂತ ತಿಳಿದೀ ಏನು? ಹೊಡೆಯುವಾಗ ನೆಟೆದು ನಿಂತರ ಹೊಡೆಯೋವನಿಗೆ ನಾಚಿಕೆ ಬರ್ತದ ಅಂದೆ."

"ಹಾಂಗಿದ್ದರ ಮತ್ತ ನೀ ಹೇಳ್ತಿದ್ದಿ, ಆ ಗುಂಡಣ್ಣಗ ನಾಚಿಕಿ-ಬಂತೇನೊ!" ಹಂಗಿಸಿದ ಭರಮ.

"ಎಲೆಲೆ! ಏಟೊಂದು ತಿರುತಿರುಗಿ ಮಾತಾಡ್ತೀಯೊ, ಚೋಟುದ್ದ ಹುಡುಗ!" ಆದರೂ ಕಾಳ್ಯಾ ನಕ್ಕ.

"ತಂಪೊತ್ತಿನಾಗ ಆ ಗುಂಡಣ್ಣನ ಹೆಸರು ಯಾಕ?" ಎಂದು ಕೆಲಸದಲ್ಲಿ ತೊಡಗಿದ ನೆವವನ್ನು ಮಾಡಿದ, ಮಾತನ್ನು ಬದಲಾಯಿಸಲು.

ನಿಜವಾಗಿ ಯಾವ ಹೊತ್ತಿನೊಳಗೂ ಗುಂಡಣ್ಣನ ನೆನಪು ಬೇಕಿರಲಿಲ್ಲ ಕಾಳ್ಯಾನಿಗೆ. ಗುಂಡಣ್ಣನ ನೆನಪು ಎಂದರೆ ಯಮಲೋಕದ ಚಿತ್ರಪಟದಂತೆ ತನ್ನ ಸಂಸಾರದ ಸ್ಮೃತಿ-ಪಟಗಳು ಕಾಳ್ಯಾನ ಮುಂದೆ

ನಿಲ್ಲುತ್ತಿದ್ದುವು. ಮರೆಯಬೇಕೆಂದರೂ ಒಮ್ಮೊಮ್ಮೆ ಶಕ್ಯವಾಗುತ್ತಿರಲಿಲ್ಲ. ಈಗ? ಶಾಮಣ್ಣ, ಶಾಂತಕ್ಕ ಇಬ್ಬರೂ ಜೇಲಿಗೆ ಹೋದರು. ಶಾಂತಕ್ಕನವರು ತನ್ನ ಹೆಂಡತಿಯನ್ನು ನೋಡಿಕೊಳ್ಳುವ ಭರವಸೆಯನ್ನು ಕೊಟ್ಟಿದ್ದರಲ್ಲ? ಅವರು ಜೇಲಿಗೆ ಹೋದ ಮೇಲೆ ಗಂಗಿಯ ಗತಿ? ಅಥವಾ ಆಕೆ ಪೂರ್ತಿಯಾಗಿ ಅಡ್ಡಹಾದಿಯನ್ನು ಹಿಡಿದಿರುವಳೆ? ಗುಂಡಣ್ಣ ತನ್ನ ಶತ್ರು ಅಷ್ಟೆ ಅಲ್ಲ; ಗುಂಡಣ್ಣನಂತಹರು ಜಗತ್ತಿಗೇ ಶತ್ರುಗಳು, ಜನ್ಮಜನ್ಮಾಂತರ ಶತ್ರುಗಳು. ಪಾಪ! ತನ್ನ ತಂದೆಯ ಗತಿ ಏನು–ಎಂದು ಕಾಳ್ಯಾ ಕಳವಳಗೊಂಡ. ತಾನು ಓಡಿಬಂದುದರ ಸಿಟ್ಟನ್ನು ಪರಸ್ಯಾನ ಮೇಲೆ ಪೂರಯಿಸಿಕೊಳ್ಳುವರೆಂದು ಅವನಿಗೆ ಗೊತ್ತು. ಆದರೂ ನಿರುಪಾಯ ಮಗನ ಸಲುವಾಗಿ ತಾನು ಹೀಗೆ ಮಾಡಲೇ ಬೇಕಾಯಿತು.

ಕಾಳ್ಯಾ ಮಗನನ್ನು ನೋಡಿದ, ಪತ್ರಿಕೆಯನ್ನು ನೋಡುತ್ತ ಕುಳಿತ ಹುಡುಗನನ್ನು ಕಾಳ್ಯಾ ದಿಟ್ಟಿಸಿದ. ನನ್ನ ಮಗ! ಹತ್ತು ವರ್ಷದ ದೊಡ್ಡ ಹುಡುಗ! ಶಾಲೆಗೆ ಹೋಗುತ್ತಾನೆ, ಕಲಿಯುತ್ತಾನೆ, ಪರೀಕ್ಷೆ ಪಾಸಾಗಿ, ಬಿಯೇಯಮ್ಮೇ ಆಗಿ ದೊಡ್ಡ ನೌಕರಿ ಮಾಡುತ್ತಾನೆ! ವಿಶ್ವರೂಪದರ್ಶನದಂತೆ ಈ ಭವಿತವ್ಯದ ರೂಪವನ್ನು ಕಾಳ್ಯಾನ ಕಣ್ಣುಗಳು ಮಗನಲ್ಲಿ ಕಂಡುವೇನೊ!

ಕಾಳ್ಯಾನಿಗೆ ಈಗ ತನ್ನ ಅಸ್ತಿತ್ವದ ಅರಿವು ಕೂಡ ಇದ್ದಂತಿಲ್ಲ. ಮಾತಿಗೊಮ್ಮೆ ಭರಮು, ಮಾಡಿದ್ದಕ್ಕೆ ಭರಮು! ತಂದೆಯ ದುಡಿತ, ತಂದೆ ಪಡುವ ಕಷ್ಟ–ಇವುಗಳಿಂದ ಭರಮುನಿಗೆ ಜೀವನ ಅನುಕೂಲವಾಗಿತ್ತು. ತಾಯಿಯ ಕಲ್ಪನೆ ಮಾತ್ರ ಆ ಹುಡುಗನಿಗಿದ್ದಿರಲಿಲ್ಲ.

ಅದೊಂದನ್ನು ಕಾಳ್ಯಾ ಮಗನಿಗೆ ಹೇಳಿರಲಿಲ್ಲ.

"ಇನ್ನೂ ಏನೇನು ಆಗೇತ್ಯೋ ಏನೊ ಬಿಟ್ಟೂರಾಗ!" ಎಂದು ತಡೆಯದಾಗಿ ಕೊನೆಗೆ ಕಾಳ್ಯಾ ದೀರ್ಘವಾಗಿ ಉಸಿರನ್ನೆಳೆದ.

* * *

ರಾಯರ ಅಂತ್ಯವಿಧಿಯನ್ನು ಪೂರಯಿಸಿಕೊಂಡು ಬಂದ ಗುಂಡಣ್ಣ ಮೊದಲನೆಯದಾಗಿ ಹೆಂಡತಿ ಮಕ್ಕಳನ್ನು ಕರೆಯಿಸಿ ಕೊಂಡ. ಒಂದು ದಿನದ ಮಟ್ಟಿಗೆ ಪರಸ್ಯಾ ಹೋಗಿದ್ದ. ಮರುದಿನ ಬರುವಾಗ ಚಕ್ಕಡಿಯ ಹಿಂದಿನಿಂದ ನಡೆಯುತ್ತ ಬಂದ.

ಸುಬ್ಬಕ್ಕನಿಗೆ ಮಾವ – ಸೋದರಮಾವ – ನ ಮರಣದ ಸುದ್ದಿ ಯಿಂದ ದೊಡ್ಡ ಆಘಾತವಾಯಿತು. ಸುದ್ದಿಯನ್ನು ಕೇಳಿದಾಕ್ಷಣ ಗಟ್ಟಿಯಾಗಿ ಅತ್ತಳು.

ಪರಸ್ಯಾ ಏನೆಂದು ಸಂತಯಿಸಬೇಕು ? ಹೇಗೆ ?

ಕೆಳಗೆ ಮುಖ ಮಾಡಿಕೊಂಡು ಬಾಗಿಲಿನ ಹೊರಮಗ್ಗುಲಿಗೆ ಕುಳಿತಿದ್ದ.

ಹೃದಯ ಹಗುರಾದ ಮೇಲೆ, ಕೆಂಪುಗಣ್ಣುಗಳಿಂದ ಸುಬ್ಬಕ್ಕ ಪರಸ್ಯಾನನ್ನು ನೋಡಿದಳು. ಒಮ್ಮೆಲೆ ದುಃಖ ಮರುಕಳಿಸಿತು. ಅವನ ದೈನ್ಯಾವಸ್ಥೆಯನ್ನು ನೋಡಿ ಹಿಂದಿನ ವೈಭವ, ಮುಂದಿನ ಗತಿಗೇಡಿತನ ಇದೆಲ್ಲದರ ಚಿತ್ರ ಆಕೆಯ ಕಣ್ಣುಮುಂದೆ ನಿಂತಂತಾ ಯಿತು. ಅಂದು ಸಂಜೆಯವರೆಗೂ ಆಗಾಗ ಸುದ್ದಿ ಕೇಳುತ್ತ, ಹೊರಡುವ ಸಿದ್ಧತೆಯನ್ನು ಮಾಡುತ್ತ ಆ ತಾಯಿ ಮುಂದಿನ ವಿಚಾರ ವನ್ನು ನಡೆಸಿದ್ದಳು. ಗಂಡನಿಂದ ಸುಖವಿಲ್ಲ ಎಂಬುದನ್ನು ಆಕೆ ಪೂರ್ತಿಯಾಗಿ ಅರಿತಿದ್ದಳು. ಆದರೂ ಹೆಣ್ಣಿಗೆ ಗಂಡನ ಹೆಸರು ಒಂದು ಆಧಾರವಲ್ಲವೆ ? ಇದ್ದ ವಸ್ತುವು–ತನ್ನ ಮನಸ್ಸಿನಲ್ಲಿರಲಿ ಬಿಡಲಿ ಅನಿವಾರ್ಯವಾಗಿಯಾದರೂ ಈ ಜಗತ್ತಿನಲ್ಲಿ ನೆರಳನ್ನು ಕೊಡಲೇ ಬೇಕಲ್ಲವೆ ? ಆದರೆ–ಇದು ಜಾಲಿಯ ಗಿಡದ ನೆರಳು ಎಂದು ಸುಬ್ಬಕ್ಕ ತಿಳಿದುಕೊಂಡಿದ್ದಳು. ಏನೇ ಆಗಲಿ—ಮಕ್ಕಳನ್ನು ಕರೆದುಕೊಂಡು ತಾನು ಬೇರೆಯಾಗಿಯೆ ಇರತಕ್ಕದ್ದು, ಮಕ್ಕಳ ಶಿಕ್ಷಣವನ್ನು ಸಾಗಿಸ ತಕ್ಕದ್ದು, ಕಡೆಗೆ ಎಲ್ಲಿಯಾದರೂ ಕೆಲಸವನ್ನು ಮಾಡಿಕೊಂಡಾದರೂ ಸಂಸಾರವನ್ನು ಸಾಗಿಸಬೇಕು ಎಂದು ನಿರ್ಧರಿಸಿದಳು.

ಈಗ ಪರಸ್ಯಾನೇ ಆಕೆಗೆ ಆಪ್ತ ! ಮರುದಿನ ದಾರಿಗುಂಟ ತನ್ನ ವಿಚಾರಗಳನ್ನು ತೋಡಿಕೊಂಡಳು. ಅವನು ಒಂದು ತುಟಿ ಎರಡಾಗಿ ಸಿರಲಿಲ್ಲ.

"ಎಲ್ಲಿಯಾದರೂ ಕೆಲಸ ಮಾಡಿ ಸಾಗಿಸ್ತೀನಿ ಪ್ರಸಂಗ ಬಂದರೆ. ಆದರೆ ಇಲ್ಲಿ ಇರೋದಿಲ್ಲ, ಪರಸ್ಯಾ" ಎಂದಳು. ಆಗ ಮಾತ್ರ ಪರಸ್ಯಾ ಮುಖವನ್ನೆತ್ತಿ ಮೇಲೆ ನೋಡಿದ. ಸುಬ್ಬಕ್ಕ ಅವನಿಗೆ ಕಂಡದ್ದು ೮–೧೦ ವರ್ಷದ ಹುಡುಗೆಯಾಗಿ. ನೋಡಿನೋಡಿದಂತೆ ಅವನ ಕಣ್ಣುಗಳಲ್ಲಿ ನೀರೂರಿತು, ಅದನ್ನು ತೋರಗೊಡಬಾರದೆಂದು ಅವನು ಪ್ರಯತ್ನವನ್ನು ಕೂಡ ಮಾಡಲಿಲ್ಲ. ಒಂದೇ ಸವನೆ ಹನಿಗಳು ಉದುರಿದುವು. ಸುಬ್ಬಕ್ಕನಿಗೆ ಪಶ್ಚಾತ್ತಾಪವಾದಂತಾಯಿತು. ಏನು ಮಾತಾಡಿದೆ ನಾನು ? ಇವನ ಮನಸ್ಸನ್ನು ನೋಯಿಸಿದೆನೆ ? ಸುಟ್ಟ ಜನ್ಮ ! ನನ್ನಿಂದ ಯಾರಿಗೂ ಸುಖ ಇಲ್ಲ—ಎಂದು ಹಳಹಳಿಸಿದಳು. ಆದರೂ ಕುತೂಹಲ ತಡೆಯದುಂತಾಯ್ತು.

"ಯಾಕೊ, ಪರಸ್ಯಾ, ಏನಾಯ್ತೊ ?" ಎಂದು ಕೇಳಿದಳು.

ಕಣ್ಣೊಳಗ ಧೂಳು ಸೇರೇತ್ರಿ–ಅಂದನೆಂದರೆ ಮುಗೀತಲ್ಲ ?

"ಯಾಕೊ-ಏನೊ-ರಿ ; ಒಮ್ಮಾಕೆಲೆ ಧಣೇರ ನೆಪ್ಪಾಯ್ತರಿ" ಸುಂಯ್ಗುಡುತ್ತ ಹೇಳಿದ. ಪಾಪ! ಬಡಪ್ರಾಣಿ ಅನಿಸಿದ್ದನ್ನೆ ಹೇಳ್ತಾನಲ್ಲ ?

"ನಾಯೇನು ಅಂದೆನೇನೊ ?"

ಪರಸ್ಯಾ ತಲೆಯನ್ನಲ್ಲಾಡಿಸಿದ.

"ಮತ್ತ ಒಮ್ಮಿಂದೊಮ್ಮೆ ಗಳಗಳ ಹನಿ ಉದುರೋಹಾಂಗ ಏನಾಯ್ತು ?"

ಪರಸ್ಯಾ ಸುಮ್ಮನಿದ್ದ.

"ಪರಸ್ಯಾ, ಇನ್ನು ನೀನು ನನಗ, ನಾನು ನಿನಗ—ಮನಸಿನೊಳಗಿನ ಮಾತನ್ನು ಬಿಚ್ಚಿ ಹೇಳಬೇಕು. ಬ್ಯಾರೆ ಯಾರಿದ್ದಾರ

ನೋಡು" ಎಂದು ಒಮ್ಮೆಲೆ ಬಿಕ್ಕಿ ಸೆರಗಿನಿಂದ ಮುಖವನ್ನು ಮುಚ್ಚಿಕೊಂಡಳು.

ಪರಸ್ಯಾ ಅಳುದನಿಯಲ್ಲಿಯೆ ಹೇಳಿದ.

"ಇಲ್ರಿ, ಯವ್ವಾ, ನಿಂಮಾತಿಗೆ ನನಗ ಧಣೇರ ನೆಪ್ಪಾಯ್ತ್ರೆವ್ವ. ಬೇಕಾದರ ಕೆಲಸ ಮಾಡಿ—" ದುಃಖಕ್ಕಾಗಿ ಪರಸ್ಯಾನ ಬಾಯಿಯಿಂದ ಶಬ್ದಗಳು ಹೊರಡದಂತಾದುವು— "ನೀ ಅಂದಿಯಲ್ಲ, ಯವ್ವಾ. ಆಗ ನೆಪ್ಪಾಯ್ತು. 'ನಾ ಕಲ್ಯಾಕ ಹೋಕ್ಕೇನಿ' ಅಂದಿದ್ದ ಒಂದಿವಸ ಗುಂಡಣ್ಣ. ಆಗ ರಾಯರು — 'ಕಲಿತು ಏನು ಮಾಡುವವ. ನಮ್ಮಂಥಾ ಗೋರೋಸ್ತರು ಕೆಲಸ ಮಾಡೋದ?' ಅಂದಿದ್ದರ್ರಿ—" ಮುಂದೆ ಪರಸ್ಯಾನ ಗಂಟಲು ತುಂಬಿ ಬಾಯಿ ನಿಂತುಬಿಟ್ಟಿತ್ತು.

ಬಿಟ್ಟೂರನ್ನು ಮುಟ್ಟುವವರೆಗೆ ಇಬ್ಬರೂ ಮಾತಾಡಿರಲಿಲ್ಲ.

ಆರೇಳು ವರ್ಷದ ರಾಗಣ್ಣ ಇದನ್ನೆಲ್ಲ ಕೇಳುತ್ತ ಏನೂ ತಿಳಿಯದ್ದಕ್ಕೆ ನಿದ್ದೆಹೋಗಿದ್ದ ಚಕ್ಕಡಿಯಲ್ಲಿ.

ಬಿಟ್ಟೂರ ಮನೆಯನ್ನು ಮುಟ್ಟಿದಾಗ ಇನ್ನೊಂದು ಕಷ್ಟ ಸುಬ್ಬಕ್ಕನನ್ನು ಕಾದು ಕೂತಿತ್ತು. ಮನೆಯಲ್ಲಿ ಗುಂಡಣ್ಣನ ಹೊರತು ಯಾರೂ ಇದ್ದಿರಲಿಲ್ಲ. ಗುಂಡಣ್ಣನೂ ಹಾಸಿಗೆಯನ್ನು ಹಿಡಿದಿದ್ದ; ಅವನ ಮೈಕೈ ನೋವಾಗಿತ್ತು, ಹಣೆಗೆ ಪಟ್ಟಿಯನ್ನು ಕಟ್ಟಿದ್ದ. ಸುಬ್ಬಕ್ಕನಿಗೆ ಹೆದರಿಕೆ, ಏನಾಯ್ತು, ಏನಾಗಿರಬಹುದು ಎಂದು. ಗಂಡನನ್ನು ಕೇಳಲೂ ಹೆದರಿಕೆ. ಬಿಟ್ಟೂರನ್ನು ಬಿಡುವವರೆಗೆ ಸುಬ್ಬಕ್ಕನಿಗೆ ತಿಳಿದಿರಲಿಲ್ಲ, ಗುಂಡಣ್ಣ ಹಾಸಿಗೆ ಹಿಡಿದ ಕಾರಣ. ಬಿಟ್ಟೂರಿಂದ ಹೋಗುವಾಗ ಎಂದಿನಂತೆ ಪರಸ್ಯಾನಿಂದಲೆ ತಿಳಿಯಿತು ಆಕೆಗೆ.

"ಅವ್ವಾ ಅವರ, ಮನೀಗ ಏನು ಶೋಬಾನೇ ಉಳೀಲಿಲ್ಲರಿ" ಎಂದ.

ಸುಬ್ಬಕ್ಕ ಬಿಟ್ಟೂರಿಂದ ಹೊರಟುದುದಕ್ಕೆ ವಿಷಾದದಿಂದ ಅಂತರ್ಮುಖಿಯಾಗಿ ಸುಮ್ಮನಿದ್ದಳು.

"ದೊಡ್ಡ ಧಣೀರ ಇಲ್ಲಧಾಂಗ ಆದ್ಮೇಡಲೆ ಯಲ್ಲಾ ಕೆಟ್ಟು ಹೋಗೇತಿರಿ, ಯವ್ವಾ."

" ಒಂದೊಂದು ಕಾಲ ಅದು, ಪರಸ್ಯಾ. ಯಾರಿಗೂ ಬಿಟ್ಟಿಲ್ಲ, ಯಾರಿಗೆ ಹೇಳಿಯೂ ಬರೋದಿಲ್ಲ" ಎಂದು ಸುಬ್ಬಕ್ಕ ನಿಶ್ವಾಸದಿಂದಲೆ ಹೇಳಿದಳು.

"ಕೈಯಿಂದ ಮಾಡಿ 'ಕಾಲ' ಅನ್ನೋದು ಯಂತಾ ಮಾತು ಬಿಡು, ಸುಬ್ಬಕ್ಕಾ" ತುಸು ಬೇಸರದ, ಹಟದ ದನಿಯಲ್ಲಿಯೆ ಪರಸ್ಯಾ ನುಡಿದ.

ಸುಬ್ಬಕ್ಕ ಅವನನ್ನು ಸೂಕ್ಷ್ಮದೃಷ್ಟಿಯಿಂದ ನೋಡಿದಳು.

"ಈಗ ಮೊನ್ನೆ ಗುಂಡಣ್ಣ ಮಾಡಿಕೊಂಡದ್ದು?" ಎಂದು ಅಷ್ಟೇ ಹಟದಿಂದ ಮಾತನ್ನು ಮುಂದರಿಸಿದ.

ಸುಬ್ಬಕ್ಕ ಕುತೂಹಲದ ಕಣ್ಗಳಿಂದ ಅವನನ್ನು ನೋಡಿದಳು.

"ನಿನಗ ಗೊತ್ತಿಲ್ಲ. ಅಹುದಲ್ಲೊ, ಸುಬ್ಬಕ್ಕಾ. ಒಂದು ದಿನ, ಬರೇ ಒಂದೇ ದಿನದ ಮಟ್ಟಿಗೆ ಒಬ್ಬರು ನೋಡೋರು ಇದ್ದಿದ್ದಿಲ್ಲ ಅಂತ ಇಷ್ಟು! ಮುಂಚಿನ ದಿನ ನಾ ಬಂದಿನಿ, ನಿನ್ನ ಕರ್‍ಯಾಕ; ಮರು ದಿನ ಮುಟ್ಟಿದಿವಿ ತಿರುಗಿ ಬಿಟ್ಟೂರಿಗೆ. ಅಷ್ಟಹೋಗಿ ಬರೋದರಾಗ ಕಮಾಯಿ ಮಾಡ್ಯಾನ !"

"ಎಲ್ಲಿ—ಬಿದ್ದರೇನು ?"

"ನರಳ ಬೀಳೋ ಮನಸ್ಯಾನ ಅವ? ತಾನಾಗಿಯೇ ಬೀಳ ಬೇಕಾಗಿದ್ದರೂ ಮಂದಿಯ ಕಡೆಯಿಂದ ಕೆಡವಿಸಿಕೊಳ್ಳುವವ !"

"ಅಂದ್ರ—ಯಾರ ಜೋಡಿ ಜಗಳ ಆಯ್ತೇನೊ ?"

"ಆಗಾಕ ಹೋಗಿತ್ತು ಎಲ್ಲಿ ? ಗುಂಡಣ್ಣ ಅಂದ್ರ ಜಗಳ."

"ಹೇ, ಧಡ್ಡಾ ! ಬರೇ ನಿನ್ಮಾತೇ ಆಡತೀ ! ಏನಾಗಿತ್ತು ಅಂತ ನಾ ಕೇಳ್ತೇನಿ ?" ಕುತೂಹಲ ತಡೆಯದೆ ತುಸು ಸಿಡುಕಿನ ದನಿಯಲ್ಲಿ ಸುಬ್ಬಕ್ಕ ಕೇಳಿದಳು.

"ಅದನ್ನ ಏನ್ ಹೇಳಲೆವ್ವಾ, ನಿನ್ನಂಥಾ ಹಾರೋರ ಹೆಣ್ಮಗಳ ಮುಂದ? ಒಟ್ಟು, ಏನೋ ಆಯ್ತು, ಈ ಗುಂಡಣ್ಣ ಹೋಗಿ ರಾಮುಪ್ಪನ್ನ ಬೈದು ಬಂದ, ರಾತ್ರಿ ಯಾರೋ ಇಬ್ಬರು ಬಂದು ಇವನ್ನ ಥಳಿಸಿ ಹೋದರು! ಇವನ್ನ ಒಬ್ಬನ್ನೇ ಹೀಂಗ ಬಿಡ್ಬಾರ್ದು ಅಂತೀನಿ."

"ಅಂದ್ರ ?"

"ಅಲ್ಲ—ನೀವು ಇಲ್ಲೇ ಬಿಟ್ಬ್ಯಾರಾಗ ಇದ್ದರ ನಡೇದಿಲ್ಲೇನು ಅಂತ ?"

"ಸಣ್ಣ ಹುಡುಗರ ಸಾಲೆ ಹ್ಯಾಂಗೊ ? ಅವರ ಅಜ್ಜನ ಮನಸಿನಾಗ ಅದೊಂದು ವಾಸನಾನೇ ಇತ್ತು."

"ಸಾಲೇ ಕಲಿಯೋದಕಿಂತ ಏನಾರೆ ಖಟಪಟಿ ಮಾಡಿ ಒಂದೆರ್ಡು ಹೊಲಾ ಬಿಡಿಸಿಕೊಂಡರ—"

"ಪರಸ್ಯಾ. ಅದನ್ನೆಲ್ಲಾ ನೋಡಿಕೊಳ್ಳೋದು ಗಂಡಸರ ಕೆಲಸ. ಮನೀವಳಗ ಇವರು ಹ್ಯಾಂಗ ಇದ್ದಾರ ನಿನಗ ಗೊತ್ತು ಅದಲ್ಲ? ಅವರನ್ನ ಬಿಟ್ಟರ ಅದೊಂದು ಗಂಡುಕೂಸು, ನಾ ಒಂದು ಹೆಣ್ಣು-ಇದೂ ಒಂದು ಹೆಣ್ಣುಗೂಸು. ಏನಾಯ್ತೆ ಆಗಿ ಹೋಯಿತು. ಈಗಿನ ದಿನಸದಾಗ ಕಲಿತು ನೋಕರಿ ಮಾಡೋದೆ ನಮ್ಮಂಥವರಿಗೆ ಒಳ್ಳೇದು. ಹೌದಂತೀಯೊ ಇಲ್ಲಂತೀಯೊ ?"

"ನಾಯೇನ್ ಹೇಳ್ತೀನವ್ವಾ ಹೊಲೆ ಮುಂಡೇಗಂಡ ? ಆದರೂ ಗುಂಡಣ್ಣನ್ನ ಒಬ್ಬನ್ನೇ ಬಿಡೋದು ಯಾಕೊ-ನನಗ ಅಷ್ಟು ವಾಜಮೀ ಅನಿಸೋದಿಲ್ಲ—"

"ನೋಡೋಣ ನಾಲ್ಕೈಪ್ಪತ್ತು. ಒಂದು ವ್ಯಾಳ್ಯಾ ಅವರಿಗೇ ಸದ್ಬುದ್ಧಿ ಬಂದರ ಕೂಡಿಯೆ ಇರೋಣ. ಕಟ್ಟಿಕೊಂಡ ಸಂಸಾರ, ಬಿಟ್ಟೇನಂದರ ಹ್ಯಾಂಗ ನಡೆದೀತು ?"

ಹಾಗೂ ಹೀಗೂ ಸಂಸಾರದ ಬಗ್ಗೆ ತತ್ತ್ವಜ್ಞಾನದ ಮಾತುಗಳಿಂದ ದಾರಿ ಸಾಗಿತು. ಕೊನೆಗೆ ಒಂದು ಸಂದರ್ಭದಲ್ಲಿ ಪರಸ್ಯಾ,

"ಗುಂಡಣ್ಣಗೂ ಸದ್ಬುದ್ಧಿ ಬಂದೀತಂತೀಯಾ, ಸುಬ್ಬವ್ವಾ ?" ಎಂದ.

"ಹೋಗೊ, ಹೊಲೆರಂಡೇಗಂಡಾ !" ಎಂದು ಅಣಕಿನಿಂದ ಛೀ ಹಾಕಿದಳು ಸುಬ್ಬಕ್ಕ.

ಇಬ್ಬರೂ ಅನೇಕ ದಿನಗಳಲ್ಲಿ ಅಂದು ಮೊದಲ ನಲ ನಕ್ಕರು.

* * *

ಗುಂಡಣ್ಣನಿಗೆ ಸದ್ಬುದ್ಧಿ ಬರಲೆಂದು ಬಯಸುವವರಲ್ಲಿ ಕಾಳ್ಯಾನೂ ಒಬ್ಬನಾಗಿದ್ದ. ಆದರೆ ಅವನು ಬಯಸುತ್ತಿದ್ದ ಮಾದರಿ ಬೇರೆ ತರದ್ದಾಗಿತ್ತು. ಇನ್ನೂ ಏನೇನು ಆಗೇತ್ಯೋ ಊರಾಗ–ಎಂದು ಕಾಳ್ಯಾ ಯೋಚಿಸುತ್ತಿದ್ದುದು ಶಾಮಣ್ಣ–ಶಾಂತೆಯರ ಸತ್ಯಾಗ್ರಹದ ಸುದ್ದಿಯನ್ನು ಕೇಳಿ. ಅದೇ ವಿಚಾರಸರಣಿಯಲ್ಲಿ ಕಾಳ್ಯಾನಿಗೆ ಗುಂಡಣ್ಣನ ನೆನಪು ಬಂದಿತು. ತಾನು ಭರಮ್ಯಾನಷ್ಟು, ಗುಂಡಣ್ಣ ೩–೪ ವರ್ಷ ಚಿಕ್ಕವ ಆಗಿದ್ದಾಗ ಕೂಡಿ ಆಡಿದ್ದರಲ್ಲ ? ತಾನು ಅಸ್ಪೃಶ್ಯ ಎಂದು ಒಂದು ಸಂದರ್ಭದಲ್ಲಿ ಮೊದಲ ನಲ ಕಾಳ್ಯಾನಿಗೆ ತಿಳಿದದ್ದು ಆ ಚಿಕ್ಕತನದ ಆಟದಲ್ಲಿ ಭರಮನನ್ನು ನೋಡಿದಾಗ ಕಾಳ್ಯಾನಿಗೆ ಅದೆಲ್ಲದರ ನೆನಪು. ಆಗ ಉಸಿರಿಡುವ ಕಾಳ್ಯಾ ಗುಂಡಣ್ಣನಿಗೆ ಸದ್ಬುದ್ಧಿ ಇದ್ದರೆ, ಎಂದು ಗುಂಡಣ್ಣನೂ ಸತ್ಯಾಗ್ರಹವನ್ನು ಹೂಡುತ್ತಿದ್ದನಲ್ಲ ? ಆಗ ಅವನನ್ನೂ ಸಿಪಾಯರು ಜೇಲಿಗೆ ಹಾಕುತ್ತಿದ್ದರು. ಆಗ ತಾನು—ಕಾಳ್ಯಾ ಬಿಟ್ಟೂರಲ್ಲಿ ಇರುತ್ತಿದ್ದನೆ ? ಇದ್ದರೆ ಶಾಮಣ್ಣೋರ ಜೋಡಿ ತಾನೂ ಸತ್ಯಾಗ್ರಹವನ್ನು ಹೂಡುತ್ತಿದ್ದನೆ ?

ಕಾಳ್ಯಾನಿಗೆ ಒಮ್ಮೊಮ್ಮೆ ವಿಚಾರದಿಂದ ತಲೆ ದಿಮ್ ಎಂದಂತಾಗುತ್ತಿತ್ತು. ಗುಂಡಣ್ಣನಲ್ಲಿ ಸದ್ಬುದ್ಧಿ ಇದ್ದರೆ ತಾನು—ಕಾಳ್ಯಾ–ಬಿಟ್ಟೂರಲ್ಲಿಯೆ ಉಳಿಯುತ್ತಿದ್ದ ! ಎಂದರೆ— ? ಗುಂಡಣ್ಣನ ದುಷ್ಟ ಬುದ್ಧಿ ತನಗೆ ಹಿತವಾಯಿತು, ಅನುಕೂಲವಾಯಿತು ಎನ್ನಬಹುದೆ ?

ಥೂ ! ಥೂ !

"ಎಂಥಾ ತಿರುವಾ-ಮುರುವಾ ಯಿಚಾರ" ಎಂದು ತಲೆಯನ್ನು ಜಾಡಿಸುವನು. ತಾನು ಬಿಟ್ಬೋರಲ್ಲಿ ಉಳಿದಿದ್ದರೆ ತನ್ನ ಮಗನ ಗತಿ?"

ಕಾಳ್ಯಾನಿಗೆ ಒಮ್ಮೊಮ್ಮೆ ಅತ್ಯಂತ ವಿಷಣ್ಣತೆ ಮುಸುಕುವುದು. ಭರಮ್ಯಾಗ ತಾಯಿ ಇದ್ದರ ಎಷ್ಟು ಪಾಡಾಗತಿತ್ತು ? ತಾಯಿ ಇದ್ದರ ಅಂದ್ರ—ಈಗ ಅದಾಳ ಹಾಂಗಲ್ಲ— "ಇಕ—ನಿನ್ನ ತಾಯಿ" ಅಂತ ನಾಲ್ಕು ಮಂದೀವಳಗ ಎದೆಯುಬ್ಬಿಸಿ ಹೇಳಲಾಕ ಬರೋವಂಥಾ ತಾಯಿ ಇದ್ದರ—ಅಂತೀನಿ. ಈ ಮಟ್ಟಿಗಾದರೂ ಗುಂಡಣ್ಣಗ ಸದ್ ಬುದ್ಧಿ ಇದ್ದರ ನನ್ನ ಸಂಸಾರ ಸುರಳೀತ ಸಾಗತಿತ್ತು.

ಸುರಳೀತ ಏನು ಸುಟ್ಟೈತು ! ಎಂದು ತಿರಸ್ಕಾರದಿಂದ ತನ್ನನ್ನು ತಾನೇ ಹಂಗಿಸಿಕೊಳ್ಳುವನು. ಹುಟ್ಟಿದ ಲೆಕ್ಕನೇ ತಪ್ಪೇತಿ ! ಎಂದು ಹೊಲೆಯರವ ಆದೆ—ಅಂದಿಗೇ ನಂ ಗಾಡಿ ಒಗ್ಗಾಲಿಗೆ ಬಿತ್ತು. ಆ ಮಾತು ಇರೋತನಕ ಯಾರಿಗೂ ಸದ್‌ಬುದ್ಧಿ ಬಂದರೂ—

ಆದರೂ ಶಾಮಣ್ಣೋರು ಮಾತ್ರ ದೊಡ್ಡ ಮನುಷ್ಯರು.

"ಯಾಕೊ, ಭರಮ್ಯಾ ?"

ಯಾವ ಸಂದರ್ಭ-ಸೂತ್ರಗಳಿಲ್ಲದೆ ಒಮ್ಮೆಲೆ ಯಾವುದೊ ಪ್ರಶ್ನೆ ವನ್ನು ಕೇಳಿದ ತಂದೆಯ ಮಾತಿಗಾಗಿ ಭರಮ ಬೆಚ್ಚಿ ಬಿದ್ದ.

"ಏನು ? ಯಪ, ಯಲ್ಲಿ—" ಭರಮ ತುಸು ಹೆದರಿಕೆಯಿಂದಲೆ ತಡವರಿಸಿದ. ಕಾಳ್ಯಾನಿಗೆ ಈಗ ಎಚ್ಚರಾದಂತಾಯಿತು ; ಖೊಳ್ಳನೆ ನಕ್ಕ.

"ಹೋಗಲಿ ಬಿಡು. ಕುಂತಕುಂತಲ್ಲಿಯೆ ಊರಿನ ಕಡೆ ಹೋಯಿತು ಧ್ಯಾಸ ; ಅದರ ಸಮ್ಮಂದೀನೇ ಯೇನೊ ಬಡಬಡಿಸಿದೆ. ಹಹ !"

" ಸದಾ ಸರೋದಾ ಊರಿಂದೇ ಧ್ಯಾಸ ಇರ್ತೇತಿ-ನಿನಗ. ಈ ಮಮ್ಮಯಿ (ಮುಂಬಯಿ)ಗಿಂತ ಛಲೋ ಇತ್ತೇನು ಬಿಟ್ಬೋರು ?"

"'ಛಲೋ ಇತ್ತೇನು?' ಭೇಶ್ ಮಗನ! ಇತ್ತೇನು ಅಂತ ನನಗೇ ಕೇಳ್ತಾನ! ಅಂದ್ರ ಈಟರಾಗ ಅಪೂಟಾ ಮರೆತೇಬಿಟ್ಟೇನು ನೀನು?"

"ನಿದ್ದೆಗಣ್ಣಾಗ ಎಬ್ಬಿಸಿ ಕರಕೊಂಡು ಬಂದಿ. ಆಟೊಂದು ಮಾತ್ರ ನೆಪ್ಪೈತಿ."

"ಅಬ್ಬ! ನೀಯೇನು ದೊಡ್ಡವ ಆದಮ್ಯಾಲೆ ನಮ್ಮನ್ನ ಹಚ್ಚಿಕೊಳ್ಳೋದಿಲ್ಲ ಬಿಡು!"

ಭರಮು ಖುಷಿಯಿಂದ, ಉಬ್ಬಿನಿಂದ ಮುಖವನ್ನರಳಿಸಿದ. ತಂದೆ ದಿನಾಲು ಅದೇ ಮಾತನ್ನು ಹೇಳುವುದನ್ನು ಕೇಳಿ ಕೇಳಿ ತಾನು ದೊಡ್ಡ ಮನುಷ್ಯನಾಗುವುದು ನಿಜ ಎಂದು ತಿಳಿದುಕೊಂಡ ಭರಮು; ಕೆಲವು ದಿವಸಗಳಲ್ಲಿ ದೊಡ್ಡಮನುಷ್ಯ ಆಗಲೇಬೇಕು ಎಂದು ಹಟತೊಟ್ಟ.

ಈಗ ಕಾಳ್ಯಾ ಒಂದು ಕೋಣೆಯನ್ನು ಬಾಡಿಗೆಯಿಂದ ತೆಗೆದುಕೊಂಡಿದ್ದಾನೆ. ಮುಂಜಾವಿನಿಂದ ಸಂಜೆಯವರೆಗೆ ದುಡಿತ; ಕೋಣೆಯನ್ನು ಹಿಡಿದಂದಿನಿಂದ ಒಂದು ಊಟವನ್ನು ಬಿಟ್ಟಿದ್ದಾನೆ. ಭರಮನಿಗೆ ಎರಡೂ ಹೊತ್ತು ಊಟ, ಒಪ್ಪತ್ತು ಚಹ; ಅಷ್ಟಕ್ಕೆ ತಾನು ತಿಂದಂತೆಯೆ ಹೊಟ್ಟೆತುಂಬಿ ಸಂತಸವಾಗುವುದು ಅವನಿಗೆ. ಮಗ ಕಲಿಯಬೇಕು, ತೊಂದರೆ ಇಲ್ಲದೆ ಕಲಿಯಬೇಕು, ಕಲಿತು ಮೇಲೆ ಬರಬೇಕು, ಇವ ಹೊಲೆಯರವ ಎಂದು ಯಾರಿಗೂ ಕನಸು ಮನಸುಗಳಲ್ಲಿ ಎನಿಸಿರಬಾರದು. ಮಗನಿಗೆ ದೊಡ್ಡದೊಡ್ಡ ನೋಕರಿ ಸಿಗಬೇಕು! ಇಷ್ಟಾದರೆ ತನ್ನ ಜನ್ಮ ಸಾರ್ಥಕ ಎಂದು ಕಾಳ್ಯಾನ ನಂಬುಗೆ. ಯಾವಾಗಲಾದರೊಮ್ಮೆ ಮಗ ಕೆಲಸದಲ್ಲಿ ಸಹಾಯ ಮಾಡಲು ಬಂದರೆ ಕಾಳ್ಯಾ ಅವನನ್ನು ಬಿಡಿಸುತ್ತಿದ್ದ.

"ಒಂದೀಟ ಲಗೂ ಮುಗೀಲಿ ಅಂತ ನಾನು ಕೈಹಚ್ಚಬೇಕೆಂದು ಇದ್ದೆ" ಎನ್ನುತ್ತಿದ್ದ ಭರಮು.

"ಲಗೂನೆ? ಹೇಳಬೇಕು ಹಾಂಗ? ನಾನೇ ಲಗ್ಗ ಮುಗಿಸ್ತೀನಿ. ನೀ ಯಾಕ ಕೈಹಚ್ಚತೀ?" ಕಾಳ್ಯಾ ವಾದಿಸುತ್ತಿದ್ದ.

"ತಪ್ಪೇನಾತು ಕೈಹಚ್ಚಿದರ?" ಎಂದು ಭರಮ ನಗೆಯಿಂದಲೇ ಕೇಳುವ.

"ತಿಳಿದೀತು ಮುಂದ ನಿನಗ. ಒಮ್ಮೆ ಕೈಹಚ್ಚಿದಿ ಅಂದ್ರ ಮುಗಿದೇ ಹೋಯ್ತು. ಕೈಲೇ ದುಡಿಯೋ ಜಾತೀನೇ ಬ್ಯಾರೇ, ಕಲಿತವರ ಜಾತೀನೇ ಬ್ಯಾರೆ."

ಭರಮನಿಗೆ ತನ್ನ ಬಗ್ಗೆ, ಅನುಷಂಗಿಕವಾಗಿ ತಂದೆಯ ಬಗ್ಗೆ ಅಭಿಮಾನ ಹುಟ್ಟುತ್ತಿತ್ತು.

ಕಾಳ್ಯಾ ನಿಜವಾಗಿಯೆ ನಂಬಿದ್ದ. ಕೈಯಿಂದ ದುಡಿಯುವವರು ಕೀಳು ಜಾತಿಯವರು ಎಂದು. ಅದು ಅವನ ದಡ್ಡತನ ಎಂದು ಹೇಳಿದ ವರನ್ನು ತಾರ್ಕಿಕನಂತೆ ಸೋಲಿಸಿಬಿಡುತ್ತಿದ್ದ ವಾದದಲ್ಲಿ. "ಇದೇ ನೋಡಿರಿ! ನಾ ಕೈಲೆ ದುಡಿಯುವವ ಅಂತೇ ನನ್ನ ಮಾತಿಗೆ ಥಟಕ್ಕನೆ ಅಂದಿರಿ, ನಾ ಥಡ್ಡ ಅಂತ? ನಿಮ್ದೂ ತಪ್ಪಿಲ್ರಿ........ ಹುಟ್ಟಿದಿನಿಂದ ನೋಡೀನಿ, ಹೊಲೆಯ ಆಗಿ ದುಡಿಯುವವ ನಾನು. ಧಣಿ ಆಗಿ ದುಡಿಸಿಕೊಳ್ಳುವವರು ಅವರು. ನಾವಾದರೂ ತಕರಾರು ಯಾಕ ಮಾಡೋದ್ರಿ? ಗೊತ್ತಾಯ್ತು. ಮುಗೀತು. ನನ್ನ ಮಗ ಕಲೀತಾನ, ಇನ್ನ ಕೈಲೆ ದುಡಿಯೋ ಪರಸಂಗೇ ತಪ್ಪಿತು ಅವನಿಗೆ. ಅಲ್ಲ–ನಮ್ಮ ತಪ್ಪ ನಾವೇ ತಿದ್ದಿಕೋಬೇಕೊ ಇಲ್ಲೋ ಹೇಳಿರಿ?" ಎಂದು ಅವರಿಗೇ ಬುದ್ಧಿಯ ಮಾತನ್ನು ಹೇಳುತ್ತಿದ್ದ.

ಮಗನಿಗಾಗಿ ದೇಹವನ್ನು ಸವೆಸುವುದು ಅವನಿಗೆ ಸಂತೋಷದ ಮಾತಾಗಿತ್ತು. ಬೇಕಾದ ನೆವನನ್ನು ಹೇಳಿ ಮಗನಿಗಾಗಿ ದುಡಿಯುತ್ತಿದ್ದ ಈಗ. ಮಗನಿಗೆ ಬಟ್ಟೆಗಳು ಸ್ವಚ್ಛ ಇರಬೇಕೆಂದೆನ್ನಿಸಿತು; ಸರಿ. ಅವನ್ನು ಸಬಕಾರದಿಂದ ತಿಕ್ಕಿ ಒಗೆದು ಒಣಗಿಸುವುದು ಕಾಳ್ಯಾನಿಗೆ ಜಡವಲ್ಲ, ಜಂಬದ ಮಾತು ಎನ್ನಿಸುವುದು. ಬರಬರುತ್ತ ಕೋಣೆ

ಯಲ್ಲಿ ಮಗನಿಗೆ ಮೇಲಿನ ಸ್ಥಾನಮಾನಗಳು ದೊರೆಯತೊಡಗಿದುವು. ಯಾವುದನ್ನು ಸ್ವಸಂತೋಷದಿಂದ ಕಾಳ್ಯಾ ಕೊಡಲು ಸಿದ್ಧನಿದ್ದನೊ ಅದು ತನ್ನ ಹಕ್ಕಿನ ವಸ್ತು ಎಂದು ಭರಮು ಸ್ವೀಕರಿಸತೊಡಗಿದ. ಒಮ್ಮೊಮ್ಮೆ ತಂದೆಯ ಮೇಲೆ ಸಿಟ್ಟಾಗುವ. ಕಾಳ್ಯಾ ನೊಂದುಕೊಂಡು ಪೆಚ್ಚುಮೋರೆಯಿಂದ ನಿಲ್ಲುವ.

"ಹೌದು, ನೋಡು. ನೀ ಅನ್ನೋದು ಬರಾಬರಿ. ನನ್ದೆ ತೆಪ್ಪು" ಎಂದು ಹುಡುಗನಂತೆ ಒಪ್ಪಿಕೊಳ್ಳುವ. ಅಷ್ಟರಲ್ಲಿ ಭರಮುನಿಗೆ ತನ್ನ ನಡತೆಯ ಬಗ್ಗೆ ನಾಚಿಕೆ ಎನ್ನಿಸಿ, "ಇರಲಿ, ಬಿಡಪ್ಪ" ಎಂದು ಅವನು ವಿಷಯವನ್ನು ಮುಗಿಸಲು ಹವಣಿಸುವನು

"ಅದೇ ಹೇಳಿದೆನಲ್ಲ? ಅಂತಾ ಪರಿ ಪುಟ್ಟಿದ್ದರ ಇಂತಾ ಪರಿ ಪಟ್ಟ ತನ ನನ್ದು" ಎಂದು ಹಳಹಳಿಸುವನು ಈಗ ಭರಮುನಿಗೆ ಇಂತಹ ಮಾತು ಸೇರದು. ತಾನು ಹುಟ್ಟಿದ್ದು ಹೊಲೆಯರ ಮನೆತನ ದಲ್ಲಿ ಎಂದು ಹೇಳಲು ಅವನು ಸಿದ್ಧನಿಲ್ಲ.

"ಇರಲಿ–ಬಿಡಪ್ಪ" ಎಂದು ಅಧಿಕಾರದ ಹಟದಿಂದ ಹೇಳುವನು.

ಬಿಟ್ಟೋರನ್ನು ಮರೆಯಲು ತಂದೆ ಮಕ್ಕಳಿಬ್ಬರೂ ಪ್ರಯತ್ನ ಮಾಡುತ್ತಿದ್ದರು.

*  *  *

ಮಕ್ಕಳ ಸಲುವಾಗಿಯೆ ದೇಹವನ್ನು ಸವೆಸುತ್ತಿರುವ ಸುಬ್ಬಕ್ಕ ಈಗ ಶಹರೂರಲ್ಲಿಯೇ ಇದ್ದಾಳೆ. ಇನ್ನೂ ಚಿಕ್ಕಹುಡುಗ, ರಾಗಣ್ಣ. ಇವನು ಬೆಳೆದು ದೊಡ್ಡವನಾಗಿ ಮುಪ್ಪಿನಲ್ಲಿ ತನಗೆ ಆಧಾರನಾಗ ಬೇಕು! ಅಲ್ಲಿಯವರೆಗೆ ತಾನು ಜೀವದಿಂದಿರುವಳೊ ಇಲ್ಲವೊ? ಛೆ! ಸಾಯಬಾರದು. ಹುಡುಗರಿಗೆ ಗತಿ ಯಾರು? ಕನಿಷ್ಠ ರಾಗಣ್ಣ ನಿಗೆ ಸಣ್ಣದೇ ಆದರೂ ಆಗಲಿ—ಒಂದು ನೌಕರಿ ಸಿಗುವವರೆಗಾದರೂ ತಾನು ಬದುಕಬೇಕು. ಆಗ ಇದ್ದುದರಲ್ಲಿಯೆ, ಸರಸಿಯದೊಂದು ಮದುವೆಯನ್ನು ಮಾಡಿದರೆ–ಆಯಿತು ತಾನು ನಿಶ್ಚಿಂತಳಾಗಿ ಕಣ್ಣನ್ನು

ಮುಚ್ಚಬಹುದು. ಕೆಲವು ದಿನ ಇದೇ ವಿಚಾರವನ್ನು ಮಾಡಿಮಾಡಿ ಅದನ್ನು ನಂಬಿದ ಮನೋವೃತ್ತಿ ಮೂಡಿದಾಗ ಜೊತೆಗೆ ಇನ್ನೂ ಒಂದು ವಿಚಾರ ಬರುವುದು. "ಮಗನ ನೋಕರಿ, ಮಗಳ ಮದುವೆ ಇವೆರಡನ್ನ ನೋಡಿ ಮುತ್ತೈದೆತನದೊಳಗೆ ಸತ್ತರೆ ಸಾಕು" ಎನ್ನು ವಳು. ಆ ಮಾತು ಬಂದಾಗೊಮ್ಮೆ ನಿಟ್ಟುಸಿರಿಡುವಳು. ಏನು ಹೆಣ್ಣಿನ ಜನ್ಮ? ನನ್ನಂಥಾಕೆಯೂ ಮುತ್ತೈದೆತನದ ಸಾವು ಬಯಸ್ತೀನಲ್ಲ? ಏನು ಸುಖ ಕಂಡೆ? ಏನು ಕಾಣುವಾಕೆ ಇದ್ದೀನಿ? ಆದರೂ ಮುತ್ತೈದೆತನ ಬೇಕು, ಬ್ಯಾರೆ ಆಧಾರಿಲ್ಲ ಹೆಂಗಸಿಗೆ........ ಆಗ ಮಕ್ಕಳನ್ನು ನೋಡುವಳು .... ಇದೆ, ಬೇರೆ ಆಧಾರ ಇದೆ ಎಂದು ಹೊಳೆದು ಮುಖದ ಮೇಲಿನ ವಿಷಣ್ಣತೆಯು ಕಳೆ ಹೋಗಿ ಸಮಾಧಾನದ ಛಾಯೆ ಕಾಣುವುದು ಅಲ್ಲಿ. "ಸದ್ಯಕ್ಕಂತೂ ಇವಕ್ಕೆ ನಾನೇ ಆಧಾರ" ಎಂದು ತನ್ನ ಹಾಸ್ಯಕ್ಕೆ ತಾನೇ ಮುಗುಳ್ನಗೆ ನಕ್ಕು ಕೆಲಸದಲ್ಲಿ ತೊಡಗುವಳು.

ಮಗ ಕಲಿಯಬೇಕು; ಕಲಿಯುವುದು ದೊಡ್ಡ ಪ್ರಶ್ನವಾಗಿರ ಲಿಲ್ಲ; ಬೇಗ ಕಲಿಯಬೇಕು.

ಅಷ್ಟೇ ಬೇಗ ಒಂದು ನೋಕರಿ ಬೇಕು.

ಚಟ್ನಿ – ಬಕ್ಕರಿ ಎರಡು ಹೊತ್ತು ಹೊಟ್ಟೆತುಂಬ ಸಿಕ್ಕರಸಾಕು. ಗಳಿಸಿದ್ದೂ ಕೂಡಿಸಿದ್ದೂ ಸತ್ತ ಮ್ಯಾಲೆ ಜೋಡಿ ಬರೋದು ಅಷ್ಟ ರಾಗೇ ಇದೆ.

ಸುಬ್ಬಕ್ಕನ ನಾಲ್ಕು ವೇದಗಳಿವು; ಒಂದರಿಂದಿಲ್ಲವಾದರೆ ಇನ್ನೊಂದರಿಂದ ಸಮಾಧಾನ ಖಂಡಿತ ದೊರೆಯುತ್ತಿತ್ತು. ದಿನ ದಿನಕ್ಕೆ ಈ ಮಾತುಗಳು ಆಕೆಗೆ ಸ್ವಭಾವವಾದಂತಾದುವು. ಶಬ್ದ ಗಳಿಂದಲ್ಲ, ಆಚರಣೆಯಿಂದ ಅವುಗಳನ್ನು ಆಕೆ ನುಡಿಯುವಳೇನೋ ಎಂದೆನ್ನಿಸುವಂತಿತ್ತು.

ತಾಯಿ–ಮಾವ ಇಬ್ಬರೂ ಹೋದರು-ಇನ್ನೊಬ್ಬರು ಅಷ್ಟ

ರೆಂಬವರಿಲ್ಲ. ಗಂಡನೆಂದರೆ ಹೇಗೆ; ಅವನಿಂದ ದೂರವಿದ್ದಲ್ಲಿಯೆ ಹಿತ. ಮಕ್ಕಳು ಚಿಕ್ಕವರು. ತಾನು ಒಬ್ಬಾಕೆ. ಒಮ್ಮೊಮ್ಮೆ ಸುಬ್ಬಕ್ಕನ ಜೀವ ಗಾಬರಿಗೊಳ್ಳುವುದು. ಮನುಷ್ಯ ಆದ ಮಾತಿಗೆ ನೆಗಡಿ, ಕೆಮ್ಮು ಆದರೂ ಬರೋದೆ. ಅಂಥಾ ವ್ಯಾಳ್ಯಾದಾಗ ತನ್ನ ಮಕ್ಕಳಿಗೆ ಒಂದು ಹಿಡಿ ಅಕ್ಕಿ ಕುದಿಸುವವರು ಯಾರು?

ದೇವರ ಇದ್ದಾನ, ನೋಡಿಕೋತಾನ–ಎನ್ನುವಳು ಹತಾಶಳಾಗಿ.

ಹುಟ್ಟಿಸಿದ್ದಕ್ಕ ಅವನಿಗೇನು ಬಿಟ್ಟಿದ್ದಲ್ಲಲ ನಮ್ಮ ಭಾರ— ಎಂದು ಒಮ್ಮೊಮ್ಮೆ ದೇವನಿಗೆ ನೆನಪನ್ನೂ ಎಚ್ಚರಿಕೆಯನ್ನೂ ಕೊಡು ವವಳಂತೆ ನುಡಿಯುವಳು.

ಮನಸ್ಸು ಹೀಗೆ ನೊಂದಾಗ ಆಗಾಗ ಉದ್ವಿಗ್ನಳಾಗಿರುವಳು.

ಯಾಕೊ? ಮನಸಿಗೆ ಚೈನೀನೇ ಇಲ್ಲ—ಎನ್ನುವಳು.

ಹೀಂಗ್ಯಾಕ ಹುರುಹುರು ಅಂತದ–ಎಂದು ಗೊಣಗುವಳು.

ಏನಾಗ್ತದೊ ಏನ್ಮಣ್ಣೊ? – ಎಡಗಣ್ಣು ಬ್ಯಾರೆ ಹಾರ್ತದ ಎಂದು ಗಾಬರಿಗೊಂಡಳು.

ಸುಬ್ಬಕ್ಕನ ಹೃದಯದೊಳಗಿನ ರಣರಣತ ಹೆಚ್ಚಿತು. "ಸುಡ್ಲಿ, ಸದಾ ಹುರುಹುರು ಅಂತದ" ಎಂದು ಸಿಟ್ಟು ಮಾಡಿಕೊಂಡಳು.

ಹುಡುಗರು ನಿರ್ಗತಿಕರಾಗಬಾರದು ಎಂಬ ಹಟ ಆಕೆಯ ಹೃದಯದೊಳಗೆ.

ಮುತ್ತೈದೆತನದೊಳಗ ಸಾಯಬೇಕು ಅನ್ನೋ ಅಪೇಕ್ಷೆ. ಹುಡುಗರ ಮೇಲಿನ ಮಮತೆ ಗೆದ್ದಿತೇನೊ ಕೊನೆಗೆ.

ಒಂದು ದಿನ ಪರಸ್ಯಾ ಬಂದ— "ಅವ್ವಾವ್ರ, ಘಾತ ಆತರಿ" ಎಂದು ಅಳತೊಡಗಿದ. ಸುಬ್ಬಕ್ಕನಿಗೆ ತಿಳಿದೇ ಹೋಯಿತು.

ಎರಡು ಹುಡುಗರನ್ನು ಮುಂದಿಟ್ಟುಕೊಂಡು ಒಂದೇ ಸವನೆ ಕಣ್ಣೀರಿಟ್ಟಳು.

ಸುಬ್ಬಕ್ಕನ ಕುಂಕುಮ ವೈಭವ ಕಳಚಿ ಬಿದ್ದಿತ್ತು.

## ೧೩

ಗುಂಡಣ್ಣ ಸಾವಿನಲ್ಲಿಯೂ ಹೆಸರನ್ನು ಗಳಿಸಿಕೊಂಡ. ಬಿಟ್ಟೂರಿನಲ್ಲಿ—ಅದೇಕೆ? ಸುತ್ತಲಿನ ಹತ್ತು ಹರದಾರಿಗಳಲ್ಲಿ — ಇಂತಹ ಅಮಾನುಷ ಕೊಲೆ ಆದದ್ದನ್ನು ಯಾರೂ ಕಂಡಿರಲಿಲ್ಲ. ಗುಂಡಣ್ಣನ ಕೊಲೆಯ 'ಕೀರ್ತಿ' ಜಿಲ್ಲೆಯ ತುಂಬ ಪಸರಿಸಿತು. ಎಲ್ಲೆಲ್ಲಿಂಯದೊ ಪೋಲೀಸರು ಬಂದರು. ಊರ ಜನರನ್ನೆಲ್ಲ ಪ್ರಶ್ನೆಗಳ ಸುರಿಮಳೆಯಿಂದ ಹಿಂಸಿಸಿದರು ಆದರೆ ಅವರಿಗೆ ಕೊಲೆಯ ಬಗ್ಗೆ ಯಾವ ಉಪಯುಕ್ತ ಮಾಹಿತಿಯೂ ದೊರಕಲಿಲ್ಲ. ಒಂದು ಮುಂಜಾನೆ ಗುಂಡಣ್ಣ ಇಲ್ಲದಂತಾಗಿದ್ದ. ಆದರೆ ಅದಕಾಗಿ ಯಾರಿಗೂ ಆಶ್ಚರ್ಯವಾಗಿರಲಿಲ್ಲ. ಹೋದರ ಹೋಗಿರಬಹುದು ಶಹರೂರಿಗೆ, ಹೆಂಡತೀನ್ನ ಬಿಟ್ಟು ಇರೋ ಕುಳ ಅಲ್ಲ–ಎಂದರು ಕೆಲವರು. ಬೇರೆ ಕೆಲವರು–ಅವನಿಗೇನು? ಬಂದಾನು ಇಂದೊ ನಾಳೆಯೊ! ಎಂದು ಅಲಕ್ಷ್ಯ ತೋರಿಸಿದರು. ಯಾರಿಗೂ ಏನೂ ವಿಶೇಷವೆನ್ನಿಸಿರಲಿಲ್ಲ. ಆದರೆ ಅಂದು ಸಂಜೆಗೆ ಹೊಲದಿಂದ ಬರುವ ಜನವೊ, ಹಾದಿಗೆ ಹೋಗೋ ಜನವೊ–ಯಾರೊ ಗಿಡಕ್ಕೆ ತೂಗಬಿದ್ದ ಒಂದು ದಡವನ್ನು ನೋಡಿದರಂತೆ. ಎರಡೂ ಭುಜಗಳ ಕೆಳಗಿನಿಂದ ಹಾಯಿಸಿದ ಹಗ್ಗದಿಂದ ಜೋತುಬಿದ್ದಿದೆ. ಮೇಲೆ ರುಂಡವಿಲ್ಲ, ಕೆಳಕೆ ಕಾಲ್ಗಳಿಲ್ಲ. ಜನ

ಮುಕುರಿದರು, ಬೆಳಿಗ್ಗೆ ಪೋಲೀಸರೂ ಬಂದರು-ಅದನ್ನು ಮೊದಲು ನೋಡಿದವರು ಯಾರು ಎಂಬುದೂ ತಿಳಿಯಲಿಲ್ಲ. ಹುಡುಕಾಡಿ ಹತ್ತಿರದಲ್ಲಿ ಶರೀರದ ಮಿಕ್ಕ ಭಾಗವನ್ನು ಕಂಡರು; ಊರವರು ಗುಂಡಣ್ಣನ ದೇಹದ ಗುರುತನ್ನು ಹಿಡಿದರು.

ಸುಬ್ಬಕ್ಕ ಮಕ್ಕಳೊಂದಿಗೆ ಬಿಟ್ಟೂರಿಗೆ ಬರುವಷ್ಟರಲ್ಲಿ ಪಂಚ ನಾಮೆ ಮುಗಿದು ದೇಹವನ್ನು ಸುಟ್ಟದ್ದೂ ಆಗಿತ್ತು. ಸುದೈವದಿಂದ ಆಕೆಗೆ ಹೆಚ್ಚಿನ ವಿವರಗಳೇ ತಿಳಿದಿರಲಿಲ್ಲ. ಹೇಗೊ ಏನೊ ಇದೆಲ್ಲ ಸುದ್ದಿ ಶಾಮಣ್ಣನಿಗೆ ತಿಳಿಯಿತು. ಯಾರೋ ಅಧಿಕಾರಿಗಳಿಗೆ ಹೇಳಿರಬೇಕು, ಶಾಮಣ್ಣ ೧೦ ದಿನಗಳ "ಪರೋಲ್"ದ ಮೇಲೆ ಜೇಲಿನಿಂದ ಬಂದ. ರಾಯರ ಮರಣದಿಂದ ನಡೆದುದೆಲ್ಲವನ್ನೂ ತಿಳಿದುಕೊಂಡ ಅವನಿಗೆ ಏನು ಮಾತನಾಡಬೇಕೆಂಬುದು ತಿಳಿಯದಾಯಿತು

ಇಷ್ಟರಲ್ಲಿ ಪೋಲೀಸರು ಬಂದು ಹೋದುದೂ ಅವನಿಗೆ ತಿಳಿದಿತ್ತು. ಯಾರ ಮಾತನ್ನೂ ಕೇಳಿ ಪರನ್ಯಾಸನನ್ನೂ ಗಂಗಿಯನ್ನೂ ಬಲು ಪೀಡಿಸಿದ್ದರಂತೆ, ಅವರಿಬ್ಬರನ್ನೂ ಶಾಮಣ್ಣ ಸಂತಯಿಸಿದ. ಗುಂಡಣ್ಣನ ಸಂಬಂಧದಲ್ಲಿ ಎಲ್ಲ ಕ್ರಿಯೆಗಳನ್ನು ಮುಗಿಸಿಕೊಂಡ. ಆಮೇಲೆ ಮುಂದಿನ ವ್ಯವಸ್ಥೆ.

ಸುಬ್ಬಕ್ಕ ಏನು ಮಾಡಬೇಕೆನ್ನುತ್ತಾರೆ ?

ನನಗ ಕೇಳಿದರ ಅವರು ಸದ್ಯಕ್ಕ ಶಹರೂರಿಗೇ ಹೋಗೋದು ನೆಟ್ಟಗ. ಯಾಕೆಂದರೆ ಮನೀನೂ ಸೇಡಜಿಗೆ ಒತ್ತಿ ಇದೆ.

ಸದ್ಯಕ್ಕ ನಿಮ್ಮ ಖರ್ಚಿಗಿದ್ದರ ಸಾಕು.

ನಾನು ಸಾಮಾನೆಲ್ಲಾ ಸಾಗಿಸಿಕೊಡ್ತೀನಿ.

ಹೌದು; ರಾಯರು ನನ್ಮುಂದೆ ಬಹಾಳ ಸಲ ಹೇಳ್ಯಾರ, ಏನ್ಬೇಕಾದ್ದನ್ನ ಮಾಡಿ ಮೊಮ್ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು, ಅಂತ.

ಅದ್ಯಾಕ ? ಶಾಂತಕ್ಕ ಸಹಿತ ತನ್ನ ಪಾಲಿನದೆಲ್ಲಾ—

ಹೋಗಲಿ ಬಿಡಿರಿ, ಅತ್ತರೆ ಬರ್‍ತದೇನು ? ಅಂತೂ ಶಾಮಣ್ಣ ಎಲ್ಲವನ್ನೂ ವ್ಯವಸ್ಥಿತವಾಗಿ ಮುಗಿಸಿ ಸುಬ್ಬಕ್ಕನನ್ನು ಅವಳ ಮಕ್ಕಳ ಜೊತೆ ಶಹರೂರಿಗೆ ಕಳಿಸಿಕೊಟ್ಟ.

ಊರೊಳಗಿನ ಪರಿಸ್ಥಿತಿಯನ್ನು ನೋಡಿಕೊಂಡ.

ಒಂದು ಸಂಗತಿ ಬಂದಂದಿನಿಂದ ಅವನ ಲಕ್ಷ್ಯಕ್ಕೆ ಬಂದಿತ್ತು.

ರಾಮಪ್ಪ ಊರಲ್ಲಿದ್ದಿರಲಿಲ್ಲ; ಅವ ಎಲ್ಲಿ, ಎಂದು ಹೋದ ಎಂಬುದಾಗಿ ಅವನ ಬಗ್ಗೆ ಒಂದು ಅಕ್ಷರವನ್ನೂ ಊರವರು ಪೋಲೀಸರ ಮುಂದೆ ನುಡಿದಿದ್ದಿಲ್ಲ !

ಶಾಮಣ್ಣ ಯಾವ ಮಾತನ್ನೂ ಆಡದೆ ತನ್ನ ಅವಧಿಯ ಕೊನೆಯ ಸಂಜೆಗೆ ಪೋಲೀಸರ ವಶನಾದ.

* * *

ಶಾಮಣ್ಣ, ಶಾಂತಕ್ಕ ಇವರಿಬ್ಬರ ಬಿಡುಗಡೆ ಆಗಿದೆಯೊ ಇಲ್ಲವೊ ?

ಅಥವಾ ಇಬ್ಬರೂ ತನ್ನನ್ನು ಮರೆತಿರಬಹುದೆ ?

ಸುಬ್ಬಕ್ಕನು ವಿಚಾರದಲ್ಲಿ ತೊಡಗಿದ್ದಳು. ಈಗ ಅವಳಿಗೆ ಒಬ್ಬ ಆಪ್ತಾಲೋಚಕರ ಅಗತ್ಯವಿತ್ತು. ತನ್ನ ಆಭರಣಗಳನ್ನು ಮಗಳಿಗಾಗಿ ಇಲ್ಲವೆ ಸೊಸೆಗಾಗಿ ಕಾಯ್ದಿಡಬೇಕೆ ?

ಇಲ್ಲವೆ ಮಕ್ಕಳ ಶಿಕ್ಷಣ ಪೋಷಣೆಯ ಖರ್ಚಿಗಾಗಿ ಮಾರಿಬಿಡಬೇಕೆ ?

ಏನೆ ಆಗಲಿ, ಮನೆತನದ ಒಡವೆಗಳು, ಕಾಯ್ದಿಡಬೇಕು ಎಂದಿತು ಸ್ತ್ರೀತ್ವ.

ಯಾರಿಗಾಗಿ ? ಈಗ ತಿನ್ನಲು ಇಲ್ಲದಾಗ, ಇಂದು ಕಲಸಿ ಮುಂದಾಗಲು ಬೇಕಾದಾಗ, ಇದನ್ನಿಟ್ಟು ಯಾವ ಬೆಳಕನ್ನು ಕೆಡುಹ ಬೇಕಾಗಿದೆ ?—ಎಂದಿತು ತಾಯ್ತನ.

ಹೊಯ್ದಾಟ ಅನಿಶ್ಚಿತವಾಗಿತ್ತು.

ನಿರ್ಣಯಕ್ಕಾಗಿ ಸಹಾಯ ಮಾಡುವವರು ಬೇಕಿತ್ತು.

ಅದನ್ನು ಮಾರಲು ಅಡ್ಡಿ ಇಲ್ಲ ಎಂದು ಹೇಳುವವರು ಬೇಕಾಗಿತ್ತು.

ಯಾರೂ ಇಲ್ಲ.

ಅಥವಾ ಇನ್ನಾರು ಬೇಕು? ಮಾವನ ಇಚ್ಛೆ ಅದು ಎಂದು ಶಾಮಣ್ಣನವರು ಸೂಚಿಸಿರಲಿಲ್ಲವೆ?

ಮಾರಬೇಕೆಂದು ನಿಶ್ಚಯಿಸಿದಳು.

ಅವುಗಳನ್ನೆಲ್ಲ ಮುಂದಿಟ್ಟುಕೊಂಡು ಅತ್ತಳು.

* * *

ಹದಿನಾಲ್ಕು ವರ್ಷಗಳ ಹಿಂದಿನ ಕತೆ.

ಈಗಿನ ಯುವಕರಿಗೆ — ಬಿ. ರಾಮು (ಭರಮಪ್ಪ)ನಿಗೆ ಮತ್ತು ರಾಗಣ್ಣನಿಗೆ ತಿಳಿಯದ ಕತೆ.

ಯಾರು ಯಾವುದನ್ನು ಬಲ್ಲರು?

ಮೇಲಿನ ನಾಲ್ಕಾರಡಿ ಎತ್ತರದ ತೆರೆಯನ್ನು ನೋಡಿ ಲೋಕಾಂತರ ಆಳವಾದ ಸಮುದ್ರವನ್ನು ಬಲ್ಲೆ ಎಂಬವನಿಗೆ ಯಾರು ಹೆದರುತ್ತಾರೆ?

ಒಂದು ಕ್ಷಣ ಬದುಕಿ ಇನ್ನೊಂದು ಕ್ಷಣದಲ್ಲಿ ಬಾಡಿಹೋಗುವ ಪ್ರಾಣಿ ಸಂತತವಾಗಿದ್ದ ಸೃಷ್ಟಿಯನ್ನು ಅರಿಯುವುದೆಂತು?

ತನಗೆ ನೆನಪಿದ್ದ ಬಿಟ್ಟೂರೇ ನಿಜವಾದ ಬಿಟ್ಟೂರು ಎಂದು ತಿಳಿದು "ನಾನು ಬಿಟ್ಟೂರನ್ನು ಚನ್ನಾಗಿ ಬಲ್ಲೆ" ಎಂದಿದ್ದಾನೆ ಬಿ.ರಾಮು (ಭರಮು).

ತನ್ನ ಕಷ್ಟ ನಷ್ಟಗಳ ಅನುಭವ ಭೂಮಿಯಾದ ಬಿಟ್ಟೂರನ್ನು ಇನ್ನೊಬ್ಬರು ಅರಿಯುವುದು ಹೇಗೆ ಶಕ್ಯ?—ಎಂದು ದಿಗಿಲುಗೊಂಡಿದ್ದಾನೆ ರಾಗಣ್ಣ.

ಆದರೆ ಇಬ್ಬರಿಗೂ ಗೊತ್ತಿರಲಿಲ್ಲ.

ಬಿಟ್ಟೂರು ಸಂತತವಾಗಿದೆ, ಬಿಟ್ಟೂರು ಪ್ರವಾಹವಾಗಿದೆ.

ತಮ್ಮ ಕಣ್ಣಿಗೆ ಕಂಡ ಕೈಬೆರಳುಗಳಿಂದಿಳಿದ ಹನಿಗಳು ಮಾತ್ರ ಸೃಷ್ಟಿ ಎನ್ನಬಹುದೆ? ಬದಲಾಗಿಯೂ ಬದಲಾಯಿಸದಂತಿದ್ದ ಪ್ರವಾಹವಾಗಿದೆ ಸೃಷ್ಟಿ, ಮೂಲಪ್ರಕೃತಿಯಾಗಿದೆ ಪ್ರಪಂಚ.

* * *

ಅಂದು ಸುಬ್ಬಕ್ಕನಿಗೆ ಇವೆಲ್ಲ ಹೊಳೆದಂತಾಯಿತು, ಆದರೆ ಇಂತಹ ವಿಚಾರಗಳು ತಿಳಿಯುವುದು ಹೇಗೆ?

ಎಲ್ಲಿಂದೆಲ್ಲಿಗೆ ಬದಲಾಯಿತು ನಮ್ಮ ಸ್ಥಿತಿ?– ಎಂದುಕೊಂಡಳು.

ಆಮ್ಯೇಲೆ ಸಂಶಯ ಬಂದಿತು : ಬದಲಾಗಿದೆಯೆ?

ರಾಯರ ಕಳೆ ರಾಗಣ್ಣನ ಮುಖದಲ್ಲಿದೆ.

ನರಸ್ವತಿಯ ಛಾಯೆ ಸರಸಿಯ ಮೇಲೆ ಬಿದ್ದಿದೆ.

"ಬದಲು ಅನ್ನೋದೆ ಇಲ್ಲ ಈ ಹಾಳು ಜನ್ಮದಾಗ!" ಎಂದು ಸುಬ್ಬಕ್ಕ ಸಿಡುಕಿನ ಸಿದ್ಧಾಂತವನ್ನು ಸಾರಿದಳು.